ಅಧ್ಯಯನ ವಿಷಯ : "ಶಾಲಾಭಿವೃದ್ಧಿ ಮತ್ತು ಎಸ್.ಡಿ.ಎಂ.ಸಿ.ಗಳು;
ಉಡುಪಿ ಜಿಲ್ಲೆಯಲ್ಲಿನ ಒಂದು ಅಧ್ಯಯನ"

(ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿಗೆ ಎಂ.ಫಿಲ್‌ಗಾಗಿ ಸಲ್ಲಿಸಿರುವ ಸಂಪ್ರಬಂಧ)

ಸಂಶೋಧಕರು : ಪ್ರಮೀಳಾ ಜೆ. ವಾಜ್

ಮಾರ್ಗದರ್ಶಕರು : ಡಾ. ವೈ ರವೀಂದ್ರನಾಥ್ ರಾವ್

ಅಭಿವೃದ್ಧಿ ಅಧ್ಯಯನ ಕೇಂದ್ರ
ಕರ್ನಾಟಕ ತಿಯೋಲೊಜಿಕಲ್ ವಿಶ್ವವಿದ್ಯಾಲಯ
ಬಲ್ಮಠ, ಮಂಗಳೂರು
ಜೂನ್ 2012

998

അധ്യയന വിഷയ: "ಶಾಲಾಭಿವೃದ್ಧಿ ಮತ್ತು ಎಸ್.ಡಿ.ಎಂ.ಸಿಗಳು; ಉಡುಪಿ ಜಿಲ್ಲೆಯಲ್ಲಿನ ಒಂದು ಅಧ್ಯಯನ"

(ಕನ್ನಡ ವಿಶ್ವವಿದ್ಯಾಲಯ ಹಂಪಿ ಇಲ್ಲಿಗೆ ಎಂ.ಫಿಲ್ ಗಾಗಿ ಸಲ್ಲಿಸಿರುವ ಸಂಪ್ರಬಂಧ)

ಸಂಶೋದಕರು : ಪ್ರಮೀಳಾ ಜೆ.ವಾಜ್

ಮಾರ್ಗದರ್ಶಕರು : ಡಾ. ವೈ. ರವೀಂದ್ರನಾಥ್ ರಾವ್

ಅಭಿವೃದ್ಧಿ ಅಧ್ಯಯನ ಕೇಂದ್ರ
ಕರ್ನಾಟಕ ತಿಯೋಲೊಜಿಕಲ್ ವಿಶ್ವವಿದ್ಯಾಲಯ
ಬಲ್ಮಠ , ಮಂಗಳೂರು

ಜೂನ್ 2012

ಸಾರಾಂಶ

ಪರಾಮರ್ಶನ ಗ್ರಂಥಗಳು:

ಅಭಿವೃದ್ಧಿ ಪಥ: ಸುವರ್ಣ ಕನಾಟಕ : ಸಂಪುಟ–೧

2005–06, ಕರ್ನಾಟಕ ಸರ್ಕಾರ 2006, ಆರ್ಥಿಕ ಸಮೀಕ್ಷೆ.

ಆಶಯ,ಸಮೂಹ ಸಂಪನ್ಮೂಲ ವ್ಯಕ್ತಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಣ ಸಂಯೋಜಕರ ಸಾಮರ್ಥ್ಯ ವರ್ಧನಾ ತರಬೇತಿ ಸಂಚಿಕೆ.

2009–10, ಸರ್ವಶಿಕ್ಷಣ ಅಭಿಯಾನ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು–560098

ASER 2010-Rural

Annual Status of Education Report (Rural)2010

Provisional January 14,2011 Pratham Resourse Centre

Mumbai office: 4th Floor, Y.B.Chavan centre,

Gen. J. Bhosale Marg, Nariman Point, Mumbai, 400021.

ಸಿವಿಕ್ ಬೆಂಗಳೂರು

ಮಾಹಿತಿ ಹಕ್ಕು ಕಾಯ್ದೆ 2005(ಆರ್.ಟಿ.ಐ.), ಸರ್ಕಾರದ ಕೆಲಸ-ಕಾರ್ಯಗಳನ್ನು ಪರಿಶೀಲಿಸಲು ನಾಗರೀಕರ ಕೈಗೆ ಬಂದಿರುವ ಪರಿಣಾಮಕಾರಿ ಅಸ್ತ್ರ

ಸಿವಿಕ್ ಬೆಂಗಳೂರು, ನಂ 6,ಕಸ್ತೂರಿ ಅಪಾರ್ಟ್‌ಮೆಂಟ್ಸ್ 35/23, ಲ್ಯಾಂಗ್ ಫೋರ್ಡ್ ರಸ್ತೆ ತಿರುವು, ಶಾಂತಿ ನಗರ, ಬೆಂಗಳೂರು 560025

ಸಿವಿಕ್ ಬೆಂಗಳೂರು

ನಮ್ಮ ಶಾಲೆಯತ್ತ ಒಂದು ನೋಟ

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ(DSERT), ನಂ 1, 100 ಅಡಿ ವರ್ತುಲ ರಸ್ತೆ, ಬನಶಂಕರಿ 3ನೆ ಹಂತ, ಬೆಂಗಳೂರು-56085

ಗುಣಮಟ್ಟದ ಶಿಕ್ಷಣಕ್ಕಾಗಿ ಸಮುದಾಯದ ಭಾಗವಹಿಸುವಿಕೆ

ಚಿಂತನ ಕಾರ್ಯಾಗಾರ ವರದಿ, ಮಾರ್ಚ್24, 25-2006, ವೆಲೊರೆಡ್, 15-12-1282, ಮಂಗಳೂರು-575 002.

ಗುರುಗಳಾಗಿ ತಾಯಿ-ತಂದೆ 2006, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು- 560 001

K.T. GATTI PARENTS AS EDUCATOR

2006, Navakarnataka Publications Pvt Ltd, Embassy centre, Cresent Road, Bangalore-560 001.

ಪ್ರೇರಣ, ಪ್ರಾಥಮಿಕ ಶಾಲಾ ಶಿಕ್ಷಕರಿಗಾಗಿ ಸಂಪನ್ಮೂಲ ಸಾಹಿತ್ಯ (ಪರಿಷ್ಕೃತ)

2001-02, ಸರ್ವಶಿಕ್ಷಣ ಅಭಿಯಾನ, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, 100ಅಡಿ ಅರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-85

ಎಸ್.ವಿ. ಮಂಜುನಾಥ್ ಮತ್ತು ಇತರರು.

ಶಾಲಾಭಿವೃದ್ಧಿ, ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆಯ ಮಾಲಿಕೆ

2009-10, ಸರ್ವ ಶಿಕ್ಷಣ ಅಭಿಯಾನ, ನೃಪತುಂಗ ರಸ್ತೆ, ಬೆಂಗಳೂರು-560001

ಸ್ಪಂದನ, ಗುಣಾತ್ಮಕ ಶಾಲಾ ಶಿಕ್ಷಣದತ್ತ ಸಮುದಾಯ ಸಾಹಿತ್ಯ ಮಾಲಿಕೆ-೧

ಎಸ್.ಡಿ.ಎಂ.ಸಿ.-ಸಿ.ಎ.ಸಿ. ಕಾರ್ಯಾಗಾರದ ಸಂಪನ್ಮೂಲ ವ್ಯಕ್ತಿಗಳ ತರಬೇತಿ ಪೂರಕ ಸಾಹಿತ್ಯ, 2008-09, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ಸಂಖ್ಯೆ 4, 100ಅಡಿ ಅರ್ತುಲ ರಸ್ತೆ, ಬನಶಂಕರಿ 3ನೇ ಹಂತ, ಬೆಂಗಳೂರು-85

1990ರ ದಶಕದ ಕಡೆಯ ಭಾಗದಲ್ಲಿ *"ದಿ ಇಂಟರ್ ನ್ಯಾಷನಲ್ ಹ್ಯಾಂಡ್ ಬುಕ್ ಆಫ್ ಎಜುಕೇಷನಲ್ ಛೇಂಜ್"* ನ ಮೊದಲ ವಿಭಾಗ "ಆನ್ ಲೈಬರ್‌ಮ್ಯಾನ್‌ರವರ ಸಂಪಾದಕತ್ವದ *"ದಿ ರೂಟ್ಸ್ ಆಫ್*

ಎಜುಕೇಷನಲ್ ಛೇಂಜ್" ನಲ್ಲಿ ಪ್ರಕಟವಾದ ಸ್ಟಾನ್‌ಫರ್ಡ್ ವಿಶ್ವವಿದ್ಯಾಲಯದ ಮಿಲ್ಬ್ರೆ ಡಬ್ಲ್ಯು ಮೆಕ್ಲಾಲಿನ್‌ರ ಬರಹ.

1998ರಲ್ಲಿ ಪ್ರಕಟಗೊಂಡ ದಿ " *ಇಂಟರ್ ನ್ಯಾಷನಲ್ ಹ್ಯಾಂಡ್ ಬುಕ್ ಆಫ್ ಎಜುಕೇಷನಲ್‌ಛೇಂಜ್*"ನ ನಾಲ್ಕನೇ ಭಾಗದಲ್ಲಿ ಪ್ರಕಟವಾದ ಡೇವಿಡ್ ಹಾಪ್ಕಿನ್ಸ್‌ರವರ 'ಪರಿಚಯ' ಲೇಖನ

19 ಡಿಸೆಂಬರ್ 2007 ರಂದು ನವದೆಹಲಿಯಲ್ಲಿ ನಡೆದ *'ಶಿಕ್ಷಣದ ಹಕ್ಕು – ಈಗಿನ ಕ್ರಮಗಳು'* ಎಂಬ ರಾಷ್ಟ್ರೀಯ ಚಿಂತನ ಗೋಷ್ಠಿಯ ನಡಾವಳಿಗಳು.

ಭಾರತ ಸರ್ಕಾರದ ಯೋಜನಾ ಆಯೋಗದ ಕಾರ್ಯಕ್ರಮಮೌಲ್ಯಮಾಪನ ಸಂಸ್ಥೆ ಮೇ 2010ರಲ್ಲಿ ಹೊರತಂದ *'ಸರ್ವಶಿಕ್ಷಣ ಅಭಿಯಾನದ ಮೌಲ್ಯಮಾಪನ ವರದಿ'.*

ಡಾ. ಸೀಮಾ ಮಿಶ್ರ, ಇಂಗ್ಲೀಷ್ ವಿಭಾಗ, ಜೆ.ಡಿ.ಮಹಿಳೆಯರ ಕಾಲೇಜು, ಪಾಟ್ನ, ಮಗಧ ವಿಶ್ವವಿದ್ಯಾಲಯ, ಬಿಹಾರ್ ಇವರು 9ನೇ ರಾಷ್ಟ್ರೀಯ IBER ಮತ್ತು TLC ಕಾನ್ಫರೆನ್ಸ್ 2009, ಲಾಸ್ ವೇಗಾಸ್, ಅಮೆರಿಕದಲ್ಲಿ ಎಂಬ ಪ್ರಬಂಧ *"Challenges of Primary Education in India"*

ಡ್ಯೂಕ್ ವಿಶ್ವವಿದ್ಯಾಲಯ, ಡರ್‍ಹಾಮ್, ಉತ್ತರ ಕ್ಯಾರೊಲಿನ–ಅಡಿಯಲ್ಲಿ ತಾರಾ ಅಯ್ಯರ್ ಮತ್ತು ಪ್ರೊಫೆಸರ್ ಆಲೆಸ್ಸಾಂಡ್ರೊ ತರೊಜಿ ಜಂಟಿಯಾಗಿ *ಭಾರತದ ಪ್ರಾಥಮಿಕ ಶಿಕ್ಷಣದ ಮೇಲೆ ಸಾರ್ವಜನಿಕ ಹಣಕಾಸು ವಿನಿಯೋಗ ಪರಿಣಾಮಕಾರಿಯೋ?*ಬಗ್ಗೆ ನಡೆಸಿದ ಅಧ್ಯಯನದ ವರದಿ.

ಶಿಕ್ಷಕರ ಸೇವಾನಿರತ ತರಬೇತಿಯ ಬಗ್ಗೆ ಅಖಿಲ ಭಾರತ ಪ್ರಾಥಮಿಕ ಶಿಕ್ಷಕರ ಒಕ್ಕೂಟ, ನವದೆಹಲಿ ಅಡಿಯಲ್ಲಿ 2008ರಲ್ಲಿ ಶ್ರೀ. ಎಸ್. ಈಶ್ವರನ್ ಮತ್ತು ಶ್ರೀ ಅಜಿತ್ ಸಿಂಗ್ ನಡೆಸಿದ ಅಧ್ಯಯನದ ವರದಿ.

Education for Rural Development:towards new policy response –Ajoint study conducted by Food and Agricultural Organisation(FAO) of the UN and Unitedc Nations Educational, Scientific and Cultural Organisation, (UNESCO) Paris

ಪೀಠಿಕೆ

ರಾಜ್ಯಪತ್ರ

ಭಾವಚಿತ್ರ

ಅನುಬಂಧಗಳು: ಅನುಬಂಧ 1–ಶೈಕ್ಷಣಿಕ ಅಂಕಿಅಂಶಗಳು– ಪುಟ ಸಂಖ್ಯೆ 47

ಅನುಬಂಧ 2–ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆ–ತಜ್ಞರ ಹೇಳಿಕೆಗಳು– ಪುಟ ಸಂಖ್ಯೆ–48

ಪ್ರಮಾಣ ಪತ್ರ

ಕನ್ನಡ ವಿಶ್ವವಿದ್ಯಾಲಯ ಹಂಪಿಗೆ ಎಂ.ಫಿಲ್ ಪದವಿಗಾಗಿ ಸಾದರಪಡಿಸಿದ ಈ ಸಂಪ್ರಬಂಧವು ನನ್ನ ಸ್ವತ್ರಂತ್ರ ಕೃತಿಯಾಗಿದ್ದು ವಿಶ್ಲೇಷಣೆ ಮತ್ತು ಅಧ್ಯಯನದ ಫಲಶ್ರುತಿಯಾಗಿದೆ. ಕರ್ನಾಟಕ ತಿಯೋಲೊಜಿಕಲ್ ಸಂಶೋದನಾ ಕೇಂದ್ರ ಮಂಗಳೂರು ಇಲ್ಲಿ ಡಾ. ವೈ. ರವೀಂದ್ರನಾಥ್ ರಾವ್ ಅವರ ಮಾರ್ಗದರ್ಶನದಲ್ಲಿ ಸಿದ್ದಪಡಿಸಿದ ಈ ಸಂಪ್ರಭಂಧವನ್ನು ಬೇರಾವುದೇ ಪದವಿ, ಡಿಪ್ಲೊಮಾ ಅಥವಾ ತತ್ಸಮಾನ ಉಪಾದಿಗಳ ಪ್ರಾಪ್ತಿಗಾಗಿ ಅಥವಾ ಆರ್ಥಿಕ ಲಾಭಕ್ಕಾಗಿ ಇಡಿಯಾಗಿ ಅಥವಾ ಭಾಗಶ:ವಾಗಿ ಬಳಸಿಕೊಂಡಿಲ್ಲವೆಂದು ನಾನು ಈ ಮೂಲಕ ಧೃಡೀಕರಿಸುತ್ತೇನೆ.

ಪ್ರಮೀಳಾ ಜೆ ವಾಜ್
ಸಂಶೋದಕಿ
ಕರ್ನಾಟಕ ತಿಯೋಲೊಜಿಕಲ್ ಸಂಶೋದನಾ ಕೇಂದ್ರ
ಬಲ್ಮಠ, ಮಂಗಳೂರು

ದೃಡೀಕರಣ ಪತ್ರ

ಪ್ರಮೀಳಾ ಜೆ ವಾಜ್ ಅವರು ನನ್ನ ಸಲಹೆ ಮತ್ತು ಮಾರ್ಗದರ್ಶನದಲ್ಲಿ **"ಶಾಲಾಭಿವೃದ್ಧಿ ಮತ್ತು ಎಸ್.ಡಿ.ಎಂ.ಸಿ; ಉಡುಪಿ ಜಿಲ್ಲೆಯಲ್ಲಿನ ಒಂದು ಅಧ್ಯಯನ"** ಎಂಬ ಶೀರ್ಷಿಕೆಯ ಈ ಸಂಪ್ರಬಂಧವನ್ನು ಎಂ.ಫಿಲ್ ಪದವಿ ಪ್ರಾಪ್ತಿಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಬೇಕೆಂದು ಸಿದ್ಧಪಡಿಸಿರುತ್ತಾರೆ. ಈ ಸಂಪ್ರಬಂಧವು ಸಂಶೋದಕರ ಸ್ವಯಂ ಪರಿಶ್ರಮ, ವಿಶ್ಲೇಷಣೆ, ಅಭಿಪ್ರಾಯಸಂಗ್ರಹ ಮತ್ತು ಸಂಶೋದನೆಯ ಫಲ ಸ್ವರೂಪವಾಗಿದೆ. ಇವರು ಈ ಸಂಪ್ರಬಂಧವನ್ನು ಅಥವಾ ಇದರ ಯಾವುದೇ ಭಾಗವನ್ನು ಈ ಮೊದಲು ಯಾವುದೇ ಪದವಿಗಾಗಿ ಅಥವಾ ಇನ್ನಿತರ ಉದ್ದೇಶಗಳಿಗಾಗಿಯಾಗಲಿ ಬಳಸಿಕೊಂಡಿಲ್ಲ.

ಡಾ. ವೈ ರವೀಂದ್ರನಾಥ್ ರಾವ್

Dr. Y. Ravindranath Rao
M. A., Ph. D.,
Prof & Head Dept. of Sociology
St. Mary's Syrian College
BRAHMAVAR - 576 213 (D. K.)

ಕೃತಜ್ಞತಾ ನುಡಿಗಳು

ನನ್ನ ಎಂ.ಫಿಲ್ ಪದವಿಯನ್ನು ಅರ್ಥಪೂರ್ಣವಾಗಿ ಮಾಡಲು ಅವಕಾಶ ಉತ್ತೇಜನ ಹಾಗೂ ಮಾರ್ಗದರ್ಶನ ನೀಡಿದ ಕರ್ನಾಟಕ ತಿಯೋಲೊಜಿಕಲ್ ಅಭಿವೃದ್ಧಿ ಅಧ್ಯಯನ ಕೇಂದ್ರದ ನಿರ್ದೇಶಕರಾದ **ಡಾ.ರತ್ನಾಕರ್ ಸದಾನಂದ್** ಹಾಗೂ ಸಂಯೋಜಕರಾದ **ಡಾ. ಎ.ವಿ. ನಾವಡ** ಅವರಿಗೆ ಪ್ರೀತಿಪೂರ್ವಕ ನಮನಗಳು. ನನ್ನ ಮಾರ್ಗದರ್ಶಕರಾದ **ಡಾ. ವೈ ರವೀಂದ್ರನಾಥ್ ರಾವ್** ಅವರಿಗೆ ನಾನು ಋಣಿ.

ನನ್ನ ಸಾಧನೆಗೆ ಸ್ಫೂರ್ತಿಯಾಗಿರುವ ನನ್ನ ಬಾಳ ಸಂಗಾತಿ **ಶ್ರೀ ಕೇಶವ ಕೋಟೇಶ್ವರ** ಹಾಗೂ ನನ್ನ ಮಗಳು **ಪ್ರೀತಿ** ಗೆ, ನನಗೆ ಪ್ರೇರಣೆ ನೀಡಿದ ನನ್ನ ಅಮ್ಮ **ಗ್ರೇಸಿ ವಾಜ್** ಅವರಿಗೆ ನಾನು ಕೃತಜ್ಞಳು. ಕ್ಷೇತ್ರಕಾರ್ಯದಲ್ಲಿ ಸಹಕಾರ ನೀಡಿದ ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ಹಾಗೂ ಪ್ರತ್ರ್ಯಕ್ಷ ಪರೋಕ್ಷವಾಗಿ ಸಹಕರಿಸಿದ ನನ್ನೆಲ್ಲಾ ಹಿತೈಷಿಗಳಿಗೆ ನಮನಗಳು.

ಪ್ರಮೀಳಾ ಜೆ ವಾಜ್
ಸಂಶೋದಕಿ
ಕರ್ನಾಟಕ ತಿಯೋಲೊಜಿಕಲ್ ಅಭಿವೃದ್ಧಿ ಸಂಶೋದನಾ ಕೇಂದ್ರ
ಬಲ್ಮಠ, ಮಂಗಳೂರು

ಅಧ್ಯಾಯ –೧

ಪೀಠಿಕೆ:

ಪ್ರಾಥಮಿಕ ಶಿಕ್ಷಣವು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮಹತ್ತರವಾದ ಪಾತ್ರ ಹೊಂದಿದೆ. ಗುಣಾತ್ಮಕ ಶಿಕ್ಷಣ ಪ್ರತೀ ಮಗುವಿಗೆ ಸಿಗುವಂತಾಗಲು, ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯಿದೆ, ೨೦೦೯ ರಲ್ಲಿ ಜಾರಿಗೊಂಡಿದೆ. ೧೯೮೬ ರ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಪ್ರಾಥಮಿಕ ಶಿಕ್ಷಣದಲ್ಲಿ ಆಗಬೇಕಾದ ಪ್ರಮುಖ ಬದಲಾವಣೆಗಳ ಬಗ್ಗೆ ಹೇಳುತ್ತದೆ. ರಾಜಾರಾಮಣ್ಣ ವರದಿಯ ಪ್ರಕಾರ ಪ್ರಸ್ತುತ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ನ್ಯೂನತೆಗಳನ್ನು ಸರಿಪಡಿಸಲು ಸೂಚಿಸಲಾಗಿರುವ ಅಂಶಗಳನ್ನು ಗಮನಿಸಿದರೆ ಶಿಕ್ಷಣದ ಮೂಲ ಪಾಲುದಾರರಾದ ಸಮುದಾಯ ಶಾಲೆಗಳಿಂದ ದೂರದಲ್ಲುಳಿದಿರುವುದು, ಶಿಕ್ಷಣದ ಹಿಂದುಳಿದಿರುವಿಕೆಗೆ ಮೂಲ ಕಾರಣ ಎಂಬುದು ಸ್ಪಷ್ಟವಾಗುತ್ತದೆ.

ಶಾಲಾ ಅಭಿವೃದ್ಧಿ ಬಗೆಗಿನ ಸಮಕಾಲೀನ ದೃಷ್ಟಿಕೋನಗಳು:

ಶಾಲೆಯ ಒಳಗಿನ ಮತ್ತು ಹೊರಗಿನ ಸ್ತರಗಳಲ್ಲಿ ಕಲಿಕೆ ಸಂಭವಿಸುವುದಾದರೂ ಶಿಕ್ಷಣಕ್ಕೆ ಶಾಲೆಯೇ ಕೇಂದ್ರ ಬಿಂದುವಾಗಿದೆಯೆಂದು ನಿಸ್ಸಂದೇಹವಾಗಿ ಪರಿಭಾವಿಸಬಹುದಾಗಿದೆ. ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸುವಲ್ಲಿ ಮಾಡಲಾಗುತ್ತಿರುವ ಹಲವಾರು ಪರಿವರ್ತನಾ ಪ್ರಯತ್ನಗಳಿಗೆ ಶಾಲಾ ಅಭಿವೃದ್ಧಿಯೇ ಅತ್ಯಂತ ಪ್ರಮುಖವಾದ ಭಾಗವಾಗಿದೆಯೆಂದು ವಿಶ್ಲೇಷಿಸಲಾಗುತ್ತಿದೆ. ಹಲವಾರು ದಶಕಗಳ ಅನುಭವಗಳನ್ನಾಧರಿಸಿ ನೆಲೆಯೂರಿರುವ ಕೆಲವು **ಶಾಲಾಭಿವೃದ್ಧಿ ಕುರಿತಾದ ಪ್ರಸ್ತುತ ದೃಷ್ಟಿಕೋನಗಳೆಂದರೆ:**

೧. ಶಾಲೆ ಪರಿವರ್ತನೆಯ ಕೇಂದ್ರವಾಗಿದೆ

೨ ಪರಿವರ್ತನೆಯೆಡೆಗೆ ಒಂದು ವ್ಯವಸ್ಥಿತ ಮಾರ್ಗ

೩ ಪರಿವರ್ತನೆಗೆ ಅತಿ ಮುಖ್ಯ ಅಂಶವೆಂದರೆ ಶಾಲೆಗಳ ಆಂತರಿಕ ಸ್ಥಿತಿಗತಿಗಳು

೪ ಶೈಕ್ಷಣಿಕ ಗುರಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಾಧಿಸುವುದು

೫ ವಿವಿಧ ಹಂತಗಳ ದೃಷ್ಟಿಕೋನಗಳು

೬ ಸಂಯೋಜಿತ ಕಾರ್ಯಾಚರಣೆಯ ತಂತ್ರಗಳು

೭ ಸಾಂಸ್ಥೀಕರಣದತ್ತ ಮುನ್ನೆಡೆಯುವುದು

೧. ಶಾಲೆ ಪರಿವರ್ತನೆಯ ಕೇಂದ್ರವಾಗಿದೆ:

ಇದರ ಅರ್ಥವೆಂದರೆ ಎಲ್ಲ ಶಾಲೆಗಳೂ ಒಂದೇ ತೆರನಾಗಿವೆಯೆಂದು ಭಾವಿಸದೆ ಶೈಕ್ಷಣಿಕ ಪರಿವರ್ತನೆಯ ಯೋಜನೆಗಳು ವೈಯಕ್ತಿಕ ಶಾಲೆಗಳಲ್ಲಿರುವ ಸ್ಥಿತಿಗತಿಗಳನ್ನು ಗಣನೆಗೆ ತೆಗೆದುಕೊಳ್ಳುವ ಸಂವೇದನಾಶೀಲತೆಯನ್ನು ಹೊಂದಿರಬೇಕಾಗುತ್ತದೆ ಎನ್ನುವುದೇ ಆಗಿದೆ. ಅಲ್ಲದೆ ಶಾಲಾ ಅಭಿವೃದ್ಧಿಯ ಪ್ರಯತ್ನಗಳು ತರಗತಿ ಕೋಣೆಯನ್ನು ಕಡೆಗಣಿಸದೆಯೇ ತರಗತಿ ಕೋಣೆಯನ್ನು ಮೀರಿದ ದೃಷ್ಟಿಕೋನವನ್ನು ಹೊಂದಿರಬೇಕಾಗುತ್ತದೆ.

೨. ಪರಿವರ್ತನೆಯೆಡೆಗೆ ಒಂದು ವ್ಯವಸ್ಥಿತ ಮಾರ್ಗ:

ಶಾಲಾ ಅಭಿವೃದ್ಧಿಯು ಜಾಗರೂಕತೆಯಿಂದ ಯೋಜಿಸಲ್ಪಡುವ ಮತ್ತು ವ್ಯವಸ್ಥಿತವಾಗಿ ನಿರ್ವಹಿಸಲ್ಪಡುವ ಪ್ರಕ್ರಿಯೆಯಾಗಿದ್ದು ಇದು ಹಲವು ವರ್ಷಗಳ ಅವಧಿಯಲ್ಲಿ ಸಂಭವಿಸುತ್ತದೆ.

೩. ಪರಿವರ್ತನೆಗೆ ಅತಿ ಮುಖ್ಯ ಅಂಶವೆಂದರೆ ಶಾಲೆಗಳ ಆಂತರಿಕ ಸ್ಥಿತಿಗತಿಗಳು:

ಬೋಧನೆ–ಕಲಿಕೆ ಚಟುವಟಿಕೆಗಳ ಮೇಲಷ್ಟೇ ಗಮನವನ್ನು ಕೇಂದ್ರೀಕರಿಸುವುದಲ್ಲದೆ ಬೋಧನೆ–ಕಲಿಕೆ ಪ್ರಕ್ರಿಯೆಗೆ ಪೂರಕವಾಗುವ ಶಾಲೆಯ ವಾತಾವರಣ ಮತ್ತು ಸಂಸ್ಕೃತಿ (ಶಾಲಾ ಕಾರ್ಯವಿಧಾನಗಳನ್ನೊಳಗೊಂಡಂತೆ), ಪಾತ್ರಗಳ ಹಂಚಿಕೆ ಮತ್ತು ಸಂಪನ್ಮೂಲದ ಬಳಕೆ– ಇವೂ ಗಮನಹರಿಸಬೇಕಾದ ಅಂಶಗಳಾಗಿವೆ.

೪. ಶೈಕ್ಷಣಿಕ ಗುರಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಾಧಿಸುವುದು:

ಶೈಕ್ಷಣಿಕ ಗುರಿಗಳು ಒಂದು ಶಾಲೆಯ ವಿಶಿಷ್ಟ ಧ್ಯೇಯವನ್ನು ಪ್ರತಿಬಿಂಬಿಸುತ್ತದೆ ಮತ್ತು ಆ ಶಾಲೆಯೇ ತಾನು ಏನನ್ನು ಸಾಧಿಸಬಯಸುತ್ತದೆಯೆನ್ನುವುದನ್ನು ಪ್ರತಿನಿಧಿಸುತ್ತದೆ. ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಪಡೆಯುವ ಅಂಕಗಳನ್ನು ಮೀರಿದ ಮತ್ತು ವಿದ್ಯಾರ್ಥಿಗಳ ಸಾಮಾನ್ಯ ಬ ಎಳವಣಿಗೆಯ ಅಗತ್ಯಗಳು, ಶಿಕ್ಷಕರ ವೃತ್ತಿ ಬೆಳವಣಿಗೆ ಮತ್ತು ಶಿಕ್ಷಕ ಸಮುದಾಯದ ಅಗತ್ಯಗಳನ್ನೊಳಗೊಂಡ ವಿಶಾಲ ಲಕ್ಷಣಗಳ ಪರಿಣಾಮವನ್ನು ಇದು ಸೂಚಿಸುತ್ತದೆ.

೫. ವಿವಿಧ ಹಂತಗಳ ದೃಷ್ಟಿಕೋನಗಳು:

ಶಾಲೆಯು ಪರಿವರ್ತನೆಯ ಕೇಂದ್ರ ಬಿಂದುವಾಗಿದ್ದರೂ ತಾನು ಏಕಾಂಗಿಯಾಗಿ ಕಾರ್ಯೋನ್ಮುಖವಾಗುವುದಿಲ್ಲ. ಅದು ಪರಸ್ಪರ ಜೊತೆಯಾಗಿ ಕೆಲಸ ಮಾಡುವ ಶೈಕ್ಷಣಿಕ ವ್ಯವಸ್ಥೆಯಲ್ಲಿ ಬೇರೂರಿದೆ. ಆದುದರಿಂದ ಶಾಲೆಯ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುತ್ತಿರುವ ಸಹಾಯಕ ವ್ಯಕ್ತಿಗಳ ಹಾಗೂ ಸ್ಥಳೀಯ ಅಧಿಕಾರಿಗಳ ಪಾತ್ರಗಳನ್ನು ಸ್ಪಷ್ಟವಾಗಿ ನಿರೂಪಿಸಬೇಕಲ್ಲದೆ, ಅವರನ್ನು ಶಾಲೆಯ ಅಭಿವೃದ್ಧಿಗೆ ಪೂರಕವಾಗುವಂತೆ ಹೊಂದಿಸಿ ರೂಪಿಸಬೇಕಾಗಿದೆ.

೬. ಸಂಯೋಜಿತ ಕಾರ್ಯಾಚರಣೆಯ ತಂತ್ರಗಳು:

ಮೇಲಿನ ಸ್ತರದಿಂದ ಕೆಳಕ್ಕೆ ಮತ್ತು ಕೆಳಗಿನ ಸ್ತರದಿಂದ ಮೇಲಿನದಕ್ಕೆ ಸಂಬಂಧವನ್ನೇರ್ಪಡಿಸುವುದು ಬಹಳ ಅಗತ್ಯವಾಗಿದೆ. ಮೇಲಿನ ಸ್ತರದಿಂದ ಕೆಳಕ್ಕೆ ಹರಿಯುವಂಥವು ಪರಿಪೂರ್ಣ ನೆಲೆಯಲ್ಲಿ ಕಾರ್ಯನೀತಿಯ ಗುರಿಗಳನ್ನು, (ರಾಷ್ಟ್ರೀಯ ಶೈಕ್ಷಣಿಕ ನಿಯಮಾವಳಿ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, ಶಿಕ್ಷಣದ ಹಕ್ಕು ಕಾಯ್ದೆ)ಒಟ್ಟಾರೆ

ಕಾರ್ಯತಂತ್ರವನ್ನು ಒದಗಿಸುತ್ತದೆ. ಇದಕ್ಕೆ ಸರಿಹೊಂದುವಂತೆ ಕೆಳಗಿನ ಸ್ತರದಿಂದ ಮೇಲಕ್ಕೆ ತಲುಪುವ ಪ್ರತಿಕ್ರಿಯೆ, ಸಮಸ್ಯೆಯ ಗುರುತಿಸುವಿಕೆ, ಗುರಿಯ ಆದ್ಯತೀಕರಣ ಮತ್ತು ಕಾರ್ಯಾಚರಣೆ ಇವುಗಳನ್ನು ಪೂರಕವಾಗಿ ಒದಗಿಸುತ್ತದೆ. ಮೊದಲಿನದು ಒಂದು ನಿರ್ದಿಷ್ಟ ಚೌಕಟ್ಟು, ಸಂಪನ್ಮೂಲಗಳು ಮತ್ತು ಹಲವಾರು ಪರ್ಯಾಯ ಆಯ್ಕೆಗಳನ್ನೊದಗಿಸುತ್ತವೆ, ಎರಡನೆಯದು ಚೈತನ್ಯ ಶಕ್ತಿಯನ್ನು, ಶಾಲಾಮಟ್ಟದಲ್ಲಿ ನಿರ್ಧಾರಗಳನ್ನು ಕೈಗೊಳ್ಳಲು ಅಗತ್ಯ ಮಾಹಿತಿಗಳನ್ನು ಮತ್ತು ಅನುಷ್ಠಾನ ಮಾರ್ಗಗಳನ್ನೊದಗಿಸುತ್ತದೆ.

೭. **ಸಾಂಸ್ಥೀಕರಣದತ್ತ ಮುನ್ನೆಡೆಯುವುದು:**

ಶಾಲೆಯಲ್ಲಿ ಶಿಕ್ಷಕರ ನಡವಳಿಕೆಯಲ್ಲಿ ಪರಿವರ್ತನೆ ಅಂತರ್ಗತವಾಗಿ, ಅದು ಸ್ವಾಭಾವಿಕವಾಗಿ ಅಭಿವ್ಯಕ್ತಗೊಂಡಾಗಲೇ ಪರಿವರ್ತನೆ ಯಶಸ್ವಿಯಾಗುವುದು. ಯೋಜನೆಗಳನ್ನು ಅನುಷ್ಠಾನಗೊಳಿಸುವುದರಿಂದ ಮಾತ್ರ ಇದು ಸಾಧ್ಯವಾಗದು. ಸಮಕಾಲೀನ ದೃಷ್ಟಿಕೋನಗಳು, ಪರಿಣಾಮಕಾರಿಯಾಗಿ ಶಾಲಾ ಅಭಿವೃದ್ಧಿಯಾಗಬೇಕಿದ್ದರೆ ಈ ಕೆಳಗಿನ ಪಟ್ಟಿಯಲ್ಲಿರುವ ಆಯಾಮಗಳನ್ನೊಳಗೊಂಡ ವ್ಯಾಪಕ ಪರಿವರ್ತನಾ ಮಾದರಿಗಳು ಅಗತ್ಯವಾಗಿವೆಯೆಂಬ ಅಂಶಗಳ ಮೇಲೆ ಒತ್ತು ನೀಡುತ್ತವೆ.

ಅ. ಪಠ್ಯಕ್ರಮ ವಿಷಯಗಳು ಮತ್ತು ಬೋಧನೆಗಳ ಬಗ್ಗೆ ಗಮನವೀಯುವ ಕಾರ್ಯತಂತ್ರಗಳು

ಆ. ಶಾಲಾ ವಾತಾವರಣ ಮತ್ತು ಆಂತರಿಕ ಸ್ಥಿತಿಗತಿಗಳನ್ನು ಸುಧಾರಿಸಲು ವಿನ್ಯಾಸಗೊಳಿಸಲಾಗಿರುವ ಸಾಂಸ್ಥಿಕ ಅಭಿವೃದ್ಧಿ ಕಾರ್ಯತಂತ್ರಗಳು.

ಇ. ತಮ್ಮ ಮುಂದಿರುವ ಸವಾಲುಗಳಿಗೆ ಆಯಾ ಶಾಲೆಗಳೇ ಸೂಕ್ತ ಪರಿಹಾರಗಳನ್ನು ರೂಪಿಸಿಕೊಳ್ಳಲು ಅನುವಾಗುವಂತೆ ಅಗತ್ಯವಾದ ಅಧಿಕಾರ ವಿಕೇಂದ್ರೀಕರಣ.

೧೯೯೦ರ ದಶಕದ ಅಂತಿಮ ಭಾಗದಲ್ಲಿ ಅಮೇರಿಕಾದ ಶಾಲಾ ವ್ಯವಸ್ಥೆಯ ಬಗ್ಗೆ ಹೊರತರಲಾದ **"ದಿ ಇಂಟರ್ ನ್ಯಾಷನಲ್ ಹ್ಯಾಂಡ್ ಬುಕ್ ಆಫ್ ಎಜುಕೇಷನಲ್ ಛೇಂಜ್"** ನಲ್ಲಿ ಪ್ರಕಟಿಸಲಾದ ಮೂರು ವಿಭಿನ್ನ ಬರಹಗಳು ಅನುಕೂಲಕರವಲ್ಲದ ಕೆಲವು ಸತ್ಯಾಂಶಗಳನ್ನು ಎತ್ತಿ ತೋರಿಸುವುದರ ಜೊತೆಗೆ ನಮ್ಮ ದೇಶದ ಶೈಕ್ಷಣಿಕ ಪರಿವರ್ತನೆಯ ಸಂದರ್ಭಕ್ಕೆ ನೇರವಾಗಿ ಅನ್ವಯವಾಗುವ ಭಾರಿ ಪ್ರಮಾಣದ ಮೂಲಭೂತ ಪರಿವರ್ತನೆಯನ್ನು ಶಾಲಾ ಪದ್ಧತಿಗಳಲ್ಲಿ ಅಳವಡಿಸಿಕೊಳ್ಳಲು ಕೆಲವು ಪರಿಹಾರಗಳನ್ನು ಸೂಚಿಸುತ್ತವೆ. ಶೈಕ್ಷಣಿಕ ಪರಿವರ್ತನೆಯಲ್ಲಿ ಆಸಕ್ತರಾದವರನ್ನು ಚಿಂತನೆಗೆ ಒರೆ ಹಚ್ಚುವುವೆಂದು ಭಾವಿಸಲಾಗಿರುವುದರಿಂದ ಈ ಬರಹಗಳನ್ನು ಕನ್ನಡಕ್ಕೆ ಭಾವಾಂತರಿಸಿ ಈ ಹೊತ್ತಿಗೆಯ ಮುಂದಿನ ಅಧ್ಯಾಯಗಳಲ್ಲಿ ಪ್ರಸ್ತುತ ಪಡಿಸಲಾಗಿದೆ. ಈ ಮೂರು ಬರಹಗಳು ಯಾವುದೆಂದರೆ:

೧. **ಕಾರ್ಯಕ್ಷೇತ್ರದಿಂದ ಆರಿಸಲಾದ ದನಿಗಳು ಮತ್ತು ಕಲಿಕೆಗಳು:** ಯೋಜನೆಯ ಅನುಷ್ಠಾನ ಮತ್ತು ಆದರಣಾ ನೆಲೆಗಳ ಬಗ್ಗೆ ನಿದರ್ಶನಗಳು (Listening and Learning from the Field: Tales of Policy Implementation and Situated Practice)

೨. **ಶಾಲಾ ಅಭಿವೃದ್ಧಿ ಬಗ್ಗಿನ ಆಚರಣೆ ಮತ್ತು ಸಿದ್ಧಾಂತ** (The Practice and Theory of School Improvement)

೩. ಮರಳು, ಇಟ್ಟಿಗೆಗಳು ಮತ್ತು ಬೀಜಗಳು : ಶಾಲಾ ಪುನರ್‌ನಿರ್ಮಾಣ ಕಾರ್ಯತಂತ್ರಗಳು ಮತ್ತು ಪರಿವರ್ತನೆಗಿರಬೇಕಾದ ಸಿದ್ಧತೆ (Sand, Bricks and Seeds: School Change Strategies and Readiness for Reform)

ಆ) ಶೈಕ್ಷಣಿಕ ನಾಯಕತ್ವ ಅಭಿವೃದ್ಧಿಗೆ ಕಾಲ್ಪನಿಕ ಪರಿಕಲ್ಪನೆ:

ಕಡೆಯ ಅಧ್ಯಾಯದಲ್ಲಿ ಶೈಕಣಿಕ ನಾಯಕತ್ವ ಅಭಿವೃದ್ಧಿಗೆ ಕಾಲ್ಪನಿಕ ಪರಿಕಲ್ಪನೆ ಒದಗಿಸಿರುವುದೇ ಅಲ್ಲದೆ ಶಾಲಾ ನಾಯಕತ್ವವು ಶೈಕ್ಷಣಿಕ ಪರಿಣಾಮಗಳ ಮೇಲೆ ಪ್ರಭಾವ ಬೀರುವ ಎರಡನೆ ಅತಿ ಪ್ರಮುಖ ಅಂಶವಾಗಿರುವುದರಿಂದ ಶೈಕ್ಷಣಿಕ ಪರಿವರ್ತನೆಯಲ್ಲಿ ಅದಕ್ಕಿರುವ ಮಹತ್ವ, ಅದು ಒಳಗೊಂಡಿರುವ ಪ್ರಮುಖ ಅಂಶಗಳು ಮತ್ತು ಶೈಕ್ಷಣಿಕ ನಾಯಕತ್ವವನ್ನು ಬೆಳೆಸಲು ವಿನಿಯೋಗಿಸಬೇಕಾದ ಕನಿಷ್ಠ ಸಮಯ ಮತ್ತು ಪ್ರಯತ್ನಗಳ ಬಗ್ಗೆ ದೃಷ್ಟಿಹರಿಸಲಾಗಿದೆ.

ಕಾರ್ಯಕ್ಷೇತ್ರದಿಂದ ಆಲಿಸಲಾದ ದನಿಗಳು ಮತ್ತು ಕಲಿಕೆಗಳು: ಯೋಜನೆಯ ಅನುಷ್ಠಾನ ಮತ್ತು ಆದರಣಾ ನೆಲೆಗಳು ಮತ್ತು ನಿದರ್ಶನಗಳು:

ಈ ಲೇಖನವು **"ದಿ ಇಂಟರ್ ನ್ಯಾಷನಲ್ ಹ್ಯಾಂಡ್ ಬುಕ್ ಆಫ್ ಎಜುಕೇಷನಲ್ ಛೇಂಜ್"** ನ ಮೊದಲ ವಿಭಾಗ ಆನ್ ಲೈಬರ್‌ಮ್ಯಾನ್‌ರವರ ಸಂಪಾದಕತ್ವದ **"ದಿ ರೂಟ್ಸ್ ಆಫ್ ಎಜುಕೇಶನಲ್ ಛೇಂಜ್"** ನಲ್ಲಿ ಪ್ರಕಟವಾದ ಸ್ಟಾನ್‌ಫರ್ಡ್ ವಿಶ್ವವಿದ್ಯಾನಿಲಯದ ಮಿಲ್ಬ್ರೆ ಡಬ್ಲ್ಯು ಮೆಕ್ಲೌಲಿನ್‌ರ ಬರಹವನ್ನಾಧರಿಸಿದೆ. **" ಯೋಜನೆಗಳು ನಿರೀಕ್ಷಿಸಿದಂತೆ ಅನುಷ್ಠಾನಗೊಳ್ಳುವುದಿಲ್ಲವೇಕೆ?" " ತರಗತಿ ಕೋಣೇಯ ಆಚರಣೆಗಳನ್ನು ಬದಲಾಯಿಸುವುದು ಏಕೆ ಕ್ಲಿಷ್ಟಕರ?"** ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಹಿಡಿಯುವ ಮೂಲಕ ಅನುಷ್ಠಾನದಲ್ಲಿ ತಲೆದೋರುವ ಸಮಸ್ಯೆಗಳನ್ನು ತಿಳಿದುಕೊಳ್ಳುವ ಪ್ರಯತ್ನವನ್ನು ಈ ಲೇಖನ ಮಾಡುತ್ತದೆ.

ಅನುಷ್ಠಾನದಲ್ಲುಂಟಾಗುವ ಸಮಸ್ಯೆಗಳನ್ನು ಕಂಡುಹಿಡಿಯುವುದು:
೧೯೭೦ರ ದಶಕದ ಆರಂಭ ಭಾಗದಲ್ಲಿ ಅಮೇರಿಕದ ಯೋಜನಾ ವಿಶ್ಲೇಷಕರು ರಾಷ್ಟ್ರಮಟ್ಟದಲ್ಲಿ ತರಲಾದ ಬೃಹತ್ ಶೈಕ್ಷಣಿಕ ಬದಲವಣೆಗಳು ಶಾಲಾ ಹಂತದಲ್ಲಿ ಯಾವ ರೀತಿ ಪರಿಣಾಮ ಉಂಟುಮಾಡಿವೆಯೆಂಬ ಬಗ್ಗೆ ದೃಷ್ಟಿ ಹರಿಸಿದಾಗ ಅನುಷ್ಠಾನದಲ್ಲಿನ ಸಮಸ್ಯೆಗಳನ್ನು ಕಂಡುಕೊಂಡರು. ೧೯೬೫ರ ಪ್ರಾಥಮಿಕ ಮತ್ತು ಪ್ರೌಢಶಾಲಾ ಶಿಕ್ಷಣ ಕಾಯಿದೆಯ ಅಂಗೀಕಾರ ಸ್ಥಳೀಯ ಶೈಕ್ಷಣಿಕ ಚಟುವಟಿಕೆಗಳಲ್ಲಿ ಕೇಂದ್ರ ಸರ್ಕಾರ ಗಣನೀಯ ಪ್ರಮಾಣದಲ್ಲಿ ಭಾಗವಹಿಸುತ್ತಿರುವುದನ್ನು ಸೂಚಿಸಿತು. ಮೇಲಿನ ಕಾಯಿದೆಯ ವ್ಯಾಪ್ತಿಯು ಸರ್ಕಾರದ ವಿವಿಧ ಹಂತಗಳು– ವಾಷಿಂಗ್‌ಟನ್‌ನಿಂದ ರಾಜ್ಯದ ರಾಜಧಾನಿಗಳು ಮತ್ತು ಸ್ಥಳೀಯ ಜಿಲ್ಲೆಗಳು ಮತ್ತು ಶಾಲೆಗಳ ಮಟ್ಟದವರೆಗೆ – ಮತ್ತು ಶಾಸಕಾಂಗ, ಕಾರ್ಯಾಂಗ, ಆಡಳಿತಾಂಗ ಹೀಗೆ ವಿಭಿನ್ನ ಸ್ತರಗಳಿಗೆ ಹಬ್ಬಿರುವುದನ್ನು ಗಮನಿಸಲಾಯಿತು. ಅನುಷ್ಠಾನದಲ್ಲಿನ ಸಮಸ್ಯೆಗಳು ತಮ್ಮೆಲ್ಲಾ ಸಂಕೀರ್ಣತೆಗಳು, ಮಾರ್ಪಾಡಾಗದ ಸ್ಥಿತಿ ಮತ್ತು ಖಂಡಿತ ಸ್ವರೂಪ ಇವುಗಳ ಮೂಲಕ ಪೂರ್ಣ ಪ್ರಮಾಣದಲ್ಲಿ ಪ್ರಕಟಗೊಂಡವು.

ಜೆಫ್ರಿ ಪ್ರಸ್ಮನ್ ಆರೋನ್ ವಿಲ್ಡಾವ್‌ಸ್ಕಿ ಇವರುಗಳು ೧೯೭೩ರಲ್ಲಿ ರಾಷ್ಟ್ರಮಟ್ಟದ ಯೋಜನೆಗಳಿಗೆ ಸಂಬಂಧಿಸಿದಂತೆ ಅನುಷ್ಠಾನದಲ್ಲಿನ ಸಮಸ್ಯೆಗಳನ್ನು ಎತ್ತಿ ತೋರಿಸಿದವರಲ್ಲಿ ಮೊದಲಿಗರು. ಯೋಜನಾ ಅನುಷ್ಠಾನಕರು ಯಾವಾಗಲೂ ಹೇಳಿದಂತೆ ಮಾಡುವುದಿಲ್ಲ. (ವೈಜ್ಞಾನಿಕ ನಿರ್ವಹಣಾ ಮಾಧರಿಯ ಬೆಂಬಲಿಗರು ಸೂಚಿಸುವಂತೆ); ಅಷ್ಟೇ ಅಲ್ಲ, ಯೋಜನೆಯ ಗುರಿಗಳನ್ನು ಗರಿಷ್ಠ ಪ್ರಮಾಣಕ್ಕೆ ಹೆಚ್ಚಿಸುವ ರೀತಿಯಲ್ಲಿ ಕಾರ್ಯೋನ್ಮುಖರಾಗುವುದಿಲ್ಲ (ಹಲವಾರು ಅರ್ಥಶಾಸ್ತ್ರಜ್ಞರು ತಿಳಿಸುವಂತೆ). ಇದರ ಫಲಿತಾಂಶವೆಂದರೆ ಯೋಜನಾ ಪರಿಣಾಮಗಳು ನಿರೀಕ್ಷಿತ ಮಟ್ಟವನ್ನು ತಲುಪದಿದ್ದುದಷ್ಟೇ ಅಲ್ಲದೇ ವಿವಿಧ ಸಾಂದರ್ಭಿಕ ನೆಲೆಗಳಲ್ಲಿ ಒಂದೇ ಕಾರ್ಯಕ್ರಮ ಹೇಗೆ ಬಹು ವೈವಿಧ್ಯಮಯ ಸ್ವರೂಪವನ್ನು ಪಡೆದುಕೊಂಡಿತೆಂಬುದು ವ್ಯಕ್ತವಾಯಿತು.

ರ್‍ಯಾಂಡ್ ಪರಿವರ್ತನಾ ಪ್ರಾತಿನಿಧಿಕ ಅಧ್ಯಯನ:

೧೯೭೩–೭೮ರ ನಡುವಿನ ಅವಧಿಯಲ್ಲಿ ರ್‍ಯಾಂಡ್ ಕಾರ್ಪೋರೇಷನ್ ಸಾರ್ವಜನಿಕ ಶಾಲೆಗಳಲ್ಲಿ ಹೊಸ ಪದ್ಧತಿಗಳನ್ನು ಪರಿಚಯಿಸುವ ಮತ್ತು ಬೆಂಬಲಿಸುವ ದೃಷ್ಟಿಯಿಂದ ಕೇಂದ್ರ ಮಟ್ಟದಲ್ಲಿ ಜಾರಿಗೊಳಿಸಲಾದ ನಾಲ್ಕು ರಾಷ್ಟ್ರೀಯ ಯೋಜನೆಗಳ ಅನುಷ್ಠಾನದ ಬಗ್ಗೆ ಅಧ್ಯಯನವನ್ನು ಕೈಗೊಂಡಿತು. ಈ ನಾಲ್ಕು ಯೋಜನೆಗಳೆಂದರೆ :

೧. ಸ್ಥಳೀಯ ನಾವಿನ್ಯತೆಯನ್ನು ಬೆಂಬಲಿಸುವುದು (Support for local innovation)
೨. ದ್ವಿ ಭಾಷಾ ಶೈಕ್ಷಣಿಕ ಪರಿವರ್ತನೆಯನ್ನು ಬೆಂಬಲಿಸುವುದು (Spport for bilingual educational reforms)
೩. ವೃತ್ತಿಪರ ಶಿಕ್ಷಣದೆಡೆಗೆ ಹೊಸ ಹಾದಿಗಳನ್ನು ನಿರ್ಮಿಸುವುದು (To develop new approach to carrer education)
೪ ಅನಕ್ಷರತೆಯನ್ನು ಹೋಗಲಾಡಿಸುವುದು (ಓದುವ ಹಕ್ಕಿನ ಕಾರ್ಯಕ್ರಮ) (Eliminate illiteracy [Right to read programme])

ಕೇಂದ್ರಮಟ್ಟದ ಶೈಕ್ಷಣಿಕ ಕಾನೂನು ನಿಯಮಾವಳಿಗಳು ಸರ್ಕಾರದ ವಿವಿಧ ಹಂತಗಳ ಮೂಲಕ ಹೇಗೆ ಹರಿದು ಬರುತ್ತವೆ ಮತ್ತು ಕೆಳಹಂತದ ಆಚರಣೆಯ ನೆಲೆಯಲ್ಲಿ ಇದು ಹೇಗೆ ಪ್ರತಿಬಿಂಬಿತವಾಗುತ್ತದೆ ಎಂಬುದನ್ನು ಕಂಡುಕೊಳ್ಳುವುದೇ ಈ ಅಧ್ಯಯನದ ಉದ್ದೇಶವಾಗಿದ್ದಿತು.

ರ್‍ಯಾಂಡ್ ಅಧ್ಯಯನದಿಂದ ಹೊರಬಂದ ಫಲಿತಾಂಶ:

ರ್‍ಯಾಂಡ್ ಪರಿವರ್ತನಾ ಅಧ್ಯಯನ ಕೈಗೆತ್ತಿಕೊಂಡ ಯೋಜನೆಗಳು ೧೯೬೦ರಲ್ಲಿ ಕೇಂದ್ರೀಯ ಮಟ್ಟದಲ್ಲಿ ರೂಪಿಸಿ ೧೯೭೦ರ ದಶಕದ ಆರಂಭಿಕ ಭಾಗದಿಂದ ಮಧ್ಯಭಾಗದವರೆಗೂ ಸ್ಥಳೀಯ ಮಟ್ಟದಲ್ಲಿ ಅನುಷ್ಠಾನ ಕ್ರಮಗಳನ್ನು ಜಾರಿಗೊಳಿಸಲಾದ ಕಾರ್ಯಕ್ರಮಗಳು. ಆ ಅವಧಿಯ ಯೋಜನಾ ನಿರೂಪಕರು ಕೇಂದ್ರ ಯೋಜನೆಯ **"ಒಳಸುರಿ"**, ಸ್ಥಳೀಯ ಪ್ರತಿಕ್ರಿಯೆಗಳು ಮತ್ತು ಕಾರ್ಯಕ್ರಮದ **"ಹೊರಸುರಿ"** – ಇವುಗಳ ನಡುವೆ ನೇರ ಸಂಬಂಧವಿರುತ್ತದೆಂದು ಭಾವಿಸಿಕೊಂಡಿದ್ದರು. ಸ್ಥಳೀಯ ಅಭ್ಯಾಸಗಳು ಮತ್ತು ಸಂಪ್ರದಾಯಗಳು – ಅರ್ಥಶಾಸ್ತ್ರಜ್ಞರು ಹೆಸರಿಸುವ **"ಕಪ್ಪು ಪಟ್ಟಿಗೆ"**ಯನ್ನು ಇವರು ಸಾಮಾನ್ಯವಾಗಿ ಕಡೆಗಣಿಸಿದ್ದರು. ಈ ಗಣನೀಯ ಪ್ರಮಾಣದ ವಿಭಿನ್ನ ಕೇಂದ್ರೀಯ ಯೋಜನೆಗಳ ಹಿಂದಿದ್ದ ಸಿದ್ಧಾಂತವೆಂದರೆ, ಹೆಚ್ಚು ಹಣ ಅಥವಾ ಉತ್ತಮ ಗುಣಮಟ್ಟದ

ವಿಚಾರಗಳು ಅಥವಾ **"ಒಳಸುರಿ"**ಗಳು ಸ್ಥಳೀಯ ಮಟ್ಟದಲ್ಲಿ ವಿದ್ಯೆ ಒದಗಿಸುವವರಿಗೆ ಶಾಲಾ ಆಚರಣೆಗನ್ನು ಸುಧಾರಿಸಲು ನೆರವಾಗುವವವು ಎಂಬುದಾಗಿತ್ತು.

೨೦೦೩-೦೪ರಲ್ಲಿ ರೂ.೮೩೭೧ ಕೋಟಿ ರೂ . ಹಣಕಾಸನ್ನು ಎಸ್.ಎಸ್ ಎ ಕಾರ್ಯಕ್ರಮಗಳಿಗೆ ವಿತರಿಸಲಾಗಿದ್ದು, ೨೦೦೬-೦೭ರಲ್ಲಿ ಈ ಮೊತ್ತವನ್ನು ರೂ.೨೦೬೯೧ ಕೋಟಿ ರೂಗಳಿಗೆ ಹೆಚ್ಚಿಸಲಾಯಿತು. ಹನ್ನೊಂದನೇ ಪಂಚವಾರ್ಷಿಕ ಯೋಜನಾವಧಿಗೆ (೨೦೦೭-೧೨)ರೂ.೭೧೦೦೦ ಕೋಟಿ ರೂ.ಗಳಷ್ಟು ಹಣಕಾಸನ್ನು ಈ ಕಾರ್ಯಕ್ರಮಗಳಿಗೆ ಮೀಸಲಿರಿಸಲಾಗಿದೆ. ರಾಜ್ಯಗಳ ಮಟ್ಟದಲ್ಲಿ ಹಣಕಾಸಿನ ಬಳಕೆ ಪ್ರಮಾಣ ೨೦೦೬-೦೭ರಲ್ಲಿ ಹಿಂದಿನ ಸಾಲಿನ ಉಳಿಕೆ ಹಣವನ್ನು ಸೇರಿ ಶೇ.೧೧೦%ರಷ್ಟಕ್ಕೆ ಏರಿದೆ.
ಕಳೆದ ೧೦ ವರ್ಷಗಳಲ್ಲಿ ಎಸ್.ಎಸ್.ಎ ಯೋಜನೆ ದೇಶಾದ್ಯಂತ ಅನುಷ್ಠಾನಗೊಂಡು ಸಾಕಷ್ಟು ಪ್ರಗತಿ ಸಾಧಿಸಿದ್ದರೂ ಈ ಕೆಳಗಿನ ಕಠಿಣ ಸವಾಲುಗಳು ಇನ್ನೂ ನಮ್ಮನ್ನು ಕಾಡುತ್ತಿವೆ.

೧) **ಪ್ರಗತಿಯ ಸೂಚಕಗಳು:**

ಅ) ಶೇಕಡ ೯೮%ರಷ್ಟು ಗ್ರಾಮೀಣ ಮತ್ತು ಶೇ ೯೩%ರಷ್ಟು ಕೊಳಚೆ ಪ್ರದೇಶದ ಮಕ್ಕಳಿಗೆ ಶಾಲೆಗಳು ಹತ್ತಿರದಲ್ಲೇ ಇದ್ದು ಲಭ್ಯವಾಗಿದೆ.
ಆ) ಒಟ್ಟು ದಾಖಲಾತಿ ಪ್ರಮಾಣವೂ ಸಹ ಶೆ ೮೯%ರಿಂದ ಶೇ ೯೩%ಕ್ಕೇರಿದೆ.
ಇ) ವಿದ್ಯಾರ್ಥಿ ಹಾಜರಾತಿ ಪ್ರಮಾಣ ಹೆಚ್ಚಾಗಿದ್ದು ಗ್ರಾಮೀಣ ಭಾಗದಲ್ಲಿ ಶೇ ೬೨ % ಶಾಲೆಗಳು ಶೇ೭೫ %ಕ್ಕಿಂತ ಮೀರಿದ ಹಾಜರಾತಿ ಪ್ರಮಾಣವನ್ನು ವರದಿ ಮಾಡಿವೆ.

2) **ಸವಾಲುಗಳು:**

ಅ) ಬಹುತೇಕ ರಾಜ್ಯದಲ್ಲಿ ಲಿಂಗಭೇದ ಇನ್ನೂ ಒಂದು ಗಂಭೀರ ಸಮಸ್ಯೆಯಾಗಿದ್ದು ಶೇ೫೫%ರಷ್ಟು ಹೆಣ್ಣು ಮಕ್ಕಳು ವಿದ್ಯಾಭ್ಯಾಸ ಮುಂದುವರೆಸಲಾಗದೆ ಶಾಲೆಗಳಿಂದ ನಿರ್ಗಮಿಸುತ್ತಿದ್ದಾರೆ. ಶೇ೮೨%ಶಾಲೆಗಳಲ್ಲಿ ಸಾಮಾನ್ಯ ಮೂತ್ರಾಲಯಗಳಿದ್ದರೂ ಹೆಣ್ಣು ಮಕ್ಕಳಿಗೆ ಮೀಸಲಾದ ಮೂತ್ರಾಲಯಗಳನ್ನು ಇನ್ನೂ ಶೇ೫೫%ಶಾಲೆಗಳಲ್ಲಿ ಒದಗಿಸಬೇಕಾಗಿದೆ.

ಆ) ಇನ್ನೂ ೪0% ಗ್ರಾಮೀಣ ಶಾಲೆಗಳಲ್ಲಿ ಮತ್ತು ೫೭%ರಷ್ಟು ನಗರದ ಶಾಲೆಗಳಲ್ಲಿ ವಿದ್ಯಾರ್ಥಿ ಶಿಕ್ಷಕರ ಪ್ರಮಾಣ ಅನುಕೂಲಕರ ಪ್ರಮಾಣದಲ್ಲಿಲ್ಲ- ಮತ್ತು ಏಕ ಶಿಕ್ಷಕರ ಶಾಲೆಗಳು ಮತ್ತು ಶಿಕ್ಷಕರ ಕೊರತೆ ಗುಣಾತ್ಮಕ ಶಿಕ್ಷಣದ ಗುರಿಯನ್ನು ತಲುಪುವ ಹಾದಿಯಲ್ಲಿ ದೊಡ್ಡ ಕಂದಕಗಳಾಗಿ ನಿಂತಿವೆ.

ಇ)ಕಲಿಕಾ ಗುಣಮಟ್ಟವೂ ಸಹ ಒಂದು ರಾಜ್ಯದಿಂದ ಇನ್ನೊಂದು ರಾಜ್ಯಕ್ಕೆ ವಿಭಿನ್ನವಾಗಿದ್ದು ೨ನೇ ತರಗತಿ ಮತ್ತು ೬ನೇ ತರಗತಿಯ ವಿದ್ಯಾರ್ಥಿಗಳು -ಇಂಗ್ಲಿಷ್, ಸ್ಥಳೀಯ ಭಾಷೆ ಮತ್ತು ಗಣಿತ- ಈ ವಿಷಯಗಳಲ್ಲಿ ಸಾಧನಾ ಮಟ್ಟವನ್ನು ಅರಿಯಲು ಪರೀಕ್ಷೆಗಳನ್ನು ನಡೆಸಿದಾಗ ಹೊರಹೊಮ್ಮಿದ ಅಂಶವೆಂದರೆ ವಿದ್ಯಾರ್ಥಿಗಳ ಓದುವ ಮತ್ತು ಮಾತನಾಡುವ ಕೌಶಲ್ಯ ಬರೆಯುವ ಕೌಶಲ್ಯಕ್ಕಿಂತ ಉತ್ತಮವಾಗಿದೆಯೆಂಬುದು.

-ಮೂಲ: ಭಾರತ ಸರ್ಕಾರದ ಯೋಜನಾ ಆಯೋಗದ ಕಾರ್ಯಕ್ರಮ ಮೌಲ್ಯಮಾಪನ ಸಂಸ್ಥೆ ಮೇ ೨೦೧0 ರಲ್ಲಿ ದೇಶದ ಹನ್ನೊದು ರಾಜ್ಯಗಳಲ್ಲಿ ಎಸ್.ಎಸಗ್.ಎ ಕಾರ್ಯಕ್ರಮದ ಪರಿಣಾಮಕಾರಿತ್ವದ ಬಗ್ಗೆ ಹೊರತಂದ 'ಸರ್ವಶಿಕ್ಷ ಅಭಿಯಾನದ ಮೌಲ್ಯಮಾಪನ ವರದಿ'.

ರ್‍ಯಾಂಡ್ ವಿಶ್ಲೇಷಕರು ಕಂಡುಕೊಂಡ ಅಂಶವೆಂದರೆ ಕಾರ್ಯಕ್ರಮದ ಸ್ವೀಕಾರ ಕಥೆಯನ್ನು ಪ್ರಾರಂಭಿಸಿದಂತಷ್ಟೇ. ಅದು ಯಶಸ್ವಿ ಅನುಷ್ಠಾನವನ್ನೇನು ಖಾತರಿಪಡಿಸಿದಂತಿಲ್ಲ. ಮುಂದುವರೆದಂತೆ, ಯಶಸ್ವಿ ಅನುಷ್ಠಾನದ ನಂತರವೂ ಸಹ, ಕೇಂದ್ರದ ಹಣಕಾಸಿನ ನೆರವಿನಿಂದ ಜಾರಿಗೊಂಡ ಕಾರ್ಯಕ್ರಮಗಳು, ನೆರವನ್ನು ಹಿಂತೆಗೆದುಕೊಂಡಾಗ, ದೀರ್ಘ ಕಾಲಾವಧಿಯವರೆಗೆ ಮುಂದುವರಿಯುತ್ತದೆಂದು ಹೇಳಲಾಗುವುದಿಲ್ಲೆನ್ನುವುದನ್ನು ರ್‍ಯಾಂಡ್ ಕಂಡುಕೊಂಡಿತು. ಒಟ್ಟಿನಲ್ಲಿ ಹೇಳಬೇಕೆಂದರೆ, ಅನೇಕ ಹೊಸ ಕಾರ್ಯಕ್ರಮಗಳನ್ನು ಸ್ವೀಕರಿಸಿದುದು, ಕೆಲವನ್ನು ಯಶಸ್ವಿಯಾಗಿ ಜಾರಿಗೆ ತಂದುದು ಮತ್ತು ಬೆರಳೆಣಿಕೆಯಷ್ಟು ಕಾರ್ಯಕ್ರಮಗಳನ್ನು ಮಾತ್ರ ದೀರ್ಘಾವಧಿ ಕಾಲದವರೆಗೂ ಮುಂದುವರೆಸಿದುದನ್ನು ರ್‍ಯಾಂಡ್ ಅಧ್ಯಯನ ಬೆಳಕಿಗೆ ತಂದಿತು.

ರ್‍ಯಾಂಡ್ ಅಧ್ಯಯನ ಹೊರಗೆಡಹಿದ ಸಾಮಾನ್ಯ ಅಂಶವೊಂದು ಸತ್ಯ ಸಂಗತಿಯಾಗಿದೆ. ಯಾವ ಯೋಜನೆಯೂ ಕಾರ್ಯಕ್ಷೇತ್ರದಲ್ಲಿ ಆಚರಣೆಗಳನ್ನು ಸುಲಭವಾಗಿ ಬದಲಿಸುವುದು ಬಹು ಕ್ಲಿಷ್ಟಕರವಾದುದು.ಅದರಲ್ಲೂ ಸರ್ಕಾರದ ವಿವಿಧ ಹಂತಗಳಲ್ಲಿ ಹರಿದು ಬರುವಾಗ ಸಿದ್ಧಧಾಂತ ಮತ್ತು ಆಚರಣೆಗಳ ನಡುವೆ ೧:೧ ಪ್ರಮಾಣದ ಭಾಜ್ಯ-ಭಾಜಕ ಸಂಬಂಧವನ್ನು ಕಲ್ಪಿಸಿದ್ದುದಕ್ಕೆ ಪ್ರತಿಯಾಗಿ ಪರಿವರ್ತನೆಯ ಸ್ವರೂಪ, ಪ್ರಮಾಣ ಮತ್ತು ಗತಿಗಳು ಮೇಲಿನ ಸ್ತರದಲ್ಲಿರುವ ಯೋಜಕರ ಹಿಡಿತಕ್ಕೆ ಸಿಗದೆ ಇವು ಸ್ಥಳೀಯ ಅಂಶಗಳ ಮೇಲೆ ಹೆಚ್ಚಾಗಿ ಅವಲಂಭಿತವಾಗಿವೆಯೆನ್ನುವುದನ್ನು ಅಧ್ಯಯನವು ಬಿಂಬಿಸಿತು. ವಿಷಯವನ್ನು ಮತ್ತಷ್ಟು ಸಂಕೀರ್ಣಗೊಳಿಸಲೇನೋ ಎಂಬಂತೆ ಸ್ಥಳಿಯ ಅಂಶಗಳೂ ಸಹ ಕಾಲಾಂತರದಲ್ಲಿ ಬದಲಾವಣೆಗೊಂಡವು ಮತ್ತು ಇದರಿಂದ ಯೋಜನೆಗೆ ಗಣನೀಯವಾದ ಮತ್ತು ಕಾರ್ಯತಂತ್ರದ ದೃಷ್ಟಿಯಿಂದ ವಿಭಿನ್ನ ಸಾಂದರ್ಭಿಕ ನೆಲೆಗಳನ್ನು ನಿರ್ಮಿಸಿತು.ನಿಖರವಾಗಿ, ಯೋಜನೆಗಳ ಫಲಿತಾಶಗಳು ಅವಲಂಭಿತವಾಗಿರುವುದು ಯೋಜನೆಯನ್ನು ಜಾರಿಗೊಳಿಸಬೇಕೆ ಮತ್ತು ಅದನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ಸ್ಥಳೀಯ ಆಯ್ಕೆಗಳ ಮೇಲೆ ಹೆಚ್ಚು ಆಧರಿಸಿವೆಯೇ ಹೊರತು ಯೋಜನೆಯ ರೂಪುರೇಷೆಗಳಾದ ತಂತ್ರಜ್ಞಾನ, ಕಾರ್ಯಕ್ರಮ ರಚನೆ, ಹಣಕಾಸು ನೆರವಿನ ಮಟ್ಟ ಅಥವಾ ಆಡಳಿತಾತ್ಮಕ ಅಗತ್ಯತೆಗಳ ಮೇಲಲ್ಲ ಎಂಬುದನ್ನು ರ್‍ಯಾಂಡ್ ಅಧ್ಯಯನ ಕಂಡುಕೊಂಡಿತು.

ಮೇಲಿನ ಫಲಿತಾಂಶ ಭಾರತದ ಸಂದರ್ಭಕ್ಕೂ ಅನ್ವಯಿಸುತ್ತದೆ. ಕೆಳಗಿನ ಉಲ್ಲೇಖ ಇದಕ್ಕೆ ಪುಷ್ಠಿ ಕೊಡುತ್ತದೆ.

ಒಂದು ಅಧ್ಯಯನದ ಪ್ರಕಾರ ೪ ಪರಿಣಾಮಗಳ ಪ್ರಮಾಣವನ್ನು ವಿಶ್ಲೇಷಿಸಲಾಯಿತು.

೧. ನಿವ್ವಳ ದಾಖಲಾತಿ ಪ್ರಮಾಣ

೨. ೫ನೇ ತರಗತಿಯಿಂದ ೬ನೇ ತರಗತಿಗೆ ಮುಂದುವರೆಯುವ ವಿದ್ಯಾರ್ಥಿಗಳ ಪ್ರಮಾಣ

೩. ೫ನೇತರಗತಿ ಗಂಡು ಮಕ್ಕಳು ಶೇ೬೦ಕ್ಕಿಂತ ಅಧಿಕ ಪರೀಕ್ಷಾ ಅಂಕ ಗಳಿಸಿದ ಪ್ರಮಾಣ

೪. ೫ನೇ ತರಗತಿ ಹೆಣ್ಣು ಮಕ್ಕಳು ಶೇ ೬0ಕ್ಕಿಂತ ಅಧಿಕ ಪರೀಕ್ಷಾ ಅಂಕ ಗಳಿಸಿದ ಪ್ರಮಾಣ

ಮೇಲಿನ ಅಧ್ಯಯನ ಬೆಳಕು ಚೆಲ್ಲಿರುವ ಮಹತ್ವದ ಅಂಶಗಳೆಂದರೆ:

- ಪ್ರಾಥಮಿಕ ಶಿಕ್ಷಣ ಕ್ಷೇತ್ರಕ್ಕೆ ವಿನಿಯೋಗಿಸಿದ ಹಣ ಕರ್ನಾಟಕದಲ್ಲಿ ದಾಖಲಾತಿ ಪ್ರಮಾಣವನ್ನೂ ಆಂಧ್ರಪ್ರದೇಶದಲ್ಲಿ 5ನೇ ತರಗತಿಯಿಂದ 6ನೇತರಗತಿಗೆ ವಿದ್ಯಾಭ್ಯಾಸ ಮುಂದುವರೆಸುವ ವಿದ್ಯಾರ್ಥಿಗಳ ಪ್ರಮಾಣವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗಿದೆ.
- ಇತರ ಮೂರೂ ಪರಿಣಾಮಗಳಲ್ಲಿ ಯಾವುದರಲ್ಲೂ ಧನಾತ್ಮಕ ಬದಲಾವಣೆಯಾಗಿಲ್ಲ.
- ಉತ್ತರಪ್ರದೇಶದಲ್ಲಂತೂ ಹಣಕಾಸಿನ ವಿನಿಯೋಗ ಯಾವ ಪರಿಣಾಮದ ಮೇಲೂ ಸಕಾರಾತ್ಮಕ ಬದಲಾವಣೆಯನ್ನು ತಂದಿಲ್ಲ.
- ಈ ಅಧ್ಯಯನದ ಫಲಿತಾಂಶದಿಂದ ಹೊರಹೊಮ್ಮಿದ ಪ್ರಮುಖ ಅಂಶವೆಂದರೆ ಪ್ರಾಥಮಿಕ ಶಿಕ್ಷಣದ ಮೇಲೆ ಅಧಿಕ ಮಟ್ಟದ ಹಣಕಾಸನ್ನು ವಿನಿಯೋಗಿಸುವುದರಿಂದ ಪರಿಣಾಮಗಳಲ್ಲಿ ಮತ್ತು ವಿದ್ಯಾರ್ಥಿ ಸಾಮರ್ಥ್ಯಗಳಲ್ಲಿ ಹೆಚ್ಚಳವನ್ನು ಸಾಧಿಸಲಾಗುವುದಿಲ್ಲ.
- ಸ್ಥಳಿಯ ಮಟ್ಟದಲ್ಲಿ ವಿಭಿನ್ನ ಅಗತ್ಯತೆಗಳನ್ನು ಗುರುತಿಸಿ ಯಾವ ರೀತಿಯ ಮಧ್ಯಸ್ಥಿಕೆ ಬೇಕಾಗಿದೆ ಎಂಬುದನ್ನು ವಿಶ್ಲೇಷಿಸಬೇಕಾದ ಅಗತ್ಯತೆ ಇದೆ.

ಪ್ರಾಥಮಿಕ ಹಂತದ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಗುರಿ ಸಾದನೆಗೆ ಅಂತರಾಷ್ಟ್ರೀಯ ಬದ್ಧತೆಯನ್ನು ಪ್ರತಿಬಿಂಬಿಸುವ ದಶವಾರ್ಷಿಕ ಅಭಿವೃದ್ಧಿ ಗುರಿ'ಯ ಹಿನ್ನೆಲೆಯಲ್ಲಿ, ಡ್ಯೂಕ್ ವಿಶ್ವವಿದ್ಯಾಲಯ, ಡರ್‍ಹಾಮ್, ಉತ್ತರಕ್ಯಾರೊಲಿನ ಇದರಡಿ ತಾರಾ ಐಯರ್ ಮತ್ತು ಪ್ರೊಫೆಸರ್ ಅಲೆಸ್ಸಾಂಡ್ರೊ ತರೋಜಿ ಇವರು ಜಂಟಿಯಾಗಿ "ಪ್ರಾಥಮಿಕ ಶಿಕ್ಷಣದ ಮೇಲೆ ಸಾರ್ವಜನಿಕ ಹಣಕಾಸು ವಿನಿಯೋಗ ಪರಿಣಾಮಕಾರಿಯೇ"? ಈ ಬಗ್ಗೆ ಭಾರತದ ೧ ರಾಜ್ಯಗಳು –ಉತ್ತರ ಪ್ರದೇಶ, ಆಂಧ್ರಪ್ರದೇಶ, ಕರ್ನಾಟಕ–ಗಳ ೧೧೫ ಜಿಲ್ಲೆಗಳಲ್ಲಿ ಅಧ್ಯಯನ ನಡೆಸಿ ಹೊರತಂದಿರುವ ವರದಿಯಾಧಾರಿತ.

ದೇಶಾದ್ಯಂತ ಏಪ್ರಿಲ್ ೧, ೨೦೧೦ ರಿಂದ ಜಾರಿಗೆ ಬಂದ ಚಾರಿತ್ರಿಕ ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯಿಂದಾದರೂ ೬ರಿಂದ ೧೪ ವರ್ಷದೊಳಗಿನ ಎಲ್ಲ ಮಕ್ಕಳಿಗೂ ಉಚಿತ ಶಿಕ್ಷಣ ದೊರೆಯಲೆಂದು ಆಶಿಸುತ್ತಾ ಇದನ್ನು ಸಾಧಿಸಲು ಕಟಿಬದ್ಧರಾಗಬೇಕಾಗಿದೆ

III. ಶಿಕ್ಷಕರ 'ಸಂದರ್ಭ'ದಲ್ಲಿ ಯಾವುದು ಗಣ್ಯ?

ಶಿಕ್ಷಕರಿಗೆ ಸಂಬಂಧಿಸಿದ ವರದಿಗಳ ಪ್ರಕಾರ, 'ವಿದ್ಯಾರ್ಥಿಗಳೇ' ಶಿಕ್ಷಕರ ಕಾರ್ಯಕ್ಷೇತ್ರ ಸಂದರ್ಭದಲ್ಲಿ ಹೆಚ್ಚು ಪರಿಣಾಮವುಂಟುಮಾಡುವ ಸಾರ ಮತ್ತು ತಿರುಳು. ತಮ್ಮ ಶಾಲೆ, ಸಹೋದ್ಯೋಗಿಗಳು, ತರಗತಿಕೋಣೆಗಳು ಮತ್ತು ಬೋಧನೆಗಿರಬೇಕಾದ ಬದ್ಧತೆಯ ಬಗ್ಗೆ ಮಾತನಾಡುವಾಗ ವಿದ್ಯಾರ್ಥಿಗಳನ್ನು ದೃಷ್ಟಿಯಲ್ಲಿಟ್ಟುಕೊಂಡೇ ಶಿಕ್ಷಕರು ತಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸಿದುದು. ತರಗತಿಯಲ್ಲಿ ತಾವು ಮಾಡಿದ ಕಾರ್ಯ, ತಮ್ಮ ಪರಿಣಾಮಕಾರಿತ್ವದ ನಿರ್ಣಯ ಮತ್ತು ಬೋಧನೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡದ್ದರ ಬಗ್ಗೆ ವಿವರಿಸುವಾಗ ಶಿಕ್ಷಕರು ವಿದ್ಯಾರ್ಥಿಗಳ ಸಾಮರ್ಥ್ಯ, ಅವರ ಅಗತ್ಯಗಳು ಮತ್ತು ಆಸಕ್ತಿಗಳು, ಮನೋಭಾವ ಮತ್ತು ಹಿನ್ನೆಲೆಗಳ ಮೇಲೆಯೇ ಗಮನ ಹರಿಸಿದ್ದುದು.

ಶಿಕ್ಷಕರ ಕಲಿಕಾ ಸಮುದಾಯಗಳು:

ತರಗತಿ ಕೋಣೆಯಲ್ಲಿ ಜರುಗುವ ಪ್ರಕ್ರಿಯೆಯು ಶಿಕ್ಷಕ ಒಬ್ಬ ವ್ಯಕ್ತಿಯಾಗಿ ತನ್ನೊಂದಿಗೆ ಏನನ್ನು ತರುತ್ತಾನೆಯೋ ಅದರ ಮೇಲೆ ಮಾತ್ರ ನಿಂತಿರುವುದಿಲ್ಲ. ಶಾಲಾ ಶಿಕ್ಷಕರ ಆಚರಣೆಗಳು ಮತ್ತು ವೃತ್ತಿ ಮಾರ್ಗಗಳು ಮೂಲಭೂತವಾಗಿ ಅವರ ವೃತ್ತಿಪರ ಸಮುದಾಯಗಳ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿ ಬೆರೆತಿದ್ದವು. ತರಗತಿ ಕೋಣೆಯ ಸಾಂಪ್ರದಾಯಿಕ ಪದ್ಧತಿಗಳಿಂದ ಹೊರಬಂದು ಹೊಸರೀತಿಯಲ್ಲಿ ತಮ್ಮ ಆಚರಣೆಗಳ ಬಗ್ಗೆ ಚಿಂತಿಸುವಲ್ಲಿ ಶಿಕ್ಷಕರಿಗೆ ಕಲಿಕಾ ಸಮುದಾಯಗಳು ಅಗತ್ಯವಾದವು. ಶಿಕ್ಷಕರ ಕಲಿಕಾ ಸಮುದಾಯಗಳು ಇತರ ವೃತ್ತಿಪರ ಸಮುದಾಯಗಳಿಗಿಂತ ಹಲವು ವಿಧಗಳಲ್ಲಿ ವಿಭಿನ್ನವಾಗಿದ್ದವು. ಈ ವ್ಯತ್ಯಾಸಗಳು ಪ್ರಮಾಣದಲ್ಲಿ ಮಾತ್ರವಲ್ಲದೆ ಬಗೆಯಲ್ಲೂ ವ್ಯತ್ಯಾಸವನ್ನು ಹೊಂದಿದ್ದು, ಕನಿಷ್ಠ ೪ ಆಯಾಮಗಳಲ್ಲಾದರೂ ಇವು ಎದ್ದು ಕಾಣುತ್ತವೆ:

ಅ) ಪರಸ್ಪರ ಗೌರವಪೂರ್ಣ ವರ್ತನೆ:

ಕಲಿಕಾ ಸಮುದಾಯವು, ಸದಸ್ಯರು ಸಾಮಾಜಿಕವಾಗಿ ಹೊಸ ಜ್ಞಾನ ಮತ್ತು ಅರ್ಥವಂತಿಕೆಗಳನ್ನು ಕಂಡುಕೊಳ್ಳಲು ಪ್ರೇರೇಪಿಸಿತು; ಕಲಿತಿದ್ದನ್ನು ತ್ಯಜಿಸಲು ಮತ್ತು ಪರಂಪರೆಯ ಆಚರಣೆಗಳಿಗೆ ಹೊಸರೂಪ ಕೊಡಲು ಸಮುದಾಯ ಅಗತ್ಯವಾಗಿತ್ತು.

ಆ) ಪ್ರಜಾಪ್ರಭುತ್ವವಾದಿ ಸಾಮಾಜಿಕ ವ್ಯವಸ್ಥೆಗಳು:

ಕಲಿಕಾ ಸಮುದಾಯಗಳಲ್ಲಿನ ಸಂಬಂಧಗಳಿಗೆ ಕೇಂದ್ರ ಅಂಶಗಳೆಂದರೆ ಸಮಾನ, ಮುಕತ ನಿಲುವು ಮತ್ತು ಎಲ್ಲ ಸದಸ್ಯರೂ ಏಕಕಾಲದಲ್ಲಿ ಕಲಿಕಾರ್ಥಿಗಳು ಮತ್ತು ತಜ್ಞರಾಗಿರುವರೆಂಬ ದೃಷ್ಟಿ. ಎಲ್ಲ ಶಿಕ್ಷಕರೂ ಕೆಲವು ನಿರ್ದಿಷ್ಟ ಪಠ್ಯ ವಿಷಯಗಳನ್ನು ಬೋಧಿಸುವುದರ ಜೊತೆಗೆ ವಿದ್ಯಾರ್ಥಿಗಳ ವಿಷಯದಲ್ಲಿ ಜವಾಬ್ದಾರಿಯನ್ನು ಹೊತ್ತುಕೊಂಡರು.

ಇ) ಸಮುದಾಯದ ಎಲ್ಲೆಗಳು:

ಶಿಕ್ಷಕರು ಕ್ರಿಯಾತ್ಮಕವಾಗಿ ಜ್ಞಾನಕ್ಕಾಗಿ ಹಂಬಲಿಸಿದುದು ಮತ್ತು ಅದನ್ನು ತಮ್ಮದಾಗಿಸಿಕೊಳ್ಳಲು ತಳೆದ ಮಾರ್ಗದ ವಿಷಯದಲ್ಲಿಯೂ ಸಮುದಾಯಗಳು ವಿಭಿನ್ನವಾಗಿದ್ದವು. ಕಲಿಕಾ ಸಮುದಾಯಗಳು ಸದಸ್ಯರನ್ನು ವಿಶಾಲವಾದ ಸ್ತರದಲ್ಲಿ ನೆಲೆಸಿದ್ದ ನಕಾರಾತ್ಮಕ ಪರಿಸ್ಥಿತಿಗಳಿಂದ ರಕ್ಷಿಸಿತು. ತಮ್ಮ ಸಾಂಸ್ಥಿಕ ಘಟಕದ ಪರಿಮಿತ ಎಲ್ಲೆಯನ್ನು ಮೀರಿ ಆಚೆಗೂ ವೃತ್ತಿಪರ ಸಂಬಂಧಗಳನ್ನು ಬೆಳೆಸಿಕೊಂಡರು.

ಈ) ವಿವೇಕಯುಕ್ತ ತಾಂತ್ರಿಕ ಸಂಸ್ಕೃತಿ:

ಆಚರಣೆಗಳನ್ನು ಪರಾಮರ್ಶಿಸಲು, ಹೊಸದನ್ನು ಅನುಷ್ಠಾನಕ್ಕೆ ತರಲು ಮತ್ತು ಅವುಗಳಿಗೆ ನಿಯಮ್ಗಳನ್ನು ರೂಪಿಸಲು ಒಂದು ಸಮೂಹವಾಗಿ ಶಿಕ್ಷಕರು ಕ್ರಿಯಾಶೀಲರಾದರು. ಅವರನ್ನು ಸೇರಿಸಿ ಒಟ್ಟುಗೂಡಿಸಿದ ಏಕೈಕ ಅಂಶವೆಂದರೆ ವಿದ್ಯಾರ್ಥಿಗಳ ಕಲಿಕೆಯ ಹೆಚ್ಚಳದ ಗುರಿ. ಇದು ಶಾಲೆಯ ಸಂದರ್ಭದಲ್ಲಿ ಬೋಧನೆ ಮತ್ತು ಕಲಿಕೆಗಳ ನಡುವೆ ಸಾಮರಸ್ಯವನ್ನೇರ್ಪಡಿಸಿತಲ್ಲದೆ ವಿದ್ಯಾರ್ಥಿಗಳ ಯಶಸ್ಸಿಗೆ ಶಿಕ್ಷಕರು ಸಾಮೂಹಿಕ ಜವಾಬ್ದಾರಿಯನ್ನು ನಿರ್ವಹಿಸುವಂತೆ ಮಾಡಿತು.

ಉ) ಸಂಶೋಧನೆಯ ಮೇಲಿನ ಪರಿಣಾಮ:

ಸಿದ್ಧಾಂತ ಮತ್ತು ಆಚರಣೆಗಳ ನಡುವಿನ ಸಂಬಂಧ ಒಂದೇ ದಿಕ್ಕಿನಲ್ಲಿ ಚಲಿಸುವುದಿಲ್ಲ. ಸಿದ್ಧಾಂತವು ಕೆಳಹಂತದ ತುತುಸ್ಥಿತಿಗಳು ಮತ್ತು ನೈಜತೆಯನ್ನು ನಿರೀಕ್ಷಿಸಲಾಗುವುದಿಲ್ಲ. ಆಚರಣೆಯ ಹೊರವಲಯದಿಂದ ವಿಧಿಸಲಾದ ಮಾರ್ಗಗಳು ಬೋಧನೆ ಮತ್ತು ಕಲಿಕೆಗಳು ಪ್ರಭಾವಕ್ಕೊಳಗಾಗುವ ಅಂಶಗಳ ಬಗೆಗಿನ ಪ್ರಮುಖ ಮಾಹಿತಿಗಳನ್ನು ಗಣನೆಗೆ ತೆಗೆದುಕೊಳ್ಳಲಾರವು. ಶಿಕ್ಷಕರೊಂದಿಗಿನ ಸಂಭಾಷಣೆಗಳು

ಮತ್ತು ಅವರ ಕಾರ್ಯವನ್ನು ವೀಕ್ಷಿಸಿದಾಗ ಹೊರಬರುವ ಪ್ರಮುಖ ಅಂಶವೆಂದರೆ ಶಾಲೆಯ ಹೊರಗಿನಿಂದ ಬೋಧನೆಯನ್ನು ವೀಕ್ಷಿಸುತ್ತಾ ವ್ಯವಸ್ಥೆಯ ಒಳಗೆ ವ್ಯಕ್ತಿಗಳು ಯಾವ ಸಿದ್ಧಾಂತದ ಆಧಾರದ ಮೇಲೆ ಕ್ರಿಯಾಶೀಲರಾಗುತ್ತಾರೆ ಎಂಬ ಬಗ್ಗೆ ತಮ್ಮದೇ ಊಹೆಗಳನ್ನು ಸಂಶೋಧಕರು ಕಲ್ಪಿಸಿಕೊಂಡಿದ್ದು ಇದು ನೈಜ ಸ್ಥಿಗೆ ಬಹುದೂರವಾಗಿದೆ.

ಯಾವುದೇ ಒಂದು ಸೈದ್ಧಾಂತಿಕ ದೃಷ್ಟಿಕೋನವು ಶಾಲಾ ಬೋಧನೆಯ ಮೇಲೆ ಪ್ರಭಾವ ಬೀರುವ ಅಂಶಗಳ ಬಗ್ಗೆ ಕೇವಲ ಭಾಗಶಃ ಅರ್ಥವಂತಿಕೆಯನ್ನೊದಗಿಸಬಹುದಷ್ಟೇ. ಶಾಲಾ ಬೋಧನೆಯನ್ನು ಮತ್ತು ಅದು ಯಾವ ಅಂಶಗಳ ಮೇಲೆ ಅವಲಂಬಿತವಾಗಿದೆಯೆಂಬುದನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಸಾಮಾಜಿಕ ವಿಜ್ಞಾನವು ಸಾಂಪ್ರದಾಯಿಕ ಸಂಶೋಧನೆಗೆ ಸವಾಲೊಡ್ಡಬೇಕೆಂದು ಸಾಂದರ್ಭಿಕ ಕೇಂದ್ರ ಸಂಶೋಧನೆಯು ಒತ್ತು ನೀಡಿದೆ. ಆಶಾದಾಯಕ ಆಲೋಚನೆಗಳು ಅಥವಾ ಶಾಲಾ ಪರಿಣಾಮಗಳ ಬಗ್ಗೆ ಅಧ್ಯಯನ ನಡೆಸುವ ಬಹುಪಾಲು ಸಂಶೋಧನೆಗಳು ಶೀಕ್ಷಕರ ಅಭಿಪ್ರಾಯದಂತೆ ಅವರ ನಂಬಿಕೆ ಮತ್ತು ಆಚರಣೆಗಳಿಗೆ ಕೇಂದ್ರಬಿಂದುವಾಗಿರುವ ವಿದ್ಯಾರ್ಥಿಗಳು ಮತ್ತು ಬೋಧನೆಯ ವಿಷಯ – ಇವುಗಳ ಸಾಂದರ್ಭಿಕ ನೆಲೆಯನ್ನು ಉಪೇಕ್ಷಿಸುತ್ತವೆ. "ವಿಚಾರಗಳು ಮತ್ತು ಪ್ರಶ್ನೆಗಳನ್ನು ಸಿದ್ಧಾಂತದ ನೆಲೆಯಲ್ಲಿ ಕಂಡುಕೊಳ್ಳುವ ಮೊದಲು ಆಚರಣೆಯ ನೆಲೆಯಲ್ಲಿ ಗ್ರಹಿಸಬಹುದಾಗಿದೆ". ಎಂಬ ಮಾತನ್ನು ಶಾಲಾ ಬೋಧನೆಯನ್ನು ಅರ್ಥಮಾಡಿಕೊಳ್ಳುವ ಸಂದರ್ಭದಲ್ಲಿ ನೆನೆಯಬಹುದಾಗಿದೆ.

ಯೋಜನೆಯ ಮೇಲಿನ ಪರಿಣಾಮ:

ವಿಶಾಲ ಹಂತದ ಯೋಜನಾ ಕಾರ್ಯತಂತ್ರಗಳು ಮತ್ತು ಶಿಕ್ಷಕರ ತರಗತಿ ಕೋಣೆಯ ಸೂಕ್ಷ್ಮ ಹಂತದ ನೈಜತೆಗಳ ನಡುವಿನ ಸಂಬಂದಧ ಬಗ್ಗೆ ಸಾಂದರ್ಭಿಕ ಕೇಂದ್ರ ಸಂಶೋಧನೆಯು ವಿಭಿನ್ನ ರೀತಿಯ ಆಲೋಚನೆಗಳನ್ನು ಮುಂದಿಟ್ಟಿದೆ. ಸಹಶಿಕ್ಷಕರೊಂದಿಗೆ ಬೋಧನೆಯ ಬಗ್ಗೆ ಮಾತನಾಡಲು ಶಿಕ್ಷಕರಿಗೆ ಅವಕಾಶಗಳು, ಹೊಸ ರೀತಿಯಲ್ಲಿ ತಮ್ಮ ಕೆಲಸಗಳನ್ನು ಮಾಡಲು ಜಿಜ್ಞಾಸೆಯಲ್ಲಿ ತೊಡಗಿಸಿಕೊಳ್ಳುವುದು, ಬೋಧನೆಯ ಗುರಿಗಳ ಅರ್ಥವಂತಿಕೆಗಳನ್ನು ಜಂಟಿಯಾಗಿ ಹಂಚಿಕೊಳ್ಳುವುದು, ಇಂಥ ಲಕ್ಷಣಗಳು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೀರ್ವರಿಗೂ ಲಾಭದಾಯಕವಾಗುವ ರೀತಿಯಲ್ಲಿ ಅಭ್ಯಾಸಗಳನ್ನು ಎಲ್ಲೆಲ್ಲಿ ಮನರ್ರಚಿಸಲಾಯಿತೋ ಅಂಥ ವೈವಿಧ್ಯಮಯ ಪರಿಸರಗಳಲ್ಲೆಲ್ಲ ಕಂಡುಬಂದವು.

೧೯೯೦ರ ಉತ್ತರಾರ್ಧದ ಶೈಕ್ಷಣಿಕ ಪರಿವರ್ತನೆಗಳ ಮೇಲೆ ಕ್ಷಿಪ್ರ ನೋಟವನ್ನು ಹರಿಸಿದಾಗ ಶಿಕ್ಷಕರ ಕಲಿಕ ಸಮುದಾಯಗಳು ಪರಿವರ್ತನಾಕಾರರ ಗುರಿಗಳನ್ನು ಸಾಫಲ್ಯಗೊಳಿಸಲು ಅತ್ಯಂತ ಮಹತ್ವವಾದುವೆಂದು ಎತ್ತಿ ತೋರಿಸುತ್ತದೆ. ಶಿಕ್ಷಕರು ಒಟ್ಟಿಗೆ ಕಲಿಯದಿದ್ದರೆ, ಜೊತೆಯಾಗಿ ಚಿಂತಿಸದಿದ್ದರೆ, ಪರಸ್ಪರ ವಿದ್ಯಾರ್ಥಿಗಳ

ಬೆಳವಣಿಗೆಯನ್ನು ಪರಿವೀಕ್ಷಿಸದಿದ್ದರೆ, ಸರ್ಕಾರದ ಸಂರಚನೆಯಲ್ಲಿ ಮಾಡುವ ಬದಲಾವಣೆಗಳು ಮತ್ತು ಕಾರ್ಯಕ್ಷೇತ್ರದಲ್ಲಿ ನೀಡಲಾಗುವ ವೃತ್ತಿ ಸ್ವಾತಂತ್ರ್ಯಗಳು ವಿದ್ಯಾರ್ಥಿಗಳ ಪ್ರಗತಿಗೆ ಸಂಬಂಧಿಸಿದ ಪರಿಣಾಮಗಳ ವಿಚಾರದಲ್ಲಿ ಯಾವುದೇ ಅರ್ಥವನ್ನು ಪಡೆಯುವುದಿಲ್ಲ. ಜಿಲ್ಲೆ, ಶಾಲೆ ಮತ್ತು ಇಲಾಖೆಯ ಸಾಂದರ್ಭಿಕ ಹಿನ್ನೆಲೆಗಳು ಶಾಲಾ ಬೋಧನೆಯ ಮೇಲೆ ಪ್ರಭಾವ ಬೀರಿವೆ. ಆದರೆ ಶಿಕ್ಷಕರು ತಮ್ಮ ಪಾತ್ರಗಳನ್ನು ಹೇಗೆ ಅರ್ಥಮಾಡಿಕೊಂಡಿರುವರು ಮತ್ತು ಬೋಧನೆ ಮತ್ತು ಕಲಿಕೆಗಳ ಬಗ್ಗೆ ಅವರು ತಳೆದ ನಿರೀಕ್ಷೆಗಳು ಶಾಲೆಗೆ ಬಹು ಹತ್ತಿರದಲ್ಲೇ ನೆಲೆಸಿರುವ ವೃತ್ತಿಪರ ಸಂಘಟನೆಯಿಂದ ಪ್ರಭಾವಿತವಾಗಿದೆ. ಶಿಕ್ಷಕರು ತಮ್ಮ ಕೆಲಸದ ಬಗ್ಗೆ ಇರಿಸಿಕೊಂಡ ಕಲ್ಪನೆಗಳು ಅವರ ವೃತ್ತಿಪರ ಸಮುದಾಯದ ಪ್ರಭಾವದಿಂದ ರೂಪುಗೊಳ್ಳುತ್ತವೆ ಎಂಬ ಮಹತ್ತರ ಅಂಶದ ಮೆಲೆ ಸಂಶೋಧಕರು ಬೆಳಕು ಚೆಲ್ಲಿದರು.

ಶಾಲಾ ಅಭಿವೃದ್ಧಿ ಬಗೆಗಿನ ಆಚರಣೆ ಮತ್ತು ಸಿಧ್ಧಾಂತ:

ಈ ಲೇಖನವು ೧೯೯೮ರಲ್ಲಿ ಪ್ರಕಟಗೊಂಡ ದಿ ***"ಇಂಟರ್ ನ್ಯಾಷನಲ್ ಹ್ಯಾಂಡ್ ಬುಕ್ ಆಫ್ ಎಜುಕೇಷನಲ್ ಛೇಂಜ್"*** ನ ೪ನೇ ಭಾಗದಲ್ಲಿ ಅಡಕವಾದ ಡೇವಿಡ್ ಹಾಪ್ಕಿನ್ಸ್ ರವರ **'ಪರಿಚಯ ಲೇಖನ'**ದ ಭಾವಾರ್ಥವಾಗಿದೆ.

ಶಾಲಾ ಅಭಿವೃದ್ಧಿ ಬಗೆಗಿನ ದೃಷ್ಟಿಕೋನಗಳು ಪಾಶ್ಚಿಮಾತ್ಯ ದೇಶಗಳಲ್ಲಿ ೧೯೮೦ ಮತ್ತು ೧೯೯೦ರ ದಶಕಗಳಲ್ಲಿ ಕೈಗೊಂಡ ಕಾರ್ಯಕ್ರಮಗಳನ್ನಧರಿಸಿದೆ.

ಶಾಲಾ ಅಭಿವೃದ್ಧಿ:

ಇಲ್ಲಿ 'ಶಾಲಾ ಅಭಿವೃದ್ಧಿ' ಯನ್ನು ಶೈಕ್ಷಣಿಕ ಗುರಿಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಸಾಧಿಸಬೇಕೆಂಬ ಮೂಲೋದ್ದೇಶವನ್ನು ಹೊಂದಿ, ಶಾಲೆಗಳಲ್ಲಿನ ಕಲಿಕಾ ಸ್ಥಿತಿಗಳು ಮತ್ತಿತರ ತತ್ಸಂಬಂಧಿ ಆಂತರಿಕ ಸ್ಥಿತಿಗತಿಗಳನ್ನು ಪರಿವರ್ತಿಸುವ ನಿಟ್ಟಿನಲ್ಲಿ ನಡೆಸಲಾಗುವ ಸುವ್ಯವಸ್ಥಿತ, ನಿರಂತರ ಪ್ರಯತ್ನವೆಂದು ಗುರುತಿಸಲಾಗಿದೆ. ಇದು ವಿದ್ಯಾರ್ಥಿಗಳ ಕಲಿಕಾಮಟ್ಟವನ್ನು ಉತ್ತಮಪಡಿಸುವುದರ ಜೊತೆಗೆ ಶಾಲೆಯು ಪರಿವರ್ತನೆಗೊಳ್ಳಲು ಬೆಳೆಸಿಕೊಳ್ಳಬೇಕಾದ ಸಾಮರ್ಥ್ಯವನ್ನು ವೃದ್ಧಿಸುತ್ತದೆ. (ಶಾಲೆಯು ಎದುರಿಸುತ್ತಿದ್ದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಹಾಯ ಮಾಡುವ ಕಾರ್ಯತಂತ್ರಗಳು ಮತ್ತು ಶಾಲೆ ಬದಲಾವಣೆಗೆ ಸ್ವಾಭಾವಿಕವಾಗಿ ಒಗ್ಗಿಕೊಳ್ಳುವಂತೆ ಮಾಡುತ್ತದೆ). ನಿಜವಾದ ಅಭಿವೃದ್ಧಿಯೆಂದರೆ ಕೇಂದ್ರ/ ರಾಜ್ಯ ಸರ್ಕಾರಗಳು ಆಗಿಂದಾಗ್ಗೆ ಹೊರಡಿಸುವ ಕಾನೂನು ನಿಯಮಾವಳಿಗಳನ್ನೊಳಗೊಂಡ ಅಧಿಕೃತ ಆಜ್ಞೆಗಳನ್ನು ಕಣ್ಮುಚ್ಚಿಕೊಂಡು ಒಪ್ಪಿ, ಆ ಸುತ್ತೋಲೆಗಳು ತಮ್ಮ ಸಂದರ್ಭಕ್ಕೆ ಹೇಗೆ ಅನ್ವಯಿಸುತ್ತವೆಯೆಂದು ಸ್ವಲ್ಪವೂ ವಿವೇಚಿಸದೆಯೇ ಅನುಷ್ಠಾನಗೊಳಿಸಲು ಹೆಣಗಾಡುವುದಷ್ಟೇ ಅಲ್ಲ.

ಅತ್ಯಧಿಕ ಕೇಂದ್ರೀಕರಣವಿರುವ ಮತ್ತು ವ್ಯವಸ್ಥೆಯ ಕೆಳಗಿನ ಹಂತಗಳಲ್ಲಿ ಮೇಲಿಂದ ಅಪ್ಪಣೆಗಳಿಗಾಗಿಯೇ ತೀಕ್ಷ್ಣವಾಗಿ ಹಾತೊರೆಯುವಂಥ ಮನಸ್ಥಿತಿಯಿರುವ ಭಾರತದ ಸಂದರ್ಭದಲ್ಲಂತೂ ಈ ವಿವೇಚನಾರಹಿತ ಆಜ್ಞಾಪಾಲನೆ ವಿಶೇಷ ಸವಾಲನ್ನೊಡ್ಡಿದೆ. ಇದೇ ಸಮಯದಲ್ಲಿ ಬಹಳಷ್ಟು ಶಾಲೆಗಳು ಸ್ವತಃ ತಮ್ಮ ಪ್ರಭಾವವಲಯದಲ್ಲೇ ಬರುವ ಶಾಲಾ ಅಭಿವೃದ್ಧಿಯ ಬಗ್ಗೆ ಗಂಭೀರ ಚಿಂತನೆ ನಡೆಸುವ ಸ್ಥಿತಿಯಲ್ಲಿಲ್ಲದಿರುವಾಗ, ತಮ್ಮ ಆರೈಕೆಯಲ್ಲಿರುವ ಮಕ್ಕಳಲ್ಲಿ ಗಂಭೀರವಾದ ವೈಜ್ಞಾನಿಕ ಚಿಂತನಾ ಶಕ್ತಿಯನ್ನು ಬೆಳೆಸುತ್ತವೆಂದು ನಿರೀಕ್ಷಿಸುವುದು ಎಷ್ಟರ ಮಟ್ಟಿಗೆ ಸರಿಯೆನ್ನುವುದನ್ನು ಚಿಂತಿಸಬೇಕಾದ ಅಗತ್ಯವಿದೆ.

ಶಾಲಾ ಅಭಿವೃದ್ಧಿಯತ್ತ ಗಮನಹರಿಸಿರುವ ಅತ್ಯಂತ ಪ್ರಭಾವಶಾಲಿ ಮಾರ್ಗವು ಹಲವಾರು ಪಟ್ಟಿಗಳನ್ನಾಧರಿಸಿದೆ- ಪರಿಣಾಮಕಾರಿ ಶಾಲಾ ಲಕ್ಷಣಗಳನ್ನೊಳಗೊಂಡ ಪಟ್ಟಿ, ಶಿಕ್ಷಕ, ವಿದ್ಯಾರ್ಥಿ; ಕನಿಷ್ಠ ಸಾಮರ್ಥ್ಯಗಳು, ನಿಯಂತ್ರಣಗಳು, ಸಾಧನಾ ಸೂಚಕಗಳ ಪಟ್ಟಿ ಮುಂತಾದವುಗಳು. ಈ ಹಾದಿಯ ಮೂಲದಲ್ಲಿರುವ ಆಶಯವೆಮದರೆ ಮೇಲಿನವರು ಕೆಳಗಿನವರಿಗೆ ಅರ್ಥರಹಿತ ಕಾರ್ಯಗಳನ್ನು ಮಾಡಲು ಪ್ರೋತ್ಸಾಹಿಸುವುದಾಗಿದೆ. ಬೆಳವಣಿಗೆಗ ಬದಲಾಗಿ ಹತೋಟಿಯನ್ನು ಸಾಧಿಸುವುದೇ ಇದರ ಉದ್ದೇಶವಾಗಿದೆ.

ಬದಲಾದ ಇನ್ನೊಂದು ಶಾಲಾ ಪರಿವರ್ತನ ಮಾರ್ಗವು ಶಾಲೆಗೆ ನೇರವಾಗಿ ಸಂಬಂಧಿಸಿರುವ ಶಿಕ್ಷಕರು, ಆಡಳಿತವರ್ಗ ಮತ್ತು ಪೋಷಕರ ಕೌಶಲಗಳು, ಆಶೋತ್ತರಗಳು ಮತ್ತು ಉತ್ಸಾಹವನ್ನಾಧರಿಸಬೇಕೆಂದು ವಾದಿಸುತ್ತವೆ. ಈ ವರ್ಗವು ೪ ನಿರೀಕ್ಷೆಗಳನ್ನು ಹೊಂದಿದೆ.

- ಪರಿಸ್ಥಿತಿಗಳು ಸರಿಯಾಗಿದ್ದಲ್ಲಿ, ಶಾಲೆಗಳು ತಾವೇ ಸುಧಾರಣೆಗೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಶಾಲೆಯ ಹೊರಗಿರುವ ಇತರೆಲ್ಲರ ಗುರುತರ ಜವಾಬ್ದಾರಿಯೆಂದರೆ ಶಾಲೆಯೊಳಗಿರುವವರಿಗೆ ಪೂರಕವಾಗುವ ರೀತಿಯಲ್ಲಿ ಪರಿಸ್ಥಿತಿಗಳನ್ನು ಒದಗಿಸಲು ಸಹಾಯ ಮಾಡುವುದು
- ಅಗತ್ಯತೆ ಮತ್ತು ಗುರಿ ಸ್ಪಷ್ಟವಾಗಿದ್ದು, ಪರಿಸ್ಥಿತಿಗಳು ಪೂರಕವಾಗಿದ್ದಲ್ಲಿ, ಪ್ರೌಢ ವಯಸ್ಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಕಲಿಯುವರಲ್ಲದೆ ಒಬ್ಬರಿಗೊಬ್ಬರು ಪರಸ್ಪರ ಕಲಿಯಲು ಪ್ರೇರೇಪಿಸುತ್ತಾ ನೆರವಾಗುತ್ತಾರೆ.

- ಶಾಲೆಗಳಲ್ಲಿ ಸುಧಾರಣೆಗೊಳ್ಳಬೇಕಾಗಿರುವ ಅಂಶಗಳೆಂದರೆ ಅವುಗಳ ಸಂಸ್ಕೃತಿ, ಪರಸ್ಪರ ಸಂಬಂಧಗಳ ಗುಣಮಟ್ಟ ಮತ್ತು ಕಲಿಕಾ ಅನುಭವಗಳ ಸ್ವಭಾವ ಮತ್ತು ಗುಣಮಟ್ಟ.

- ಶಾಲಾ ಅಭಿವೃದ್ಧಿಯು– ಶಾಲೆಗಳಲ್ಲಿರುವ ಪ್ರೌಢ ವಯಸ್ಕರು ಮತ್ತು ಯುವಕರು ಪರಸ್ಪರ ಕಲಿಕೆಗಳನ್ನು ಹೆಚ್ಚಿಸಿಕೊಂಡು ಅದನ್ನು ನಿರಂತರವಾಗಿ ಮುಂದುವರೆಸಿಕೊಂಡು ಹೋಗಲು ಸಹಕಾರಿಯಾಗುವ ಪರಿಸ್ಥಿತಿಗಳಾವುವು ಎಂಬುದನ್ನು ಗುರುತಿಸಿ, ಅವುಗಳನ್ನು ಬಾಹ್ಯವಾಗಿ ಮತ್ತು ಆಂತರಿಕವಾಗಿ ಒದಗಿಸಿಕೊಡುವ ಪ್ರಯತ್ನಗಳಾಗಿವೆ.

ಆದ್ದರಿಂದ ಶಾಲೆಗಳು ಮತ್ತು ಅವುಗಳೊಳಗೇ ತಮ್ಮ ದೈನಂದಿನ ಜೀವನವನ್ನು ಸಾಗಿಸುತ್ತಿರುವ ಶಾಲೆಗಳ ಸಿಬ್ಬಂದಿ ಪರಿವರ್ತನಾ ಪ್ರಕ್ರಿಯೆಯನ್ನು ನಿಯಂತ್ರಿಸಬಲ್ಲವರಾಗಿದ್ದಾರೆಯೇ ಹೊರತಾಗಿ ಇನ್ನೆಂದಿಗೂ ಬಲಿಪಶುಗಳಲ್ಲ. ಹೊರಗಿನ ಬದಲವಣೆಯ ಅವಕಶವನ್ನು ಉತ್ತೇಜಕವನ್ನಾಗಿ ಬಳಸಿಕೊಂಡು ಮತ್ತು ಬಾಹ್ಯ ಬೆಂಬಲದ ಪ್ರಯೋಜನ ಪಡೆದು, ಉತ್ತಮ ಆಚರಣೆಗಳು ಮತ್ತು ಸಂಶೋಧನೆಗಳ ನಿದರ್ಶನಗಳಿಂದ ವಿದ್ಯಾರ್ಥಿಗಳ ಕಲಿಕೆಯನ್ನು ಬೆಳೆಸುವ ನಿಟ್ಟಿನಲ್ಲಿ ಪರಿವರ್ತನಾ ನಿದಿಷ್ಪತೆಗಳನ್ನು ಸ್ವಯಂ ತಮ್ಮ ವೃತ್ತಿಪರ ಜಿಜ್ಞಾಸೆ ಮತ್ತು ನಿರ್ಣಯಕ್ಕೊಳಪಡಿಸಬಹುದಾಗಿದೆ.

ಉತ್ತಮ ಶಾಲೆಯ ಕೆಲವು ಗುಣಲಕ್ಷಣಗಳು: (೪ ವಿಭಿನ್ನ ದೃಷ್ಟಿಕೋನಗಳಿಂದ)

ವಿದ್ಯಾರ್ಥಿಗಳು:
ಶಿಕ್ಷಕರೊಂದಿಗೆ ಉತ್ತಮ ಸಂಬಂಧಗಳು
ಕಲಿಕಾ ತೊಂದರೆಗಳ ನಿವಾರಣೆ
ಪೋಷಕರೊಂದಿಗೆ ಉತ್ತಮ ಸಂವಹನ

ಪೋಷಕರು ಮತ್ತು ಸಮುದಾಯ:
ಎಲ್ಲ ಮಕ್ಕಳು ಶಾಲೆಯನ್ನು ಸುಲಭವಾಗಿ ತಲುಪುವ ಸಾಧ್ಯತೆ
ಶಾಲೆಯಲ್ಲಿ ಹಾಗೂ ಶಾಲೆ ಮತ್ತು ಮನೆ ನಡುವಿನ ಮಾರ್ಗದಲ್ಲಿನ ಸುರಕ್ಷತೆ
ಸ್ಥಳೀಯ ಸಂಪ್ರದಾಯ, ಪರಿಸ್ಥಿತಿಗಳ ಬಗ್ಗೆ ಸಂವೇದನೆ ಹೊಂದಿದ ಸಮರ್ಥ ಶಿಕ್ಷಕರು
ಉತ್ತಮ ಕಲಿಕ ಪರಿಸರ ಸಮುದಾಯದೊಂದಿಗೆ ಉತ್ತಮ ಬಾಂಧವ್ಯ ಮತ್ತು ಹೊಣೆಗಾರಿಕೆ
ಪರೀಕ್ಷೆಗಳಲ್ಲಿ ಉತ್ತಮ ಪ್ರದರ್ಶನ

ಶಿಕ್ಷಕರು:

ಗೌರವಾರ್ಹ ಸಂಬಳ, ಸಮಯಕ್ಕೆ ಪಾವತಿ
ವಾಸ್ತವಿಕ ಪಠ್ಯಕ್ರಮ ಮತ್ತು ಉಚಿತ ಕಲಿಕಾ ಸಾಮಗ್ರಿಗಳು
ನಿರ್ವಹಿಸಬಲ್ಲಂತಹ ತರಗತಿ ಗಾತ್ರ, ಪ್ರೇರೇಪಿತ ವಿದ್ಯಾರ್ಥಿಗಳು
ಪರೀಕ್ಷೆಗಳಲ್ಲಿ ಉತ್ತಮ ಪ್ರದರ್ಶನ
ಸಾಮಗ್ರಿಗಳು ಮತ್ತು ಸಲಹೆಗಳ ಮೂಲಕ ಬೋಧನೆಗೆ ಸಹಕಾರ
ಬಾಂಧವ್ಯ ಹೊಂದಿದ ಶಿಕ್ಷಕ ಸಿಬ್ಬಂದಿ
ನಿಷ್ಪಕ್ಷಪಾತ ಮತ್ತು ಪ್ರಾಮಾಣಿಕ ಶಾಲಾ ಆಡಳಿತ
ಸಾಧನೆಗೆ ಮನ್ನಣೆ ಮತ್ತು ವೃತ್ತಿ ಬೆಳವಣಿಗೆಗೆ ಅವಕಾಶಗಳು

ಆಡಳಿತ ನಿರ್ವಾಹಕರು ಮತ್ತು ಪರಿವೀಕ್ಷಕರು:

ಉತ್ತಮ ಹಾಜರಾತಿ ದಾಖಲೆ
ಪರೀಕ್ಷೆಗಳಲ್ಲಿ ಉತ್ತಮ ಪ್ರದರ್ಶನ
ಸಿಬ್ಬಂದಿಗಳ ನಡುವೆ ಉತ್ತಮ ಬಾಂಧವ್ಯ
ಬೋಧನೇತರ ಚಟುವಟಿಕೆಗಳು
ಸಮುದಾಯದೊಂದಿಗೆ ಉತ್ತಮ ಸಂಬಂಧಗಳು
ಕ್ರಮಬದ್ಧ ಸುಶಿಕ್ಷಿತ ಮತ್ತು ಉತ್ಮ ನಿರ್ವಹಣೆ ಹೊಂದಿದ ಶಾಲಾ ಪರಿಸರ

– ಮೂಲ ವಿಶ್ವಬ್ಯಾಂಕ್, ೨೦೦೦

ಶಾಲಾ ಅಭಿವೃದ್ಧಿ ಅನುಬವಗಳ ಪ್ರಭಾವವಲಯಗಳು:

ಶಾಲಾ ಅಭಿವೃದ್ಧಿಗೆ ಸಂಬಂಧಿಸಿದ ಹೊಸ ಚಿಂತನೆಗಳು ಮತ್ತು ಕಾರ್ಯತಂತ್ರಗಳು ಸಮಕಾಲೀನ ಸಂದರ್ಭದಲ್ಲಿ ೩ ಕ್ಷೇತ್ರಗಳ ಮೇಲೆ ದೃಷ್ಟಿ ಹರಿಸಿವೆ.

೧. **ಪಠ್ಯಕ್ರಮ ಮತ್ತು ಬೋಧನೆ:**

ಬಹಳಷ್ಟಿ ಜನರಿಗೆ ಪಠ್ಯಕ್ರಮವೇ ಶೈಕ್ಷಣಿಕ ಪರಿವರ್ತನೆಗೆ ಮೂಲ ಸಾಧನ. ಅತ್ಯುತ್ತಮವಾದ ಪಠ್ಯವಿಷಯಗಳ ಸಾಮಗ್ರಿಯನ್ನು ತಯಾರಿಸಿ ಹಂಚುವ ಮೂಲಕ ವಿದ್ಯಾರ್ಥಿ ಸಾಧನೆಯ ಮೇಲೆ ಗಣನೀಯವಾದ ಪರಿಣಾಮ ಬೀರುವುದೇ ಈ ಚಳುವಳಿಯ ಉದ್ದೇಶ.

ಪಠ್ಯಕ್ರಮದ ಮೂಲಕ ವಿದ್ಯಾರ್ಥಿ ಸಾಧನೆಯ ಮೇಲೆ ಧನಾತ್ಮಕ ಪರಿಣಾಮ ಬೀರಲು ಮುಂದೆ ಬಂದ ಈ ಚಳುವಳಿ ವಿಫಲವಾದುದಕ್ಕೆ ಅನುಷ್ಠಾನದ ದೌರ್ಬಲ್ಯವೇ ಕಾರಣವೆಮದು ಸಾಮಾನ್ಯವಾಗಿ ವಿಶ್ಲೇಷಿಸಲಗಿದೆ. ಮುಖ್ಯವಾಗಿ ಪಠ್ಯಕ್ರಮ ತಯಾರಿಕಾ ಪ್ರಕ್ರಿಯೆಯಲ್ಲಿ ಶಿಕ್ಷಕರನ್ನು ಸೇರಿಸಿಕೊಳ್ಳದಿದ್ದುದೇ ಅಲ್ಲದೆ ಹೊಸ ಪಠ್ಯಕ್ರಮವನ್ನು ಪರಿಚಯಿಸಿದಾಗ ಶಿಕ್ಷಕರ ಅಭಿವೃದ್ಧಿಯನ್ನು ನಿರ್ಲಕ್ಷಿಸಿದ್ದುದೇ ಬೋಧನೆಯ ಮೇಲೆ ಸಾಕಷ್ಟು ಪರಿಣಾಮ ಬೀರದಿದ್ದುದರ ಹಿಂದಿದ್ದ ಕಾರಣ. ಎಲ್ಲೆಲ್ಲಿ ಶಿಕ್ಷಕರನ್ನು ಈ ಪ್ರಕ್ರಿಯೆಯಲ್ಲಿ ಸೇರಿಸಿಕೊಂಡರೋ ಅಲ್ಲಿಯೂ ಸಹ ಬದಲಾವಣೆಯ ಮಾದರಿಗಳು ' ಮೇಲಿನ ಸ್ತರದಿಂದ ಕೆಳಕ್ಕೆ' ಅಥವಾ 'ಕೇಂದ್ರೀಕೃತ' ದೃಷ್ಟಿಕೋನಗಳನ್ನು ಹೊಂದಿದ್ದವು. ಕೆಲವೇ ಕೆಲವು ಯೋಜನೆಗಳು ಬೋಧನಾ ಶೈಲಿ ಮತ್ತು ಪಠ್ಯಕ್ರಮ ಅಭಿವೃದ್ಧಿ ನಡುವಿನ ಮೂಲಭೂತ ಕೊಂಡಿಗೆ ಬಾಯಿಮಾತಿನ ಮಹತ್ವಕ್ಕಿಂತ ಹೆಚ್ಚಿನ ಮಹತ್ವ ನೀಡಿದವು.

ಆದಾಗ್ಯೂ, ಪಠ್ಯಕ್ರಮವು ಎಷ್ಟೇ ಚೆನ್ನಾಗಿದ್ದರೂ ವಿದ್ಯಾರ್ಥಿ ಕಲಿಕೆಯ ಮೇಲೆ ನೇರವಾಗಿ ಪರಿಣಾಂ ಬೀರಲು ಸಾಧ್ಯವಿಲ್ಲ. ವಿದ್ಯಾರ್ಥಿ ಸಾಧನೆಯ ಮಟ್ಟವನ್ನು ಹೆಚ್ಚಿಸಲು ಯಾವ ರೀತಿ ಶಿಕ್ಷಕರು ಕಲಿಸುತ್ತಾರೆ ಮತ್ತು ಕಲಿಕೆಗೆ ಸಬಲವಾದ ವಾತಾವರಣವನ್ನು ನಿರ್ಮಿಸುತ್ತಾರೆ ಎನ್ನುವುದರ ಮೇಲೆ ಇದು ಅವಲಂಬಿತವಾಗಿದೆ.

೨. ಸಾಂಸ್ಥಿಕ ಅಭಿವೃದ್ಧಿ:

ಸಾಂಸ್ಥಿಕ ಅಭಿವೃದ್ಧಿ ಮಾರ್ಗಗಳು ಶಾಲೆಗಳ ಸಾಂಸ್ಥಿಕ ಆರೋಗ್ಯದ ಮಹತ್ವಕ್ಕೆ ಒತ್ತು ನೀಡುತ್ತವೆ. ಶಾಲಾ ಅಭಿವೃದ್ದಿಯ ಗುರಿಯನ್ನು ಹೊಂದಿದ ಹಲವಾರು ಮಧ್ಯಸ್ಥಿಕಾ ಕಾರ್ಯಕ್ರಮಗಳು ಶಿಕ್ಷಕರು ಮತ್ತು ವಿದ್ಯಾರ್ಥಿಗಳು 'ಜೀವಿಸುವ' ಶಾಲಾ ಪರಿಸರವನ್ನು ಮಾನವೀಯಗೊಳಿಸುವ ಪ್ರಯತ್ನಕ್ಕೆ ಒತ್ತು ನೀಡುತ್ತಾ ಬಂದಿದೆ. ಯಾವ ಮಧ್ಯಸ್ಥಿಕಾ ಕಾರ್ಯತಂತ್ರಗಳು ಅಭಿವೃದ್ಧಿಗೆ ಪೂರಕವಾಗುವ ಸಾಂಸ್ಥಿಕ ಆಂತರಿಕ ಸ್ಥಿತಿಗತಿಗಳನ್ನು ಗುರುತಿಸುವವೋ ಅಂಥವು ಪರಿಣಾಮಕಾರಿಯಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತ ವೆ.

ಸಂಸ್ಥಿಕ ಅಭಿವೃದ್ಧಿ ಕಾರ್ಯಗಳಲ್ಲಿ, ಸಮೀಕ್ಷಾ ಹಿಮ್ಮಾಹಿತಿಯನ್ನು ಕೌಶಲಪೂರ್ಣವಾಗಿ ಅನುಭವಗಳನ್ನಾಧರಿಸಿ ಬಳಸಿದಲ್ಲಿ, ಅಭಿವೃದ್ಧಿಗೆ ಪೂರಕವಾಗುವ ರೀತಿಯಲ್ಲಿ ಇದನ್ನು ಸುಸಂಸ್ಕೃತ ಸಲಕರಣೆಯಾಗಿ ಬಳಸಬಹುದಾಗಿದೆ. ಶಿಕ್ಷಣ ಕ್ಷೇತ್ರದ ಸಂದರ್ಭದಲ್ಲಿ ಬಹುತೇಕ ಸಾಂಸ್ಥಿಕ ಅಭಿವೃದ್ಧಿ ಪರಿಣಿತರು ಸಮೀಕ್ಷಾ ಹಿಮ್ಮಾಹಿತಿ, ಸಮಸ್ಯೆ ಬಗೆಹರಿಸುವಿಕೆ ಮತ್ತು ಜಂಟಿಯಾಗಿ ನಿರ್ಧಾರಗಳನ್ನು ಕೈಗೊಳ್ಳುವ ವಿನ್ಯಾಸವನ್ನು ಬಳಸುವಂತೆ ಸೂಚಿಸುತ್ತಾರೆ. ಈ ಹಾದಿಯು ಶಾಲಾ ಸಿಬ್ಬಂದಿ ತಮ್ಮ ಗುರಿ ಯಾವುದೆಂಬುದನ್ನು ಪರಿಭಾವಿಸುವರೋ ಆ ಬಗ್ಗೆ ಮಾಹಿತಿಯನ್ನೊದಗಿಸುವ ಮೂಲಕ ಸ್ಪಷ್ಟ ಗುರಿಯನ್ನು ನೆಲೆಗೊಳಿಸಲು ಸಹಾಯ ಮಡುತ್ತದೆ. ಅದರ ವಿನ್ಯಾಸ, ಮಾಹಿತಿಯ ಹರಿವು ಮತ್ತು ಸಂವಹನವನ್ನು ಹೆಚ್ಚಿಸುತ್ತದೆ;ತಮ್ಮ ಉದ್ದೇಶಕ್ಕೆ ಸರಿಹೊಂದುವಂತೆ ನಮನೀಯವಾಗಿ ಬದಲಾಯಿಸಿಕೊಳ್ಳಬಹುದಾಗಿದ್ದು ಎಲ್ಲರೂ ಒಪ್ಪುವ ರೀತಿಯಲ್ಲಿ ನಿರ್ಧಾರಗಳನ್ನು ಕೈಗೊಳ್ಳಲು ಸೂಕ್ತ ವಾತಾವರಣವನ್ನು ನಿರ್ಮಿಸುತ್ತದೆ. ಅಂತಿಮವಗಿ, ಪ್ರಾರಂಬದಿಂದ ಅಂತಿಮ ಹಂತದವರೆಗೂ ಸಮಸ್ಯೆ ನಿವಾರಣೆಗೆ ಒಂದು ಸೂಕ್ತ ಮಾದರಿಯನ್ನು ಒದಗಿಸುತ್ತದೆ ಮತ್ತು ಅದನ್ನು ಆಂತರಿಕ ಕೌಶಲವನ್ನಾಗಿ ಬೆಳೆಸಿಕೊಂಡು ಭವಿಷ್ಯದಲ್ಲಿಯೂ ಸಹ ಉಪಯುಕ್ತ ಸಂಪನ್ಮೂಲವನ್ನಾಗಿ ಬಳಸಲು ಅನುವು ಮಾಡಿ ಕೊಡುತ್ತದೆ.

ಶಾಲೆಯ ಸಂದರ್ಭದಲ್ಲಿ ಸಮಸ್ಯೆ ನಿವಾರಣ ಸಾನರ್ಥ್ಯವು ಹಲವು ಉನ್ನತ ಕೌಶಲಗಳನ್ನು ಹೊಂದಿದೆ– ವೈಜ್ಞಾನಿಕವಾಗಿ ಸಮಸ್ಯೆಯನ್ನು ಗುರುತಿಸುವುದು, ಮಾಹಿತಿ ಮತ್ತು ಸಂಪನ್ಮೂಲವನ್ನು ಸಂಗ್ರಹಿಸುವುದು, ಜೊತೆಯಾಗಿ ಕೆಲಸ ಮಾಡುವುದು, ತಂಡಸ್ಫೂರ್ತಿ ಮತ್ತು ಹಿಂದೆ ಪಡೆದ ಉನ್ನತ ಕೌಶಲಗಳ ಪರಿಣಾಮಕಾರಿತ್ವವನ್ನು ವಿಶ್ಲೇಷಿಸುವ ಸಿಬ್ಬಂದಿಯ ಸಾಮರ್ಥ್ಯ.

೩. ನಿರ್ಧಾರ ಕೈಗೊಳ್ಳುವ ವಿಕೇಂದ್ರೀಕರಣ:

ಶಾಲೆಗಳು ಕೈಗೊಳ್ಳಬೇಕಾದ ಅಧಿಕ ಪ್ರಮಾಣದ ಬದಲಾವಣೆಗೆ ಕಂಡುಬಂದಿರುವ ಸಾಮಾನ್ಯ ಪ್ರತಿಕ್ರಿಯೆಯೆಂದರೆ ವಿಸ್ತೃತ ಕೇಂದ್ರೀಕರಣ ಯೋಜನೆಯ ಜಾರಿಗೊಳಿಸುವಿಕೆ. ಪರಿಣಾಮವಾಗಿ ಸ್ವಯಂ ಪುನರುಜ್ಜೀವನಗೊಳ್ಳುವ ಶಾಲೆ ಮತ್ತು ಅದನ್ನು ಸಾಧಿಸಲು ಬಳಸುವ ಕಾರ್ಯತಂತ್ರಗಳು ಶಾಲಾ ಅಭಿವೃದ್ಧಿಯ ಪ್ರಮುಕ ಗುರಿಗಳಾಗಿವೆ. ಕೇವಲ ಅಧಿಕಾರಶಾಹಿ ನಿಯಮಾವಳಿಗನ್ನು ಬದಲಿಸುವುದು ಅಥವಾ ಜನರನ್ನು ಹೊಣೆಗಾರರನ್ನಾಗಿ ಮಾಡುವ ಮೂಲಕವಷ್ಟೇ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಗುಣಮಟ್ಟವನ್ನು ಸುಧಾರಿಸಲು ಸಾಧ್ಯವಿಲ್ಲವೆಂಬುದನ್ನು ಗ್ರಹಿಸುವಲ್ಲಿ ದೊಡ್ಡ ವಯಫಲ್ಯ ಎದ್ದು ಕಾಣುತ್ತದೆ.

ಕೇಂದ್ರ/ರಾಜ್ಯಮಟ್ಟದ ಅಧಿಕಾರಿಗಳು ಸೇವಾಪೂರ್ವ, ಸೇವಾನಿರತ ಮತ್ತು ಸಮುದಾಯ ಆಧಾರಿತ ಪೂರಕ ಕಾರ್ಯಕ್ರಮಗಳ ಮೂಲಕ ಮರ್ಗದರ್ಶನ ಮತ್ತು ಬೆಂಬಲವನ್ನೊದಗಿಸಿ, ನನೂತನ ಪಾತ್ರಧಾರಿಗಳು ತಮ್ಮ ಹೊಸ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಂತೆ ಮಾಡಬೇಕಾಗಿದೆ.

ಶಾಲಾ ಪರಿವರ್ತನೆಗಾಗಿ ರೂಪಿಸಲಾಗುವ ಕಾರ್ಯತಂತ್ರಗಳು ಶಾಲಾ ಅಭಿವೃದ್ಧಿ ಮತ್ತು ಪರಿವರ್ತನೆಯ ವಿಭಿನ್ನ ಅಗತ್ಯಗಳಿಗೆ ಹೊಂದುವಂತೆ ನಮ್ಯ ಅಥವಾ

ನಮನೀಯವಾಗಿರಬೇಕಾಗಿದೆ ಎಂಬುದನ್ನು ಶಾಲಾ ಅಭಿವೃದ್ಧಿಗೆ ಮೀಸಲಾದ ಹಲವು ಯೋಜನೆಗಳು ಗುರುತಿಸುವುದಿಲ್ಲ. ಶಾಲಾ ಪರಿಣಾಮಕಾರಿತ್ವದ ಬಗೆಗಿನ ಸಂಶೋಧನೆಯಿಂದ ಶಾಲೆಗಳು ವಿಭಿನ್ನ ರೀತಿಯಲ್ಲಿ ಪರಿಣಾಮಕಾರಿಯಾಗಿರುತ್ತದೆ ಎಂದು ಸ್ಪಷ್ಟವಾಗಿರುತ್ತದೆ. ಪರಿಣಾಮಕಾರಿತ್ವದ ವಿವಿಧ ಹಂತಗಳಲ್ಲಿರುವ ಶಾಲೆಗಳಿಗೆ ವಿಭಿನ್ನ ಶಾಲಾ ಅಭೀವೃದ್ಧಿ ಕಾರ್ಯತಂತ್ರಗಳ ಅಗತ್ಯವಿದೆ. ಎಂಬುದನ್ನು ಇದು ಸೂಚಿಸುತ್ತದೆ. ಬೇರೆ ಮಾತುಗಳಲ್ಲಿ ಹೇಳಬೇಕೆಂದರೆ, ಶಾಲಾ ಅಭಿವೃದ್ಧಿ ಕಾರ್ಯತಂತ್ರಗಳು ಶಲೆಗಳ ವಿಶಿಷ್ಟ " ಬೆಳವಣಿಗೆಯ ಹಂತ" ಕ್ಕೆ ಸರಿಯಾಗಿ ಅನ್ವಯವಾಗಬೇಕಾಗಿರುವುದಲ್ಲದೆ ವೈಯಕ್ತಿಕವಾಗಿ ಒಂದೊಂದೂ ಶಾಲೆಯ ವಿಭಿನ್ನ ಸಂಸ್ಕೃತಿಯನ್ನು ಬೇರೆಯಾಗಿ ಪರಿಗಣಿಸುವಂತಿರಬೇಕಗಿದೆ. "ಅಸಮಾನವಾಗಿರುವ ಶಾಲೆಗಳನ್ನು ಸಮನ ನೆಲೆಯಲ್ಲಿ ಕಾಣುವುದಕ್ಕಿಂತ ಹೆಚ್ಚಿನ ಅಸಮಾನತೆ ಬೇರೊಂದಿಲ್ಲ".

ಮೇಲಿನ ಮೂರೂ ಪ್ರಭಾವವಲಯಗಳ ಪರ ವಾದಿಸುವವರು ಆಯ ವೈಯಕ್ತಿ ದೃಷ್ಟಿಕೋನಗಳೇ ಪರಿಪೂರ್ಣವೆಚಿದು ಪರಿಗಣಿಸುತ್ತಾರಾದರೂ, ಅವರ ಅಭಿಪ್ರಾಯವನ್ನು ಒಪ್ಪಲಾಗದು. ಈ ಮೂರೂ ಪ್ರಭಾವವಲಯಗಳನ್ನು ಇಮ್ಮಡಿಗೊಳಿಸಬಹುದಾಗಿದೆ.

ಶಾಲಾ ಅಭಿವೃದ್ಧಿ ಮಧ್ಯಸ್ಥಿಕೆಗಳು ಎದುರಿಸು ಸಮಸ್ಯೆಗಳು ಮತ್ತು ಸವಾಲುಗಳು:

ಶಾಲಾ ಅಭಿವೃದ್ಧಿ ಮಧ್ಯಸ್ಥಿಕೆಗಳ ಮುಂದಿರುವ ಮುಖ್ಯ ಸಮಸ್ಯೆಗಳೆಂದರೆ:

- ಪ್ರತಿ ಶಾಲೆಯ ಸಾಂದರ್ಭಿಕ ಹಿನ್ನೆಲೆ ಮತ್ತು ಅದರ ವಿಶಿಷ್ಟ ಸ್ಥಿತಿಗತಿಗಳನ್ನು ವಿಶ್ಲೇಷಿಸಿ ಶಾಲಾ ಅಭಿವೃದ್ಧಿ ಕ್ರಮಗಳನ್ನು ರೂಪಿಸುವುದು.

- ತರಗತಿ ಕೋಣೆಯ ಮಟ್ಟ ಮತ್ತು ಬೋಧನೆಯ ಪ್ರಾಮುಖ್ಯತೆಯ ಬಗ್ಗೆ ಸಾಕಷ್ಟು ಗಮನ ಹರಿಸದಿರುವುದು

- ಶಾಲೆಗಳ ನಡುವಿನ ವ್ಯತ್ಯಾಸಗಳನ್ನು ಪರಿಗಣೀಸುವಲ್ಲಿ ತೋರಿರುವ ಉಪೇಕ್ಷೆ ಮತ್ತು ಪ್ರತಿ ಶಾಲೆ ಯ ವಿಶಿಷ್ಟ ಬೆಳವಣಿಗೆಯ ಹಂತಕ್ಕನುಗುಣವಾಗಿ ನಿಖರವಾದ ಕಾರ್ಯಕ್ರಮವನ್ನು ರೂಪಿಸುವ ಅಗತ್ಯ.

- ಶಾಲಾ ಪರಿವರ್ತನೆಯಲ್ಲಿ ಸಂರಚನೆ ಮತ್ತು ಸಂಸ್ಕೃತಿಯ ನಡುವಿನ ಸಂಕೀರ್ಣ ಮತ್ತು ಕ್ರಿಯಾಶೀಲ ಸಂಬಂಧವನ್ನು ಅರ್ಥೈಸಿಕೊಳ್ಳಬೇಕಾದ ಮುಂದುವರೆದ ಅಗತ್ಯ.

- ನವೀನ ಕಾರ್ಯಕ್ರಮಗಳು ಶಾಲೆಗಳ ಮೇಲೆ ಯಾವ ರೀತಿಯ ಪರಿಣಾಮವನ್ನು ಬೀರಿತ್ತಿವೆ ಎನ್ನುವುದರ ಮೇಲಷ್ಟೇ ಅಲ್ಲದೆ ಈ ಪರಿವರ್ತನೆಗಳು ಅತ್ಯಧಿಕ ಸಂಖ್ಯೆಯ ಶಾಲೆಗಳನ್ನು ತಲುಪಿ ಮತ್ತು ಇಡೀ ವ್ಯವಸ್ಥೆಯನ್ನೂ ಹಬ್ಬುವಂತೆ ಹೇಗೆ ವಿಸ್ತರಿಸಬೇಕೆಂಬ ಬಗ್ಗೆಯೂ ಗಮನ ಹರಿಸುವ ಜರೂರಾದ ಅಗತ್ಯವಿದೆ.

ಕಾರ್ಯವೆಸಗಲು ಮಾರ್ಗಸೂಚಿಗಳು:

ಸಂಗ್ರಹಿತ ಅನುಭವಗಳು ಮತ್ತು ಮನನಶೀಲ ಜ್ಞಾನದ ಹರಹು ಶಾಲಾ ಅಭಿವೃದ್ಧಿಯನ್ನು ಒಂದು ನಿರ್ದಿಷ್ಟ ನೆಲೆಗೆ ತಂದಿರಿಸಿದ್ದು, ಕಾರ್ಯೋನ್ಮುಖಗೊಳ್ಳಲು ತರ್ಕಬದ್ಧ ಮತ್ತು ಬಲಿಷ್ಠ ಮಾರ್ಗಸೂಚಿಗಳನ್ನು ರೂಪಿಸಲಾಗಿದೆ. ಸಾಮಾನ್ಯವಾಗಿ

ಪರಿಣಾಮಕಾರಿ ಶಾಲಾ ಅಭಿವೃದ್ಧಿಯೆಡೆಗಿನ ಹೆಜ್ಜೆಗಳು ಕೆಳಗಿನ ಅಂಶಗಳನ್ನೊಳಗೊಂಡಿರುತ್ತದೆ:

- ❖ ಪರೀಕ್ಷಾ ಫಲಿತಾಂಶಗಳನ್ನು ಸುಧಾರಿಸಬೇಕೆಂಬ ಅನಿರ್ದಿಷ್ಟ ಗುರಿಗಳನ್ನು ಗುರುತಿಸುವ ಬಾಹ್ಯ ಒತ್ತಡಕ್ಕೆ ಮಣಿಯದೆ ವಿದ್ಯಾರ್ಥಿ ಕಲಿಕೆಗೆ ಸಂಬಂಧಿಸಿದ ನಿರ್ದಿಷ್ಟ ಪರಿಣಾಮಗಳ ಮೇಲೆ ಕೇಂದ್ರೀಕರಿಸುವುದು.

- ❖ ಕಾರ್ಯತಂತ್ರಗಳನ್ನು ರೂಪಿಸಲು ಸಿದ್ಧಾಂತಗಳಿಂದ ಸಾಕಷ್ಟು ಎರವಲನ್ನು ಪಡೆದು, ಅಭ್ಯಾಸಗಳ ಮೇಲೆ ಸಂಶೋಧನೆಯನ್ನು ಕೈಗೊಂಡು, ಶಿಕ್ಷಕರ ಸ್ವಂತ ಅನುಭವಗಳಿಗೆ ಹೆಚ್ಚು ಪ್ರಾಮುಖ್ಯತೆ ನೀಡುವ ಮೂಲಕ ಬದಲವಣೆಗಳನ್ನು ಕಾರ್ಯಗತಗೊಳಿಸುವವರ ಮನಸ್ಸುಗಳಲ್ಲಿ ಬದಲಾವಣೆಯ ಹಿಂದಿರುವ ಉದ್ದೇಶ ಮತ್ತು ತರ್ಕಗಳ ಬಗ್ಗೆ ಸ್ಪಷ್ಟ ಕಲ್ಪನೆ ಮೂಡಿಸುವುದು.

- ❖ ಶಿಕ್ಷಕರ ಆಚರಣೆಯನ್ನು ಅಭಿವೃದ್ಧಿ ಪಡಿಸದೆ ವಿದ್ಯಾರ್ಥಿಗಳ ಕಲಿಕೆಯನ್ನು ಬೆಳೆಸಲಾಗದಿರುವುದರಿಂದ ಶಿಕ್ಷಕರ ಅಬಿವೃದ್ಧಿಯ ಪ್ರಾಮುಖ್ಯತೆಯನ್ನು ಗುರುತಿಸುವುದು.

- ❖ ಕಾರ್ಯಕ್ರಮದ ಅನುಷ್ಠಾನದ ನಂತರ ಅವುಗಳ ಒಳಿತು ಕೆಡುಕುಗಳ ಬಗ್ಗೆ ವ್ಯಾಖ್ಯಾನಿಸುವ ಬದಲು ಯೋಜನೆ ಮತ್ತು ಕಾರ್ಯತಂತ್ರಗಳು ಹೇಗೆ ಶಿಕ್ಷಕರ ಆಚರಣೆಗಳು ಮತ್ತು ವಿದ್ಯಾರ್ಥಿಗಳ ಕಲಿಕೆಗಳ ಮೇಲೆ ಪರಿಣಾಮ ಬೀರುತ್ತವೆ ಎಂಬುದನ್ನು ಪ್ರಾಥಮಿಕ ಹಂತದಲ್ಲಿ ಮತ್ತು ನಿರಂತರವಾಗಿ ಪರಿಶೀಲಿಸುವ ಸೂಕ್ತ ವ್ಯವಸ್ಥೆಯ ಚೌಕಟ್ಟನ್ನು ನಿರ್ಮಿಸುವುದು.

- ❖ ಶಾಲಾ ಹಂತದ ಪ್ರಕ್ರಿಯೆಗಳು ಮತ್ತು ಶಿಕ್ಷಕರ ಬೋಧನಾ ನಡವಳಿಕೆಯ ಮೇಲೆ ಒತ್ತು ನೀಡುವ ಮೂಲಕ ತತ್ಸಂಬಂಧಿತ ಎಲ್ಲ ಶಕ್ತಿಗಳನ್ನು ಬಳಸಿಕೊಳ್ಳುವುದು.

ನಮ್ಮ ದೇಶ /ರಾಜ್ಯದ ಶೈಕ್ಷಣಿಕ ವ್ಯವಸ್ಥೆಯಲ್ಲಿ ಶಾಲಾ ಅಭಿವೃದ್ಧಿ ಕುರಿತಾದ ಆಚರಣೆ ಮತ್ತು ಸಿದ್ಧಾಂತಗಳ ನಡುವಿನ ಅಂತರದ ಬಗ್ಗೆ ಮನನ ಮಾಡುವ ಸಂದರ್ಭದಲ್ಲಿ ಈ ಕೆಳಗಿನ ವಾಸ್ತವಿಕ ಚಿತ್ರಣ ಪ್ರಸ್ತುತವಾಗಿದೆ. ಗುಣಾತ್ಮಕ ಶಿಕ್ಷಣದ ಬಗ್ಗೆ ಕಾಳಜಿ ಹೊಂದಿರುವ ಶೈಕ್ಷಣಿಕ ತಜ್ಞರು ವಿದ್ಯಾರ್ಥಿಗಳ ಕಲಿಕಾ ಸಾಮರ್ಥ್ಯವನ್ನು ಕಂಡುಹಿಡಿಯುವ ಹೊಸ ವೈಜ್ಞಾನಿಕ ಕಾರ್ಯವಿಧಾನಗಳನ್ನು ರೂಪಿಸಬೇಕೆಂದು ಇದು ಸೂಚಿಸುತ್ತದೆ.

"ಹಲವು ರಾಜ್ಯಗಳಲ್ಲಿ ಪ್ರಸ್ತುತ ಪಾಲಿಸುತ್ತಿರುವ ನಿಯಮವೆಂದರೆ ಕನಿಷ್ಠ ಅಂಕಗಳನ್ನು ಗಳಿಸದಿದ್ದರೂ ವಿದ್ಯಾರ್ಥಿಗಳನ್ನು ಹಿಂದಿನ ತರಗತಿಯಲ್ಲಿ ಉಳಿಸಿಕೊಳ್ಳಬರದೆಂಬುದು. ಇದರಂತೆ ಶಾಲೆಗೆ ದಾಖಲಾದ ನಂತರದ ನಿಗದತ ಅವಧಿಯವರೆಗೆ (ಕೆಲವು ರಾಜ್ಯಗಳಲ್ಲಿ 5ನೇ ತರಗತಿವರೆಗೆ) ವಿದ್ಯಾರ್ಥಿಯು ಕಲಿಕಾ ಸಾಮರ್ಥ್ಯದ ಬಗ್ಗೆ ಯಾವ ಪರೀಕ್ಷೆಯನ್ನೂ ಎದುರಿಸಬೇಕಾಗಿಲ್ಲ. ಆದರೆ ಈ ನಿಯಮದ ಆಶಯ ಪ್ರಾರಂಭಿಕ ವರ್ಷಗಳಲ್ಲಿ ವಿದ್ಯಾರ್ಥಿಗಳನ್ನ ಪರೀಕ್ಷಾ ಭೀತಿಯಿಂದ ಮುಕ್ತರನ್ನಾಗಿಸಿ ಅವರ ಕಲಿಕೆಯನ್ನು

ವಿದ್ಯಾರ್ಥಿಗಳನ್ನ ಪರೀಕ್ಷಾ ಭೀತಿಯಿಂದ ಮುಕ್ತರನ್ನಾಗಿಸಿ ಅವರ ಕಲಿಕೆಯನ್ನು ಸುಲಭವಾಗಿಯೂ ಆಹ್ಲಾದಕರವಾಗಿಯೂ ನಡೆಯುವಂತೆ ಪೂರಕ ವಾತಾವರಣವನ್ನು ನಿರ್ಮಿಸುವುದು. ಆದರೆ ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನವನ್ನು ಕೈಗೊಳ್ಳಬಾರದು ಎಂದಲ್ಲ. ಆದರೂ ಈ ನಿಟ್ಟಿನಲ್ಲಿ ಬಹುತೇಕ ರಾಜ್ಯಗಳು ಅರ್ಥಪೂರ್ಣ ಪ್ರಯತ್ನಗಳನ್ನು ಅಷ್ಟಾಗಿ ಮಾಡದೇ ಇರುವುದು ದುಃಕದ ಸಂಗತಿಯಾಗಿದೆ".

– ಮೂಲ : ೯ನೇ ರಾಷ್ಟ್ರೀಯ IBER ಮತ್ತು TLC ಕಾನ್ಫರನ್ಸ್ ೨೦೦೯ , ಲಾಸ್ ವೇಗಾಸ್, ಅಮೆರಿಕದಲ್ಲಿ ಡಾ. ಸೀಮಾ ಮಿಶ್ರ, ಇಂಗ್ಲೀಷ್ ವಿಭಾಗ, ಜೆ.ಡಿ. ಮಹಿಳೆಯರ ಕಾಲೇಜು, ಪಾಟ್ನಾ "Challenges of Primary Education inIndia" ಎಂಬ ಪ್ರಬಂಧ.

– ಕರ್ನಾಟಕದಲ್ಲಿ KSQAO ನಡೆಸುತ್ತಿರುವ ಮೌಲ್ಯಮಾಪನ ವಿಧಾನ, ವಿದ್ಯಾರ್ಥಿ ಪಾಸ ಅಥವಾ ಫೇಲ್ ಆಗಿರುವ ಸೀಮಿತ ಅಂಶವನ್ನಷ್ಟೇ ಅಲ್ಲದೆ ಶಿಕ್ಷಕರಿಗೆ, ವ್ಯವಸ್ಥೆಗೆ, ಪೋಷಕರಿಗೆ ವಿದ್ಯಾರ್ಥಿ ಮತ್ತು ಶಾಲೆ ಯಾವ ಮಟ್ಟದಲ್ಲಿದೆ ಎಂಬ ಬಗ್ಗೆ ಕನ್ನಡಿ ಹಿಡಿಯುತ್ತದೆ. ಇದೇ ನಿಟ್ಟಿನಲ್ಲಿ ಅಜೀಂ ಪ್ರೇಂಜಿ ಪ್ರತಿಷ್ಠಾನ ಹಲವು ರಾಜ್ಯಗಳಲ್ಲಿ ಮೌಲ್ಯಮಾಪನ ವಿಧಾನದಲ್ಲಿ ಪರಿವರ್ತನಾ ಕ್ರಮಗಳನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳೊಂದಿಗೆ ರೂಪಿಸಿದ್ದು ಗುಣಾತ್ಮಕ ಮೌಲ್ಯಮಾಪನದ ಸಾಧ್ಯತೆಯನ್ನು ಶಿಕ್ಷಣ ಕ್ಷೇತ್ರದ ಮುಂದಿಟ್ಟಿದೆ.

ಬೆಳವಣಿಗೆಯ ಹಂತಕ್ಕೆ ಸಂಬಂಧಿಸಿದ ವಿವಿಧ ಕಾರ್ಯತಂತ್ರಗಳು:

ಶಾಲೆಗಳ ವಿವಿಧ ಬೆಳವಣಿಗೆಯ ಹಂತಗಳಿಗೆ ಅನುಗುಣವಾಗಿ ಮೂರು ಬಗೆಯ ಕಾರ್ಯತಂತ್ರಗಳನ್ನು ಪರಿಗಣಿಸಬಹುದಾಗಿದೆ.

ಅ) **೧ನೇ ಬಗೆಯ ಕಾರ್ಯತಂತ್ರಗಳು ವಿಫಲವಾಗುತ್ತಿರುವ ಶಾಲೆಗಳು ಮಿತವಾದ ಪರಿಣಾಮವನ್ನು ಹೊಂದಲು ಸಹಾಯ ಮಾಡುವಂಥವು**

ಹೆಚ್ಚಿನ ಮಟ್ಟದ ಬಾಹ್ಯ ಬೆಂಬಲದ ಅಗತ್ಯ ಈ ಶಾಲೆಗಳಿಗೆ ಬೇಕಾಗಿದೆ. ಏಕೆಂದರೆ ವಿಫಲವಾಗುತ್ತಿರುವ ಈ ಶಾಲೆಗಳು ತಮ್ಮಷ್ಟಕ್ಕೆ ತಾವೇ ಸುಧಾರಿಕೊಳ್ಳಲಾರವು. ಈ ಕಾರ್ಯತಂತ್ರಗಳು ಸಂಬಂಧಪಟ್ಟ ಶಾಲೆಗಳ ವಿಶ್ವಾಸ ಮತ್ತು ಸಾಮರ್ಥ್ಯಗಳನ್ನು ಹೆಚ್ಚಿಸಬೇಕಿದ್ದಲ್ಲಿ ಕನಿಷ್ಠ ಸಂಖ್ಯೆಯ ಮೂಲಭೂತ ಪಠ್ಯಕ್ರಮ ಮತ್ತು ಸಾಂಸ್ಥಿಕ ಅಂಶಗಳ ಮೇಲೆ ಸ್ಪಷ್ಟ ಮತ್ತು ನೇರ ಗಮನ ಹರಿಸಬೇಕಾಗಿದೆ.

ಆ) **೨ನೇ ಬಗೆಯ ಕಾರ್ಯತಂತ್ರಗಳು ಮಿತವಾದ ಪರಿಣಾಮಕಾರಿತ್ವವನ್ನು ಹೊಂದಿದ ಶಾಲೆಗಳು ಪರಿಣಾಮಕಾರಿಯಾಗಲು ಸಹಾಯವನ್ನೊದಗಿಸುವವು.**

ಈ ಶಾಲೆಗಳು ತಮ್ಮ ಅಭಿವೃದ್ಧಿಪರವಾದ ಆದ್ಯತೆಗಳನ್ನು ಪರಿಷ್ಕರಿಸಿಕೊಳ್ಳಬೇಕಲ್ಲದೆ ನಿರ್ದಿಷ್ಟ ಬೋಧನೆ ಮತ್ತು ಕಲಿಕಾ ಅಂಶಗಳ ಮೇಲೆ ನಿಗಾವಹಿಸಿ ಮತ್ತು ಇದಕ್ಕೆ ಪೂರಕವಾಗುವಂತೆ ಶಾಲೆಯೊಳಗಣ ಆಂತರಿಕ ಸಾಮರ್ಥ್ಯವನ್ನು ಬೆಳೆಸಬೇಕಾಗಿದೆ. ಈ ಕಾರ್ಯತಂತ್ರಗಳು ಸಾಮಾನ್ಯವಾಗಿ ನಿಶ್ಚಿತ ಮಟ್ಟದ ಬಾಹ್ಯ ಬೆಂಬಲವನ್ನೊಳಗೊಂಡಿರುವುವಾದರೂ, ಈ ಬಗೆಯ ಶಾಲೆಗಳು ಸೈದ್ಧಾಂತಿಕವಾಗಿ ಸ್ವತಃ ತಾವೇ ಉತ್ತಮಗೊಳ್ಳುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ.

ಇ) 3ನೇ ಬಗೆಯ ಕಾರ್ಯತಂತ್ರಗಳು ಪರಿಣಾಮಕಾರಿ ಶಾಲೆಗಳು ಉತ್ಕೃಷ್ಟತೆಯನ್ನು ಕಾಯ್ದಿರಿಸಿಕೊಳ್ಳಲು ನೆರವು ನೀಡುವಂತಹವುಗಳಾಗಿವೆ.

ಈ ರೀತಿಯ ಸನ್ನಿವೇಶಗಳಲ್ಲಿ ಬಾಹ್ಯ ಬೆಂಬಲ ಸ್ವಾಗತಾರ್ಹವಾದರೂ ಶಾಲೆಗಳು ತಮ್ಮದೇ ಸ್ವಸಹಾಯ ಸಂಪರ್ಕಜಾಲಗಳನ್ನು ಅರಸಿಕೊಂಡು ಸೃಷ್ಟಿಸಿಕೊಳ್ಳುತ್ತವೆಯಾದ್ದರಿಂದ ಅದರ ಅಗತ್ಯವಿರುವುದಿಲ್ಲ. ಹೊಸ ಆಲೋಚನೆ ಮತ್ತು ಆಚರಣೆಗಳತ್ತ ತೆರೆದುಕೊಳ್ಳುವುದು, ಸಾಮೂಹಿಕವಾಗಿ ಜೊತೆಗೂಡಿ ಕೆಲಸ ಮಾಡುವುದು, ಜಂಟಿ ಕಾರ್ಯನಿರ್ವಹಣೆ ಇವು ಸಾಮಾನ್ಯವಾಗಿ ಕಂಡುಬರುತ್ತವೆ.

ವಿವಿಧ ಬಗೆಗಳಲ್ಲಿ ಶಾಲೆಗಳನ್ನು ವಿಂಗಡಿಸಲು ಬಳಸುವ ಮಾನದಂಡಗಳು ಆದ್ಯತೆಗಳ ವ್ಯಾಪ್ತಿ ಮತ್ತು ಸಂಖ್ಯೆಗಳನ್ನೊಳಗೊಂಡಿರುತ್ತವೆ. ಪಠ್ಯಕ್ರಮ, ಬೋಧನೆ, ಶಾಲಾ ರಚನೆ, ಸಂಶೋಧನಾ ಜ್ಞಾನ/ ಆಂತರಿಕ ಧ್ಯೇಯ, ಸಾಮರ್ಥ್ಯವೃದ್ಧಿಯ ಮಟ್ಟ ಇವು ಒಳಗೊಂಡ ಗಮನೀಯ ಅಂಶಗಳಾಗಿವೆ.

ಸಮಷ್ಟೀಕರಣ:

ನ್ಯಾಯಯುತ ಸಮಾಜ ನಿರ್ಮಾಣಕ್ಕೆ ಶಿಕ್ಷಣ ಬುನಾದಿಯಾಗಿದೆ. ಈ ಪರಿಕಲ್ಪನೆ ನಿಜವಾಗಲು ಸಮುದಾಯ ಭಾಗವಹಿಸುವಿಕೆ ಬಹಳ ಅಗತ್ಯ. ಶಾಲಾಭಿವೃದ್ಧಿ ಸಮುದಾಯದಿಂದ ಮಾತ್ರ ಸಾಧ್ಯ. ಸಮುದಾಯದ ಕ್ರಿಯಾತ್ಮಕ ಒಳಗೊಳ್ಳುವಿಕೆ ಖಾತ್ರಿಪಡಿಸಲು ಅಗತ್ಯ ಮಾರ್ಗೋಪಾಯ ಕಂಡುಹಿಡಿಯಲು ಅಧ್ಯಯನಗಳ ಅಗತ್ಯವಿದೆ.

1. ಎಸ್.ಡಿ.ಎಂ.ಸಿಗಳು ಆಸಕ್ತಿಹೊಂದಿದ ಸದಸ್ಯರಿಂದ ಕೂಡಿದೆಯೇ ಅಥವಾ ಒತ್ತಾಯದಿಂದಾಗಿ ಅವರು ಎಸ್.ಡಿ.ಎಂ.ಸಿಗಳಲ್ಲಿದ್ದಾರೆಯೇ?
2. ಎಸ್.ಡಿ.ಎಂ.ಸಿಗಳ ಬಲವರ್ಧನೆಗೆ ಹಮ್ಮಿಕೊಳ್ಳಲಾಗಿರುವ ಥರಬೇತಿ ಕಾರ್ಯಾಗಾರಗಳು ಪರಿಣಾಮಕಾರಿಯಾಗಿವೆಯೇ?
3. ಶಾಲೆಗಳ ಭೌತಿಕ ಗುಣಮಟ್ಟಕ್ಕೆ ಸಂಬಂಧಿಸಿದ ನಿರ್ಧಾರಗಳಲ್ಲಿ ಎಸ್.ಡಿ.ಎಂ.ಸಿಗಳ ಭಾಗವಹಿಸುವಿಕೆ ಇದೆಯೇ?
4. ಶಾಲಾ ಕಲಿಕಾ ಪ್ರಕ್ರಿಯೆಯಲ್ಲಿ (ಬೌದ್ಧಿಕ), ಎಸ್.ಡಿ.ಎಂ.ಸಿಗಳಿಗೆ ಪರಿಣಾಮಕಾರಿ ಪಾತ್ರವಿದೆಯೇ.
5. ಎಸ್.ಡಿ.ಎಂ.ಸಿಗಳಲ್ಲಿ ಮೀಸಲಾತಿ ಖಾತ್ರಿಪಡಿಸಲಾಗುತ್ತಿದೆಯೇ?
6. ಎಸ್.ಡಿ.ಎಂ.ಸಿಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಪರಿಣಾಮಕಾರಿಯಾಗಿದೆಯೇ?
7. ಎಸ್.ಡಿ.ಎಂ.ಸಿಗಳಲ್ಲಿ ಪರಿಶಿಷ್ಟ ಜಾತಿ/ಪಂಗಡ ಹಾಗೂ ಅಲ್ಪ ಸಂಖ್ಯಾತರ ಭಾಗವಹಿಸುವಿಕೆ ಗುಣಾತ್ಮಕವಾಗಿದೆಯೇ?

ಅಧ್ಯಯನದ ಉದ್ದೇಶಗಳು

೧. ಎಸ್.ಡಿ.ಎಂ.ಸಿಗಳು ಪರಿಣಾಮಕಾರಿಯಾಗಿ ಜವಾಬ್ದಾರಿಯನ್ನು ನಿರ್ವಹಿಸಲು ಬೇಕಾದ ಬದ್ಧತೆ ಇದೆಯೇ ಎಂದು ತಿಳಿದುಕೊಳ್ಳುವುದು

೨. ಎಸ್.ಡಿ.ಎಂ.ಸಿಗಳು ಕ್ರಿಯಾತ್ಮಕ ಪಾತ್ರ ನಿರ್ವಹಿಸಲು ಪೂರಕ ಮಾಹಿತಿ/ಜ್ಞಾನ ಅವರಿಗಿ ನೀಡಾಲಾಗುತ್ತಿದೆಯೇ? ಅದರ ಅವಶ್ಯಕತೆಗಳನ್ನು ಗುರುತಿಸಲಾಗಿದೆಯೇ ಎಂದು ತಿಳಿದುಕೊಳ್ಳುವುದು

೩. ಎಸ್.ಡಿ.ಎಂ.ಸಿ ಗಳು ನಿರ್ಧಾರ ತೆಗೆದುಕೊಳ್ಳುವ ಮಟ್ಟಕ್ಕೆ ಬೆಳೆದಿವೆಯೇ? ಬೌದ್ಧಿಕ ಹಾಗೂ ಬೌತಿಕ ಅಭಿವೃದ್ಧಿಯಲ್ಲಿ ಅವರ ಭಾಗವಹಿಸುವಿಕೆಯನ್ನು ಕಾಣಬಹುದಾಗಿದೆಯೇ ಎಂಬುದನ್ನು ಅರಿಯುವುದು

೪. ಪ್ರಜಾಪ್ರಭುತ್ವದ ಮೌಲ್ಯಗಳನ್ನಾಧರಿಸಿದ ಎಸ್.ಡಿ.ಎಂ.ಸಿಗಳು ಮೀಸಲಾತಿಯನ್ನು ಖಾತ್ರಿಪಡಿಸಿ ಪ್ರತಿ ವರ್ಗಗಳಿಗೆ ಸಮಾನ ಅವಕಾಶ ನೀಡುತ್ತಿವೆಯೇ? ಎಂಬುದನ್ನು ತಿಳಿಯುವುದು.

ಅಧ್ಯಯನದ ಪ್ರಾಕ್‌ಕಲ್ಪನೆಗಳು:

೧. ಉಡುಪಿ ಜಿಲ್ಲೆಯ ಎಸ್.ಡಿ.ಎಂ.ಸಿಗಳು ತಮ್ಮ ಜವಾಬ್ದಾರಿಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುತ್ತಿವೆ.

೨. ಉಡುಪಿ ಜಿಲ್ಲೆಯ ಎಸ್.ಡಿ.ಎಂ.ಸಿಗಳು ಇಲಾಖಾ ಹಾಗೂ ಸ್ವಯಂ ಸೇವಾ ಸಂಸ್ಥೆಗಳು ನಡೆಸಿದ ತರಬೇತಿಗಳಿಂದ ಸಧೃಡವಾಗಿವೆ.

೩. ಉಡುಪಿ ಜಿಲ್ಲೆಯ ಶಾಲೆಗಳಲ್ಲಿ ಬೌತಿಕ ಹಾಗೂ ಬೌದ್ಧಿಕ ವ್ಯವಸ್ಥೆಗಳಿಗೆ ಸಂಬಂಧಿಸಿದ ನಿರ್ಧಾರಗಳನ್ನು ಎಸ್.ಡಿ. ಎಂ.ಸಿಗಳು ತೆಗೆದುಕೊಳ್ಳುತ್ತವೆ.

೪. ಉಡುಪಿ ಜಿಲ್ಲೆಯ ಎಸ್.ಡಿ.ಎಂ.ಸಿಗಳ ರಚನೆ ಹಾಗೂ ಕಾರ್ಯಚಟುವಟಿಕೆಯಲ್ಲಿ ಮಹಿಳೆ ಹಾಗೂ ಪರಿಶಿಷ್ಟ ಜಾತಿ ಮತ್ತು ವರ್ಗಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಲಾಗುತ್ತಿದೆ.

ಅಧ್ಯಯನದ ವಿಧಾನಗಳು:

ಕ್ಲಸ್ಟರ್ ಸ್ಯಾಂಪ್ಲಿಂಗ್ ವಿಧಾನದಲ್ಲಿ ಪ್ರಶ್ನಾವಳಿಗಳ ಆಧಾರದಲ್ಲಿ ಸಂದರ್ಶನ ನಡೆಸಿ ಮಾಹಿತಿಯನ್ನು ಸಂಗ್ರಹಿಸಲಾಗುವುದು. ಅದಕ್ಕಾಗಿ ಜಿಲ್ಲೆಯ ಒಟ್ಟು 10% ಕ್ಲಸ್ಟರ್ ಗಳಲ್ಲಿ ಮಾಹಿತಿ ಸಂಗ್ರಹಿಸಲಾಗುವುದು. ಮೇಲ್ಕಾಣಿಸಿದ ಪ್ರಾಥಮಿಕ ಮಾಹಿತಿಗಳಲ್ಲದೆ ಅನುಷಂಗಿಕ ಮಾಹಿತಿಗಳನ್ನು ಇಲಾಖಾ ದಾಖಲೆಗಳಿಂದ ಹಾಗೂ ಮಾಧ್ಯಮಗಳ ಮಾಹಿತಿಯಿಂದ ಸಂಗ್ರಹಿಸಲಾಗಿದೆ.

ಅಧ್ಯಯನ ವಿನ್ಯಾಸ:

ಪ್ರಾಥಮಿಕ ಮಾಹಿತಿಯನ್ನು ಶಾಲೆಗಳ ಎಸ್.ಡಿ.ಎಂ.ಸಿ ಪದಾದಿಕಾರಿಗಳೊಂದಿಗೆ ಸಂಧರ್ಶನ ನಡೆಸುವುದರಮೂಲಕ ನಡೆಸಲಾಗಿದೆ.

ಪ್ರಾಥಮಿಕ ಮೂಲಗಳು:

- ಸಮೀಕ್ಷೆ
- ಸಂದರ್ಶನ
- ಗುಂಪುಚರ್ಚೆ
- ಕ್ಷೇತ್ರ ಮಾಹಿತಿ

ಅನುಷಂಗಿಕ ಮೂಲಗಳು:

* ಎಸ್.ಡಿ.ಎಂ.ಸಿ ಸಂಬಂಧಿಸಿದ ಸರಕಾರಿ ಸುತ್ತೋಲೆಗಳು ಅದಿಸೂಚನೆಗಳು

* ಸರಕಾರಿ ವಾರ್ಷಿಕ ವರದಿಗಳು, ಸರಕಾರಿ ಪ್ರಕಟಣೆಗಳು

* ಶಾಲಾಭಿವೃದ್ಧಿಗಾಗಿ ನಡೆಸಲಾದ ವಿವಿದ ತರಬೇತಿ ಕೈಪಿಡಿಗಳು

* ನಕಾಶೆ

ಅಧ್ಯಯನದ ಇತಿಮಿತಿಗಳು:

- ಅಧ್ಯಯನವನ್ನು ಉಡುಪಿ ಜಿಲ್ಲೆಯ ಮೂರು ತಾಲೂಕುಗಳ ಕೆಲವೇ ಎಸ್.ಡಿ.ಎಂ. ಸಿ.ಗಳೊಂದಿಗೆ ನಡೆಸಲಾಗಿದೆ.
- ಅಧ್ಯಯನವನ್ನು ಪ್ರಾಥಮಿಕ ಶಾಲೆಗಳಲ್ಲಿ ಮಾತ್ರ ನಡೆಸಲಾಗಿದೆ.
- ಕಡಿಮೆ ಸಮಯದಲ್ಲಿ ಕ್ಷೇತ್ರ ಕಾರ್ಯ ಮಾಡಿರುವುದರಿಂದ ಆಳವಾದ ಆಧ್ಯಯನ ಸಾಧ್ಯವಾಗಿರುವುದಿಲ್ಲ.
- ಎಸ್.ಡಿ.ಎಂ.ಸಿ.ಯ ನಾಮನಿರ್ದೇಶಿತ ಹಾಗೂ ಪದನಿಮಿತ್ತ ಸದಸ್ಯರನ್ನಾಗಲಿ ಅಥವಾ ಮಕ್ಕಳ ಪ್ರತಿನಿಧಿಗಳನ್ನಾಗಲಿ ಅಧ್ಯಯನಕ್ಕೆ ಒಳಪಡಿಸಲಾಗಿಲ್ಲ.
- ಅಧ್ಯಯನವನ್ನು ಆಯ್ದ ಶಾಲೆಯ ಎಸ್.ಡಿ.ಎಂ.ಸಿ.ಯ ಒಬ್ಬ ಸದಸ್ಯರೊಂದಿಗೆ ಮಾತ್ರ ಮಾಡಲಾಗಿದೆ.
- ಶಿಕ್ಷಣದ ಇತರ ಪಾಲುದಾರರಾದ ಶಿಕ್ಷಕರು, ಪೋಷಕ ಸಮುದಾಯ, ಸ್ಥಳೀಯ ಸರ್ಕಾರ (ಗ್ರಾಮ ಪಂಚಾಯತ್
- ಪ್ರತಿನಿಧಿಗಳ ಸ್ವಯಂ ಸೇವಾ ಸಂಸ್ಥೆಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿಲ್ಲ.

ಮುಂದಿನ ಅಧ್ಯಯನಕ್ಕಾಗಿ ಸಲಹೆಗಳು

- ಅಧ್ಯಯನವನ್ನು ಉಡುಪಿ ಜಿಲ್ಲೆಯ ಎಲ್ಲಾ ಶಾಲೆಗಳ ಎಸ್.ಡಿ.ಎಂ.ಸಿ.ಗಳೊಂದಿಗೆ ಮಾಡಬಹುದಾಗಿದೆ.
- ಅಧ್ಯಯನವನ್ನು ಪೌಢಶಾಲಾ ಎಸ್.ಡಿ.ಎಂ.ಸಿ.ಗಳೊಂದಿಗೂ ಮಾಡಬಹುದಾಗಿದೆ
- ಹೆಚ್ಚು ಕಾಲಾವಧಿಯಲ್ಲಿ ಹೆಚ್ಚು ಯೋಜಿತವಾಗಿ ಕ್ಷೇತ್ರ ಕಾರ್ಯ ಮಾಡಿ ಆಳವಾದ ಅಧ್ಯಯನ ಮಾಡಬಹುದಾಗಿದೆ
- ಒಟ್ಟು ಎಸ್.ಡಿ.ಎಂ.ಸಿ.ಗಳೊಂದಿಗೆ (ಪೋಷಕ ಪ್ರತಿನಿಧಿಗಳು, ನಾಮನಿರ್ದೇಶಿತ ಹಾಗೂ ಪದನಿಮಿತ್ತ ಮಕ್ಕಳ ಪ್ರತಿನಿಧಿ ಸದಸ್ಯರು)ಅಧ್ಯಯನ ನಡೆಸಬಹುದಾಗಿದೆ.
- ಆಧ್ಯಯನವನ್ನು ಶಾಲೆಗಳ ಎಸ್.ಡಿ.ಎಂ.ಸಿ.ಯ ಎಲ್ಲಾ ಸದಸ್ಯರೊಂದಿಗೆ ನಡೆಸಲಾಗಿದೆ.
- ಶಿಕ್ಷಣದ ಇತರ ಪಾಲುದಾರರಾದ ಶಿಕ್ಷಕರು ಪೋಷಕ ಸಮುದಾಯ, ಸ್ಥಳೀಯ ಸರ್ಕಾರ (ಗ್ರಾಮ ಪಂಚಾಯತ್) ಪ್ರತಿನಿಧಿಗಳು ಸ್ವಯಂ ಸೇವಾ ಸಂಸ್ಥೆಗಳೊಂದಿಗೆ ಅಧ್ಯಯನ ಕೈಗೊಳ್ಳಬಹುದಾಗಿದೆ.
- ಮಾಹಿತಿ ಮತ್ತು ಸಾಹಿತ್ಯಗಳು ಹೆಚ್ಚು ಲಭಿಸಿದರೆ ಆಳವಾದ ಅಧ್ಯಯನ ಮಾಡಬಹುದಾಗಿದೆ

ಅಧ್ಯಾಯ–2

ಶಾಲೆಗಳ ಅಭಿವೃದ್ಧಿಯಲ್ಲಿ ಎಸ್.ಡಿ.ಎಂ.ಸಿಗಳ ಪಾತ್ರ

೧೪ ವರ್ಷಗೊಳಗಿನ ಪ್ರತೀ ಮಗುವಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣವನ್ನು ನೀಡುವ ಸಾಂವಿಧಾನಿಕ ಬದ್ದತೆ ಪೂರ್ಣಗೊಂಡಿಲ್ಲ ರಾಜಕೀಯ ಹಿತಾಸಕ್ತಿಯ ಕೊರತೆ ಹಾಗೂ ಹಣಕಾಸಿನನೆರವು ಪೂರೈಕೆಯ ಕೊರತೆ, ಕಾಣ್ಕೆ (Vision) ಕೊರತೆ ಹಾಗೂ ಅವಶ್ಯಕತೆಗಳಿಗನುಗುಣವಾದ ಶಿಕ್ಷಣ ಪದ್ದತಿಯ ಅಭಿವೃದ್ಧಿ ಹಾಗೂ ಬಲಪಡಿಸುವಿಕೆಗೆ ಬದ್ದತೆಯ ಕೊರತೆ ರಾಜ್ಯ ಮಟ್ಟದಲ್ಲಿ ಇರುವುದು ಪ್ರಾಥಮಿಕ ಶಿಕ್ಷಣ ವ್ಯವಸ್ಥೆ ಪರಿಣಾಮಕಾರಿಯಾಗಿ ಮೂಡಿಬರದಿರಲು ಕಾರಣವೆನ್ನಲಾಗುತ್ತಿತ್ತು. ಹಾಗಾಗಲು ಸಂವಿಧಾನದ ಬೆಂಬಲ ಇಲ್ಲದಿರುವುದನ್ನು ಗಮನಿಸಲಾಯ್ತು. 1993 ರಲ್ಲಿ ಆಂಧ್ರಪ್ರದೇಶ ಸರಕಾರವು ಉಣ್ಣಿಕೃಷ್ಣ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ತೀರ್ಪು ಶಿಕ್ಷಣವನ್ನು ಮೂಲಭೂತ ಹಕ್ಕು ಎಂದು ಘೋಷಿಸಿರುವುದು ಪ್ರಾಥಮಿಕ ಶಿಕ್ಷಣದಲ್ಲಿ ಹೊಸ ಮೂಲಭೂತ ತೀರ್ಪನ್ನು ಹೊರಹೊಮ್ಮಿತು.

ಸರ್ವೋಚ್ಚ ನ್ಯಾಯಾಲಯದ ಚಾರಿತ್ರಿಕ ತೀರ್ಪು ಮತ್ತು ನಾಗರಿಕ ಸಂಸ್ಥೆಗಳ ಆಂದೋಲನ, ಪ್ರಾಥಮಿಕ ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸಲು ಕೇಂದ್ರ ಸರ್ಕಾರವನ್ನು ಒತ್ತಾಯಿಸಿತು. ಇಂದು ಸಂವಿಧಾನದ ೮೬ನೇ ತಿದ್ದುಪಡಿ ಕಾಯಿದೆ ೨೦೦೨ ೬-೧೪ ವಯಸ್ಸಿನ ಮಕ್ಕಳಿಗೆ ಶಿಕ್ಷಣವನ್ನು ಮೂಲಭೂತ ಹಕ್ಕಾಗಿಸಿತು. ೯೩ನೇ ಸಂವಿಧಾನ ತಿದ್ದುಪಡಿಯನ್ನು ಲೋಕಸಭೆ ೨೮ ಡಿಸೆಂಬರ್, ೨೦೦೧ರಲ್ಲಿ ಅಂಗೀಕರಿಸಿದರೆ, ರಾಜ್ಯಸಭೆಯು ಮೇ2002ರಂದು ಅಂಗೀಕರಿಸಿತು. ಇದಕ್ಕೆ ೨೦೦೨ ಡಿಸೆಂಬರ್ ೧೨ರಂದು ರಾಷ್ಟ್ರಪತಿಯವರ ಅಧಿಕೃತ ಮೊಹರು ಬಿತ್ತು. ಇದೊಂದು ಆಶಾದಾಯಕ ಬೆಳವಣಿಗೆ ಅನಿಸಿಕೊಂಡಿತು. ಶಾಲೆಗಳನ್ನು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಲು ಪಾರದರ್ಶಕತೆ ಹಾಗೂ ಉತ್ತರದಾಯಿತ್ವ ತೀರಾ ಅವಶ್ಯಕವೆಂದು ಪರಿಗಣಿಸಲಾಯ್ತು. ಎಲ್ಲಕ್ಕಿಂತ ಹೆಚ್ಚಾಗಿ ಒಟ್ಟು ಸಮುದಾಯ ಮುಖ್ಯವಾಗಿ ಶಾಲಾ ಶಿಕ್ಷಣ ಪಡೆಯುತ್ತಿರುವ ಮಕ್ಕಳ ಹೆತ್ತವರನ್ನು ಪ್ರಾಥಮಿಕ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ತೊಡಗಿಸಿಕೊಂಡಾಗ ಮಾತ್ರ ಗುರಿ ಸಾಧನೆ ಸಾಧ್ಯವಾಗುವುದು. ಹಾಗಾಗಲು ಯೋಜನೆ, ಅನುಷ್ಠಾನ ಮೇಲುಸ್ತುವಾರಿ ಹಾಗೂ ಮೌಲ್ಯವರ್ಧನೆ ಈ ಎಲ್ಲಾ ಹಂತಗಳಲ್ಲಿ ಮಕ್ಕಳ ಹೆತ್ತವರು ಭಾಗವಹಿಸಬೇಕು ಎಂಬುದನ್ನು ಗಮನಿಸಲಾಯ್ತು.

ಈಗಾಗಲೇ ಉಲ್ಲೇಖಿಸಿರುವಂತೆ, ಕರ್ನಾಟಕ ಸರ್ಕಾರ ಪ್ರಥಮವಾಗಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ಅಳವಡಿಕೆಗೆ ಪ್ರಯತ್ನಿಸಿದವರಲ್ಲಿ ಒಂದಾಗಿದೆ. ಕರ್ನಾಟಕದಲ್ಲಿ ೨೭ ಜಿಲ್ಲೆಗಳಿದ್ದು ೧೭೬ ರೆವಿನ್ಯೂ (ಭೂ ಕಂದಾಯ) ಹಾಗೂ ೨೦೨ ಶೈಕ್ಷಣಿಕ ವಿಭಾಗ ಹೊಂದಿದೆ. ೨೦೦೩-೦೪ ವಾರ್ಷಿಕ ವರದಿಯಂತೆ ಕರ್ನಾಟಕದಲ್ಲಿ ೪೩೩೩೨ ಸರ್ಕಾರಿ ಪ್ರಾಥಮಿಕ ಶಾಲೆಗಳಿವೆ.

ಶಿಕ್ಷಣ ಸಾರ್ವತ್ರೀಕರಣ, ಅಭಿವೃದ್ಧಿಯ ಮೂಲ ಸೂಚ್ಯಂಕವಾಗಿದೆ. ತೀರಾ ಇತ್ತೀಚಿನವರೆಗೆ ಸಮಾಜದ ಒಂದುವರ್ಗಕ್ಕೆ ಮಾತ್ರ ಒದಗಿಬರುತ್ತಿದ್ದ ಮೂಲ ಶಿಕ್ಷಣ ಜನಸಾಮಾನ್ಯರಿಗೆ ಎಟಕುವಂತಾದಾಗ ಮಾತ್ರ ಅಭಿವೃದ್ಧಿಯ ಪಥ ಸಸೂತ್ರವಾಗುವುದು ಎನ್ನುವುದು ಒಪ್ಪಿತ ಸತ್ಯವಾಗಿದೆ. ಸ್ವಾತಂತ್ರ್ಯಪೂರ್ವದಿಂದಲೂ ಭಾರತದಲ್ಲಿ ಶಾಲಾ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಅವುಗಳಲ್ಲಿ ಪ್ರಮುಖವಾದ ಮೈಲಿಗಲ್ಲುಗಳನ್ನು ಈ ಕೆಳಗಿನಂತೆ ಗುರುತಿಸಬಹುದಾಗಿದೆ.

೧೮೧೭ರಲ್ಲಿ ತಿರುವಾಂಕೋರ್ ಪ್ರಾಂತ್ಯದ (ಈಗಿನ ಕೇರಳ ರಾಜ್ಯ) ಮಹಾರಾಣಿಯವರು ಆಡಳಿತದಲ್ಲಿ ಪ್ರಜೆಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕಾದರೆ ಶಿಕ್ಷಣ ಅತ್ಯಾವಶ್ಯಕವೆಂದು ಮನಗಂಡು ತಮ್ಮ ಪ್ರಾಂತ್ಯದ ಎಲ್ಲಾ ಪ್ರಜೆಗಳಿಗೆ ಶಿಕ್ಷಣ ನೀಡುವ ಘೋಷಣೆಯೊಂದನ್ನು ಹೊರಡಿಸಿದರು.

೧೮೯೩ ರಲ್ಲಿ ಬರೋಡಾದ ಮಹಾರಾಜ್ ಗಾಯಕ್‌ವಾಡ್ ರವರು ತಮ್ಮ ರಾಜ್ಯದ ವ್ಯಾಪ್ತಿಗೆ ಒಳಪಡುವ ಸಣ್ಣ ಪ್ರಾಂತ್ಯ ಅಮ್‌ಆರಾಯಿಲಿಯಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ೧೯೦೬ರಲ್ಲಿ ಈ ಸೌಲಭ್ಯವನ್ನು ಬರೋಡ ಪ್ರಾಂತ್ಯದ ಉದ್ದಗಲಕ್ಕೂ ವಿಸ್ತರಿಸಿದರು.

ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಗೋಪಾಲಕೃಷ್ಣ ಗೋಖಲೆಯವರು ೧೯೧೧ ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಗೊತ್ತುವಳಿಯೊಂದನ್ನು ಮಂಡಿಸಿ, ಶಿಕ್ಷಣದ ಸಾರ್ವತ್ರೀಕರಣಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಪ್ರಾಂತ್ಯದಲ್ಲಿಯೂ ಇದೇ ರೀತಿಯ ಪ್ರಯತ್ನಗಳು ನಡೆದಿದ್ದವು ಮೈಸೂರಿನ ಮಹಾರಾಜರು ಶಿಕ್ಷಣದ ಸಾರ್ವತ್ರೀಕರಣಕ್ಕೆ ಇಂತಹುದೇ ಪ್ರಯತ್ನಗಳನ್ನು ನಡೆಸಿದ್ದರು.

ಮೈಸೂರು ರಾಜ್ಯಕ್ಕೆ ಒಂದು ಶಿಕ್ಷಣ ಯೋಜನೆಯನ್ನು ಅಂದಿನ ನ್ಯಾಯಾಂಗದ ಆಯುಕ್ತರು ಸಿದ್ದಪಡಿಸಿ, ೧೮೫೭ ರಲ್ಲಿ ಭಾರತ ಸರ್ಕಾರದ ಅನುಮೋದನೆ ಪಡೆದಿದ್ದರು. ೧೮೬೬ರಲ್ಲಿ ಶಿಕ್ಷಣ ಇಲಾಖೆಯನ್ನು ಬೇರ್ಪಡಿಸಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ವ್ಯಾಪ್ತಿಗೆ ತರುವುದರ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಹೊಸ ಚಾಲನೆ ನೀಡಲಾಯಿತು.

ಶಿಕ್ಷಣ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಸವಾಲುಗಳನ್ನು ಗುರುತಿಸಲಾಗಿದ್ದು ಕರ್ನಾಟಕ ರಾಜ್ಯ ಸರಕಾರವು ಶಾಲಾ ಶಿಕ್ಷಣ ಸಾರ್ವತ್ರೀಕರಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ಹಲವಾರು ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ.

- ಸಮುದಾಯವನ್ನು ಶಿಕ್ಷಣದ ಸಾರ್ವತ್ರೀಕರಣದಲ್ಲಿ ತೊಡಗಿಸಿಕೊಳ್ಳುವ ಮೊದಲ ಪ್ರಯತ್ನವಾಗಿ ದಿನಾಂಕ ೨೭ ಫೆಬ್ರುವರಿ ೧೯೮೮ ರಲ್ಲಿ ಸರಕಾರವು ಆದೇಶವೊಂದನ್ನು ಹೊರಡಿಸಿತು. ಈ ಆದೇಶದ ಅನ್ವಯ ರಾಜ್ಯದಲ್ಲಿ ಅಂದು ಜಾರಿಯಲ್ಲಿದ್ದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳನ್ನು ಮತ್ತು ಕೇಂದ್ರ ಸರಕಾರದ ಹೊಸ ಶಿಕ್ಷಣ ನೀತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಈ ಹಿಂದೆ

- ಅಸ್ತಿತ್ವದಲ್ಲಿದ್ದ "ಶಾಲಾಭಿವೃದ್ದಿ ಸಮಿತಿ"ಗಳನ್ನು "ಶೈಕ್ಷಣಿಕ ಸಮಿತಿ" ಗಳೆಂದು ಪುನರ್ ನಾಮಕರಣ ಮಾಡುವ ತೀರ್ಮಾನ ಕೈಗೊಳ್ಳಲಾಯಿತು. ಈ ಸಮಿತಿಯಲ್ಲಿ ಕೇವಲ ಜನಪ್ರತಿನಿಧಿಗಳು ಮತ್ತು ಊರಿನ ಗಣ್ಯವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.
- ಇದಾದ ನಂತರ ಜುಲೈ ೧೯೯೫ರಲ್ಲಿ ಪ್ರಾಥಮಿಕ ಶಿಕ್ಷಣದ ನಿರ್ದೇಶಕರು ರಾಜ್ಯದ ಎಲ್ಲಾ ಶಿಕ್ಷಣ ಉಪನಿರ್ದೇಶಕರಿಗೆ ಬರೆದ ಪತ್ರದಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ೯ ರಿಂದ ೧೧ ಜನರನ್ನೊಳಗೊಂಡ 'ಶಾಲಾಭಿವೃದ್ಧಿ ಸಮಿತಿ ರಚಿಸುವಂತೆ ಸೂಚನೆ ನೀಡಿದ್ದರು. ಅದರನ್ವಯ ಸಮಿತಿಯಲ್ಲಿ ಮೊದಲ ಬಾರಿಗೆ ಒಬ್ಬ ಪೋಷಕ ಪ್ರತಿನಿಧಿಗೆ ಅವಕಾಶ ಕಲ್ಪಿಸಲಾಗಿತ್ತು. ಆಗಸ್ಟ್ 1995ರಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸುವಂತೆ ಸರಕಾರ ಆದೇಶಿಸಿತು. ಈ ಸಮಿತಿಯಲ್ಲಿ ಕನಿಷ್ಠ ೭ ರಿಂದ ಗರಿಷ್ಠ ೧೫ ಸದಸ್ಯರಿದ್ದು ಪೋಷಕ ಪ್ರತಿನಿಧಿಯೊಬ್ಬರಿಗೆ ಅವಕಾಶ ಕಲ್ಪಿಸಲಾಗಿತ್ತು.
- ಒಟ್ಟಾರೆ ಸರ್ವ ಶಿಕ್ಷಣ ಅಭಿಯಾನದ ಪೂರ್ವದಲ್ಲಿದ್ದ ಶಾಲಾಭಿವೃದ್ಧಿ/ಶಿಕ್ಷಣ ಸಮಿತಿ/ಗ್ರಾಮ ಶಿಕ್ಸನ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ಹಲವು ಪ್ರಯತ್ನಗಳು ನಡೆದವು. ಇವುಗಳಲ್ಲಿ ಜನಪ್ರತಿನಿಧಿ ಮತ್ತು ಊರಿನ ಗಣ್ಯವ್ಯಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.
- ೧೯೯೯ರಲ್ಲಿ ರಚನೆಯಾದ ಶಿಕ್ಷಣ ಕಾರ್ಯಪಡೆಯ ವರದಿಯ ಶಿಫಾರಸ್ಸಿನಂತೆ ರಾಜ್ಯ ಸರಕಾರವು ೨೦೦೧ ರಲ್ಲಿ ರಾಜ್ಯದ ಎಲ್ಲಾ ಕಿರಿಯ ಪ್ರಾಥಮಿಕ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ ಮತ್ತು ಶಾಲಾಭಿವೃದ್ಧಿ ಸಮಿತಿಗಳ ಬದಲಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಆದೇಶ ನೀಡಿತು. ಈ ಆದೇಶದನ್ವಯ ಪ್ರತಿಯೊಂದು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಂದಿರು ಆ ಶಾಲೆಯ ತಂದೆ ತಾಯಿ ಪರಿಷತ್ತಿನ ಸದಸ್ಯರಾಗಿರುತ್ತಾರೆ. ತಂದೆ ತಾಯಿ ಪರಿಷತ್ತು ಒಂಬತ್ತು ಜನ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತದೆ. ಈ ಒಂಬತ್ತು ಜನರು ಸೇರಿ ಅವರಲ್ಲೇ ಒಬ್ಬರನ್ನು ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ಉಳಿದಂತೆ ಈ ಸಮಿತಿಯಲ್ಲಿ ಪದನಿಮಿತ್ತ ಮತ್ತು ನಾಮನಿರ್ದೇಶಿತ ಸದಸ್ಯರು ಇರುತ್ತಾರೆ.

ಈ ಸರಕಾರಿ ಆದೇಶವು ರಾಜ್ಯಾದ್ಯಂತ ಹೆಚ್ಚು ಉತ್ಸಾಹ ಮತ್ತು ಪರಿಣಾಮಕಾರಿಯಾಗಿ ಜಾರಿಗೊಂಡಿತು. ಹಾಗಾಗಿ ಎಲ್ಲಾ ಸರಕಾರಿ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಗಳು ರಚನೆಗೊಂಡವು ಲಭ್ಯ ದಾಖಲೆಗಳಂತೆ ೨೦೦೧ ಆಗಸ್ಟ್ ಅಂತ್ಯಕ್ಕೆ ಶೇಕಡ ೭೦ ರಿಂದ ೮೦ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ. ಗಳು ರಚಿತವಾಗಿ ಕಾರ್ಯ ನಿರ್ವಹಿಸಲು ಪ್ರಾರಂಭಿಸಿದವು. ಎಸ್.ಡಿ.ಎಂ.ಸಿ. ಗಳು ಮೂರು ವರ್ಷಗಳನ್ನು ಪೂರೈಸಿದ ಹಿನ್ನೆಲೆಯಲ್ಲಿ ಅವುಗಳ ಕಾರ್ಯಕ್ಷಮತೆಯನ್ನು ಸಮಗ್ರವಾಗಿ ಅಧ್ಯಯನ ಮಾಡಿದ ತಂಡವು ಕೆಳಗಿನ ಪ್ರಮುಖ ಶಿಫಾರಸ್ಸುಗಳನ್ನು ಮಾಡಿತ್ತು.

ಎಸ್.ಡಿ.ಎಂ.ಸಿ.ಗಳ ರಚನೆ ಮತ್ತು ಸ್ವರೂಪ:

೧. ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತ್ರಿಪಡಿಸಲು ಅಗತ್ಯವಾದ ಆಡಳಿತ ಮತ್ತು ಮೇಲುಸ್ತುವಾರಿಯನ್ನು ನಿರ್ವಹಿಸಲು ಶಾಲಾ ಹಂತದಲ್ಲಿ ಪ್ರಸ್ತುತ ಅಸ್ತಿತ್ವದಲ್ಲಿರುವ ವಿಕೇಂದ್ರೀಕರಣದ ಮೂಲ ಘಟಕವಾದ ಎಸ್.ಡಿ.ಎಂ.ಸಿ. ಗಳನ್ನು ಮುಂದುವರಿಸುವುದು.

೨. ಎಸ್.ಡಿ.ಎಂ.ಸಿ.ಗಳ ರಚನೆ ಮತ್ತು ದೈನಂದಿನ ಕಾರ್ಯನಿರ್ವಹಣೆಗೆ ಅಡ್ಡಿಯನ್ನುಂಟುಮಾಡುವ ರಾಜಕೀಯ ಹಸ್ತಕ್ಷೇಪವನ್ನು ತಡೆಗಟ್ಟಿ ಎಸ್.ಡಿ.ಎಂ.ಸಿ. ಗಳ ಸ್ವಾಯತ್ತತೆಯನ್ನು ಕಾಪಾಡುವುದು. ಈ ಮೂಲಕ ಎಸ್.ಡಿ.ಎಂ.ಸಿ.ಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಪ್ರಜಾಸತಾತ್ಮಕ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಿಕೊಳ್ಳುವುದು.

೩. ಎಸ್.ಡಿ.ಎಂ.ಸಿ. ಗಳ ರಚನೆಯಲ್ಲಿ ಉಂಟಾಗಿರುವ ಗೊಂದಲ ಮತ್ತು ದ್ವಂದ್ವಗಳನ್ನು ನಿವಾರಿಸುವ ಸಲುವಾಗಿ ಎಸ್.ಡಿ.ಎಂ.ಸಿಗೆ ಸಂಬಂಧಿಸಿದಂತೆ ದಿನಾಂಕ 28:04:2001 ರ ಪ್ರಥಮ ಸುತ್ತೋಲೆಯಲ್ಲಿರುವ ವಿಷಯಕ್ಕೆ ಧಕ್ಕೆಯಾಗದಂತೆ ಮಾರ್ಪಾಡುಗೊಳಿಸಿದ ಸುತ್ತೋಲೆಯನ್ನು ಜಾರಿಗೊಳಿಸುವುದು.

ಈ ಮಧ್ಯೆ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಯು ದಿನಾಂಕ ೦೬:೦೫:೨೦೦೪ ರಲ್ಲಿ ಸುತ್ತೋಲೆ ಒಂದನ್ನು ಹೊರಡಿಸಿ ಪಂಚಾಯತಿಗಳು ತಮ್ಮ ಕೆಲಸಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಅಗತ್ಯವಾದ ವಿಧಾನದ ಬಗ್ಗೆ ತಿಳಿಸಿತು. ಹೀಗೆ ಇಲ್ಲಿವರೆಗೆ ಸಮಾಂತರವಾಗಿ ಕೆಲಸ ನಿರ್ವಹಿಸುತ್ತಿದ್ದ ಹಲವಾರು ಸಮಿತಿಗಳನ್ನು ಪಂಚಾಯತಿಯ ಜೊತೆ ಬೆಸೆಯುವ ಕೆಲಸ ಪ್ರಾರಂಭವಾಯಿತು. ಈ ಪ್ರಕಾರವಾಗಿ ಪಂಚಾಯತ್ ಮತ್ತು ಶಾಲೆಗಳಿಗೆ ಸಂಪರ್ಕ ಏರ್ಪಟ್ಟಿತು.

ಪಂಚಾಯತ್ ವ್ಯವಸ್ಥೆ ಮತ್ತು ಎಸ್.ಡಿ.ಎಂ.ಸಿ. :

ಸಾಮಾಜಿಕ ಮತ್ತು ಆರ್ಥಿಕಾಭಿವೃದ್ದಿ ಕಾರ್ಯಕ್ರಮಗಳಲ್ಲಿ ಜನರು ಹೆಚ್ಚು ಹೆಚ್ಚು ಪರಿಣಾಮಕಾರಿಯಾಗಿ ಪಾಲ್ಗೊಳ್ಳುವಂತೆ ಮತ್ತು ಅಧಿಕಾರದ ವಿಕೇಂದ್ರಿಕರಣದ ಮೂಲಕ ಅಭಿವೃದ್ಧಿ ವಿಚಾರಗಳಲ್ಲಿ ಜನರು ಭಾಗವಹಿಸುವ ಮೂಲಕ ತೀರ್ಮಾನಿಸಲು ಅನುಕೂಲವಾಗುವಂತೆ ಸಂವಿಧಾನದ ೭೩ ನೇ ತಿದ್ದುಪಡಿಗನುಸಾರವಾಗಿ ನಮ್ಮ ರಾಜ್ಯದಲ್ಲಿ ಗ್ರಾಮ ತಾಲ್ಲೂಕು, ಮತ್ತು ಜಿಲ್ಲಾ ಮಟ್ಟಗಳಲ್ಲಿ ಚುನಾಯಿತ ಸಂಸ್ಥೆಗಳಿರುವ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆ ಸ್ಥಾಪಿಸಲಾಗಿದೆ. ಕರ್ನಾಟಕದ ಪಂಚಾಯತ್ ರಾಜ್ ಅಧಿನಿಯಮ ೧೯೯೩ ಪ್ರಕಾರ ಶಿಕ್ಷಣವನ್ನು ಒಳಗೊಂಡಂತೆ ಹಲವು ಅಭಿವೃದ್ಧಿ ಕಾರ್ಯಕ್ರಮಗಳ ಹೊಣೆಯನ್ನು ಪಂಚಾಯತಿಗೆ ವಹಿಸಲಾಗಿದೆ

ಪ್ರಕರಣ ೫೮ರ ಅಡಿಯಲ್ಲಿ ಗ್ರಾಮ ಪಂಚಾಯಿತಿಯ ಅನುಸೂಚಿ ೧ರಲ್ಲಿ ಪಟ್ಟಿಮಾಡಿರುವ ಕಾರ್ಯಗಳನ್ನು ನೆರವೇರಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅನುಸೂಚಿಯಲ್ಲಿರುವ ಹಲವು ಪಟ್ಟಿಗಳ ಪೈಕಿ

- ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಸೇರಿದಂತೆ ಶಿಕ್ಷಣ
- ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣ
- ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಕೆಲಸಗಳು

ಇವುಗಳು ಗ್ರಾಮಪಂಚಾಯತಿ ನಿರ್ವಹಿಸಬೇಕಾದ ಪ್ರಮುಖ ಕೆಲಸಗಳಾಗಿರುತ್ತವೆ. ಈ ಎಲ್ಲಾ ಕೆಲಸಗಳ ಜೊತೆಗೆ ಪ್ರಕರಣ ೫೮ (೧ಎ) ಅಡಿಯಲ್ಲಿ ಅನುಸೂಚಿಯಲ್ಲಿರುವ ಪಟ್ಟಿಯ ಜೊತೆಗೆ ಪಂಚಾಯಿತಿಯ ಕಡ್ಡಯವಾಗಿ ಕಲ್ಪಿಸಲೇಬೇಕಾದ ಸೌಲಭ್ಯಗಳ ಬಗ್ಗೆ ಸೂಚಿಸಲಾಗಿದೆ. ಈ ಪಟ್ಟಿಯಲ್ಲು ಪ್ರಾಥಮಿಕ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಪಂಚಾಯಿತಿಯ ಕಡ್ಡಾಯ ಜವಾಬ್ದಾರಿಯಾಗಿರುತ್ತದೆ.

ಮೇಲೆ ತಿಳಿಸಿದಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸಿ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವುದು ಪಂಚಾಯಿತಿಯ ಅಂದರೆ ನಾಗರಿಕ ಸೌಕರ್ಯ ಸಮಿತಿಯ ಜವಾಬ್ದಾರಿಯಾಗಿರುತ್ತದೆ. ಪಂಚಾಯಿತಿ ಅಧ್ಯಕ್ಷರನ್ನು ಒಳಗೊಂಡಂತೆ ೩ ರಿಂದ ೫ ಸದಸ್ಯರನ್ನು ಸಮಿತಿ ಹೊಂದಿರುತ್ತದೆ. ಎಸ್.ಡಿ.ಎಂ.ಸಿ.ಯ ಉಪವಿಧಿಗಳಿಗೆ ಸಂಬಂಧಿಸಿದಂತೆ, ಪ್ರತಿಯೊಂದು ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣದ ಜವಾಬ್ದಾರಿ ನಾಗರಿಕ ಸೌಕರ್ಯ ಸಮಿತಿಯದ್ದಾಗಿದೆ. ನಾಗರಿಕ ಸೌಕರ್ಯ ಸಮಿತಿಯ ಅಡಿಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವುದರ ಮೂಲಕ ಎಸ್.ಡಿ.ಎಂ.ಸಿ. ಗಳಿಗೆ ಶಾಸನ ಬದ್ದ ಸ್ಥಾನವನ್ನು ಕಲ್ಪಿಸಲಾಗಿದೆ. ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಹಜ ತಂದೆ ತಾಯಿಗಳು ಮಾತ್ರ ಸೇರಿ ರಚಿಸುವ ಈ ಎಸ್.ಡಿ.ಎಂ.ಸಿ.ಗಳು ಆಶಾದಾಯಕವಾಗಿ ಸ್ಪಂದಿಸಿರುವುದು ನಮ್ಮ ಸುತ್ತಮುತ್ತ ಕಾಣಬಹುದಾಗಿದೆ.

ಎಸ್.ಡಿ.ಎಂ.ಸಿ. ಮತ್ತು ಶಾಲೆಗಳ ನಡುವಣ ಸಂಬಂಧಗಳು

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಶಾಲೆಯ ಸಾಂಸ್ಥಿಕ ಭಾಗವಾಗಿದ್ದು ಶಾಲೆಯ ಸರ್ವಾಂಗೀಣ ಅಭಿವೃದ್ಧಿಯ ಪೂರ್ಣ ಜವಾಬ್ದಾರಿಯನ್ನು ಹೊಂದಿದೆ. ಶಾಲೆಯ ವ್ಯಾಪ್ತಿಗೆ ಸೇರುವ ಎಲ್ಲಾ ಜನವಸತಿ ಪ್ರದೇಶಗಳಲ್ಲಿ ಹುಟ್ಟಿನಿಂದ ೧೪ ವರ್ಷದ ಮಕ್ಕಳಿಗೆ ಸೂಕ್ತ ಆರೈಕೆ, ಶಿಕ್ಷಣ, ಪೋಷಣೆ ಮತ್ತು ರಕ್ಷಣೆ ಒದಗಿಸುವ ಜವಾಬ್ದಾರಿ ಎಸ್.ಡಿ.ಎಂ.ಸಿ.ಯದ್ದಾಗಿದೆ. ಎಸ್.ಡಿ.ಎಂ.ಸಿ.ಗಳು ಶಾಲೆಯ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಭೆ ಸೇರಿ ಶಾಲೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಚಿಂತಿಸಿ, ವಾಸ್ತವಿಕವಾಗಿ ಅನುಷ್ಠಾನಗೊಳಿಸಬಹುದಾದ ಕ್ರಿಯಾ ಯೋಜನೆಯನ್ನು ತಯಾರಿಸಿ, ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಶಾಲೆಯ ಅಭಿವೃದ್ಧಿಗೆ ಮಾತ್ರ ಪ್ರಯತ್ನಿಸದೆ ಸಾರ್ವತ್ರೀಕರಣದ ಎಲ್ಲಾ ಆರು ಅಂಶಗಳಿಗೆ ಒತ್ತು ನೀಡಬೇಕಾಗಿದೆ.

ಶಾಲೆಗೆ ಅಗತ್ಯವಾದ ಭೌತಿಕ ಸೌಲಭ್ಯಗಳು ಶಾಲಾ ವ್ಯಾಪ್ತಿಗೆ ಬರುವ ಎಲ್ಲಾ ಮಕ್ಕಳ ದಾಖಲಾತಿ, ಹಾಜರಾತಿ, ಎಲ್ಲಾ ಮಕ್ಕಳಿಗೆ ಸರಕಾರದಿಂದ ಸಿಗಬೇಕಾದ ಉಚಿತ ಉತ್ತೇಜಕಗಳ ಸಕಾಲಿಕ ಹಾಗೂ ಸಮಂಜಸ ವಿತರಣೆಯನ್ನು ಖಾತ್ರಿಪಡಿಸಿಕೊಳ್ಳಬೇಕು. ಎಸ್.ಡಿ.ಎಂ.ಸಿ.ಯು ಪಾಲಕಸದಸ್ಯರು ಮತ್ತು ಸಮುದಾಯ ಎಸ್.ಡಿ.ಎಂ.ಸಿ. ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು ಮತ್ತು ಶೈಕ್ಷಣಿಕ ಆಡಳಿತ ವ್ಯವಸ್ಥೆಗೆ ಸಂಬಂಧಿಸಿದ

ಅಧಿಕಾರಿಗಳ ಜೊತೆ ಸಂಪರ್ಕವಿಟ್ಟುಕೊಂಡು ಶಾಲೆಯ ಅಗತ್ಯ ಮತ್ತು ಆಡಳಿತಕ್ಕೆ ಸಂಬಂಧಿಸಿದ ಸಂವಹನೆಯನ್ನು ಪರಿಣಾಮಕಾರಿಯಾಗಿ ನಡೆಸಲು ಅನುವಾಗುವಂತೆ ಕಾರ್ಯ ನಿರ್ವಹಿಸಬೇಕಾಗುತ್ತದೆ. ಎಸ್.ಡಿ.ಎಂ.ಸಿ.ಗಳು ಶಾಲೆಯ ಮತ್ತೊಂದು ಮುಖವಾದ ಶಿಕ್ಷಕರು ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಸಹಾಯವಾಗುವ ವಾತಾವರಣವನ್ನು ಸೃಷ್ಟಿಸುವುದು ಮತ್ತು ಸಮುದಾಯದ ಭಾಗವಹಿಸುವಿಕೆಗೆ ಪ್ರೇರೇಪಣೆ ಮತ್ತು ಬೆಂಬಲ ನೀಡುವ ಕೆಲಸವನ್ನು ನಿರಂತರವಾಗಿ ನಡೆಸಬೇಕು. ಹಾಗಾದಾಗ ಮಾತ್ರ ಸಮುದಾಯ ಮತ್ತು ಶಾಲೆಗಳ ನಡುವಿನ ಅಂತರ ಕಡಿಮೆಯಾಗುತ್ತದೆ ಎನ್ನುವದು ಸ್ಪಷ್ಟ.

ಎಸ್.ಡಿ.ಎಂ.ಸಿ.ಗಳು ಶಾಲಾ ವ್ಯವಸ್ಥೆಯ ಕೇಂದ್ರಬಿಂದುವಾದ ಮಕ್ಕಳು, ಶಿಕ್ಷಕರು, ಪಾಲಕರ, ನಡುವಿನ ಸೇತುವಾಗಿ ಕಾರ್ಯನಿರ್ವಹಿಸುವುದರ ಮೂಲಕ ಪಾಲಕರು ಮತ್ತು ಶಿಕ್ಷಕರು ಗುಣಾತ್ಮಕ ಶಿಕ್ಷಣದಡಿ ಅಭಿವೃದ್ಧಿಗೆ ಎಲ್ಲಾ ರೀತಿಯಲ್ಲೂ ನೆರವಾಗುವಂತೆ ತಮ್ಮ ಅಗತ್ಯ ಮತ್ತು ಸಮಸ್ಯೆಗಳನ್ನು ಶಿಕ್ಷಕರಲ್ಲಿ ಮತ್ತು ಪಾಲಕರಲ್ಲಿ ಹಂಚಿಕೊಳ್ಳಬೇಕು. ಎಸ್.ಡಿ.ಎಂ.ಸಿ. ಮತ್ತು ಶಾಲೆಯ ಕೇಂದ್ರ ಬಿಂದು ಮಗುವಾಗಿರುವುದರಿಂದ ಎಸ್.ಡಿ.ಎಂ.ಸಿ. ಮತ್ತು ಶಾಲೆ ಒಟ್ಟಾರೆ ತೆಗೆದುಕೊಳ್ಳುವ ಎಲ್ಲಾ ತೀರ್ಮಾನಗಳು ಮತ್ತು ಕಾರ್ಯಕ್ರಮಗಳು ಮಕ್ಕಳ ದೃಷ್ಟಿಯಿಂದ ಕೂಡಿರಬೇಕು.

ಈ ಎಲ್ಲಾ ಪ್ರಕ್ರಿಯೆಗಳಲ್ಲಿ ಮಕ್ಕಳು ಕೂಡಾ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡುತ್ತಾ ಒಂದು ಉತ್ತಮ ಕಲಿಕಾ ವಾತಾವರಣವನ್ನು ನಿರ್ಮಾಣಮಾಡುವುದು ಎಸ್.ಡಿ.ಎಂ.ಸಿ. ಮತ್ತು ಶಾಲೆಯ ಪ್ರಮುಖ ಗುರಿಯಾಗಿದೆ.

ಗುಣಾತ್ಮಕ ಶಿಕ್ಷಣ ಖಾತ್ರಿಯಲ್ಲಿ ಕರ್ನಾಟಕದ ಶಾಲೆಗಳಲ್ಲಿ ಅರ್ಥಪೂರ್ಣ ಸಮುದಾಯ ಭಾಗವಹಿಸುವಿಕೆ:

ಗುಣಮಟ್ಟದ ಶಿಕ್ಷಣದ ಕನಸು ನನಸಾಗಬೇಕಾದರೆ ಶಿಕ್ಷಣದ ಪ್ರಮುಖ ಪಾಲುದಾರರಾಗಿರುವ ಸಮುದಾಯ ವಿಶಿಷ್ಟ ಜವಾಬ್ದಾರಿ ಹೊಂದಿದೆ. ನಿರಂತರವಾದ ಮೇಲುಸ್ತುವಾರಿಗಾಗಿ ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಕಲಿಕೆ ಮತ್ತು ಬೋಧನೆಗೆ ಸಂಬಂಧಿಸಿದ ಚರ್ಚೆಗಳು ನಡೆಯಬೇಕು. ಶಾಲೆಯು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತಾಗಲು ಅವಶ್ಯವಿರುವ ಪೂರಕ ವ್ಯವಸ್ಥೆಗಳಾದ ಅಂಗನವಾಡಿ, ಆರೋಗ್ಯಕೇಂದ್ರ, ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಸಮಾಜ ಕಲ್ಯಾಣ ಇಲಾಖೆ, ಸಮುದಾಯ ಕೇಂಧ್ರಿತ ಸಂಘಟನೆಗಳು, ಸರಕಾರೇತರ ಸಂಘ ಸಂಸ್ಥೆಗಳ ನಡುವೆ ಸಮನ್ವಯತೆ ಸಾಧಿಸುವ ಅಗತ್ಯವನ್ನು ಪುಷ್ಟೀಕರಿಸುವ ಜವಾಬ್ದಾರಿ ಸಮುದಾಯದ್ದಾಗಿದೆ.

ಪ್ರಜಾಪ್ರಭುತ್ವ ಮತ್ತು ಸಮಾನತೆ, ಸಾಮಾಜಿಕ ನ್ಯಾಯದಿಂದಿರುವ ಅನುಕೂಲಗಳನ್ನು ಸಮುದಾಯದಲ್ಲಿ ಹುಟ್ಟುಹಾಕಿ ಗ್ರಾಮದಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರಜಾಸತ್ತೆಯ ಸಂಸ್ಥೆಗಳನ್ನುಬಳಸುವಂತಾಗಿಸುವ ಮಹತ್ತರವಾದ ಕಾರ್ಯ ಸಮುದಾಯವೇ ನಿರ್ವಹಿಸುವ ಅನಿವಾರ್ಯತೆ ಇದೆ. ವ್ಯವಸ್ಥೆಯ ಬುನಾದಿ ಎಣಿಸಿಕೊಂಡಿರುವ ಗ್ರಾಮ ಪಂಚಾಯತಿಯ ಸಭೆಗಳಲ್ಲಿ, ಪಂಚಾಯತಿಯ ಜೀವಾಳವೆಣಿಸಿರುವ ಗ್ರಾಮಸಭೆಗಳಲ್ಲಿ/ವಾರ್ಡ್ ಸಭೆಗಳಲ್ಲಿ

ವ್ಯಾಪ್ತಿಯ ಶಾಲಾ ಶಿಕ್ಷಣದ ಸ್ಥಿತಿಗತಿಯನ್ನು ಚರ್ಚೆಗೆ ತಂದು ಸಮಂಜಸವಾದ ನಿರ್ಣಯಗಳನ್ನು ಕಂಡುಕೊಳ್ಳುವುದು ಎಸ್.ಡಿ.ಎಂ.ಸಿ. ಗಳ ಜವಾಬ್ದಾರಿ ಎಣಿಸಿಕೊಂಡಿದೆ. ಗ್ರಾಮ ಅಭಿವೃದ್ಧಿಗೆ ಮತ್ತು ವ್ಯಕ್ತಿಗಳ ವೈಯಕ್ತಿಕ ಕಲಿಕೆಗೆ ಸೂಕ್ಷ್ಮವಾದ ಸಂಬಂಧವನ್ನು ಸಮುದಾಯಕ್ಕೆ ಮನದಟ್ಟಾಗಿಸುವ ಅಗ್ರತ್ಯತೆಯನ್ನು ಸಮುದಾಯ ಕಂಡುಕೊಳ್ಳಬೇಕಾಗಿದೆ. ಮಕ್ಕಳು ತಮ್ಮ ಕಲಿಕೆಯನ್ನು ಅಭಿವ್ಯಕ್ತಿಸಲು, ಅನ್ವೇಷಿಸಲು ಸಮುದಾಯ ಕಟ್ಟುನಿಟ್ಟಾದ ಬೆಂಬಲ ನೀಡಬೇಕಾಗುತ್ತದೆ.

ಜನ ಸಮುದಾಯಕ್ಕೆ ಶೈಕ್ಷಣಿಕ ಯೋಜನೆಗಳ ಸ್ಪಷ್ಟ ಕಲ್ಪನೆ ಇರುವುದು ಅಗತ್ಯ. ಚಾಲ್ತಿಯಲ್ಲಿರುವ ಯೋಜನೆಗಳ ಮೌಲ್ಯಮಾಪನ ಮಾಡಿ, ಹೊಸ ಯೋಜನೆಗಳನ್ನು ಅನುಷ್ಠಾನ ಮಾಡುವ ಮೊದಲು ಲೋಪದೋಷಗಳಿದ್ದರೆ ಚರ್ಚಿಸಿ ಸರಿಪಡಿಸಿಕೊಂಡು ಮುಂದುವರಿಯಬೇಕಾಗುತ್ತದೆ. ಮಕ್ಕಳ ಶೈಕ್ಷಣಿಕ ಅಗತ್ಯತೆಯನ್ನು ಸ್ಥಳೀಯವಾಗಿ ಗುರುತಿಸಿ ತಳಮಟ್ಟದಿಂದಲೇ ಶೈಕ್ಷಣಿಕ ಯೋಜನೆಗಳು ರೂಪಿತವಾದಾಗ ಸಮುದಾಯ ಹೆಚ್ಚು ಜವಾಬ್ದಾರಿಯಿಂದ ಅನುಷ್ಠಾನ ಪ್ರಕ್ರಿಯೆಯಲ್ಲಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಅನುವಾಗುತ್ತದೆ. ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಸ್.ಡಿ.ಎಂ.ಸಿ. ಬರುವುದರಿಂದ ಅದು ಈಗ ಸಂವಿಧಾನ, ಕಾನೂನುಬದ್ಧವಾದ ಪ್ರಜಾಪ್ರಭುತ್ವದ ತಳಹದಿಯಲ್ಲಿ ರಚನೆಗೊಂಡ ಸ್ಥಳೀಯ ಶೈಕ್ಷಣಿಕ ಸರಕಾರದ್ದಾಗಿದೆ. ಗುಣಮಟ್ಟದ ಕಲಿಕೆಗೆ ತಳಮಟ್ಟದಿಂದಲೇ ಸಮುದಾಯ ಸ್ಪಂದಿಸಿದಾಗ ಮಾತ್ರ ಅದು ಅರ್ಥಪೂರ್ಣಗೊಳ್ಳುತ್ತದೆ. ಒಟ್ಟಾರೆ ಹೇಳುವುದಾದರೆ ಸಮುದಾಯವನ್ನು ಸಂಪೂರ್ಣವಾಗಿ ತೊಡಗಿಸುವುದರ ಮೂಲಕ ಗುಣಮಟ್ಟದ ಶಿಕ್ಷಣ ಸಾಧಿಸಲು ಸಾಧ್ಯ. ಶಿಕ್ಷಣದ ಪ್ರಮುಖ ವಾರಸುದಾರರೆಲ್ಲ ಚರ್ಚಿಸಿ ತೀರ್ಮಾನಗಳನ್ನು ತೆಗೆದುಕೊಂಡು ಒಟ್ಟು ವ್ಯವಸ್ಥೆಯನ್ನು ಸಬಲೀಕರಿಸಬೇಕಾಗಿದೆ.

ಗುಣಾತ್ಮಕ ಕಲಿಕೆಯನ್ನು ವಿಶಾಲಾರ್ಥದಲ್ಲಿ ಈ ಕೆಳಗಿನಂತೆ ಪರಿಭಾವಿಸಿಕೊಳ್ಳಬಹುದಾಗಿದೆ ಲಿಂಗ ಹಾಗೂ ಸಾಮಾಜಿಕ ಗುಂಪುಗಳ ಸಾಮರ್ಥ್ಯಗಳನ್ನು ಕಾಲಕಾಲಕ್ಕೆ ಪಡೆದುಕೊಂಡು ಮೇಲಿನ ತರಗತಿಗಳಿಗೆ ಪ್ರಗತಿ ಹೊಂದುವುದು ಹಾಗೂ ವಯಸ್ಸಿಗೆ ತಕ್ಕಂತೆ ಜೀವನ ಕೌಶಲ್ಯಗಳನ್ನು ಪಡೆದು ತಮ್ಮ ಸಂಪೂರ್ಣ ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳುವುದೇ ಗುಣಮಟ್ಟದ ಶಿಕ್ಷಣ. ಒಟ್ಟಾರೆ ಒಂದು ಮಗುವಿನ ಅಭಿವ್ಯಕ್ತಿ ಶಕ್ತಿ, ಅನ್ವೇಷಣಾ ಶಕ್ತಿ , ಅರ್ಥಶಕ್ತಿ ಮತ್ತು ಆಲೋಚನಾ ಶಕ್ತಿ, ಸಹಜ ಸನ್ನಿವೇಶಗಳಲ್ಲಿ ಅಭಿವೃದ್ದಿ ಹೊಂದುವುದೇ ಗುಣಾತ್ಮಕ ಶಿಕ್ಷನವೆಂದು ಕರೆಯಬಹುದಾಗಿದೆ ಗುಣಾತ್ಮಕ ಕಲಿಕೆಯ ಎಲ್ಲಾ ವ್ಯಾಖ್ಯಾನಗಳಲ್ಲಿ ಇರುವ ಅಂಶಗಳನ್ನು ಪ್ರಮುಖವಾಗಿ ಎರಡು ಅಂಶಗಳಾಗಿ ಗುರುತಿಸಿಕೊಳ್ಳಲಾಗಿದೆ

೧. ಶಾಲೆ ನೆಲೆಗೊಂಡಿರುವ ಸಾಮಾಜಿಕ ರಚನೆಯ ಅಂಶಗಳು (ಕೌಟುಂಬಿಕ ರಚನೆ, ಆದಾಯ, ಮಗುವಿನ ತಂದೆ-ತಾಯಿ ವೃತ್ತಿ, ಧರ್ಮ, ಜಾತಿ ಭಾಷೆ, ಉಪಭಾಷೆ ಬೌಗೋಳಿಕ ಪರಿಸರ ಇತ್ಯಾದಿ)
೨. ಶಾಲಾ ಪ್ರಕ್ರಿಯೆಯ ಒಳಗಿರುವ ಅಂಶಗಳು (ಶಾಲೆ, ಶಿಕ್ಷಕರು, ಕಲಿಕಾ ಮತ್ತು ಬೋಧನಾ ಉಪಕರಣಗಳು, ಪಠ್ಯಕ್ರಮ, ಶಿಕ್ಷಕರ ತರಬೇತಿ, ಶಾಲಾ ಆಡಳಿತ ಇತ್ಯಾದಿ)

ಈ ಎರಡು ಅಂಶಗಳು ಒಂದಕ್ಕೊಂದು ಪರಿಣಾಮಕಾರಿಯಾಗಿ ಸಂಯೋಜನೆಗೊಂಡಾಗ ಮಾತ್ರ ಗುಣಮಟ್ಟದ ಕಲಿಕೆ ಸಾಧ್ಯ. ಶಿಕ್ಷಣ ಪ್ರಕ್ರಿಯೆ ಸಮುದಾಯಕ್ಕೆ ಪೂರಕವಾಗಿ ಮಗು ಬೆಳೆಯಲು ಪೂರಕವಾಗಿ ಜೀವನ ಕೌಶಲ್ಯಗಳನ್ನು ಮಗು ತನ್ನದಾಗಿಸಿಕೊಳ್ಳಲು ಶ್ರಮಿಸಿದಾಗ ಮಾತ್ರ ಶಿಕ್ಷಣ ಅರ್ಥಪೂರ್ಣವಾಗುವುದು. ಹಾಗಾಗಿ ಸಮುದಾಯದ ಭಾಗವಹಿಸುವಿಕೆ ಶಿಕ್ಷಣ ಪ್ರಕ್ರಿಯೆಯ ಪ್ರತೀ ಹಂತದಲ್ಲಿಯೂ ಅವಶ್ಯಕ. ಪ್ರಾದೇಶಿಕ ಮಟ್ಟದ ಸಮಸ್ಯೆಗಳಿಗೆ ಉತ್ತರವಾಗಿ

ಮಗು ಚಿಂತನೆ ಬೆಳೆಸಿಕೊಳ್ಳಲು ಪೂರಕವಾದ ಕಲಿಕೆ ಸಾಧ್ಯವಾಗಬೇಕಾದದ್ದರಿಂದ ಶಿಕ್ಷಣ ಪ್ರಕ್ರಿಯೆಯ ಜವಾಬ್ದಾರಿಯನ್ನು ಸಮುದಾಯ ವಹಿಸಿಕೊಳ್ಳಲೇ ಬೇಕಾದ ಅವಶ್ಯಕತೆ ಇದೆ ಎನ್ನುವುದು ಹಲವಾರು ಅಧ್ಯಯನಗಳಿಂದ ಸಾಬೀತಾಗಿದೆ. ಪೋಷಕರು ಹಾಗೂ ಸ್ಥಳೀಯ ಸಮುದಾಯ ಶಾಲಾ ಹಂತದಲ್ಲಿ ತಮ್ಮ ಮಕ್ಕಳ ಕಲಿಕಾ ಮಟ್ಟವನ್ನು ಬಿನ್ನವಾದ ರೀತಿಯಲ್ಲಿ ಪರಿಭಾವಿಸಿಕೊಂಡಿರುವುದನ್ನು ಅನೇಕ ಶೈಕ್ಷಣಿಕ ಮತ್ತು ಸಮಾಜ ಸಂಶೋಧನೆಗಳು ಗುರುತಿಸಿವೆ. ಈ ಹಿನ್ನೆಲೆಯಲ್ಲಿ ಗುಣಮಟ್ಟದ ಕಲಿಕೆಯ ಚರ್ಚೆಗಳು ಎಸ್.ಡಿ.ಎಂ.ಸಿ ಸಭೆಗಳಲ್ಲಿ ಆಗಾಗ ನಡೆಯಬೇಕು, ಈ ಕೆಳಗಿನಂತೆ ಸಮುದಾಯ ಗುಣಮಟ್ಟದ ಕಲಿಕೆಯನ್ನು ಪರಿಭಾವಿಸಿಕೊಳ್ಳಬೇಕು ಎಂದು ನಿರೀಕ್ಷಿಸಲಾಗಿದೆ.

- ಕಲಿಕೆಯ ಕನಿಷ್ಠ ಮಟ್ಟದ ಮೂಲಕ ಗುಣಾತ್ಮಕ ಕಲಿಕೆ, ಆಯಾ ತರಗತಿಗಳಿಗೆ ನಿಗದಿಪಡಿಸಿದ ವಿಷಯಗಳ (ಭಾಷೆ, ಗಣಿತ, ಪರಿಸರ) ಭಾಗವನ್ನು ಪ್ರತೀ ಮಗುವೂ ಪರಿಪೂರ್ಣವಾಗಿ ಕಲಿಯಬೇಕು.
- ಸಮುದಾಯ ಮತ್ತು ಸ್ಥಳೀಯ ಪರಿಸರ ಮಗುವಿನ ಕಲಿಕೆಗೆ ಇರುವ ಪ್ರಾಥಮಿಕ ಸನ್ನಿವೇಶ. ಮಗುವು ತನ್ನ ಸಾಮಾಜಿಕ ಸನ್ನಿವೇಶಗಳಿಗೆ ಅನುಗುಣವಾಗಿ ಜ್ಞಾನವನ್ನು ಕಟ್ಟಿಕೊಳ್ಳುತ್ತದೆ ಮತ್ತು ಸಂಗತಿಗಳನ್ನು ಗ್ರಹಿಸುತ್ತದೆ. ಇವು ಮಗುವಿನ ಸ್ವಂತ ಅನುಭವಕ್ಕೆ ಇರುವ ಉತ್ತಮ ಪ್ರಾರಂಭಿಕ ಹೆಜ್ಜೆ.
- ಮಗು ತನ್ನ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವಲ್ಲಿ ಕಲಿಕೆಯ ಕಲಿಕೆಯ ಜ್ಞಾನವನ್ನು ಬಳಸುವ ಕೌಶಲ್ಯವನ್ನು ಪಡೆಯಬೇಕು. ಶಿಕ್ಷಣವೆಂದರೆ ಒಂದು ಸಮುದಾಯದ ಬದುಕಿನ ಬಹು ಆಯಾಮಗಳುಳ್ಳ ಕಲೆ ಮತ್ತು ಕುಶಲತೆಯನ್ನು ರೂಡಿಸಿಕೊಳ್ಳುವುದು.
- ಶಿಕ್ಷಣವು ತನ್ನ ನಾಗರಿಕರಿಗೆ ಇತರರೊಡನೆ ಸಭ್ಯತೆಯಿಂದ, ಸಹಬಾಳ್ವೆಯಿಂದ ಮತ್ತು ಕಾರ್ಯಕುಶಲತೆಯಿಂದ ಬದುಕಲು ಅಗತ್ಯವಾದ ಗುಣಗಳನ್ನು ಪೋಷಿಸುವಂತಿರಬೇಕು.
- ಲಿಂಗ ಹಾಗೂ ಸಾಮಾಜಿಕ ಗುಂಪುಗಳ ಬೇಧವಿಲ್ಲದೆ ಶಾಲೆಯ ಎಲ್ಲಾ ಮಕ್ಕಳು ತರಗತಿ ಹಾಗೂ ವಿಷಯವಾರು, ನಿರೀಕ್ಷಿತ ಸಾಮರ್ಥ್ಯಗಳನ್ನು ಕಾಲಕಾಲಕ್ಕೆ ಪಡೆದುಕೊಂಡು ಮುಂದಿನ ತರಗತಿಗಳಿಗೆ ಪ್ರಗತಿ ಹೊಂದುವುದು ಹಾಗೂ ವಯಸ್ಸಿಗೆ ತಕ್ಕಂತೆ ಜೀವನ ಕೌಶಲ್ಯಗಳನ್ನು ಪಡೆದು ತಮ್ಮ ಸಂಪೂರ್ಣ ವ್ಯಕ್ತಿತ್ವ ವಿಕಸನಗೊಳಿಸಿಕೊಳ್ಳುವುದೇ ಗುಣಮಟ್ಟದ ಶಿಕ್ಷಣ.

ಈ ಮೇಲಿನ ಅಂಶಗಳ ಅತ್ಯುತ್ತಮ ಖಾತ್ರಿಗಾಗಿ ಎಸ್.ಡಿ.ಎಂ.ಸಿ ಗಳು ಶ್ರಮಿಸಬೇಕೆಂದು ನಿರೀಕ್ಷಿಸಲಾಗಿದೆ ಅದಕ್ಕಾಗಿ ಅವರು

೧. ಶಿಕ್ಷಕರು ಹಾಗೂ ಇತತರು ಮಕ್ಕಳನ್ನು ಸಹಜ ವಿಶ್ವಾಸ ಮತ್ತು ಪ್ರೀತಿಯಿಂದ ಮಾತನಾಡಿಸಬೇಕು
೨. ಮಗುವಿನೊಂದಿಗೆ ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ ಭರವಸೆ ಮೂಡಿಸಬೇಕು,
೩. ಭರವಸೆ ಮೂಡಿಸುವ ಕಲಾಪಗಳು ತರಗತಿ ಪ್ರಕ್ರಿಯೆಯ ಭಾಗವಾಗಬೇಕು ಇದು ತೋರ್ಪಡಿಕೆಯಾಗಿರದೆ ಅರಿವಿನಿಂದ ಸ್ವಲ್ಪವಾಗಿ ಮಗುವಿನ ಅಂತರ್ಗತಗೊಳ್ಳಬೇಕು.

ಸಮುದಾಯ/ಎಸ್.ಡಿ.ಎಂಸಿಯವರು ಶಾಲೆ, ಶಿಕ್ಷಕರು ಮತ್ತು ಮುಖ್ಯೋಪಾಧ್ಯಾಯರಿಗೆ ಗುಣಾತ್ಮಕ ಕಲಿಕೆಗೆ ಸಂಬಂಧಿಸಿದ ಸ್ವಯಂ ಮೌಲ್ಯಮಾಪನ ನಮೂನೆ ಬಳಸುವಂತೆ ತಿಳಿಸಬೇಕೆಂದು ನಿರೀಕ್ಷಿಸಲಾಗಿದೆ. ಗುಣಾತ್ಮಕ ಉಸ್ತುವಾರಿ ನಮೂನೆಗಳು ಗುಣಾತ್ಮಕ ಶಿಕ್ಷಣವನ್ನು ದೃಡೀಕರಿಸುವ ನಿಟ್ಟಿನಲ್ಲಿ ಉತ್ತಮ ಹೆಜ್ಜೆ. ಶಾಲೆಯಲ್ಲಿ ಇದರ ಬಳಕೆಬಗ್ಗೆ ಅವಲೋಕಿಸಬೇಕು. ಶಾಲೆಗೆ ಕನಿಷ್ಠ ಮಾಸಿಕ ಒಂದುಬಾರಿ ಭೇಟಿ ಮಾಡಿ ಮಕ್ಕಳ ದಾಖಲಾತಿ, ಮತ್ತು ಹಾಜರಾತಿಯನ್ನು , ಸಮುದಾಯದ ಮುಖಂಡರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರ ದಾಖಲೆ, ಗುರುತಿಸಲಾಗಿರುವ ಸಮಸ್ಯೆ, ಪರಿಹಾರಗಳು ಹಾಗೂ ಅಭಿಪ್ರಾಯ ಸಂಗ್ರಹ, ವಿದ್ಯಾರ್ಥಿಗಳ ನಿರಂತರ ಮೌಲ್ಯಮಾಪನಕ್ಕೆ ಸಂಬಂಧಿಸಿದ ದಾಖಲೆಗಳನ್ನು ಅವಲೋಕಿಸಬೇಕು ಎಂಬ ಆಶಯ ಹೊಂದಲಾಗುತ್ತದೆ.

ಶಿಕ್ಷಣದ ಮೂಲಕ ಅಭಿವೃದ್ಧಿ ಸಾಧಿಸುವಂತಾಗಲು ಶಾಲೆಗಳಲ್ಲಿ ಸಮುದಾಯದ ಭಾಗವಹಿಸುವಿಕೆಗೆ ಈ ಕೆಳಗಿನ ಅಂಶಗಳು ಜಾರಿಗೆ ಬರುವಂತೆ ನೋಡಿಕೊಳ್ಳಬೇಕು ಎಂದು ಇಲಾಖೆ ಸ್ಪಷ್ಟಪಡಿಸಿದೆ

* ಎಸ್.ಡಿ.ಎಂ.ಸಿ ಮಾಸಿಕ ಸಭೆಗಳಲ್ಲಿ ಕಲಿಕೆ ಮತ್ತು ಬೋಧನೆಗೆ ಸಂಬಂಧಿಸಿದಂತೆ ಚರ್ಚಿಸುವಂತಾಗಬೇಕು. ಇದಕ್ಕೆ ಗ್ರಾಮಗಳಲ್ಲಿ ಪ್ರಜಾಸತ್ತೆಯಲ್ಲಿ ರೂಪುಗೊಂಡಿರುವ ಸಣ್ಣ ಪುಟ್ಟ ಸಂಸ್ಥೆಗಳನ್ನು ಬಳಸುವಂತಾಗಬೇಕು.

* ತ್ರೈಮಾಸಿಕವಾಗಿ ಎಸ್.ಡಿ.ಎಂ.ಸಿ ಯವರು , ಪೋಷಕರು ಸಭೆ ಸೇರಿ ಮಕ್ಕಳ ಮತ್ತು ಗುಣಮಟ್ಟದ ಶಿಕ್ಷಣದ ಕುರಿತು ಚರ್ಚೆ ನಡೆಸಿ ಮಾಹಿತಿ ಸಂಗ್ರಹಿಸಬೇಕು. ಕಂಡು ಬಂದ ಕೊರತೆಗಳನ್ನು ಸರಿಪಡಿಸಲು ಕ್ರಮ ಮಾಡಬೇಕು.

* ವೈಯಕ್ತಿಕ ಕಲಿಕೆಗೂ ಗ್ರಾಮದ ಅಭಿವೃದ್ಧಿಗೂ ಇರುವ ಸಂಬಂಧವನ್ನು ಸಮುದಾಯಕ್ಕೆ ತಿಳಿಸುವ ಪ್ರಯತ್ನ ಮಾಡಬೇಕು ಆ ಮೂಲಕ ಗ್ರಾಮವನ್ನು ಒಂದು ಕಲಿಕಾ ಕೇಂದ್ರವಾಗಿ ರೂಪಿಸುವಂತೆ ಸಮುದಾಯವನ್ನು ಪ್ರೇರೇಪಿಸಬೇಕು

* ಮಕ್ಕಳು ತಮ್ಮ ಕಲಿಕೆಯನ್ನು ಅಭಿವ್ಯಕ್ತಿಸಲು, ಅನ್ವೇಷಿಸಲು ತನ್ನ ಅಗತ್ಯಗಳನ್ನು ಗುರುತಿಸಲು, ಸಮುದಾಯ ಬೆಂಬಲವಾಗಿ ನಿಲ್ಲುವಂತೆ ಪ್ರೇರೇಪಿಸುವ ಮೂಲಕ ಸಮುದಾಯವನ್ನು ಪ್ರೇರೇಪಿಸುವುದರ ಮೂಲಕ ಸಮುದಾಯವನ್ನು ಸಂಪೂರ್ಣವಾಗಿ ತೊಡಗಿಸುವುದರ ಜೊತೆಗೆ ಗುಣಮಟ್ಟದತ್ತ ಶಾಲೆಗಳನ್ನು ಒಯ್ಯಬೇಕು

* ಶೈಕ್ಷಣಿಕ ಯೋಜನೆಗಳ ಸ್ಪಷ್ಟ ಪರಿಕಲ್ಪನೆ ಎಲ್ಲರಿಗೂ ಇರಬೇಕು. ಹೀಗಾಗಿ ಜನವಸತಿ ಪ್ರದೇಶದ ಅಗತ್ಯಕ್ಕೆ ಅನುಗುಣವಾಗಿ ಶೈಕ್ಷಣಿಕ ಕಾರ್ಯಕ್ರಮಗಳು ಅನ್ವಯವಾಗುವಂತೆ ಶೈಕ್ಷಣಿಕ ಯೋಜನೆಗಳು ಕೆಳಹಂತದಲ್ಲಿಯೇ ರೂಪಿತವಾಗಬೇಕು

* ಗ್ರಾಮ ಪಂಚಾಯತಿ ಸಭೆಗಳಲ್ಲಿ, ಗ್ರಾಮ ಸಭೆಗಳಲ್ಲಿ, ವಾರ್ಡ್ ಸಭೆಗಳಲ್ಲಿ ಶಾಲಾ ಶಿಕ್ಷಣದ ಗತಿಶೀಲತೆಯನ್ನು(ಕಲಿಕೆ–ಬೋಧನೆ ಹಾಗೂ ಶಾಲಾಭಿವೃದ್ಧಿ ಕುರಿತು) ಚರ್ಚಿಸುವಂತಾಗಬೇಕು.

* ಶಾಲೆಗೆ ಬೆಂಬಲವಾಗಿ ಕೆಲಸಮಾಡಬೇಕಾದ ವ್ಯವಸ್ಥೆಗಳ (ಅಂಗನವಾಡಿ, ಆರೋಗ್ಯ ಕೇಂದ್ರ, ಗ್ರಾಮೀಣಾ ಅಭಿವೃದ್ಧಿ ಕಾರ್ಯಕ್ರಮಗಳ ಪರಿಣಾಮಕಾರಿ ಅನುಷ್ಠಾನ, ಸಮಾಜ ಕಲ್ಯಾಣ ಇಲಾಖೆ: ಸಮುದಾಯ ಆಧಾರಿತ ಸಂಘಟನೆಗಳು, ಸರ್ಕಾರೇತರ ಸಂಘ ಸಂಸ್ಥೆಗಳು) ನಡುವೆ ಸಮನ್ವಯ ಸಾಧಿಸುವ ಅಗತ್ಯವನ್ನು ಸಮುದಾಯಕ್ಕೆ ಮನದಟ್ಟುಮಾಡಬೇಕು.

* ಪ್ರಜಾಪ್ರಭುತ್ವ ಮತ್ತು ಸಮಾನತೆ, ಸಾಮಾಜಿಕ ನ್ಯಾಯದಿಂದಿರುವ ಅನುಕೂಲಗಳನ್ನು ಸಮುದಾಯಕ್ಕೆ ಹೇಳಬೇಕು.

* ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಎಸ್.ಡಿ.ಎಂ.ಸಿ ಬರುವುದರಿಂದ ಎಸ್.ಡಿ.ಎಂ.ಸಿ ಈಗ ಸಂವಿಧಾನಬದ್ಧ ಕಾನೂನುಬದ್ಧವಾಗಿ ಪ್ರಜಾಪ್ರಭುತ್ವದ ತಳಹದಿಯಲ್ಲಿ ರಚನೆಗೊಂಡ ಸ್ಥಳೀಯ ಶೈಕ್ಷಣಿಕ ಸರಕಾರವಾಗಿದೆ. ಗುಣಮಟ್ಟದ ಕಲಿಕೆ ಅಲ್ಲಿಂದಲೇ ಚರ್ಚಿತವಾಗಬೇಕು.

* ಆಯಾ ಗ್ರಾಮ ಪಂಚಾಯಿತಿಯ ಸ್ಥಾಯಿ ಸಮಿತಿಗಳನ್ನು ಸಬಲೀಕರಣ ಮಾಡುವುದರಿಂದ, ಅದರಲ್ಲೂ ಮುಖ್ಯವಾಗಿ ನಾಗರಿಕ ಸೌಕರ್ಯಗಳ ಸಮಿತಿಯನ್ನು ಸಬಲೀಕರಣಗೊಳಿಸುವ ಮೂಲಕ ಉಚಿತ–ಕಡ್ಡಾಯ–ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣದೊಂದಿಗೆ ಗುಣಮಟ್ಟದ ಕಲಿಕೆಯಾಗಲು ಸ್ಥಳೀಯ ಸರಕಾರಗಳ ಬೆಂಬಲವನ್ನು ಒದಗಿಸಬೇಕು.

* ಶಿಕ್ಷಣದ ಮುಖ್ಯ ವಾರಸುದಾರರನ್ನು ಮಾತನಾಡಿಸಿ, ನಮ್ಮ ಶಾಲಾಭಿವೃದ್ಧಿ, ಶಾಲಾ ಮಕ್ಕಳ ಗುಣಮಟ್ಟ ಗ್ರಾಮಗಳಲ್ಲಿ ಚರ್ಚೆಯಾಗುವಂತೆ ಮಾಡುವ ಮೂಲಕ, ಅವರೆಲ್ಲರ ಚರ್ಚೆ ಮತ್ತು ತೀರ್ಮಾನಗಳ ಮೂಲಕವೇ ಆ ಗ್ರಾಮದ ಶೈಕ್ಷಣಿಕ ಯೋಜನೆಗಳು ರೂಪಿತವಾಗಬೇಕು ಈ ನಿಟ್ಟಿನಲ್ಲಿ ಗ್ರಾಮ ಪಂಚಾಯತಿ ಅದರ ಸ್ಥಾಯಿ ಸಮಿತಿಗಳು ಎಸ್.ಡಿ.ಎಂ.ಸಿಗಳನ್ನು ಸಬಲೀಕರಣಗೊಳಿಸಬೇಕು.

* ಶಾಲೆ ಮತ್ತು ಶಿಕ್ಷಕರು ಕೂಡಾ ಅಲ್ಲಿನ ಜನಸಮುದಾಯವನ್ನು ತಮ್ಮ ಶಾಲೆಗೆ ಆಹ್ವಾನಿಸಿ ಪಠ್ಯ ಚಟುವಟಿಕೆ ವಿಧಾನಕ್ಕೆ ಕೊಡುಗೆ ನೀಡಲು ಕೋರುವ ಮೂಲಕ ಹೊರಗಿನ ಪ್ರಪಂಚಕ್ಕೆ ಅವಕಾಶವನ್ನು ಒದಗಿಸಬಹುದು. ಅಂದರೆ ಪಾಲಕರು ಮತ್ತು ಸಮುದಾಯದ ಸದಸ್ಯರು ಶಾಲೆಗೆ ಬಂದು ಮಕ್ಕಳೊಂದಿಗೆ ಕಲಿತಿರುವ ವಿಷಯವನ್ನು ಕುರಿತು ತಮ್ಮ ಜ್ಞಾನವನ್ನು ಮತ್ತು ಅನುಭವವನ್ನು ಹಂಚಿಕೊಳ್ಳಲು ಅವಕಾಶ ಕಲ್ಪಿಸಬೇಕು.

* ಇದಕ್ಕೆ ಸ್ಥಳೀಯ ಉದಾಹರಣೆಗಳನ್ನೇ ಬಳಸಿಕೊಳ್ಳಬಹುದು. ರೈತಾಪಿ ಕೆಲಸದಲ್ಲಿ ಯಾವ ಯಾವ ಮಳೆಗೆ ಯಾವ ಯಾವ ಬೆಳೆಗಳನ್ನು ಬಿತ್ತಬಹುದು, ಯಾವ ತಿಂಗಳಲ್ಲಿ ಯಾವ ಬೆಳೆ ಬಿತ್ತಿದರೆ ಅನುಕೂಲ, ಬೆಳೆದ ಬೆಳೆಗಳನ್ನು ಯಾವಾಗ ಕಟಾವು ಮಾಡಬೇಕು, ಕಟಾವಿಗೆ ಬಂದಿರುವ ಬೆಳೆಗಳನ್ನು ಹೇಗೆ ಗುರುತಿಸುವುದು, ಒಕ್ಕಣೆ ಮಾಡುವುದು ಹೇಗೆ, ದವಸ ಧಾನ್ಯಗಲನ್ನು ಶೇಖರಣೆ ಮಾಡುವುದು ಹೇಗೆ, ಸ್ಥಳೀಯ ಗಿಡ–ಮೂಲಿಕೆಗಳ ಬಳಕೆ ಹೇಗೆ? ನಾಟಿಹಾಕುವುದು ಇತ್ಯಾದಿ

* ಮೌಖಿಕ ಚರಿತ್ರೆಯನ್ನು ಮಕ್ಕಳಿಗೆ ಸಮುದಾಯದ ಸದಸ್ಯರಿಂದ ಹೇಳಿಸುವ ಮೂಲಕ ಜಾನಪದ, ಗುಳೆ/ವಲಸೆ ಹೋಗುವುದು, ಪರಿಸರ ನಾಶ, ಸ್ಥಳೀಯ ಚರಿತ್ರೆ ಇತ್ಯಾದಿಗಳನ್ನು

ಮಕ್ಕಳಿಗೆ ವರ್ಗಾವಣೆ ಮಾಡಲು ಸಮುದಾಯವನ್ನು ಪಠ್ಯ ಚಟುವಟಿಕೆಯಲ್ಲಿ ತೊಡಗಿಸುವ ಪ್ರಯತ್ನಗಳು ನಡೆಯಬೇಕು.

* "ಗ್ರಾಮವೊಂದು ಶಾಲೆ" ಎಂಬ ಕಲ್ಪನೆ ಸಮುದಾಯದಲ್ಲಿ ಮೂಡುವ ಮೂಲಕ ತಮ್ಮ ಗ್ರಾಮವನ್ನು ಮಕ್ಕಳ ಕಲಿಕೆಯ ಕೇಂದ್ರವಾಗಿ ರೂಪಿಸಲು ಸಮುದಾಯವನ್ನು ಬಳಸಿಕೊಳ್ಳಬೇಕು ಅಥವಾ ಸಮುದಾಯಕ್ಕೆ ನೆರವಾಗುವಂತೆ ಪ್ರೇರೇಪಿಸಬೇಕು

ಈ ಅಂಶಗಳು, ಸಮುದಾಯ ಭಾಗವಹಿಸುವಿಕೆಯನ್ನು ಅನಿವಾರ್ಯ ಹಾಗೂ ಅವಶ್ಯಕವೆಂದು ಪರಿಗಣಿಸಲಾಗಿದೆ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

ಉಪವಿಧಿಯನ್ವಯ ಎಸ್.ಡಿ.ಎಂ.ಸಿ ರಚನೆ

ಗ್ರಾಮ ಪಂಚಾಯತ್ ನ ಉಪಸಮಿತಿಯಾದ ನಾಗರಿಕ ಸೌಕರ್ಯ ಸಮಿತಿಯು ಪಂಚಾಯಿತಿ ಪ್ರದೇಶದ ವ್ಯಾಪ್ತಿಯೊಳಗೆ ಪ್ರತಿಯೊಂದು ಪ್ರಾಥಮಿಕ ಶಾಲೆಗಾಗಿ ಪ್ರತಿ ಪಂಚಾಯತಿಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆಯ ಕಾರ್ಯವನ್ನು ಪ್ರತ್ಯಾಯೋಜಿಸಬೇಕು ಎಂದು ಉಪವಿಧಿಗಳು ಸ್ಪಷ್ಟಪಡಿಸುತ್ತವೆ.

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕೆಳಗೆ ನಿಯಮಿಸಲಾದ ರೀತಿಯಲ್ಲಿ ಮುಂದಿನ ವ್ಯಕ್ತಿಗಳನ್ನು ಒಳಗೊಂಡಿರಬೇಕು.

- ತಂದೆ ತಾಯಿಯರ ಪರಿಷತ್ತು, ತಮ್ಮ ಪೈಕಿ ಒಂಬತ್ತು ಜನ ಪ್ರತಿನಿಧಿಗಳನ್ನು ಒಳಗೊಂಡಿರಬೇಕು. ಆ ಒಂಬತ್ತು ಜನ ಪ್ರತಿನಿಧಿಗಳಲ್ಲಿ ಕನಿಷ್ಠ ಮೂರು ಜನ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದಿಂದ ತಲಾ ಒಬ್ಬರು ಮತ್ತು ಅಲ್ಪಸಂಖ್ಯಾತ ಸಮುದಾಯದ ಒಬ್ಬ ಪ್ರತಿನಿಧಿಯನ್ನು ಒಳಗೊಂಡಿರಬೇಕು
- ಶಾಲೆಯ ಮುಖ್ಯ ಶಿಕ್ಷಕರು , ಆರೋಗ್ಯ ಕಾರ್ಯಕರ್ತೆ, ಮತ್ತು ಅಂಗನವಾಡಿ ಶಿಕ್ಷಕಿ, ಇವರು ಪದನಿಮಿತ್ತ ಸದಸ್ಯರಾಗಿರಬೇಕು
- ಸಾಧ್ಯವಿರುವ ಕಡೆಗಳಲ್ಲಿ, ಶಾಲೆಯ ಉನ್ನತ ತರಗತಿಯಿಂದ ಸಂಬಂಧಪಟ್ಟ ತರಗತಿಗಳ ವಿದ್ಯಾರ್ಥಿಗಳೇ ಆಯ್ಕೆ ಮಾಡಿದ ಇಬ್ಬರು ವಿದ್ಯಾರ್ಥಿಗಳು, ಅಂದರೆ ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ ಇವರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳಾಗಿರಬೇಕು
- ಮೇಲ್ಕಂಡ ಸಮಿತಿಯ ಈ ಮುಂದಿನ ವ್ಯಕ್ತಿಗಳು ಲಭ್ಯವಿರುವ ಕಡೆಗಳಲ್ಲಿ ಅಂಥವರನ್ನು ನಾಮನಿರ್ಧೇಶನ ಮಾಡಬೇಕು

ಅ) ಗ್ರಾಮದಲ್ಲಿನ ಯುವಕ–ಯುವತಿ ಮಂಡಳಿಯಿಂದ ಅಥವಾ ಎಸ್.ಎಚ್.ಜಿ (ಸ್ವ–ಸಹಾಯ ಸಂಘ) ಯಿಂದ ಒಬ್ಬ ಪ್ರತಿನಿಧಿ:

ಬ)ಹಳ್ಳಿಯಲ್ಲಿ ವಾಸವಾಗಿರುವ ಒಬ್ಬ ಶಿಕ್ಷಣತಜ್ಞ ಅಥವಾ ಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎನ್.ಜಿ.ಓ ಗಳ ಪೈಕಿ ಒಬ್ಬ ಪ್ರತಿನಿಧಿ:

ಕ) ರೂ 10,000/– ಗಳಿಗೆ ಸಮನಾದ ಅಥವಾ ಅದಕ್ಕಿಂತ ಅಧಿಕ ಮೌಲ್ಯ ಹೊಂದಿರುವ, ಜಮೀನನ್ನು ಅಥವಾ ನಗದು ಅಥವಾ ವಸ್ತುವನ್ನು ಶಾಲೆಗೆ ನೀಡಿರುವ ಒಬ್ಬ ದಾನಿ.

ಪ್ರಾಥಮಿಕ ಶಿಕ್ಷಣವು ಸಾರ್ವತ್ರೀಕರಣವಗಬೇಕಾದರೆ ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆಯು ತ್ವರಿತವಾಗಿ ಆಗಬೆಕಿದೆ. ಅ ಮೂಲಕ ಎಲ್ಲ ಮಕ್ಕಳಿಗೆ ಗುಣಮಟ್ಟ ಭರಿತ ಶಿಕ್ಷಣವನ್ನು ಹೆಚ್ಚು ಪರಿಣಾಮಕಾರಿಯಾಗಿ ಮತ್ತು ಹೆಚ್ಚು ಅರ್ಥಭರಿತವಾಗುದೆನ್ನುವ ಆಶಯ ಹೊಂದಲಾಗಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕರವು ಡಾ. ರಾಜಾ ರಾಮಣ್ಣನವರ ನೇತೃತ್ವದಲ್ಲಿ ನೇಮಿಸಿದ ಕಾರ್ಯಪಡೆಯು ತನ್ನ ಶಿಪಾರಸ್ಸಿನಲ್ಲಿ ಸಮುದಾಯದ ಭಾಗವಹಿಸುವಿಕೆಯು ಪರಿಣಾಮಕಾರಿಯಗಿ ಫಲಪ್ರದವಾಗಬೇಕಾದರೆ, ಸಮುದಾಯ ಮಾಲಕತ್ವದ ಪರಿಕಲ್ಪನೆ ಸಮುದಾಯದವರಲ್ಲಿ ಪ್ರಥಮವಾಗಿ ಕುಡಿಯೊಡೆಯಬೇಕು. ಸಮುದಾಯದವರಿಗೆ ಶಾಲೆ ನಮ್ಮದು ಎಂಬ ಭಾವನೆ ಬರಬೇಕಾದರೆ ಶಾಲೆಯ ಎಲ್ಲಾ ಆಗು ಹೋಗುಗಳಲ್ಲಿ ಸಮುದಾಯ ಭಾಗವಹಿಸುವ ಅವಕಾಶ ಇರಬೇಕೆಂದು ಸ್ಪಷ್ಟಪಡಿಸಿತು.

ಉಡುಪಿ ಜಿಲ್ಲೆಯಲ್ಲಿ ಶೈಕ್ಷಣಿಕ ವಾತಾವರಣಾಶಾದಾಯಕವೆನಿಸಿಕೊಂಡಿದ್ದು ಎಸ್.ಡಿ.ಎಂ.ಸಿ. ರಚನೆ ಹಾಗೂ ಕಾರ್ಯವೈಖರಿ ಪ್ರಶಂಸೆಗೆ ಒಳಪಟ್ಟಿದೆ. ಪ್ರಾಥಮಿಕ ಶಾಲೆಗಳಲ್ಲಿ ಸಮುದಾಯದ ಭಾಗವಹಿಸುವಿಕೆ ಹಿಂದಿನಿಂದಲೂ ಇದ್ದದ್ದು ಗುರುತಿಸಬಹುದಾಗಿದೆಯಾದರೂ ಅದು ಅವಲೋಕನೆ ಮತ್ತು ಭೌತಿಕ ಮತ್ತು ಧನಸಹಾಯಕ್ಕೆ ಸೀಮಿತವಾಗಿತ್ತು. ಶಾಲೆಗೆ ಭೂಮಿ ನೀಡಿದವರು , ಕಟ್ಟಡಕ್ಕೆ ಸಹಾಯಧನ ನೀಡಿದವರು ಹಾಗೂ ಇಲಾಖಾ ಪ್ರತಿನಿಧಿಗಳು ಸೇರಿ ಅಭಿವೃದ್ಧೀ ಸಮಿತಿಗಳನ್ನು ರಚಿಸಿದ್ದರು. ಕೆಲವು ಶಾಲೆಗಳಲ್ಲಿ ಶಾಲೆಯ ಅವಶ್ಯಕತೆಗಳನ್ನ ಚರ್ಚಿಸಲು ಶಾಲಾಭಿವೃದ್ಧಿ ಸಮಿತಿ ಸಭೆಗಳು ನಡೆಯುತ್ತಿದ್ದವು. ಪೋಷಕರು ಹೆತ್ತವರು ಶಾಲೆಗಳಿಗೆ ಭೇಟಿ ಮಾಡುತ್ತಿದ್ದುದು ಮಕ್ಕಳ ದಾಖಲಾತಿ, ವಾರ್ಷಿಕೋತ್ಸವ, ವರ್ಷಾಂತ್ಯದ ಫಲಿತಾಂಶಕ್ಕಾಗಿ ಮಾತ್ರ. ಆದರೆ ಶಿಕ್ಷಣ ಸಾರ್ವತ್ರೀಕರಣದ ಸಂದರ್ಭದಲ್ಲಿ ಸಮುದಾಯ ಬಾಗವಹಿಸುವಿಕೆಗೆ ಒತ್ತು ನೀಡುತ್ತಾ ಬಂದಾಗ ಸಮುದಾಯ ಅದರಲ್ಲೂ ಮುಖ್ಯವಾಗಿ ಸಹಜ ತಂದೆ ತಾಯಿ ಶಾಲೆಗೆ ಬರುವ ಸಂದರ್ಭಗಳು ಹೆಚ್ಚಾದವು. ಕನಿಷ್ಠ ತಿಂಗಳಿಗೊಮ್ಮೆ ಅವರು ಸಭೆಗಳಲ್ಲಿ ಭಾಗವಹಿಸತೊಡಗಿದರು. ಸಮುದಾಯದತ್ತ ಶಾಲೆಯಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಸಮಾವೇಶ ಹಾಗೂ ಸಭೆಗಳಲ್ಲಿ ಭಾಗವಹಿಸುವುದು, ಮಕ್ಕಳ ಕಲಿಕ ಶಾಧನೆ ಗುರುತಿಸುವಲ್ಲಿ ಭಗವಹಿಸುವುದು ಶಿಕ್ಷಕರೊಂದಿಗೆ ಸಂವಾದ ಮುಂತಾದ ಸಂದರ್ಭಗಳು ಶಾಲೆ ಮತ್ತು ಸಮುದಾಯದ ಅಂತರವನ್ನು ಕಡಿಮೆ ಮಾಡಿದೆ. ಶಾಲಾ ಕಲಿಕಾ ಬೋಧನೆ

ಪ್ರಕ್ರಿಯೆಯಲ್ಲಿ ವಸ್ತುಶಃ ಬಾಗವಹಿಸುದು ಇನ್ನೂ ಸಂಪೂರ್ಣವಾಗಿ ಸಾಧ್ಯವಾಗಿರದಿದ್ದರೂ ಜಿಲ್ಲೆಯ ಬೆರಳೆಣಿಕೆಯ ಶಾಲೆಗಳಲ್ಲಿ ಸಮುಧಾಯದ ಭಗವಹಿಸುವಿಕೆಯಿಂದಾಗಿ ಉಲ್ಲೇಖನೀಯ ಬದಲಾವಣೆಗಳು ಆಗಿರುವುದು ಕಾಣಬಹುದಾಗಿದೆ. ಈಲ್ಲೆಯ ಶಾಲಾ ಸಾಧನೆಗಳಲ್ಲಿ ಸಮುದಾಯದ ಭಾಗವಹಿಸುವಿಕೆ ಇಲ್ಲದಿದ್ದರೆ ಈ ಪರಿಯ ಸಾಧನೆ ಅಸಾಧ್ಯ ಎನ್ನುವಷ್ಟು ಬದಲಾವಣೆಗಳು ಕಾಣಸಿಗುತ್ತವೆ.

ಜನರ ಭಾಗವಹಿಸುವಿಕೆ:

ಉಡುಪಿ ಜಿಲ್ಲೆಯ ಪ್ರಜ್ಞಾವಂತ ಜನರು ಅಭಿವೃದ್ಧಿ ಶಿಕ್ಷಣದ ಪ್ರಾಮುಖ್ಯತೆಯನ್ನು ಅರಿತಿದ್ದಾರೆ ಎನ್ನುವುಉದಿನಂಪ್ರತಿ ದಿನಪತ್ರಿಕೆಗಳಲ್ಲಿ ವರದಿಯಾಗುವ ವಿಚಾರಗಳಿಂದ ಸಾಭೀತಾಗುತ್ತದೆ.

ಜಿಲ್ಲೆಯಲ್ಲಿ ಎಸ್.ಡಿ.ಎಂ.ಸಿ ಗಳು ಸಂಘಟಿತವಾಗಿ ಮಕ್ಕಳಿಗೆ ನ್ಯಾಯಯುತವಾದ ಆನಂದದಾಯಕವಾದ ಕಲಿಕಾ ವಾತಾವರಣವನ್ನು ಖಾತ್ರಿ ಪಡಿಸುವ ಪ್ರಯತ್ನಗಳನ್ನು ಮಾಡಿರುವುದು ಕಾಣಬಹುದಾಗಿದೆ. ಶಿಕ್ಷಣ ಸಾರ್ವತ್ರೀಕರಣದ ಕನಸನ್ನು ನನಸಾಗಿಸುವ ಪ್ರಯತ್ನದಲ್ಲಿ ಸ್ಥಳೀಯ ಸಂಘಟನೆಗಳು ಮತ್ತು ಸ್ವಯಂ ಸೇವಾ ಸಂಸ್ಥೆಯ ಪಾಲುದಾರಿಕೆಯಿದೆ. ಮಕ್ಕಳ ಹಕ್ಕುಗಳ ಪ್ರತಿಪಾದನೆ, ಖಾತ್ರಿಗಾಗಿ ದುಡಿಯುತ್ತಿರುವ ಸ್ವಯಮ ಸೇವಾ ಸಂಸ್ಥೆಗಳು ಶೈಕ್ಷಣಿಕ ಅಭಿವೃದ್ಧಿ ಜನಸಮುದಾಯದ ಪಾಲುದಾರಿಕೆ ಮುಂತದ ವಿಷಯಗಳಲ್ಲೂಆಶಾದಾಯಕವಾದ ಪಾತ್ರ ನಿರ್ವಹಿಸುತ್ತಿರುವುದು ಕಾನಬಹುದಾಗಿದೆ. ಸಂಶೋಧನೆ, ಸಮೀಕ್ಷೆ, ತರಬೇತಿ,ದಾಖಲೀಕರಣ ಮುಂತಾದ ಕ್ಷೇತ್ರದಲ್ಲಿ ಸರಕಾರೇತರ ಸ್ವಯಂ ಸೇವಾ ಸಂಸ್ಥೆಗಳು ಶ್ರಮಿಸುತ್ತಿರುವುದು ನೋಡುತ್ತೇವೆ.

ಎಸ್.ಡಿ.ಎಂ.ಸಿ.ಗಳ ಬಲವರ್ದನೆ ಹಗೂ ಸಾಮರ್ಥ್ಯ ಹೆಚ್ಚಿಸುವುದು:

ಶಿಕ್ಷಣ ಸಾರ್ವತ್ರೀಕರಣ ಹಾಗೂ ಗುಣಮಟ್ಟದ ಶಿಕ್ಷಣಖಾತರಿಗಾಗಿ ನಡೆಯುತ್ತಿರುವ ಪ್ರಯತ್ನಗಳು ಪರಿಣಾಮಕಾರಿ ಫಲಿತಾಂಸವನ್ನು ಕಾಣಬೇಕಾದರೆ ಶಿಕ್ಷನ ಪ್ರಕ್ರಿಯೆಯ ಪ್ರಮುಖ ಪಾಲುದಾರರಾಗಿರುವ ಸಮುದಾಯವನ್ನು ಅರಿವು ನೀಡುವುದರ ಮೂಲಕ ಸಶಕ್ತಗೊಳಿಸಬೇಕಾಗಿದೆ. ಸರ್ವಶಿಕ್ಷಾ ಅಭಿಯಾನದುದ್ದಕ್ಕೂ ಎಸ್.ಡಿ.ಎಂ.ಸಿ.ಗಳ ಬಲವರ್ದನೆಗೆ ನಡೆದ ಪ್ರಯತ್ನಗಳು ನಿರಂತರವಾಗಿ ಇ.ಆರ್. ಸಿ ಮತ್ತು ಸಿ.ಆರ್.ಸಿ ಮಟ್ಟಗಳಲ್ಲಿ ನಡೆಯುತ್ತವೆ. ಕರ್ನಾಟಕ ಸಕಾರವು ಮೊದಲ ಬಾರಿಗೆ ೧೭-೦೩-೨೦೦೬ ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕರತವಾಗಿ ಪ್ರಕಟಗೊಂಡಿದ್ದು ಸಾರ್ವಜನಿಕರಿಂದ ಬಂದ ಸಲಹೆ ಸೂಚನೆಗಳ ಮೇಲೆ ಅಗತ್ಯ ತಿದ್ದುಪಡಿಗಳ ಮೂಲಕ ೧೪-೦೬-೨೦೦೬ ರಂದು ಪ್ರಕಟ ಪಡಿಸಿದಂತೆ ಸಹಭಾಗಿತ್ವ ಂಶೀಧನೆಯ ಮೂಲಕ ರೂಪುಗೊಂಡ ಮಾದರಿಉಪವಿಧಿಗಳ ಪರಿಣಾಮಕಾರಿ ಜಾರಿಗಾಗಿ ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಗಿ ತೊಡಗಿಸಿಕೊಳ್ಳುವಂತೆ ಮಾಡಲು ವಿವಿದ ಮಟ್ಟಗಳಲ್ಲಿ ಎಸ್.ಡಿ.ಎಂ.ಸಿ. ತರಬೇತಿಗಳನ್ನು ನಡೆಸಿದವು. ಮೊದಲ ದಿನದಲ್ಲಿ ೧ ದಿನದ ತರಬೇತಿಯನ್ನು ವಿನ್ಯಾಸಗೊಳಿಸಲಯ್ತು. ಅದರಂತೆ ಉಡುಪಿ ಜಿಲ್ಲೆಯಲ್ಲೂ ಕೂಡ ತರಬೇತಿಗಳು ನಡೆದವು. ಮೊದಲ ಹಂತದಲ್ಲಿ ಜಿಲ್ಲಾದ್ಯಂತ ಆಶಾದಾಯಕ ಮಟ್ಟದಲ್ಲಿ ಪೋಷಕರು ಮತ್ತು ಸಮಿತಿ ಸದಸ್ಯರು ಭಾಗವಹಿಸಲಿಲ್ಲ ಎನ್ನಬಹುದು. ತರಬೇತುದಾರರನ್ನು ವಿವಿಧ ಹಂತಗಳಲ್ಲಿ (ರಾಜ್ಯ, ಜಿಲ್ಲೆ, ತಾಲೂಕು)ತರಬೆತುಗೊಳಿಸಲಯ್ತು. ಸಮುದಾಯ ಸ್ನೆಹಿ ಕೈಪಿಡಿಗಳು ವಿನ್ಯಸಗೊಂಡವು. ಎಸ್.ಡಿ.ಎಂ.ಸಿ. ತರಬೇತಿಗಾಗಿ ಉಡುಪಿ ಜಿಲ್ಲೆಗೂ ಭೌತಿಕ ಹಾಗೂ ಆಥಿಕ ಗುರಿಗಳುಳ್ಳ ಸುತ್ತೋಲೆಗಳನ್ನು ಒದಗಿಲಾಯ್ತು.

ಎರಡನೆ ಹಂತದಲ್ಲಿ ೨೦೦೯ರಲ್ಲಿ ಎಸ್.ಡಿ.ಎಂ.ಸಿ. ಮತ್ತು ಸಿ.ಎ.ಸಿ ಸದಸ್ಯರಿಗೆ ಗ್ರಾಮ ಪಂಚಯತಿ ಮಟ್ಟದಲ್ಲಿ ೧ ದಿನದ ತರಬೇತಿಯನ್ನು ನಡೆಸಲಯ್ತು. ಸಿ.ಆರ್.ಪಿ ಮತ್ತು ಬಿ.ಆರ್.ಪಿ ಹಾಗೂ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳು ತರಬೇತುದಾರರಾಗಿ ತರಬೇತಿ ಕಾಯಾಗಾರಗಳನ್ನು ನಡೆಸಿಕೊಟ್ಟರು.

೨೦೧೦-೧೧ ಹಾಗೂ ೨೦೧೧-೧೨ ರ ಸಾಲಿನಲ್ಲಿ ೩ ದಿನಗಳ ಸನಿವಾಸ ತರಬೇತಿಗಳನ್ನು ಎಸ್.ಡಿ.ಎಂ.ಸಿ.ಗಳಿಗೆ ವಿನ್ಯಸಗೊಳಿಸಲಾಯ್ತು. ಆದರೆ ಉಡುಪಿ ಜಿಲ್ಲೆಯಲ್ಲಿ ಸನಿವಾಸ ತರಬೇತಿಗಳಿಗೆ ಆಶಾದಾಯಕ ಸ್ಪಂದನೆ ದೊರೆಯದಿರುವುದು ನೋಡಬಹುದಾಗಿದೆ. ಭಾಗವಹಿಸುವಿಕೆ ಗಮನಿಸಿದರೆ ಜಿಲ್ಲೆಯ ತರಬೇತಿ ಯಾವುದೇ ಗ್ರಾಮದಲ್ಲೂ ಗ್ರಾಮಮಟ್ಟದ ಬಿ.ಆರ್.ಸಿ ಮಟ್ಟದ ಸನಿವಾಸ ತರಬೇತು ಸಾಧ್ಯವಗದಿರುವುದು ಕಾನಬಹುದಾಗಿದೆ. ಇದು ಜನಸಮುದಾಯಕ್ಕೆ ಶಿಕ್ಷನ ಗುಣಮಟ್ಟ ಸಾಧಿಸಲು ಅರಿವು ಹೆಚ್ಚಾಗಬೇಕಿದೆ ಎನ್ನುವುದನ್ನು ಪರೋಕ್ಷವಾಗಿ ಸೂಚಿಸುತ್ತಿರುವುದು ನಾವು ಗಮನಿಸಬಹುದು.

ಇಲಾಖೆ ಆಯೋಜಿಸಿದ ತರಬೇತುಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗವನ್ನು ಪಡೆಯಬಹುದಾಗಿದೆ. ಮತ್ತು ಸ್ವಯಂ ಸೇವೆಯಲ್ಲಿ ತೊಡಗಿರುವ ಸಂಪನ್ಮೂಲ ವ್ಯಕ್ತಿಗಳಾಗಿ ಬಳಸಿಕೊಳ್ಳಲಾಗಿದೆ.

ಕುಂದಾಪುರದ ನಮ್ಮ ಭೂಮಿ ಸಂಸ್ಥೆ ಮಕ್ಕಳ ಪಂಚಾಯತ್ ಕಾರ್ಯಕ್ರಮದ ಆಯ್ದ ಪಂಚಾಯತ್ ಗಳಲ್ಲಿ ಶಾಲಾ ಮಕ್ಕಳನ್ನು ಎಸ್.ಡಿ.ಎಂ.ಸಿ. ಮತ್ತು ಸ್ಥಳೀಯ ಗ್ರಾಮ ಪಂಚಾಯತ್ಗಳಲ್ಲಿ ಭಾಗವಹಿಸುವಂತೆ ಪ್ರೋತ್ಸಹಿಸುವ ಕಾರ್ಯಕ್ರಮಗಳನ್ನು ಆಯೋಜಿಸುತ್ತಾ ಬಂದಿದೆ. ಹಲವಾರು ಶೈಕ್ಷಣಿಕ ಅಧ್ಯಯನಗಳನ್ನು ನಡೆಸಿದೆ.

ಕುಂದಾಪುರದ ಸ್ಫೂರ್ತಿ ಗ್ರಾಮೀಣಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆಯು ವಂಚಿತ ಮಕ್ಕಳನ್ನು ಮುಖ್ಯವಾಹಿನಿ ಶಿಕ್ಷಣಕ್ಕೆ ತರುವ ಬಗ್ಗೆ ಹಾಗೂ ಅದಕ್ಕಗಿ ಸಮುದಾಯವನ್ನು ಪ್ರೇರೇಪಿಸುವಲ್ಲಿ ಶ್ರಮಿಸುತ್ತಿದೆ ಹಾಗೂ ಎಸ್.ಡಿ.ಎಂ.ಸಿ. ಸಶಕ್ತೀಕರಣದಲ್ಲಿ ಇಲಾಖೆಗೆ ಹಾಗೂ ಇತರ ಸಂಘ ಸಂಸ್ಥೆಗಳಿಗೆ ಸಹಯೋಗ ನೀಡುತ್ತಿದೆ.

ಮಂಗಳೂರಿನ ಪಡಿ ಸಂಸ್ಥೆಯ ವೆಲೊರೆಡ್‌ನ ಅಡಿಯಲ್ಲಿ ರೂಪಿತವಾಗಿರುವ ಉಡುಪಿ ಜಿಲ್ಲ ಶಿಕ್ಷಣ ಸಂಪನ್ಮೂಲ ಕೇಂದ್ರ ಹಾಗೂ ಕುಂದಾಪುರ, ಉಡುಪಿ, ಹಾಗೂ ಕಾರ್ಕಳದಲ್ಲಿನ ಘಟಕಗಳು ಪ್ರಾತಮಿಕ ಶಿಕ್ಷನ ಅಭಿವೃದ್ಧಿಯವಿವಿಧ ಆಯಮಗಳಾಗಿರುವ ಮಕ್ಕಳ ಹಕ್ಕು ಸಮುದಾಯ ಭಾಗವಹಿಸುವಿಕೆ, ಅಧ್ಯಯನ ಮುಂತಾದ ಕ್ಷೇತ್ರದಲ್ಲಿ 20 ವರ್ಷಗಳಿಂದ ಕೆಲಸಮಾಡುತ್ತಿದೆ.

ಉಡುಪಿ ಜಿಲ್ಲಾ ಶಿಷಣ ವೇದಿಕೆಗಳು ಸರಕಾರಕ್ಕೆ ನೀಡಿದ ಮನವಿಗಳು:

ಉಡುಪಿ ಜಿಲ್ಲಾ ಎಸ್.ಡಿ.ಎಂ.ಸಿ.ಗಳ ಸಂಚಾಲನಾ ಸಮಿತಿ ೨೦೦೭ರಲ್ಲಿ ನೀಡಿದ ಹಕ್ಕೋತ್ತಾಯದಲ್ಲಿ ನಮೂದಿಸಲಾದ ಸಲಹೆಗಳು:

೧. ಪ್ರಾಥಮಿಕ ಶಿಕ್ಷಣ ಅಭಿವೃದ್ಧಿಯಲ್ಲಿ ಎಸ್.ಡಿ.ಎಂ.ಸಿ.ಯ ಪಾತ್ರ ಮಹತ್ತರವಾದುದು. ಆದ್ದರಿಂದ ಗ್ರಾಮಪಂಚಾಯತ್ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಅಧಿಸೂಚನೆಯನ್ನು ಯಾವುದೇ ರೀತಿಯಲ್ಲಿ ಮೊಟಕುಗೊಳಿಸದೆ ಸಶಕ್ತಗೊಳಿಸಿ ಜಾರಿ ಮಾಡಬೇಕೆಂದು ಸದನ ಸಮಿತಿಗೆ ಒತ್ತಾಯಿಸುತ್ತೇವೆ.

೨. ಎಸ್.ಡಿ.ಎಂ.ಸಿ. ಅಧಿಸೂಚನೆ, ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ಎಸ್.ಡಿ.ಎಂ.ಸಿ. ಸದಸ್ಯರಿಗೆ, ಶಿಕ್ಷಕರಿಗೆ, ನಾಗರಿಕ ಸೌಲಭ್ಯ ಸಮಿತಿಗಳಿಗೆ ಸರಿಯಾದ ಮಾಹಿತಿಗಳು ಲಭ್ಯವಾಗಬೇಕು. ಹಾಗೂ ಎಸ್.ಡಿ.ಎಂ.ಸಿ. ಯಥಾ ಸ್ಥಿತಿಯಲ್ಲಿ ಮುಂದುವರೆಯಲು ಸಹಕಾರಿಯಾಗಿರುವ ನಾಗರಿಕ ಸೌಲಭ್ಯ ಸಮಿತಿ, ಎಸ್.ಡಿ.ಎಂ.ಸಿ. ಸಭೆಗಳು ಅಧಿಸೂಚನೆಯಲ್ಲಿದ್ದಂತೆಯೇ ಕಾರ್ಯನಿರ್ವಹಿಸಬೇಕು ಮತ್ತು ಅದನ್ನು ಸಶಕ್ತಗೊಳಿಸಬೇಕು.

೩. ಶಿಕ್ಷಣ ಪ್ರಕ್ರಿಯೆ, ಎಸ್.ಡಿ.ಎಂ.ಸಿ. ಕರ್ತವ್ಯ, ಜವಾಬ್ದಾರಿಗಳು, ಚಟುವಟಿಕೆಗಳು ಮತ್ತು ಶೈಕ್ಷಣಿಕ ಸವಲತ್ತುಗಳ ಬಗ್ಗೆ ತಂದೆತಾಯಿಯರ ಪರಿಷತ್ತಿಗೆ ಮಾಹಿತಿಯನ್ನು ನೀಡಬೇಕು.

೪. ಎಸ್.ಡಿ.ಎಂ.ಸಿ. ಮತ್ತು ಶಿಕ್ಷಕರ ನಡುವೆ ಸಮಸ್ಯೆಗಳು ತಲೆದೋರಿದಾಗ ಅದನ್ನು ಬಗೆಹರಿಸಲು ತಾಲೂಕು ಮಟ್ಟದ ಸಮನ್ವಯ ಸಮಿತಿಯನ್ನು ರಚನೆ ಮಾಡುವುದು. ಈ ಸಮಿತಿಯು ಜಿಲ್ಲಾ ಶಿಕ್ಷಕ ಸಂಘಟನೆ, ಎಸ್.ಡಿ.ಎಂ.ಸಿ., ಜನಪ್ರತಿನಿಧಿಗಳು, ಕ್ಷೇತ್ರ ಸಂಯೋಜಕರು (ಬಿ.ಆರ್.ಸಿ.), ಆರೋಗ್ಯ/ ಶಿಕ್ಷಣ ಸ್ಥಾಯಿ ಸಮಿತಿ ಸದಸ್ಯರುಗಳನ್ನೊಳಗೊಂಡಿರಬೇಕು.

೫. ಶಿಕ್ಷಕರು ಶೈಕ್ಷಣಿಕ ಚಟುವಟಿಕೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿರುವುದರಿಂದ, ಶಿಕ್ಷಕರಿಗಿರುವ ಪಠ್ಯೇತರ ಒತ್ತಡಗಳನ್ನು (ಗಣತಿ,ಅಕ್ಷರ ದಾಸೋಹ, ಕಟ್ಟಡ ನಿಮಾಣ ಜವಾಬ್ದಾರಿ ಇತ್ಯಾದಿ)ಕಡಿಮೆ ಮಾಡುವುದು.

೬. ಎಸ್.ಡಿ.ಎಂ.ಸಿ. ಕಾರ್ಯವೈಖರಿಯ ಬಗ್ಗೆ ಕಾಲಕಾಲಕ್ಕೆ ಅಧ್ಯಯನಗಳು ನಡೆಯಬೇಕು, ಸಮಸ್ಯೆಗಳು ಉದ್ಭವಿಸುವಾಗ ತಪ್ಪಿತಸ್ಥರ ಮೇಲೆ ಶಿಸ್ತು ಕ್ರಮ ಕೂಡಲೇ ಜಾರಿಗೊಳಿಸಬೇಕು.

೭. ಎಸ್.ಡಿ.ಎಂ.ಸಿ. ಯು ಅಸಂಘಟಿತ ವಲಯವಾದ್ದರಿಂದ ಸಮಸ್ಯೆಗಳು ಉದ್ಭವಿಸಿದಲ್ಲಿ ಅದನ್ನು ಪರಿಹರಿಸಲು ಜಿಲ್ಲಾ ಮಟ್ಟದ ಎಸ್.ಡಿ.ಎಂ.ಸಿ. ವೇದಿಕೆಗಳಿರಬೇಕೆಂದು ಒತ್ತಾಯಿಸುತ್ತೇವೆ.

2010ರಲ್ಲಿ ನಡೆದ ಎಸ್.ಡಿ.ಎಂ.ಸಿ. ಉಡುಪಿ ಜಿಲ್ಲಾಮಟ್ಟದ ಸಮಾಲೋಚನಾ ಸಭೆಯಲ್ಲಿ ರೂಪಿಸಲಾದ ಸಲಹೆ ಮತ್ತು ನಿರ್ಣಯಗಳು:

ಮಹಿಳಾ ಮುಖ್ಯ ಶಿಕ್ಷಕರಿರುವಲ್ಲಿ ಮಹಿಳಾ ಎಸ್.ಡಿ.ಎಂ.ಸಿ. ಅಧ್ಯಕ್ಷರಿದ್ದರೆ ಉತ್ತಮ ಎಂಬ ಸಲಹೆಗಳು ವ್ಯಕ್ತವಾದವು.

- ಎಸ್.ಡಿ.ಎಂ.ಸಿ. ಸದಸ್ಯರಿಗೆ ಹಾಗೂ ಶಿಕ್ಷಕರಿಗೆ ಕರ್ತವ್ಯಗಳೂ ಹಾಗೂ ಜವಾಬ್ದಾರಿಗಳ ಬಗ್ಗೆ ಮಾಹಿತಿಯನ್ನು ನೀಡುವುದು

- ಎಸ್.ಡಿ.ಎಂ.ಸಿ. ಸದಸ್ಯರಿಗೆ ನೀಡಿರುವ ಅಧಿಕಾರಗಳು ಉಪಯೋಗವಾಗುವಂತೆ ಅಗತ್ಯ ತರಬೇತಿಗಳನ್ನು ಇಲಾಖೆಯು ಹಮ್ಮಿಕೊಳ್ಳಬೇಕು

- ಅಧಿಸೂಚನೆಯ ಬಗ್ಗೆ ಸ್ಪಷ್ಟ ಮಾಹಿತಿಗಳು ಜನಸಾಮಾನ್ಯರಿಗೆ ಲಭಿಸಬೇಕು

- ಎಸ್.ಡಿ.ಎಂ.ಸಿ. ಕರ್ತವ್ಯವೇನು, ನಾಗರೀಕ ಸೌಲಭ್ಯ ಸಮಿತಿ (ಸಿ.ಎ.ಸಿ)ಯ, ಡಯಟ್‌ನ ಕರ್ತವ್ಯಗಳೇನು ಎಂಬುದರ ಬಗ್ಗೆ ಮಾಹಿತಿ ಲ;ಭ್ಯ ಆಗಬೇಕು. ಸಿ.ಎ.ಸಿ ಸರಿಯಾಗಿ ಕಾರ್ಯ ನಿರ್ವಹಿಸಿದರೆ ಸಮಸ್ಯೆಗಳು ಕಡಿಮೆಯಾಗುತ್ತವೆ. ಈ ಸಮಿತಿಗಳಿಗೆ ಅಗತ್ಯ ತರಬೇತಿಗಳನ್ನು ಹಮ್ಮಿಕೊಳ್ಳುವುದು

- ಎಸ್.ಡಿ.ಎಂ.ಸಿ. ಗಳು ಬಂದ ನಂತರ ಶಾಲೆಗಳಲ್ಲಿ ಪೋಷಕರ ಭಾಗವಹಿಸುವಿಕೆಯಿಂದ ಶಾಲೆಗಳು ಆಕರ್ಷಣೀಯವಾಗಲಿದೆ ಎಂಬ ಅಭಿಪ್ರಾಯ ಒಂದೆಡೆಯಾದರೆ ಎಸ್.ಡಿ.ಎಂ.ಸಿ. ಮತ್ತು ಮುಖ್ಯ ಶಿಕ್ಷಕರಿಗೆ ವೈಯಕ್ತಿಕ ಕಾರಣಗಳಿಂದಾಗಿಯೂ ಸಮಸ್ಯೆಗಳು ಉದ್ಭವಿಸುತ್ತದೆ. ಎಸ್.ಡಿ.ಎಂ.ಸಿ. ಸದಸ್ಯರಿಂದ ತೊಂದರೆಯಾದಾಗ ದೂರು ನೀಡುವ ವ್ಯವಸ್ಥೆಯಿರಬೇಕು.

<u>ನಿರ್ಣಯಗಳು:</u>

೧. ಎಸ್.ಡಿ.ಎಂ.ಸಿ. ಸದಸ್ಯರಿಗೆ, ಸಿ.ಎ.ಸಿ. ನಾಗರೀಕ ಸೌಲಭ್ಯ ಸಮಿತಿ, ಶಿಕ್ಷಕರಿಗೆ ಅಧಿಸೂಚನೆ, ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತರಬೇತಿಗಳು ನಡೆಯಬೇಕು.

೨. ಪರಿಣಾಮಕಾರಿಯಾಗಿ ನಿರ್ವಹಣೆ ಮಾಡುವ ಕೌಶಲ್ಯಗಳು ಮಾನವೀಯ ಸಂಬಂಧಗಳ ಸುಧಾರಣೆಯ ಬಗ್ಗೆ ತರಬೇತಿ ಅಗತ್ಯವಿದೆ.

೩. ಪಂಚಾಯತ್ ರಾಜ್ ಇಲಾಖೆಯ ಮೂಲಕ ನಾಗರೀಕ ಸೌಲಭ್ಯ ಸಮಿತಿಗಳಿಗೆ ತರಬೇತಿ ಹಾಗೂ ಶಾಲಾಮಟ್ಟದಲ್ಲಿ ಶಿಕ್ಷಕರಿಗೆ ಮತ್ತು ಎಸ್.ಡಿ.ಎಂ.ಸಿ. ಸದಸ್ಯರಿಗೆ ಮಾಹಿತಿಯನ್ನು ನೀಡಬೇಕು.

೪. ಶಿಕ್ಷಕರಿಗಿರುವ ಕೆಲಸದ ಒತ್ತಡ(ಮಕ್ಕಳ ಗಣತಿ, ಅಕ್ಷರ ದಾಸೋಹ, ಎಸ್.ಡಿ.ಎಂ.ಸಿ.)ಕಡಿಮೆ ಮಾಡುವುದು

೫. ತಾಲೂಕು ಮಟ್ಟದಲ್ಲಿ ಸಮನ್ವಯ ಸಮಿತಿ ಶಾಲಾ ಮುಖ್ಯೋಪಾಧ್ಯಾಯರು ಮತ್ತು ಎಸ್.ಡಿ.ಎಂ.ಸಿ ಭಿನ್ನಾಭಿಪ್ರಾಯಗಳನ್ನು ಪರಿಹರಿಸಲು ಮೇಲ್ಮನವಿ ಸಮಿತಿ/ ಸಮನ್ವಯ ಸಮಿತಿಗಳನ್ನು ರಚಿಸುವುದು. ಈ ಸಮಿತಿಯಲ್ಲಿ ಜಿಲ್ಲಾ

ಶಿಕ್ಷಕ ಸಂಘಟನೆ, ಎಸ್.ಡಿ.ಎಂ.ಸಿ ಪ್ರತಿನಿಧಿಗಳು, ಜನಪ್ರತಿನಿಧಿಗಳು, ಆರೋಗ್ಯ/ಶಿಕ್ಷಣ ಸ್ಥಾಯಿ ಸಮಿತಿ ಸದಸ್ಯರು ಕ್ಷೇತ್ರ ಸಂಯೋಜಕರು ಇರಬೇಕು

೬. ಎಸ್.ಡಿ.ಎಂ.ಸಿ ಮತ್ತು ಶಿಕ್ಷಕರಿಗೆ ಯಾವುದೇ ಸಮಸ್ಯೆಗಳು ಉದಭವಿಸಿದಾಗ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು

೭. ಎಸ್.ಡಿ.ಎಂ.ಸಿ ಕಾರ್ಯವೈಖರಿಯ ಬಗ್ಗೆ ಕಾಲಕಾಲಕ್ಕೆ ಅಧ್ಯಯನಗಳು ನಡೆಯಬೇಕು

೮. ವರ್ಷದಲ್ಲಿ ಕನಿಷ್ಠ ಮೂರು ಸಲವಾದರೂ ಪೋಷಕರನ್ನು ಸೇರಿಸಿ ವಿಚಾರ ವಿನಿಮಯ ಕಾರ್ಯಕ್ರಮ ಮತ್ತು ಸಮುದಾಯ ಅರಿವು ಚಟುವಟಿಕೆಗಳನ್ನು ನಡೆಸಬೇಕು

೯. ಎಸ್.ಡಿ.ಎಂ.ಸಿ ತರಬೇತಿಯು ಕೇವಲ ಎಸ್.ಡಿ.ಎಂ.ಸಿ ಸದಸ್ಯರಿಗೆ ಮತ್ತು ಮುಖ್ಯ ಶಿಕ್ಷಕರಿಗೆ ಮಾತ್ರವಲ್ಲದೇ ಇವರೊಂದಿಗೆ ಶಾಲೆಯ ಸಹಶಿಕ್ಷಕರನ್ನು ಸೇರಿಸಿಕೊಂಡು ತರಬೇತಿಗಳು ನಡೆಯಬೇಕು.

ವಿಶ್ಲೇಷಣೆ

ಈ ಭಾಗದಲ್ಲಿ ಸಮೀಕ್ಷೆಗೆ ಸಂಗ್ರಹಿಸಲಾದ ಮಾಹಿತಿ ಹಾಗೂ ಅಂಕಿ ಅಂಶಗಳು, ಗುಂಪು ಚರ್ಚೆಗಳಿಂದ ಹಾಗೂ ಯಶೋಗಾಥೆಗಳ ಮೂಲಕ ಕಂಡುಕೊಳ್ಳಲಾದ ಅಂಶಗಳನ್ನು ವಿಶ್ಲೇಷಿಸಲಾಗಿದೆ. ಅಧ್ಯಯನಕ್ಕೆ ಉಡುಪಿ ಜಿಲ್ಲೆಯ ೬೦ ಶಾಲೆಗಳ ಎಸ್.ಡಿ.ಎಂ.ಸಿ ಸದಸ್ಯರುಗಳನ್ನು ಸಂದರ್ಶಿಸಿ ಮಾಹಿತಿ ಕಲೆಹಾಕಲಾಗಿದೆ.

ವಿಭಾಗಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಹಿನ್ನೆಲೆ, ಎಸ್.ಡಿ.ಎಂ.ಸಿ ಗಳ ರಚನೆ ಅರಿವು, ಶಾಲಾ ಪ್ರಕ್ರಿಯೆಯಲ್ಲಿ ಭಾಗವಹಿಸುವಿಕೆ ಮತ್ತು ಸಬಲೀಕರಣ, ಮಕ್ಕಳ ಹಕ್ಕುಗಳ ಅರಿವು ಹಾಗೂ ದೃಷ್ಟಿಕೋನಗಳನ್ನು ವಿಶ್ಲೇಷಿಸಲಾಗಿದೆ.

ಅಧ್ಯಾಯ ಎರಡರಲ್ಲಿ ತಿಳಿಸಿರುವಂತೆ ನಾಲ್ಕು ಪ್ರಮುಖ ಅಧ್ಯಯನ ಉದ್ದೇಶಗಳನ್ನು ಕೇಂದ್ರೀಕರಿಸಿ ಉಡುಪಿ ಜಿಲ್ಲೆಯಲ್ಲಿ ಅಧ್ಯಯನ ನಡೆಸಲಾಗಿದೆ. ಸಂಶೋದನಾ ಅಸ್ತ್ರಗಳನ್ನು ಅಧ್ಯಯನದ ಉದ್ದೇಶಗಳಿಗನುಗುಣವಾಗಿ ತಯಾರಿಸಲಾಗಿದೆ.

ಸಮುದಾಯಿಕ ಸಂಬಂಧಗಳು:

ಜಿಲ್ಲೆಯಲ್ಲಿ ಶಾಲೆಗಳಲ್ಲಿ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿ ಕೆಲಸಮಾಡುತ್ತಿರುವ ಸ್ಥಳೀಯ ಸಂಘಟನೆಗಳು ಸ್ಥಳೀಯ ಸರಕಾರ ಅಥವಾ ಪಂಚಾಯತ್ ನೊಂದಿಗೆ ಸಂಪರ್ಕಿಸಿ ಮಾಹಿತಿಯನ್ನು ಪಡೆದು ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಶಾಲಾಭಿವೃದ್ಧಿಯಲ್ಲಿ ಸ್ತ್ರೀಶಕ್ತಿಯಂತಹಾ ಸ್ವಸಹಾಯ ಗುಂಪುಗಳು ಯುವತಿ ಯುವಕ ಮಂಡಲಗಳು, ದಲಿತ ಶ್ರೇಯೋಭಿವೃದ್ಧಿ ಸಂಘಟನೆಗಳು ಹಾಲು ಉತ್ಪಾದಕರ ಹಾಗೂ

ಮೀನುಗಾರರ ಸಂಘಗಳು ಹಾಗೂ ಸ್ವಯಂಸೇವಾ ಸರಕಾರೇತರ ಸಂಸ್ಥೆಗಳು ಶಾಲಾಭಿವೃದ್ಧಿಯಲ್ಲಿ ಪಾಲುದಾರಿಕೆ ನಡೆಸಿರುವುದು ಹಾಗೂ ಪ್ರತ್ಯಕ್ಷ ಪರೋಕ್ಷ ಪರಿಣಾಮಗಳನ್ನು ಬೀರಿರುವುದು ಕಾಣಬಹುದಾಗಿದೆ.

- ಜಿಲ್ಲೆಯಲ್ಲಿ ೧೦೦% ಗ್ರಾಮಗಳಲ್ಲಿ ಸರಕಾರಿ ಅಥವಾ ಸರಕಾರೇತರ ಸಂಘ ಸಂಸ್ಥೆಗಳ ಸಹಕಾರ ಮತ್ತು ಮಾರ್ಗದರ್ಶನದಂತೆ ರಚಿತವಾಗಿ ಕಾರ್ಯನಿರ್ವಹಿಸುತ್ತಿರುವ ಸಂಘ ಸಂಸ್ಥೆಗಳು (ಸ್ತ್ರೀಶಕ್ತಿ ಹಾಗೂ ಸ್ವ ಸಹಾಯ ಸಂಘಟನೆಗಳು ಅಸ್ತಿತ್ವದಲ್ಲಿದ್ದು ಶಾಲೆಗಳಿಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಭಾಗವಹಿಸುತ್ತಿವೆ.
- ೬೫% ಶಾಲೆಗಳಲ್ಲಿ ಯುವಕ ಯುವತಿ ಸಂಘಟನೆಗಳು ಶಾಲಾಅಭಿವೃದ್ಧಿಯಲ್ಲಿ ತಮ್ಮ ವ್ಯಾಪ್ತಿಯಲ್ಲಿ ಪಾಲ್ಗೊಂಡಿರುತ್ತಾರೆ.
- ಶಿಕ್ಷಣ ಮಟ್ಟ ಹೆಚ್ಚಿರುವ ಉಡುಪಿ ಜಿಲ್ಲೆಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಪರಿಣಾಮಕಾರಿಯಾಗಿ ಆಡಳಿತ ರೂಢವಾಗಿರುವುದರಿಂದ ಸುಮಾರು 85% ಗ್ರಾಮಗಳಲ್ಲಿ ವಿವಿಧ ಸಂದರ್ಭಗಳಲ್ಲಿ ಗ್ರಾಮ ಪಂಚಾಯತ್ ಕನಿಷ್ಠ ಒಂದು ಸಿ.ಎ.ಸಿ ಸಭೆಗಳು ನಡೆದಿವೆ ಮತ್ತು ಅಲ್ಲಿ ಶಾಲೆಗಳಿಗೆ ಸಂಬಂಧಿಸಿದ ವಿಷಯಗಳು ಚರ್ಚೆಗೆ ಬಂದಿವೆ. ಆದರೆ ನೀತಿಯನುಸಾರ ಮೂರು ತಿಂಗಳಿಗೊಮ್ಮೆ ಸ.ಎ.ಸಿ.ಸಭೆಗಳು ಯಾವೊಂದು ಪಂಚಾಯತ್ ನಲ್ಲಿಯೂ ನಿರಂತರವಾಗಿ ನಡೆಯದಿರುವುದು ಗಮನಿಸಲಾಗಿದೆ.

ಶಾಲೆಗೆ ಸಂಬಂಧಿಸಿದ ಸೌಲಭ್ಯಗಳು:

ಅಧ್ಯಯನದ ಈ ಭಾಗದಲ್ಲಿ ಶಾಲೆಗಳಿಗೆ ಪೂರಕವಾದ ಭೌತಿಕ ಸೌಲಭ್ಯಗಳ ಮಾಹಿತಿಯನ್ನು ಸ್ಥಿತಿಗತಿಯನ್ನು ಪ್ರಸ್ತುತಪಡಿಸಲಾಗಿದೆ. ಹೆಚ್ಚಿನ ಶಾಲೆಗಳಲ್ಲಿ ನೀತಿಪ್ರಕಾರವಾದ ಭೌಗೋಳಿಕ ವಿಸ್ತೀರ್ಣ ಇಲ್ಲದಿರುವುದು ಗಮನಿಸಲಾಗಿದೆ.

ಕೋಷ್ಟಕ –1
ಅಧ್ಯಯನಕ್ಕೊಳಪಟ್ಟ ಶಾಲೆಗಳಲ್ಲಿ ಭೂಮಿಯ ಹೊಂದುವಿಕೆ

ಹೊಂದಿರುವ ಭೂಮಿಯ ವಿಸ್ತೀರ್ಣ	ಶಾಲೆಗಳ ಸಂಖ್ಯೆ	
	ದಾಖಲೆ ಇದೆ	ದಾಖಲೆ ಇಲ್ಲ
೨೦ ರಿಂದ೫೦ ಸೆಂಟ್ಸ್	೭	೨
೫೧ಸೆಂಟ್ಸ್‌ರಿಂದ೧ ಎಕ್ರೆ	೧೧	೧
೧ ರಿಂದ ೨ ಎಕ್ರೆ	೧೮	
೨ ರಿಂದ ೫ ಎಕ್ರೆ	೨೨	
೫ ಎಕ್ರೆಗಿಂತ ಹೆಚ್ಚು	೨	೧

ಶಾಲೆಯಲ್ಲಿನ ಕೋಣೆಗಳ ಸಂಖ್ಯೆ :

ತೀರಾ ಇತ್ತೀಚೆ ವರೆಗೂ ಹೆಚ್ಚಿನ ಶಾಲೆಗಳಲ್ಲಿ ಮುಖ್ಯ ಶಿಕ್ಷಕರ ಕೊಠಡಿ ಬಿಟ್ಟು ಒಂದು ಉದ್ದದ ಸಭಾಂಗಣದಲ್ಲಿ ರಟ್ಟಿನ ಚೌಕಟ್ಟುಗಳಿಂದ ವಿಭಾಗಗಳನ್ನು ಮಾಡಲಾಗುತ್ತಿತ್ತು. ಸರ್ವ ಶಿಕ್ಷಾ ಅಭಿಯಾನ ಚಾಲ್ತಿಗೆ ಬಂದ ಮೇಲೆ ಹೆಚ್ಚಿನ ಶಾಲೆಗಳಲ್ಲಿ ಕನಿಷ್ಟ ಒಂದು ಕೋಣೆ, ಅಡುಗೆ ಕೋಣೆ ಹೊಸದಾಗಿ ನಿರ್ಮಿಸಿರುವುದು ಕಾಣಬಹುದಾಗಿದೆ. ಚಟುವಟಿಕಾದಾರಿತ ಕಲಿಕೆಗೆ ಪೂರಕವಾಗಿ ಕೋಣೆಗಳನ್ನು ವಿನ್ಯಾಸಗೊಳಿಸಬೇಕಾದ ಅವಶ್ಯಕತೆ ಹೆಚ್ಚಿನ ಶಾಲೆಗಳಲ್ಲಿ ಕಂಡು ಬರುತ್ತದೆ.

ಕೋಷ್ಟಕ–2 ಶಾಲೆಗಳಲ್ಲಿ ಕೋಣೆಗಳ ಸಂಖ್ಯೆ

ಕೋಣೆಗಳ ಸಂಖ್ಯೆ	**ಶಾಲೆಗಳು**
೩ ಕಿಂತ ಕಡಿಮೆ	೧
೩–೫ ಕೋಣೆಗಳು	೫೮
೬–೮ ಕೋಣೆಗಳು	೧
೮ ಕ್ಕಿಂತ ಹೆಚ್ಚು	ಇಲ್ಲ

ಹೆಚ್ಚಿನ ಶಾಲೆಗಳಲ್ಲಿ ಕಾನೂನುಬದ್ದವಾದ ರೀತಿಯಲ್ಲಿ ಕಟ್ಟಡಗಳು ಇಲ್ಲ. ಕಟ್ಟಡಗಳ ನಿರ್ಮಾಣ ಅನುದಾನಕ್ಕೆ ಪೂರಕವಾಗಿ ವಿನ್ಯಾಸ ಗೊಂಡಿವೆಯಾದರೂ ಮಕ್ಕಳ ಸ್ನೇಹಿಯಾಗಿ ಯೋಜಿತವಾಗಿ ನಿರ್ಮಾಣಗೊಂಡಿಲ್ಲದಿರುವುದು ಕಂಡುಬರುತ್ತದೆ.

ಎಲ್ಲಾ ಶಾಲೆಗಳಲ್ಲಿ ವಾಚನಾಲಯವಿದೆ ಎನ್ನಲಾಗಿದೆಯಾದರೂ ಪುಸ್ತಕಗಳನ್ನು ಕಪಾಟಿನಲ್ಲಿರಿಸಲಾಗಿದೆ. ಆದರೆ ಪುಸ್ತಕದ ಬಳಕೆ ಕಡಿಮೆ. ಹೆಚ್ಚಿನ ಶಾಲೆಗಳಲ್ಲಿ ಮಕ್ಕಳಿಗೆ ತಿಂಗಳಿಗೊಮ್ಮೆ ಒಂದು ಗಂಟೆಗಾಗಿ ಕತೆ ಪುಸ್ತಕಗಳನ್ನು, ಪ್ರಸಿದ್ದ ವ್ಯಕ್ತಿಗಳ ಆತ್ಮ ಚರಿತ್ರೆ, ವೈಜ್ಞಾನಿಕ ಮಾಹಿತಿ ಪುಸ್ತಕಗಳನ್ನು ನೀಡಲಾಗುತ್ತದೆ ಆದರೆ ಅದು ಪುಸ್ತಕ ಪ್ರೇಮ ಹೆಚ್ಚಿಸಲು ಸಹಾಯವಾಗುವ ಮಾರ್ಗದರ್ಶಿತ ಓದುವಿಕೆ ಅಲ್ಲ.

ಪ್ರಯೋಗಾಲಯಗಳ ಲಭ್ಯತೆ ಹಾಗೂ ಬಳಕೆ: ಅಧ್ಯಯನ ಮಾಡಲಾದ ಯಾವುದೇ ಶಾಲೆಯಲ್ಲಿ ಪ್ರತ್ಯೇಕ ಪ್ರಯೋಗಾಲಯ ಇರಲಿಲ್ಲ. ಪರಿಸರ ಅಧ್ಯಯನವನ್ನು ಬೇರ ಹೊರಾಂಗಣದಲ್ಲು ನಡೆಸಿ ಮಕ್ಕಳಿಗೆ ಅನುಭವದ ಕಲಿಕೆಗೆ ಅವಕಾಶ ನೀಡಲಾಗುತ್ತದೆ ಎಂದು 92% ಎಸ್.ಡಿ.ಎಂ.ಸಿ ಸದಸ್ಯರ ಅಭಿಪ್ರಾಯವಾಗಿತ್ತು. ಪ್ರಯೋಗದ ಪರಿಕರಗಳು ಇಲಾಖೆಯಿಂದ ನೀಡಲಾಗಿದೆಯಾದರೂ ಅವುಗಳ ಸದ್ಬಳಕೆಯಾಗುತ್ತಿಲ್ಲ ಎನ್ನುವುದನ್ನು ಗಮನಿಸಲಾಗಿದೆ. ಉದಾ: ಬೀಜದ ಮೊಳಕೆಯೊಡೆಯುವಿಕೆ, ಮಣ್ಣಿನ ಸವಕಳಿ, ನೆರಳು ಇತ್ಯಾದಿ.

ಆಟದ ಮೈದಾನದ ಲಭ್ಯತೆ ಮತ್ತು ಬಳಕೆ:

ಅಧ್ಯಯನ ನಡೆಸಲಾದ ೮೦% ಶಾಲೆಗಳಲ್ಲಿ ಸೂಕ್ತ ಆಟಕ್ಕೆ ಸ್ಥಳಾವಕಾಶವಿಲ್ಲ. ಮಕ್ಕಳಿಗೆ ಹೊರಾಂಗಣ ಹಾಗೂ ಒಳಾಂಗಣ ಆಟಕ್ಕೆ ಅವಕಾಶವಿದೆಯಾದರೂ ಅವುಗಲ ಸಮರ್ಪಕ ನಿರ್ವಹಣೆಗೆ ವ್ಯವಸ್ಥೆ ಇರುವುದಿಲ್ಲ. ಶಾಲಾ ಕಟ್ಟಡಗಳ ನಡುವಿನ ಖಾಲಿಜಾಗವನ್ನು ಆಟಕ್ಕಾಗಿ ಬಳಸಲಾಗುತ್ತದೆ. ವಿರಾಮದ ವೇಳೆಯಲ್ಲಿ ಹಾಗೂ ವಾರದಲ್ಲಿ ಅವದಿಗಳಲ್ಲಿ
ವಿದ್ಯಾರ್ಥಿಗಳು ಆಟವನ್ನು ಆಡುತ್ತಾರೆ. ಶಾಲೆಗಳಲ್ಲಿ ದೈಹಿಕ ಶಿಕ್ಷಕರಿರುತ್ತಾರೆ. ಮತ್ತು ಅವರು ಮಕ್ಕಳಿಗೆ ಆಟೋಟಗಳಲ್ಲಿ ಪ್ರೋತ್ಸಾಹ ಹಾಗೂ ಮಾರ್ಗದರ್ಶನ ನೀಡುತ್ತಾರೆ. ಉಳಿದ ಶಾಲೆಗಳಲ್ಲಿ ಮಕ್ಕಳ ಸ್ವ ಇಚ್ಚೆಯಮ್ತೆ ಬೇರೆ ಬೇರೆ ಆಟಗಳನ್ನು ಆಡಿಕೊಳ್ಳುತ್ತಾರೆ.

ಎಸ್.ಡಿ ಎಂ.ಸಿಗಳ ಸಂರಚನೆ:

ಸರಕಾರಿ ಸುತ್ತೋಲೆಯನ್ವಯ ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ೯೮% ಕ್ಕೂ ಹೆಚ್ಚು ಶಾಲೆಗಳಲ್ಲಿ ಎಸ್.ಡಿ.ಎಂ.ಸಿಗಳ ರಚನೆಯಾಗಿದೆ. ಪೋಷಕರ ಪರಿಷತ್ತಿನಲ್ಲಿ ಆಗಿರುವುದಾದರೂ ೮೫% ಕ್ಕೂ ಹೆಚ್ಚು ಶಾಲೆಗಳಲ್ಲಿ ಪೋಷಕರು ನಿರೀಕ್ಷಿತ ಸಂಖ್ಯೆಲ್ಲಿ ಭಾಗವಹಿಸಿರರಿಲ್ಲ. ಭಾಗವಹಿಸಿದವರಲ್ಲಿ ಹೆಚ್ಚಿನವರು ಮುಖ್ಯ ಶಿಕ್ಷಕರ ಮಾರ್ಗದರ್ಶನದಿಂದ ಸಮಿತಿಗೆ ಸೇರಲು ಪ್ರೇರಿತರಾಗಿದ್ದಾರೆ. ಸ್ವ ಆಸಕ್ತಿಯಿಂದ ಕಾರ್ಯಕಾರಿ ಸಮಿತಿಯಲ್ಲಿ ಸೇರಿಕೊಂಡವರ ಸಂಖ್ಯೆ ೧೫% ಮಾತ್ರ

೧೦೦% ಸಂದರ್ಶಿತರು ಶಾಲೆಗೆ ಹೋಗುತ್ತಿರುವ ಮಕ್ಕಳನ್ನು ಹೊಂದಿದ್ದಾರೆ. ಉಡುಪಿ ತಾಲೂಕಿನ೬೦ಶಾಲೆಗಳಲ್ಲಿ ಪ್ರಸ್ತುತ ಅಧ್ಯಯನಕ್ಕೊಳಪಟ್ಟ ಎಸ್.ಡಿ.ಎಂ.ಸಿ. ಸದಸ್ಯರ ಪೈಕಿ ೬ಸದಸ್ಯರ ಮಕ್ಕಳು ಸದ್ರಿ ಶಾಲೆಯಲ್ಲಿ ಕಲಿಯುತ್ತಿಲ್ಲ. ನಿಯಮಾನುಸಾರ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಸಹಜ ತಾಯಿ ತಂದೆ ಮಾತ್ರ ಎಸ್.ಡಿ.ಎಂ.ಸಿ. ಸಮಿತಿಯಲ್ಲಿ ಪದಾದಿಕಾರಿಗಳಾಗಿಬಹುದು. ಹಾಗಾಗ್ಯೂ ಶಿಕ್ಷಿತ ಜಿಲ್ಲೆಯಲ್ಲಿ ನಿಯಮ ಉಲ್ಲಂಘನೆಯಾಗಿರುವುದು ಉಲ್ಲೇಖನೀಯ.

ಜಾತಿವಾರು ಮೀಸಲಾತಿ :

ಅಧ್ಯಯನಕ್ಕೊಳಗಾದ ೬೦ ಶಾಲೆಗಳ ಪೈಕಿ ಎಲ್ಲಾ ಶಾಲೆಗಳಲ್ಲಿ ಎಸ್. ಡಿ ಎಂ ಸಿ ರಚನೆಯಲ್ಲಿ ಮೀಸಲಾತಿಯ ಮೂಲಕ ಮೂಲ ಆಶಯವನ್ನು ಕಾಪಾಡಲಾಗಿದೆ, ಪಾಲಿಸಲಾಗಿದೆ ಎಂದು ಕಂಡುಬರುತ್ತದೆ. ಪರಿಷಿಷ್ಟ ಜಾತಿ ಮತ್ತು ಪಂಗಡದ ವಿದ್ಯಾರ್ಥಿಗಳು ಇಲ್ಲದಿದ್ದಲ್ಲಿ ಮಾತ್ರ ಎಸ್.ಡಿ.ಎಂ.ಸಿ ಗಳಲ್ಲಿ ಮೀಸಲಾತಿ ಚಾಲ್ತಿಯಲ್ಲಿಲ್ಲ.

ಎಸ್.ಡಿ.ಎಂ.ಸಿ ನಾಮ ನಿರ್ದೇಶಿತ ಹಾಗೂ ಪದನಿಮಿತ್ತ ಸದಸ್ಯರು ಎಲ್ಲಾ ಶಾಲಾ ಎಸ್.ಡಿ.ಎಂ.ಸಿಗಳಲ್ಲಿ ಆಯ್ಕೆಗೊಂಡಿರುತ್ತಾರೆ. ಆದರೆ ಎಸ.ಡಿ. ಎಂ.ಸಿ ಸಭೆಗಳಲ್ಲಿ ಅವರ ಭಾಗವಹಿಸುವಿಕೆ ಆಶಾದಾಯಕವಾಗಿಲ್ಲ.
ಶಾಲೆಗಳಲ್ಲಿ ಎಸ್.ಡಿ.ಎಂ.ಸಿಯಲ್ಲಿ ಮಕ್ಕಳ ಪ್ರತಿನಿದಿಗಳು ಆಯ್ಕೆಯಾಗಿರುತ್ತಾರೆ.

ಎಸ್.ಡಿ.ಎಂ.ಸಿ. ಸದಸ್ಯರ ಸಾಮಾಜಿಕ–ಆರ್ಥಿಕ ಸ್ಥಿತಿಗತಿ:

ಎಸ್.ಡಿ.ಎಂ.ಸಿ.ಗಳು ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚಿನ ಎಸ್.ಡಿ.ಎಂ.ಸಿ ಸದಸ್ಯರು ಸಾಮಾಜಿಕ ಮತ್ತು ಆರ್ಥಿಕವಾಗಿ ಕೆಳಗಿರುವ ಅಥವಾ ಮಧ್ಯಮ ವರ್ಗಕ್ಕೆ ಸೇರಿರುತ್ತಾರೆ.

ಅಧ್ಯಯನಕ್ಕೊಳಗಾದ ೯೨%ಸದಸ್ಯರು ಬಿ.ಪಿ.ಎಲ್. ಪಡಿತರ ಚೀಟಿ ಹೊಂದಿದವರಾಗಿದ್ದು ಉಳಿದ ೮% ಸದಸ್ಯರು ಯಾವುದೇ ಪಡಿತರ ಚೀಟಿ ಹೊಂದಿರುವುದಿಲ್ಲ. ಅಧ್ಯಯನಕ್ಕೊಳಗಾದ ಎಸ್.ಡಿ.ಎಂ.ಸಿ ಸದಸ್ಯರ ಶಿಕ್ಷಣ ಮಟ್ಟ ನೋಡಿದಾಗ ಹೆಚ್ಚಿನ ಸದಸ್ಯರು ೨೭% ಪ್ರಾಥಮಿಕ ಶಿಕ್ಷಣ, ೨೩% ಪ್ರೌಢಶಾಲಾ ಶಿಕ್ಷಣವನ್ನು, ೧೦%ಪದವಿಪೂರ್ವಹಾಗೂ ಉನ್ನತಶಿಕ್ಷಣ ಪಡೆದಿರುತ್ತಾರೆ.

ಕೋಷ್ಟಕ–3 ನಿರ್ಣಯಗಳಲ್ಲಿ ಭಾಗವಹಿಸುವಿಕೆ

ಎಸ್.ಡಿ.ಎಂ.ಸಿ ನಿರ್ಣಯಗಳಲ್ಲಿ	
ಭಾಗವಹಿಸುತ್ತಿದ್ದಾರೆ	ಭಾಗವಹಿಸುತ್ತಿಲ್ಲ
೩೭	೬೩

ಎಸ್.ಡಿ.ಎಂ.ಸಿ. ಸದಸ್ಯರ ಭಾಗವಹಿಸುವಿಕೆ:

ಎಸ್.ಡಿ.ಎಂ.ಸಿ.ಗಳ ರಚನೆ ಉಡುಪಿ ಜಿಲ್ಲೆಯಲ್ಲಿ ಸಂವಿಧಾನಬದ್ಧವಾಗಿ ಆಗಿರುವುದು ಒಂದು ಆಶಾದಾಯಕವಾದ ಬದಲಾವಣೆಯಾಗಿದೆ. ಅಧ್ಯಯನಕ್ಕೊಳಗಾದ ಎಸ್.ಡಿ.ಎಂ.ಸಿ ಭಾಗವಹಿಸಿರುತ್ತಾರೆ. ಉಳಿದ ೫೫% ಸದಸ್ಯರು ತಮಗೆ ಅನುಕೂಲವಾದಾಗ ಮಾತ್ರ ಎಸ್.ಡಿ.ಎಂ.ಸಿ. ಸಭೆಗಳಲ್ಲಿ ಭಾಗವಹಿಸುತ್ತಾರೆ. ಸಭೆಯಲ್ಲಿ ಭಾಗವಹಿಸುವವರ ಪೈಕಿ ಪಂಚಾಯತ್ ಅಥವಾ ಗ್ರಾಮ ಸಭೆಯಲ್ಲಿ ಶಿಕ್ಷಣ ಸಂಬಂಧಿ ವಿಷಯಗಳ ಬಗ್ಗೆ ನಿರ್ಧಾರ ತೆಗೆದುಕೊಳ್ಳುವಲ್ಲಿ ಸ್ವಂತವಾಗಿ ಭಾಗವಹಿಸಿರುತ್ತಾರೆ.

ಅಧ್ಯಯನದಂತೆ ಎಸ್.ಡಿ.ಎಂ.ಸಿ. ಸಭೆಗಳಲ್ಲಿ ೧೦೦% ಶಾಲೆಗಳಲ್ಲಿ ಸಭೆ ಕರೆಯುವುದು ಕಾರ್ಯದರ್ಶಿ ಸ್ಥಾನದಲ್ಲಿರುವ ಶಾಲಾ ಮುಖ್ಯ ಶಿಕ್ಷಕರೆ. ೮೦% ಶಾಲೆಗಳಲ್ಲಿ ಮುಖ್ಯ ಶಿಕ್ಷಕರು ಸಭೆಯ ದಿನನಿಗದಿಯ ಮೊದಲು ಎಸ್.ಡಿ.ಎಂ.ಸಿ. ಅಧ್ಯಕ್ಷರೊಂದಿಗೆ ಚರ್ಚಿಸುತ್ತಾರೆ. ೯೦%ಹೆಚ್ಚು ಶಾಲೆಗಳಲ್ಲಿ ಸಭೆಯ ಹಿಂದಿನದಿನ ಸಭೆಯ ನೋಟೀಸನ್ನು ವಿದ್ಯಾರ್ಥಿಗಳ(ಮಕ್ಕಳ) ಮೂಲಕ ಎಸ್.ಡಿ.ಎಂ.ಸಿ ಸದಸ್ಯರಿಗೆ ತಲುಪಿಸಲಾಗುತ್ತದೆ. ಚರ್ಚಿಸಬೇಕಾದ ವಿಷಯಗಳನ್ನು ಎಲ್ಲಾ ಶಾಲೆಗಳಲ್ಲಿ ನಿಗದಿಪಡಿಸುವುದು ಮುಖ್ಯ ಶಿಕ್ಷಕರೆ.

ಎಸ್.ಡಿ.ಎಂ.ಸಿ. ಸದಸ್ಯರು ಶಾಲೆಗಳಲ್ಲಿ ಭೌತಿಕ ವ್ಯವಸ್ಥೆಯಲ್ಲಿ ಭಾಗವಹಿಸಿದಷ್ಟು ತರಗತಿಯೊಳಗಿನ ಕಲಿಕಾ ಪ್ರಕ್ರಿಯೆಯಲ್ಲಿ ಭಾಗವಹಿಸದಿರುವುದು ಗಮನಿಸಲಾಗಿದೆ. ಗುಂಪು ಚರ್ಚೆಯ ವೇಳೆ ಹೊಸ ರೀತಿಯ ಭೋದನಾ ಕಲಿಕಾ ಪ್ರಕ್ರಿಯೆಯ ಬಗ್ಗೆ ಅಅವರಿಗಿರುವ ಜ್ಞಾನಮಟ್ಟ ಗಮನಿಸಿದಾಗ ಮೇಲಿನ ಅಂಶ ಗಮನಕ್ಕೆ ಬರುತ್ತದೆ.

ತರಬೇತಿಗಳ ಮೂಲಕ ಸಾಮರ್ಥ್ಯ ವರ್ಧನೆ:

ಎಸ್.ಡಿ.ಎಂ.ಸಿ.ಗಳ ರಚನೆ ಹಾಗೂ ಬೆಲವಣಿಗೆಯ ಹಾದಿಯುದ್ದಕ್ಕೂ ವಿವಿಧ ಸ್ತರಗಳಲ್ಲಿ ಸದಸ್ಯರ ಸಾಮರ್ಥ್ಯವರ್ದನೆಗೆ ಹಲವು ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಅಧ್ಯಯನ ಅವಧಿಯಲ್ಲಿ ಎಸ್.ಡಿ.ಎಂ.ಸಿ ಗಳಲ್ಲಿರುವ ಸದಸ್ಯರಿಗೆ ಕೇಳಿದಾಗ ೫೩ ಮಂದಿ ತರಬೇತಿಗಳಲ್ಲಿ ಭಾಗವಹಿಸಿರುತ್ತಾರೆ. ಆದರೆ ೩ ದಿನಗಳ ಸನಿವಾಸ ತರಬೇತಿ ಯಾವುದೇ ಕ್ಲಸ್ಟರ್ ನಲ್ಲಿ ನಡೆದಿಲ್ಲ. ತರಬೇತಿಗಳನ್ನು ತೀವ್ರವಾಗಿ ಪರಿಗಣಿಸದ ಹಿನ್ನೆಲೆ ನೋಡಿದರೆ ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳುವಲ್ಲಿ ಇನ್ನು ಬಹಳ ದೂರ ಸಾಗಬೇಕಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ.

ತರಬೇತಿಗಳು ಕೊನೆಕ್ಷಣದಲ್ಲಿ ನಿಗದಿಯಾಗುವುದರಿಂದ ಪೂರ್ವ ನಿಧಾರಿತ ಕೆಲಸಗಳಿಂದ ಹೊರಬಂದು ತರಬೇತಿಗಳಲ್ಲಿ ಸಂಪೂರ್ಣ ತೊಡಗಿಕೊಳ್ಳುವುದು ಅಸಾಧ್ಯವಾಗುತ್ತದೆ ಎನ್ನುವುದು ಹೆಚ್ಚಿನ ಶಾಲಾ ಎಸ.ಡಿ.ಎಂ.ಸಿ. ಸದಸ್ಯರಿಂದ ತಿಳಿದು ಬಂತು.

ಮಕ್ಕಳ ಹಕ್ಕುಗಳ ಸಂರಕ್ಷಣೆ:

ಮಕ್ಕಳ ಹಕ್ಕುಗಳ ಖಾತ್ರಿಗಾಗಿ ಶಾಲೆಗಳಲ್ಲಿ ಹಲವು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ. ಅವುಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್, ಮೀನಾ ಕ್ಲಬ್, ಮಕ್ಕಳ ಹಕ್ಕುಗಳ ಗ್ರಾಮ ಸಭೆ ಇವು ಪ್ರಮುಖವಾಗಿವೆ.

ಈ ಎಲ್ಲಾ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಎಸ್.ಡಿ.ಎಂ.ಸಿ ಗಳ ಬಹುಮುಖ್ಯ ಪಾತ್ರವನ್ನು ಕಂಡುಕೊಳ್ಳಲಾಗಿದೆ. ಆದರೆ ಅಧ್ಯಯನಕ್ಕೊಳಪಟ್ಟ ಶಾಲಾ ಎಸ್.ಡಿ.ಎಂ.ಸಿ ಸದಸ್ಯರು ತರಬೇತಿಗಳಲ್ಲಿ ಭಾಗವಹಿಸಿಯೂ ಮಕ್ಕಳ ಹಕ್ಕುಗಳ ಬಗ್ಗೆ ಮಾಹಿತಿ ಹೊಂದಿರದಿರುವುದು ತಿಳಿದುಕೊಳ್ಳಲಾಯಿತು. ೬೦ ಮಂದಿ ಎಸ್.ಡಿ.ಎಂ.ಸಿ. ಸದಸ್ಯರ ಪೈಕಿ ೪೨ ಮಂದಿ ಶಿಕ್ಷಣ ಮಕ್ಕಳ ಹಕ್ಕು ಎಂದು ಉತ್ತರಿಸಿದರೆ ಉಳಿದ ೧೮ ಮಂದಿ ತಿಳಿದಿಲ್ಲ ಎಂದು ಅಭಿಪ್ರಾಯ ಪಟ್ಟರು.

ಶಾಲಾ ಸಮಸ್ಯೆಗಳನ್ನು ಗುರುತಿಸುವಿಕೆ:

ಗುಣಮಟ್ಟ ಶಿಕ್ಷಣ ಖಾತ್ರಿಗಾಗಿ ಎಸ್.ಡಿ.ಎಂ.ಸಿಗಳು ಶ್ರಮಿಸಬೇಕಾಗಿದ್ದು ಭೌತಿಕ ಹಾಗೂ ಕಲಿಕಾ ಸಂಬಂಧಿ ಸಮಸ್ಯೆಗಳನ್ನು ಸಮುದಾಯ ಅಧೈಸಿಕೊಂಡು ಸ್ಪಂದಿಸಬೇಕೆಂದು ನಿರೀಕ್ಷಿಸಲಾಗುತ್ತಿದೆ. ತಮ್ಮ ಶಾಲೆಯ ಸಮಸ್ಯಗಳೇನು ಎಂದು ಪ್ರಶ್ನಿಸಿದಾಗ ಈ ಕೆಳಗಿನಂತೆ ಅಬಿಪ್ರಾಯ ಪಟ್ಟಿದ್ದಾರೆ.

ಕೋಷ್ಟಕ –4

ಶಿಕ್ಷಕರ ಕೊರತೆ	
ಕಟ್ಟಡ/ನೀರು ಸಮಸ್ಯೆ	27
ಮಕ್ಕಳ ಸಂಖ್ಯೆಯಲ್ಲಿ ಇಳಿಕೆ	33

ಉಪಸಂಹಾರ:

ಉಡುಪಿ ಜಿಲ್ಲೆ ಕರ್ನಾಟಕದ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲೊಂದು ಎಮದು ಗುರುತಿಸಲ್ಪಟ್ಟಿದೆ. ಮೊದಲು ಅದು ದಕ್ಷಿಣ ಕನ್ನಡ ಜಿಲ್ಲೆಯ ಭಾಗವಾಗಿತ್ತು. ಜಿಲ್ಲೆಯು ಮಾನವ ಅಭಿವೃದ್ಧಿ ಸೂಚ್ಯಂಕದಲ್ಲಿ 3ನೇ ಸ್ಥಾನದಲ್ಲಿಯೂ ೨೦೦೧ರ ಶಿಕ್ಷಣ ಸೂಚ್ಯಂಕದಲ್ಲಿ 2ನೇ ಸ್ಥಾನದಲ್ಲಿದೆ. ೨೦೦೧ರ ವರದಿಯಂತೆ ಜಿಲ್ಲೆಯ ಸಾಕ್ಷರತಾ ಮಟ್ಟ ರಾಜ್ಯದಲ್ಲಿ 3ನೇ ಸ್ಥಾನದಲ್ಲಿದೆ.

ಜನ ಸಮುದಾಯ ಇನ್ನೂ ಎಚ್ಚರಗೊಂಡು ಭಾಗವಹಿಸಿ ಸರ್ವಥ್ರಿಕ ಶಿಕ್ಷಣದ ಕನಸು ನನಸಾಗಸ ಬೇಕಿದೆ. ಎಸ್.ಡಿ.ಎಂ.ಸಿ.ಗಳ ರಚನೆ ಹಾಗೂ ಬೆಲವಣಿಗೆಯ ಹಾದಿಯುದ್ದಕ್ಕೂ ವಿವಿಧ ಸ್ತರಗಳಲ್ಲಿ ಸದಸ್ಯರ ಸಾಮರ್ಥ್ಯವರ್ದನೆಗೆ ಹಲವು ತರಬೇತಿ ಕಾರ್ಯಾಗಾರಗಳನ್ನು ಆಯೋಜಿಸಲಾಗಿದೆ. ಅಧ್ಯಯನ ಅವಧಿಯಲ್ಲಿ ಎಸ್.ಡಿ.ಎಂ.ಸಿ ಗಳಲ್ಲಿರುವ ಸದಸ್ಯರಿಗೆ ಕೇಳಿದಾಗ ೫೩ ಮಂದಿ ತರಬೇತಿಗಳಲ್ಲಿ ಭಾಗವಹಿಸಿರುತ್ತಾರೆ. ಆದರೆ ೩ ದಿನಗಳ ಸನಿವಾಸ ತರಬೇತಿ ಯಾವುದೇ ಕ್ಲಸ್ಟರ್ ನಲ್ಲಿ ನಡೆದಿಲ್ಲ. ತರಬೇತಿಗಳನ್ನು ತೀವ್ರವಾಗಿ ಪರಿಗಣಿಸದ ಹಿನ್ನೆಲೆ ನೋಡಿದರೆ ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ಜವಾಬ್ದಾರಿಯನ್ನು ತಿಳಿದುಕೊಳ್ಳುವಲ್ಲಿ ಇನ್ನು ಬಹಳ ದೂರ ಸಾಗಬೇಕಾಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ.

ತರಬೇತಿಗಳು ಕೊನೆಕ್ಷಣದಲ್ಲಿ ನಿಗದಿಯಾಗುವುದರಿಂದ ಪೂರ್ವ ನಿಧಾರಿತ ಕೆಲಸಗಳಿಂದ ಹೊರಬಂದು ತರಬೇತಿಗಳಲ್ಲಿ ಸಂಪೂರ್ಣ ತೊಡಗಿಕೊಳ್ಳುವುದು ಅಸಾಧ್ಯವಾಗುತ್ತದೆ ಎನ್ನುವುದು ಹೆಚ್ಚಿನ ಶಾಲಾ ಎಸ.ಡಿ.ಎಂ.ಸಿ. ಸದಸ್ಯರಿಂದ ತಿಳಿದು ಬಂತು.

ಅನುಬಂಧ 1

ಶೈಕ್ಷಣಿಕ ಅಂಕಿ ಅಂಶಗಳು

ಸೂಚ್ಯಂಕಗಳು	ಕರ್ನಾಟಕ	ಭಾರತ
ಜನಸಂಖ್ಯೆ	೫೨,೭೩೩,೯೫೮	೧೦೨,೭೦,೧೫,೨೪೭
ಪುರುಷರ ಸಾಕ್ಷರತಾ ದರ	೭೬.೨೯	೭೫.೮೫
ಮಹಿಳಾ ಸಾಕ್ಷರತಾ ದರ	೫೭.೪೫	೫೪.೧೬
ತಲಾ ಬಜೆಟ್ ಮಾಡಲಾದ ಖರ್ಚುವೆಚ್ಚಗಳು(ನಿರೀಕ್ಷಿತ)	೬೮೨.೭	೮೧೯.೬೫
ಸರಕಾರಿ ಪೂರ್ವ ಪ್ರಾಥಮಿಕ ಶಾಲೆಗಳ ಸಂಖ್ಯೆ	೩೪೭೭	೩೪೬೮೦
ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಸಂಖ್ಯೆ	೨೦೮೩೮	೩೧೫೦೫೭
ಸರಕಾರಿ ಮಾಧ್ಯಮಿಕ ಶಾಲೆಗಳ ಸಂಖ್ಯೆ	೨೧೮೮೫	೧೦೪೦೨೪
ಶಿಕ್ಷಕ ವಿದ್ಯಾರ್ಥಿ ಅನುಪಾತ (ಪ್ರಾ. ಶಾಲೆ)	೩೦	೪೩
ಶಿಕ್ಷಕ ವಿದ್ಯಾರ್ಥಿ ಅನುಪಾತ (ಮಾಧ್ಯಮಿಕ ಶಾಲೆ)	೨೫	೩೩
ಶಾಲೆಯಿಂದ ಹೊರಗುಳಿದ ಮಕ್ಕಳು 1–5	೨೩.೮೭	೩೯.೦೩
ಶಾಲೆಯಿಂದ ಹೊರಗುಳಿದ ಮಕ್ಕಳು	೫೦.೯೯	೫೪.೬೫

ಅನುಬಂಧ 2

ಶಿಕ್ಷಣದಲ್ಲಿ ಸಮುದಾಯ ಭಾಗವಹಿಸುವಿಕೆ– ತಜ್ಞರ ಹೇಳಿಕೆಗಳು

"ಕಲಿಕ ಕೌಶಲ್ಯ ಮಕ್ಕಳಿಗೆ ಶಾಲೆಯಲ್ಲಿ ಸಿಗಬೇಕಾಗಿದೆ. ಮಕ್ಕಳ ಭಾಗವಹಿಸುವಿಕೆಗೆ ಇಂದಿನ ಸಂದರ್ಭದಲ್ಲಿ ಶಾಲೆಗಳಲ್ಲಿ ತಡೆಯಿದೆ. ಮಕ್ಕಳಿಗೆ ಶಾಲೆಯಲ್ಲಿ ಜಗತ್ತಿನ ನಕ್ಷೆ, ದೇಶ, ರಾಜ್ಯ, ಜಿಲ್ಲೆಯ ನಕ್ಷೆ ತಯಾರಿಸಲು ಕಲಿಸಲಾಗುತ್ತಿದೆಯಾದರೂ ತಮ್ಮ ಗ್ರಾಮದ ನಕ್ಷೆ ತಯಾರಿಸುವುದು ಅವರಿಗೆ ತಿಳಿದಿಲ್ಲ. ಈ ನಿಟ್ಟಿನಲ್ಲಿ ಮಕ್ಕಳ ಪಂಚಾಯತ್ ಮೂಲಕ ಮಕ್ಕಳ ಸಮಸ್ಯೆಗಳಿಗೆ ಪರಿಹಾರವನ್ನು ಮಕ್ಕಳೇ ಕಂಡುಕೊಳ್ಳಲು ಪ್ರಯತ್ನಿಸಲಾಗುತ್ತಿದೆ"

ದಾಮೋದರ್ ಆಚಾರ್ಯ–ನಮ್ಮ ಭೂಮಿಕುಂದಾಪುರ

"ಉಡುಪಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರಗಳ ಮೂಲಕ ಸಮುದಾಯ ಭಾಗವಹಿಸುವಿಕೆ ಹೆಚ್ಚಿಸುವಲ್ಲಿ ಪ್ರಯತ್ನಗಳು ನಡೆಯುತ್ತಿವೆ. ಈಲ್ಲಾ ಸಮಾವೇಶದಲ್ಲಿ ಎಸ್.ಡಿ.ಎಂ.ಸಿ.ಸದಸ್ಯರ ವೇದಿಕೆ ರಚಿಸಲಾಗಿದೆ. ಸಮುದಾಯ ಶಾಲಾಭಿವೃದ್ಧಿಯ ನಿಜವಾದ ಹರಿಕಾರರು"

ಜನಾರ್ಧನ್ ಭಂಡಾರ್ಕರ್–ಅಧ್ಯಕ್ಷರು
ಉಡುಪಿ ಜಿಲ್ಲಾ ಶಿಕ್ಷಣ ಸಂಪನ್ಮೂಲ ಕೇಂದ್ರ

"ಶಾಲೆಗಳಿಂದ ಏನನ್ನು ನಿರೀಕ್ಷಿಸಬೇಕು ಎಂಬ ಪರಿಕಲ್ಪನೆಯನ್ನು ಪರಿಷ್ಕರಿಸುವುದು ಮುಖ್ಯ. ಸಮುದಾದ ಒತ್ತಡವು ಸಕಾರಾತ್ಮಕವಾದ ನಿಟ್ಟಿನಲ್ಲಿದ್ದರೆ ಶಾಲಾ ಶಿಕ್ಷಣವು ನಿಜ ಅರ್ಥದಲ್ಲಿ ಗುಣಾತ್ಮಕವಾಗುತ್ತದೆ. ಮಹಿತಿ ದಾಟಿಸುವುದೇ ಕಲಿಕೆ ಎಂದಾದರೆ ಶಾಲೆ ಹಾಗೂ ಶಿಕ್ಷಕರು ಸಮುದಾಯ ಜೀವನದಿಂದ ಬೇರೆಯಾಗುತ್ತಾರೆ . ಕಲಿಕೆ ಎಂಬುದು ಜ್ಞಾನ ರಚನೆ ಹಗೂ ಪುನರ್‌ರಚನೆಯ ಪ್ರಕ್ರಿಯೆ ಎಂಬ ರಚನಾ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡಾಗ ಮಕ್ಕಳ ಅನುಭವದ ಪರಿಮಿತಿಯಲ್ಲಿ ಬರುವ ಎಲ್ಲರೂ ಮಕ್ಕಳ ಕಲಿಕೆಗೆ ಜವಾಬುದಾರರಾಗುತ್ತಾರೆ".

ಕುಮಾರ ಸ್ವಾಮಿ ಎಚ್.
ಸಮನ್ವಯಾಧಿಕಾರಿ ಕಲಿಕಾಯತ್ನ ಮೈಸೂರು

"ಶಿಕ್ಷಣ ಕ್ಷೇತ್ರದ ಬಗ್ಗೆ ಸಮುದಾಯ ಭ್ರಮೆಯಲ್ಲಿದೆ. ಶಾಲೆಯ ಆಗುಹೋಗುಗಳ ಬಗ್ಗೆ ಅವರಿಗೆ ಪರಿವೇ ಇಲ್ಲ. ಸಮುದಾಯ ಗುಣಮಟ್ಟದ ಬಗ್ಗೆ ಚರ್ಚಿಸುವ ಸಂದರ್ಭವೇ ಈವರೆಗೆ ಬಂದಿಲ್ಲ. ಗುಣಮಟ್ಟದ ಶಿಕ್ಷಣದ ಬಗ್ಗೆ ಸಮುದಾಯ ಎಚ್ಚರಗೊಳ್ಳಬೇಕಾಗಿದೆ"

ಶ್ರೀ ಕಮಲಕರ ಹಾಲಂಬಿ

"ಡಾ. ರಾಜಾರಾಮಣ್ಣನವರ ಆಶಯದ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ಒಂಭತ್ತರಲ್ಲಿ ಮೂವರು ಮಹಿಳೆಯರಿದ್ದಾರೆ. ಆದರೆ ಜವಾಬ್ದಾರಿಯುತ ಸ್ಥಾನ ಬಂದಾಗ ಇಂದಿಗೂ ಮಹಿಳೆಗೆ ಅವಕಾಶವಿಲ್ಲ. ಸಮುದಾಯಕ್ಕೆ ಅದರಲ್ಲೂ ಮಹಿಳೆಗೆ ಸಿಗುವ ಅವಕಾಶಗಳನ್ನು ಗರಿಷ್ಠ ಪ್ರಮಾಣದಲ್ಲಿ ಉಪಯೋಗಿಸಿಕೊಳ್ಳಬೇಕು. ಸಮುದಾಯ ಭ್ರಮೆಯಿಂದ ಹೊರಬಂದು ಅಭಿವೃದ್ಧಿಯ ಚುಕ್ಕಾಣಿ ಹಿಡಿಯಬೇಕಾಗಿದೆ"

ಹಮೀದ್ ಮಂಜೇಶ್ವರ

" ಎಸ್.ಡಿ.ಎಂ.ಸಿ. ವಿಕೇಂದ್ರೀಕರಣದ ಹೆಸರಲ್ಲಿ ಮತ್ತೆ ಕೇಂದ್ರೀಕರಣವಾಗಬಾರದು. ಬೆರಳೆಣಿಕೆಯ ಜನರು ಆದೇಶಿಸುವ ಪರಿಸ್ಥಿತಿ ಹೋಗಿ ಮೂಲವಾರಿಸುದಾರರು ತಮ್ಮ ಸಮಸ್ಯೆಗಳನ್ನು ತಾವೇ ಪರಿಹರಿಸಿಕೊಳ್ಳುವ ಶಕ್ತಿಯೇ ಎಸ್.ಡಿ.ಎಂ.ಸಿ ಕಲ್ಪನೆ. ಶಾಲೆ ತನ್ನದು ನನ್ನ ಮಗು ಇಲ್ಲಿ ಕಲಿಯುತ್ತಿದೆ ಎನ್ನುವ ಕಲ್ಪನೆ ಸಮುದಾಯಕ್ಕಿರಬೇಕು"

ಡಾ.ನಿರಂಜನ್ ಆರಾಧ್ಯ
ಬೆಂಗಳೂರು

ಸಮುದಾಯ ಸಹಭಾಗಿತ್ವ – ರಾಷ್ಟ್ರೀಯ ಶಿಕ್ಷಣ ನೀತಿಯ ಹೇಳಿಕೆಗಳು

1. ಸೂಕ್ತವಾದ ಸಂಘ ಸಂಸ್ಥೆಗಳ ಮೂಲಕ ಸ್ಥಳೀಯ ಸಮುದಾಯಗಳಿಗೆ ಶಾಲಾ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರವನ್ನು ಕೊಡಲಾಗುತ್ತಿದೆ.

ಪ್ಯಾರಾ 10.8

ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್–1986

2. ಅಭಿವೃದ್ಧಿ ಯೋಜನೆಯ ಜನತೆಯ ಪ್ರಾದೇಶಿಕ ಹಾಗೂ ಸ್ಥಳೀಯ ಅವಶ್ಯಕತೆಗಳಿಗೆ ಹೆಚ್ಚಾಗಿ ಪ್ರತಿಕ್ರಿಯಾತ್ಮಕವಾಗಿಯೂ ಮತ್ತು ಹೊಂದಿಕೊಳ್ಳುವಂತೆಯೂ ಖಾತರಿಪಡಿಸಿಕೊಳ್ಳುವುದೇ ಪ್ರಜಾತಂತ್ರೀಯ ವಿಕೇಂದ್ರೀಕರಣದ ಮೂಲ ಕಾರ್ಯ ಅಭಿವೃದ್ಧಿ ಕಾರ್ಯಕ್ರಮಗಳ ಯಶಸ್ಸಿಗೆ ಅವಶ್ಯಕವಾದ ಅಂಶವೇ ಸಮುದಾಯ ಸಹಭಾಗಿತ್ವ ಎನ್ನುವುದು ಸರ್ವರ ಮನ್ನಣೆಗೆ ಪಾತ್ರವಾಗಿದೆ. ಮೇಲಾಗಿ, ಮಣ್ಣು ವಾಸನೆ ಮಟ್ಟದಲ್ಲಿ ಜೀವಿಸುವ ಜನರಿಗೆ ತಮ್ಮ ಅಗತ್ಯತೆಗಳ ಉತ್ತಮ ತಿಳುವಳಿಕೆ ಇರುತ್ತದೆ ಎಂಬ ನಂಬಿಕೆಯೇ ಇದರ ಆಧಾರವಾಗಿರುತ್ತದೆ.

ಪ್ಯಾರಾ 1.10

ಸೆಂಟ್ರಲ್ ಅಡವಿಸರಿ ಬೋರ್ಡ್ ಆಫ್ ಎಜುಕೆಷನ್: ಕಮಿಟ ಆನ್ ಡಿಸೆಂಟ್ರಲೈಸ್ಡ್ ಮ್ಯಾನೇಜ್‌ಮೆಂಟ್ ಆಫ್ ಎಜುಕೆಷನ್ –1993

3. ಸರ್ವಶಿಕ್ಷಣ ಅಭಿಯಾನದ ಯಶಸ್ಸು ಸಮುದಾಯ ಆಧಾರಿತ ಗುಣಾತ್ಮಕ ಯೋಜನ ಪ್ರಕ್ರಿಯೆಯ ಮೇಲೆ ಅವಲಂಭಿತವಾಗಿದೆ. ಸಮುದಾಯವು ಯೋಜನೆ ಹಾಕಿಕೊಳ್ಳುವುದಕ್ಕೆ ಶಕ್ತವಾಗಿದೆ ಎಂಬ ನಂಬಿಕೆಯ ಮೇಲೆ ಸರ್ವಶಿಕ್ಷಣ ಅಭಿಯನವನ್ನು ರೂಪಿಸಲಗಿದ್ದರೂ ಅದು ಸಮುದಾಯಗಳು ಈ ಶಕ್ತಿಯನ್ನು ಬಳಸಲು ಅವರಿಗೆ ಸಾಮರ್ಥ್ಯ, ಬೆಳವಣಿಗೆಯ ಅತಿಯಾದ ಅಗತ್ಯತೆ ಇದೆ ಎನ್ನುವುದನ್ನು ಕೂಡ ಒಪ್ಪುತ್ತದೆ.ಹಲಉ ಪ್ರದೇಶಗಳಲ್ಲಿ ವಾಸಿಸುವ ಸ್ಥಳೀಯ ಸಮುದಾಯಗಳ ವೈವಿಧ್ಯವು ಈಗ ಪ್ರಸ್ತಾಪಿಸಿರುವ ಯೋಜನೆಗಳ ಆಧಾರದ ಮೇಲೆ ಒಕ್ಕೊರಳಿನ ಸಾಮರಸ್ಯವನ್ನು ತರುವುದಕ್ಕೆ ಸಮಸ್ಯೆಯನ್ನು ಒಡ್ಡುತ್ತವೆ. ಒಂದು ಗ್ರಾಮಕ್ಕಿಂತ ಹೆಚ್ಚಾಗಿ ಒಂದು ಜನವಸತಿ ಪ್ರದೇಶವೇ ಯೋಜನೆಯ ಘಟಕವಾಗಬಹುದು ಎಂಬುದನ್ನು ಗುರುತಿಸುವುದು ಮಹತ್ವದ ಅಂಶವಾಗಿದೆ. ಏಕೆಂದರೆ, ಜನವಸತಿ ಪ್ರದೇಶಗಳಲ್ಲಿ ಸಮುದಾಯದ ಒಗ್ಗಟ್ಟು ಅತಿ ಹೆಚ್ಚಿನ ಮಟ್ಟದಲ್ಲಿರುತ್ತದೆ. ಹೀಗೆಯೇ ನಗರ ಪ್ರದೇಶಗಳಲ್ಲಿ ಒಂದೇ ಕೊಳಚೆ ಪ್ರದೇಶದಲ್ಲಿ ವಾಸಿಸುವ ಒಂದು ಗುಂಪಿನ ಮನೆಗಳ ಗುಚ್ಛವೇ ಯೋಜನೆಯ ಘಟಕವಾಗಬೇಕಾಗಿದೆ.

ಪ್ಯಾರಾ 2.2

ಸರ್ವಶಿಕ್ಷಣ ಅಭಿಯಾನ : ಫ್ರೇಮ್‌ವರ್ಕ್ ಪಾರ್ ಇಂಪ್ಲಿಮೆಂಟೇಷನ್

ಪ್ಯಾರಾ೨.೨
ಸರ್ವಶಿಕ್ಷಣ ಅಭಿಯಾನ : ಫ್ರೇಮ್‌ವರ್ಕ್ ಪಾರ್ ಇಂಪ್ಲಿಮೆಂಟೇಷನ್

ಅನುಬಂಧ ೩


ಉಡುಪಿ ಜಿಲ್ಲೆಯ ಅಂಕಿ ಅಂಶಗಳು:

	ಪ್ರಾಥಮಿಕ ಶಾಲೆಗಳು	ಪ್ರೌಢಶಾಲೆಗಳು	ಒಟ್ಟು
ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳು	೨೫೩	೩೬೪	೬೧೭
ಅನುದಾನಿತ	೧೬	೨೦೯	೨೨೫
ಅನುದಾನ ರಹಿತ	೧೨	೧೧೧	೧೨೩
ಸಮಾಜ ಕಲ್ಯಾಣ ಇಲಾಖೆ	೪	೫	೯
ಒಟ್ಟು	೨೮೮	೬೯೦	೯೭೫

ಅನುಬಂಧ ೪

ಪದಕೋಶ:

ಕ್ರ.ಸಂ.			
೧	BEO	Block Education Officer	ಕ್ಷೇತ್ರ ಶಿಕ್ಷಣಾಧಿಕಾರಿ
೨	BRC	Block Resourse Centre	ಕ್ಷೇತ್ರ ಸಂಪನ್ಮೂಲ ಕೇಂದ್ರ
೩	BRP	Block Resourse Person	ಕ್ಷೇತ್ರ ಸಂಪನ್ಮೂಲ ವ್ಯಕ್ತಿ
೪	CAC	Civic Amenities Committie	ನಾಗರಿಕ ಸೌಕರ್ಯ ಸಮಿತಿ
೫	CRC	Cluster Resourse Centre	ಸಮೂಹ ಸಂಪನ್ಮೂಲ ಕೇಂದ್ರ
೬	CRP	Cluster Resourse Person	ಸಮೂಹ ಸಂಪನ್ಮೂಲ ವ್ಯಕ್ತಿ
೭	DDPI	Deputy Director of Public Instructions	ವಿದ್ಯಾಂಗ ಉಪನಿರ್ದೇಶಕರು
೮	KSQAO	Karnataka School Quality Assesment Organisation	ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಸಂಸ್ಥೆ
೯	NCF	National Curriculum Frame work	ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು
೧೦	SSA	Sarva Shiksha Abhiyana	ಸರ್ವ ಶಿಕ್ಷಾ ಅಭಿಯಾನ
೧೧	SDMC	School Dvelopment and Monitoring Committie	ಶಾಲಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ


① ಕುಂದಾಪುರ ತಾಲೂಕು
② ಉಡುಪಿ ತಾಲೂಕು.
③ ಕಾರ್ಕಳ ತಾಲೂಕು
ಬಿ. ಇ. ಡಿ ಕಾಲೇಜುಗಳು
. ಶಾಲೆಗಳು.
①
②
③

ಸರ್ವ ಶಿಕ್ಷಣ ಅಭಿಯಾನ - ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-01

ಸಂಖ್ಯೆ : ಸ.ಶಿ.ಅ/ಶೈ.ತ./2007-08 ದಿನಾಂಕ : 28.12.2007

ಸುತ್ತೋಲೆ

ವಿಷಯ : 2007-08ನೇ ಸಾಲಿನಲ್ಲಿ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸದಸ್ಯರುಗಳಿಗೆ ಶೈಕ್ಷಣಿಕ ಸಮಾಲೋಚನಾ ಕಾರ್ಯಾಗಾರಗಳನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತ್ ಮಟ್ಟದಲ್ಲಿ ನಡೆಸುವ ಬಗ್ಗೆ.

******

ತಮಗೆ ತಿಳಿದಿರುವಂತೆ ಸರ್ವ ಶಿಕ್ಷಣ ಅಭಿಯಾನವು 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಲು ಹತ್ತು ಹಲವು ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೊಳಿಸುತ್ತಿದೆ. ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣ ಸಮುದಾಯದ ಸಹಭಾಗಿತ್ವದಲ್ಲಿ ಮಾತ್ರ ಸಾಧ್ಯ ಎಂಬ ಅಚಲ ನಂಬಿಕೆ ಸರ್ವ ಶಿಕ್ಷಣ ಅಭಿಯಾನದ್ದಾಗಿದೆ.

ಗುಣಾತ್ಮಕ ಶಿಕ್ಷಣಕ್ಕಾಗಿ ಸಮುದಾಯವನ್ನು ಸಂಘಟಿಸುವ ಸವಾಲಿನ ಕೆಲಸದಲ್ಲಿ ಪ್ರಾರಂಭದಿಂದಲೂ ಎಲ್ಲರನ್ನು ಸಂಘಟಿಸಲು ಪ್ರಯತ್ನವನ್ನು ಸರ್ವ ಶಿಕ್ಷಣ ಅಭಿಯಾನ ಮಾಡುತ್ತಾ ಬಂದಿದೆ. ಈ ಎಲ್ಲ ಪ್ರಯತ್ನಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಮತ್ತು ಜಿಲ್ಲಾ ಮತ್ತು ಬ್ಲಾಕ್ ಹಂತಗಳಲ್ಲಿ ಈ ಸಹಭಾಗಿತ್ವವನ್ನು ಅರ್ಥಪೂರ್ಣವಾಗಿ ಸಾಂಸ್ಥೀಕರಣಗೊಳಿಸುವುದು ನಮ್ಮ ಮುಂದಿರುವ ನಿಜವಾದ ಸವಾಲಾಗಿದೆ. ಈ ಹಿನ್ನೆಲೆಯಲ್ಲಿ ಸಮುದಾಯದ ಸಂಘಟನೆಯಲ್ಲಿ ಅದರಲ್ಲೂ ವಿಶೇಷವಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಸಬಲೀಕರಣಗೊಳಿಸಲು ಅಗತ್ಯವಾದ ಮಾರ್ಗೋಪಾಯಗಳನ್ನು ನಾವು ಕಂಡುಕೊಳ್ಳಬೇಕಾಗಿದೆ. ಈ ದಿಕ್ಕಿನಲ್ಲಿ ರಾಜ್ಯದ ಎಲ್ಲಾ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒಳಗೊಂಡಂತೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಸಮಾಲೋಚನಾ ಕಾರ್ಯಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ಎಸ್.ಡಿ.ಎಂ.ಸಿ-ಸಿ.ಎ.ಸಿ ಸಮಾಲೋಚನ ಕಾರ್ಯಾಗಾರಗಳನ್ನು ಆಯೋಜಿಸುವುದರ ಮೂಲಕ ಶೈಕ್ಷಣಿಕ ಅಭಿವೃದ್ಧಿಯ ದಿಕ್ಕಿನಲ್ಲಿ ಗ್ರಾಮ ಪಂಚಾಯಿತಿಯ ನಾಗರೀಕ ಸೌಲಭ್ಯ ಸಿಮಿತಿ ಹಾಗೂ ಶಾಲೆಗಳ ಎಸ್.ಡಿ.ಎಂ.ಸಿ ಒಗ್ಗೂಡಿ ಕಾರ್ಯನಿರ್ವಹಿಸುವ ಪ್ರಕ್ರಿಯೆಯನ್ನು ಫಲವರ್ಧನೆಗೊಳಿಸುವುದು ಇದರ ಮೂಲ ಉದ್ದೇಶವಾಗಿರುತ್ತದೆ. ಸಮುದಾಯದ ಸಬಲೀಕರಣವನ್ನು ರಾಜ್ಯದ ಎಲ್ಲಾ 33 ಶೈಕ್ಷಣಿಕ ಜಿಲ್ಲೆಗಳ 202 ಶೈಕ್ಷಣಿಕ ವಲಯಗಳ 2684 ಕ್ಲಸ್ಟರ್ ಹಂತದಲ್ಲಿ ಬರುವ ಎಲ್ಲಾ 5562 ಗ್ರಾಮ ಪಂಚಾಯತ್ ಮಟ್ಟದಲ್ಲಿ 46286 ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳನ್ನು ಒಳಗೊಂಡಂತೆ ನಾವು ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿಯ ಸದಸ್ಯರನ್ನು ಸೇರಿಸಿ ಸಮಾಲೋಚನಾ ಕಾರ್ಯಾಗಾರವನ್ನು ನಡೆಸಬೇಕಿರುತ್ತದೆ. ರಾಜ್ಯದಲ್ಲಿ ಅಂದಾಜು 6. 5 ಲಕ್ಷ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸದಸ್ಯರುಗಳು ಈ ಕಾರ್ಯಾಗಾರಕ್ಕೆ ಒಳಗಾಗುವರು. ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಎರಡು ದಿನಗಳ ತರಬೇತಿ ಹಾಗೂ ಗ್ರಾಮ ಪಂಚಾಯತ್ ಮಟ್ಟದಲ್ಲಿ ಒಂದು ದಿನದ ಸಮಾಲೋಚನಾ ಕಾರ್ಯಾಗಾರಗಳನ್ನು ನಡಸುವಲ್ಲಿ ಈ ಕೆಳಕಂಡಂತೆ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.

ವಿಭಾಗ ಮಟ್ಟದ ತರಬೇತಿಗಳಿಗೆ ಸಂಬಂಧಿಸಿದಂತೆ:

1. ಪ್ರತಿಯೊಂದು ಶೈಕ್ಷಣಿಕ ಜಿಲ್ಲೆಗೆ ಸಂಬಂಧಿಸಿದಂತೆ ಈ ಕೆಳಕಂಡ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು ಹಾಗೂ ಪಟ್ಟಿಯನ್ನು ಸರ್ವ ಶಿಕ್ಷಣ ಅಭಿಯಾನಕ್ಕೆ ಹಾಗೂ ಡಿ.ಎಸ.ಇ.ಆರ್.ಟಿ ಗೆ ಕೂಡಲೇ ಸಲ್ಲಿಸುವುದು.(ರಾಜ್ಯ ಸಂಪನ್ಮೂಲ ವ್ಯಕ್ತಿಗಳನ್ನು ಹೊರತುಪಡಿಸಿ ಆಯ್ಕೆಮಾಡುವುದು. ರಾಜ್ಯ ಸಂಪನ್ಮೂಲ ತಂಡದ ಜಿಲ್ಲಾ ಪ್ರತಿನಿಧಿಗಳು ಸರ್ವ ಶಿಕ್ಷಣ ಅಭಿಯಾನ ಮತ್ತು ಡಿ.ಎಸ.ಇ.ಆರ್.ಟಿಯೊಂದಿಗೆ ಜಿಲ್ಲಾ ಮಟ್ಟದ ತರಬೇತಿ ಹಾಗೂ ಗ್ರಾಮ ಪಂಚಾಯಿತಿ ಮಟ್ಟದಸಮಾಲೋಚನಾ ಕಾರ್ಯಾಗಾರಕ್ಕೆ ಸಂಬಂಧಿಸಿದಂತೆ ಸಮುದಾಯ ಸಂಘಟನೆಯ ಕಾರ್ಯಕ್ರಮಗಳನ್ನು ಬಲಪಡಿಸುವಲ್ಲಿ ರುವಾರಿಗಳಾಗಿ ಮುಂದುವರೆಯುವರು ಹಾಗೂ ಜಿಲ್ಲಾ ಮಟ್ಟದ ಮತ್ತು ಗ್ರಾಮ ಪಂಚಾಯಿತಿ ಮಟ್ಟದ ದಾಖಲೀಕರಣ ಹಾಗೂ ವರದಿಗಳನ್ನು ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಕಛೇರಿ ಮತ್ತು ಡಿ.ಎಸ್.ಇ.ಆರ್.ಟಿ ಗೆ ಸಲ್ಲಿಸುವ ಜವಾಬ್ದಾರಿಯನ್ನು ಸಹ ಇವರಿಗೆ ವಹಿಸಲಾಗಿದೆ. ಇದಕ್ಕೆ ಸಂಬಂಧಿಸಿದ ನಮೂನೆಗಳನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದೆ. ಈ ಕಾರ್ಯಕ್ಕೆ ಸಂಬಂಧಿಸಿದ ಸಿ.ಆರ್.ಪಿಗಳ ಸಹಾಯವನ್ನು ಕಡ್ಡಾಯವಾಗಿ ಪಡೆಯಲು ಸೂಚಿಸಲಾಗಿದೆ. ಲಗತ್ತಿಸಿರುವ ನಮೂನೆಯಲ್ಲಿ ಜಿಲ್ಲೆ, ಬ್ಲಾಕ್, ಗ್ರಾಮ ಪಂಚಾಯಿತಿಗಳ ಸಂಖ್ಯೆ ಇತ್ಯಾದಿ ಮಾಹಿತಿ ಹೊಂದಿರುವ ಸಿ.ಡಿ.ಯನ್ನು ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಕಛೇರಿಯಿಂದ ವಿಭಾಗಮಟ್ಟದ

ತರಬೇತಿಯಲ್ಲಿ ವಿತರಿಸಲಾಗುವುದು, ಈ ಸಿ.ಡಿ.ಯಲ್ಲಿಯೇ ಮಾಹಿತಿಯನ್ನು ದಾಖಲಿಸಿ ಸರ್ವ ಶಿಕ್ಷಣ ಅಭಿಯಾನದ ರಾಜ್ಯ ಕಛೇರಿಗೆ ಹಿಂತಿರುಗಿಸಲು ಸೂಚಿಸಿದೆ.

- ಪ್ರತಿ ಶೈಕ್ಷಣಿಕ ಜಿಲ್ಲೆಗೆ ಡಯಟ್‌ನ 2 ಹಿರಿಯ/ಕಿರಿಯ ಉಪನ್ಯಾಸಕರುಗಳು (ಒಬ್ಬರು ಜಿಲ್ಲಾ ಹಂತದ ತರಬೇತಿಯ ಉಸ್ತುವಾರಿ ಹಾಗೂ ಜವಾಬ್ದಾರಿಯನ್ನು ಹೊಂದುವವರು ಮತ್ತೊಬ್ಬರು ಎಲ್ಲಾ ಕಾರ್ಯಕ್ರಮದ ದಾಖಲೀಕರಣ ಸಾಧಿಸುವರು). ಇದಲ್ಲದೆ ಜಿಲ್ಲಾ ಹಂತರ ತರಬೇತಿಗಳಲ್ಲಿ ಸಂಪನ್ಮೂಲವ್ಯಕ್ತಿಗಳಾಗಿ ಭಾಗವಹಿಸುವರು.
- 2 ಸ್ವಯಂ ಸೇವಕ ಸಂಘಗಳು/ ವಿಶ್ವವಿದ್ಯಾನಿಲಯಗಳು/ಸಂಸ್ಥೆಗಳಿಂದ ಒಬ್ಬರಂತೆ 2 ಪ್ರತಿನಿಧಿಗಳು
- ಸಮುದಾಯ ಸಂಘಟನೆಯಲ್ಲಿ ಆಸಕ್ತಿಯುಳ್ಳಂತಹ 2 ಶಿಕ್ಷಕ ಪ್ರತಿನಿಧಿಗಳು
- 2 ಬ್ಲಾಕ್ ಸಮನ್ವಯ ಅಧಿಕಾರಿಗಳು(ಬಿ.ಆರ್.ಸಿ)
- 2 ಬ್ಲಾಕ್ ಸಂಪನ್ಮೂಲ ವ್ಯಕ್ತಿಗಳು (ಬಿ.ಆರ್.ಪಿ)
- 2 ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು (ಸಿ.ಆರ್.ಪಿ)
- 1 ಸಹಾಯಕ ಯೋಜನ ಸಮನ್ವಯ ಅಧಿಕಾರಿ (ಎ.ಪಿ.ಸಿ.ಒ)

ಮೇಲಿನಂತೆ ಪ್ರತಿ ಶೈಕ್ಷಣಿಕ ಜಿಲ್ಲೆಯಿಂದ ಒಟ್ಟು : 13 ಸಂಪನ್ಮೂಲ ವ್ಯಕ್ತಿಗಳಿಗೆ ವಿಭಾಗ ಮಟ್ಟದಲ್ಲಿ ರಾಜ್ಯ ಸಂಪನ್ಮೂಲ ತಂಡದಿಂದ(ಅನುಬಂಧ 1) ತರಬೇತಿಯನ್ನು ದಿನಾಂಕ 28, 29, 30, 31 ನೇ ಜನವರಿ 2008 ಹಾಗೂ 1,2,4,5 ನೇ ಫೆಬ್ರವರಿ 2008 ರಲ್ಲಿ ತರಬೇತಿಯನ್ನು ಹಮ್ಮಿಕೊಳ್ಳಲಾಗಿದ್ದು ಯಾರೊಬ್ಬರನ್ನು ಹೊರತುಪಡಿಸದೆ ಎಲ್ಲರೂ ತರಬೇತಿಗೆ ಹಾಜರಾಗುವಂತೆ ಕ್ರಮ ವಹಿಸುವುದು.

2. ಸ್ವಯಂ ಸೇವಕ ಸಂಘಗಳು/ ವಿಶ್ವವಿದ್ಯಾನಿಲಯಗಳು/ಸಂಸ್ಥೆಗಳನ್ನು ಎಚ್ಚರಿಕೆಯಿಂದ ಹಾಗೂ ಶಾಲಾ ಶಿಕ್ಷಣ/ ಎಸ್.ಡಿ.ಎಂ.ಸಿಯ ಬಲವರ್ಧನೆಗಳ ಕಾರ್ಯಗಳಲ್ಲಿ ತೊಡಗಿದವರನ್ನು ಆಯ್ಕೆಮಾಡತಕ್ಕದ್ದು. ಈಗಾಗಲೇ ಸರ್ವ ಶಿಕ್ಷಣ ಅಭಿಯಾನಕ್ಕೆ ಡಯಟ್ ಪ್ರಾಂಶುಪಾರು ಸ್ವಯಂ ಸೇವಕ ಸಂಘಗಳು/ ವಿಶ್ವವಿದ್ಯಾನಿಲಯಗಳು/ಸಂಸ್ಥೆಗಳನ್ನು ಶಿಫಾರಸ್ಸು ಮಾಡಿದ್ದು ಅದರೊಂದಿಗೆ ಇನ್ನು ಉತ್ತಮವಾಗಿ ಸಮುದಾಯ ಸಂಘಟನೆಯಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಆಯ್ಕೆಮಾಡಬಹುದಾಗಿದೆ.

3. ವಿಭಾಗ ಮಟ್ಟದ ತರಬೇತಿಗಳು ಹಾಗೂ ಸಂಪನ್ಮೂಲ ತಂಡಗಳು ಈ ಕೆಳಗಿನಂತೆ ಇರುತ್ತವೆ.

ಕ್ರಮ ಸಂಖ್ಯೆ	ವಿಭಾಗ/ಉಸುವಾರಿ ಕೋರ್ ತಂಡದ ಸಂಸ್ಥೆ	ಜಿಲ್ಲೆಗಳು	ತರಬೇತಿಯ ಸಂಪನ್ಮೂಲ ತಂಡ	ಒಟ್ಟು ತರಬೇತಿ ಹೊಂದುವವರ ಸಂಖ್ಯೆ	ತರಬೇತಿ ಸ್ಥಳ ಮತ್ತು ಉಸ್ತುವಾರಿ	ದಿನಾಂಕ
1.	ಬೆಂಗಳೂರು/ ರಾಷ್ಟ್ರೀಯ ಕಾನೂನು ಶಾಲೆ, ನಗರಬಾವಿ, ಬೆಂಗಳೂರು	1)ಬೆಂಗಳೂರು ಉತ್ತರ, 2)ಬೆಂಗಳೂರು ದಕ್ಷಿಣ, 3)ರಾಮನಗರ 4)ಬೆಂಗಳೂರು ಗ್ರಾಮಾಂತರ	1) ನಾಗವೇಣಿ, 2)ಪ್ರದೀಪ್ ಕುಮಾರ್, 3)ಬ್ರಹ್ಮಚಾರಿ, 4)ಆದಿಲಕ್ಷ್ಮಮ್ಮ, 5)ಈರಣ್ಣ 6)ಉದಯಕುಮಾರ್, ಎಸ್.ವಿ.ಕೆ.ಟಿ	52	ಡಿ.ಎಸ್.ಇ.ಆರ್.ಟಿ (ಬೆಂಗಳೂರು ನಗರ ಡಯಟ್)	28-01-2008 ಮತ್ತು 29-1-2008
		1) ತುಮಕೂರು, 2) ಮಧುಗಿರಿ, 3) ಕೋಲಾರ, 4)ಚಿಕ್ಕಬಳ್ಳಾಪುರ	1)ಪ್ರಕಾಶ್, 2)ಕೇಶವ್ ಮಳಗಿ, 3)ರಾಘವೇಂದ್ರ, 4)ಕೃಷ್ಣಪ್ಪ, 5)ಪರಸ್ಪರ ಸಂಸ್ಥೆ, 6)ಕುಮಾರ್ ಶೃಂಗೇರಿ	52	ಡಯಟ್, ತುಮಕೂರು	28-01-2008 ಮತ್ತು 29-1-2008

		1)ಚಿತ್ರದುರ್ಗ, 2) ದಾವಣಗೆರೆ, 3) ಶಿವಮೊಗ್ಗ	1)ಪ್ರಕಾಶ್ 2)ಕೇಶವ್ ಮಳಗಿ, 3)ರಾಘವೇಂದ್ರ 4)ಆದಿಲಕ್ಷ್ಮಮ್ಮ 5)ಈರಣ್ಣ, 6)ಉದಯಕುಮಾರ್, ಎಸ.ವಿ.ಕೆ.ಟಿ,	39	ಡಯಟ್, ಶಿವಮೊಗ್ಗ(ಪ್ರಾಂಶುಪಾಲರು)	1-2-2008 ಮತ್ತು 2-2-2008
2	ಮೈಸೂರು/ ಪ್ರಜಾಯತ್ನ	1)ಮೈಸೂರು, 2) ಚಾಮರಾಜನಗರ, 3) ಮಂಡ್ಯ, 4) ಮಡಿಕೇರಿ	1)ಪ್ರಜಾಯತ್ನ ಸಂಸ್ಥೆ, 2)ಕರುಣಾ ಸಂಸ್ಥೆ 3)ವಿಶ್ವನಾಥ, 4)ಶಿವಪ್ರಕಾಶ್, 5)ಜವರೇಗೌಡ, 6)ಭಾರತಿ	52	ಮೈಸೂರು ಡಯಟ್ (ಶ್ರೀ. ಜವರೇಗೌಡ.ಎಸ್. ಟಿ, ಹಿ.ಉಪನ್ಯಾಸಕರು - 9448256309)	28-1-2008 ಮತ್ತು 29-1-2008
		1) ಹಾಸನ, 2) ಚಿಕ್ಕಮಗಳೂರು, 3) ಮಂಗಳೂರು 4) ಉಡುಪಿ	1)ಉದಯಕುಮಾರ್2) ರಾಜೇಗೌಡ, 3)ಬಿದರಕುಂದಿ 4)ಬಿ.ಜಿ.ವಿ.ಎಸ್. ಸಂಸ್ಥೆ, 5)ವಾಲೋರೆಡ್ ಸಂಸ್ಥೆ, 6) ಶ್ರೀಕಂಟದತ್ತ	52	ಚಿಕ್ಕಮಗಳೂರು ಡಯಟ್ (ಶ್ರೀ. ರಾಜೇಗೌಡ, ಉಪನ್ಯಾಸಕರು, 9449651488)	28-1-2008 ಮತ್ತು 29-1-2008
3.	ಬೆಳಗಾವಿ/ ಎಸ್.ವಿ.ವೈ.ಎಂ	1) ಬೆಳಗಾವಿ, 2) ಧಾರವಾಡ, 3) ಹಾವೇರಿ, 4) ಉತ್ತರ ಕನ್ನಡ	1)ಸ್ಪಂದನಾ ಸಂಸ್ಥೆ, 2)ಬೆಟಗೇರಿ, 3)ಸುನಿತಾ, 4)ರಾಜೇಶ್ವರಿ, 5)ವಿವೇಕಾನಂದ, 6)ಎಸ್.ವಿ.ವೈ.ಎಂ.	52	ಡಯಟ್, ಧಾರವಾಡ (ಶ್ರೀಮತಿ. ರಾಜೇಶ್ವರಿ, ಉಪನ್ಯಾಸಕರು, 9448996065)	28-1-2008 ಮತ್ತು 29-1-2008
		1) ಬಾಗಲಕೋಟೆ, 2) ಬಿಜಾಪುರ, 3) ಗದಗ, 4) ಚಿಕ್ಕೋಡಿ	1)ವಿಕಾಸ ಸಂಸ್ಥೆ, 2)ಎಸ್.ಎಸ್. ರಾಯಚೂರು, 3)ನಾಗರಾಜ ನಾಯಕ್, 4)ಎಲ್.ಜಿ. ಪಾರ್ಸಿ, 5)ವಿ.ಹೆಚ್. ಬುಡೇರ್, 6) ಸಿನ್ನೂರ್	52	ಡಯಟ್, ಇಳಕಲ್ (ಕೂಡಲ ಸಂಗಮ) 9448866687	28-1-2008 ಮತ್ತು 29-1-2008
4.	ಗುಲ್ಬರ್ಗ/ ಕನ್ನಡ ವಿಶ್ವವಿದ್ಯಾನಿಲಯ, ಹಂಪಿ (ವಿಶೇಷ ಸಂಪನ್ಮೂಲ ವ್ಯಕ್ತಿಗಳು : ಡಾ. ನಿರಂಜನಾರಾಧ್ಯ ವಿ.ಪಿ,ಕೇಶವ್ ಮಳಗಿ, ಹಾಗೂ ಮಮತ(ಎಸ್.ವಿ.ವೈ.ಎಂ)	1) ಗುಲ್ಬರ್ಗ, 2) ಬೀದರ, 3) ಯಾದಗಿರಿ	1) ನರಸಿಂಹ ರಾಜು, 2) ನಾರಾಯಣಗೌಡ, 3) ಡಾ. ಪ್ರಶಾಂತ್, 4) ಚಿಂತನವೇದಿಕೆ, 5) ರಾಮಕೃಷ್ಣ, 6) ಗಿರೀಶ್	39	ಡಯಟ್, ಬೀದರ್	4-2-2008 ಮತ್ತು 5-2-2008

		1) ಬಳ್ಳಾರಿ, 2) ಕೊಪ್ಪಳ, 3) ರಾಯಚೂರು	1) ನರಸಿಂಹ ರಾಜು, 2) ದೊಡ್ಡಮನಿ, 3) ಡಾ. ಪ್ರಶಾಂತ್, 4)ಚಿಂತನವೇದಿಕೆ 5)ರಾಮಕೃಷ್ಣ, 6)ಗಿರೀಶ್	39	ಡಯಟ್, ರಾಯಚೂರು	1-2-2008 ಮತ್ತು 5-02-2008

ಜಿಲ್ಲಾ ಮಟ್ಟದ ತರಬೇತಿಗಳಿಗೆ ಸಂಬಂಧಿಸಿದಂತೆ:

1. ಪ್ರತಿಯೊಂದು ಶೈಕ್ಷಣಿಕ ವಲಯಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ವಲಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸುವುದು ಹಾಗೂ ಪಟ್ಟಿಯನ್ನು ಕ್ರೋಢೀಕರಿಸಿ ಸರ್ವ ಶಿಕ್ಷಣ ಅಭಿಯಾನಕ್ಕೆ ಹಾಗೂ ಡಿ.ಎಸ.ಇ.ಆರ್.ಟಿ ಗೆ ಕೂಡಲೇ ಸಲ್ಲಿಸುವುದು.(ರಾಜ್ಯ ಹಾಗೂ ಜಿಲ್ಲಾ ಸಂಪನ್ಮೂಲ ವ್ಯಕ್ತಿಗಳನ್ನು ಹೊರತುಪಡಿಸಿ ಆಯ್ಕೆಮಾಡುವುದು. ಜಿಲ್ಲಾ ಸಂಪನ್ಮೂಲ ತಂಡದ ಸದಸ್ಯರು ವಲಯವಾರು ಸಮುದಾಯ ಸಂಘಟನೆಯ ಕಾರ್ಯಕ್ರಮಗಳನ್ನು ಬಲಪಡಿಸುವಲ್ಲಿ ರುವಾರಿಗಳಾಗಿ ಮುಂದುವರೆಯುವರು ಹಾಗೂ.ದಾಖಲೀಕರಣ ಕಾರ್ಯನಿರ್ವಹಿಸುವರು)
   - ಪ್ರತಿ ಶೈಕ್ಷಣಿಕ ವಲಯದಿಂದ 3 ಬಿ.ಆರ್.ಪಿಗಳು
   - ಶೈಕ್ಷಣಿಕ ವಲಯದ ಎಲ್ಲಾ ಸಿ.ಆರ್.ಪಿ.ಗಳು
   - ಪ್ರತಿ ಶೈಕ್ಷಣಿಕ ವಲಯದಿಂದ 3 ಸ್ವಯಂ ಸೇವಕ ಸಂಘದ ಪ್ರತಿನಿಧಿಗಳು (ಒಂದೇ ಸಂಸ್ಥೆಯಾದರೆ 3 ವ್ಯಕ್ತಿಗಳು)
   - ಶೈಕ್ಷಣಿಕ ವಲಯದ ಎಲ್ಲಾ ಸಹಾಯಕ ಶಿಕ್ಷಣ ಅಧಿಕಾರಿಗಳು
   - ಬಿ.ಇ.ಒ .
   - ಬಿ.ಆರ್.ಸಿ
   - ಇಬ್ಬರು ಇ.ಸಿ.ಒ ಗಳು

ಮೇಲಿನಂತೆ ಪ್ರತಿ ಶೈಕ್ಷಣಿಕ ವಲಯದಿಂದ ಅಂದಾಜು 30 ಸಂಪನ್ಮೂಲ ವ್ಯಕ್ತಿಗಳಿಗೆ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಸಂಪನ್ಮೂಲ ತಂಡದಿಂದ ತರಬೇತಿಯನ್ನು ದಿನಾಂಕ 4-2-2008 ರಿಂದ 14-2-2008ರೊಳಗಾಗಿ ತರಬೇತಿಯನ್ನು ಹಮ್ಮಿಕೊಳ್ಳುವುದು ಹಾಗೂ ಯಾರೊಬ್ಬರನ್ನು ಹೊರತುಪಡಿಸದೆ ಎಲ್ಲರೂ ತರಬೇತಿಗೆ ಹಾಜರಾಗುವಂತೆ ಕ್ರಮ ವಹಿಸುವುದು.

2. ವಲಯವಾರು ಗ್ರಾಮ ಮಟ್ಟದಲ್ಲಿ ಶಾಲಾ ಶಿಕ್ಷಣ/ ಎಸ್.ಡಿ.ಎಂ.ಸಿಯ ಬಲವರ್ಧನೆಗಳ ಕಾರ್ಯಗಳಲ್ಲಿ ತೊಡಗಿರುವವರನ್ನು ಪ್ರಮುಖವಾಗಿ ಆಯ್ಕೆಮಾಡತಕ್ಕದ್ದು ಹಾಗೂ ತಕ್ಷಣದಲ್ಲಿ ಮತ್ತು ದೀರ್ಘಕಾಲಕ್ಕೆ ಸರ್ವ ಶಿಕ್ಷಣ ಅಭಿಯಾನದ ಜೊತೆ ಪೂರಕವಾಗಿ ಕೆಲಸ ನಿರ್ವಹಿಸಬಹುದಾದ ಶೈಕ್ಷಣಿಕ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘಟನೆಗಳನ್ನು ಗುರುತಿಸಿಸುವುದು. ಈಗಾಗಲೇ ಸರ್ವ ಶಿಕ್ಷಣ ಅಭಿಯಾನಕ್ಕೆ ಡಯಟ್ ಪ್ರಾಂಶುಪಾರು ಸ್ವಯಂ ಸೇವಕ ಸಂಘಗಳು/ ವಿಶ್ವವಿದ್ಯಾನಿಲಯಗಳು/ಸಂಸ್ಥೆಗಳನ್ನು ಶಿಫಾರಸ್ಸು ಮಾಡಿದ್ದು ಹೆಚ್ಚು ಪರಿಣಾಮಕಾರಿಯಾಗಿ ಮಾಡಲು ಇನ್ನು ಯಾವುದಾದರು ಸಂಸ್ಥೆಗಳು ಇದ್ದಲ್ಲಿ ಅವುಗಳನ್ನು ಸಹ ವಲಯವಾರು ಆಯ್ಕೆಮಾಡಬಹುದಾಗಿದೆ. ಇದಕ್ಕೆ ಸಂಬಂಧಿಸಿದ ಮಾರ್ಗದರ್ಶನವನ್ನು ಪ್ರತ್ಯೇಕ ಜ್ಞಾಪನದ ಮೂಲಕ ಕಳುಹಿಸಲಾಗಿದೆ.

ಜಿಲ್ಲಾ ಮಟ್ಟದ ತರಬೇತಿಗಳಿಗೆ ಸಂಬಂಧಿಸಿದಂತೆ:

1. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಬರುವ ಪ್ರತಿಯೊಂದು ಕಿರಿಯ ಪ್ರಾಥಮಿಕ ಶಾಲೆ ಹಾಗೂ ಹಿರಿಯ ಪ್ರಾಥಮಿಕ ಶಾಲೆಯಿಂದ 9 ಮಂದಿ ಎಸ್.ಡಿ.ಎಂ.ಸಿ ಯ ಪೋಷಕ ಪ್ರತಿನಿಧಿಗಳು
2. ಮುಖ್ಯ ಗುರುಗಳು (ಎಸ್.ಡಿ.ಎಂ.ಸಿ ಯ ಕಾರ್ಯದರ್ಶಿ)
3. ಒಬ್ಬರು ಅಂಗನವಾಡಿ ಕಾರ್ಯಕರ್ತರು
4. 2 ಮಕ್ಕಳ ಪ್ರತಿನಿದಿಗಳು (ಒಂದು ಗಂಡು ಮತ್ತು ಒಂದು ಹೆಣ್ಣು ಮಗು)
5. 1 ನಾಮನಿರ್ದೇಶನ ಸದಸ್ಯರು (ಯುವಕ/ಯುವತಿ ಮಂಡಳಿ ಅಥವ ಎಸ್.ಹೆಚ್.ಜಿ ಪ್ರತಿನಿಧಿ)
6. ಗ್ರಾಮ ಪಂಚಾಯಿತಿಯ ಅಧ್ಯಕ್ಷರು (ಸಿ.ಎ.ಸಿ.ಯ ಚೇರಮನ್)
7. ಗ್ರಾಮ ಪಂಚಾಯಿತಿಯ ಕಾರ್ಯದರ್ಶಿಗಳು
8. ಸಿ.ಎ.ಸಿಯ ಎಲ್ಲಾ ಸದಸ್ಯರು (3 ಅಥವ 5)

ಮೇಲಿನಂತೆ ಪ್ರತಿ ಶಾಲೆಯಿಂದ 14 ಪ್ರತಿನಿದಿಗಳು ಮತ್ತು ಗ್ರಾಮ ಪಂಚಾಯತ್ ನ ಗರಿಷ್ಠ 7 ಜನರಿಗೆ ಗ್ರಾಮ ಪಂಚಾಯತ್ ಮಟ್ಟದಲ್ಲಿ ಶೈಕ್ಷಣಿಕ ಸಮಾಲೋಚನಾ ಕಾರ್ಯಾಗಾರಗಳನ್ನು ನಡೆಸುವುದು. ಸಮಾಲೋಚನಾ ಕಾರ್ಯಾಗಾರಗಳನ್ನು ಜಿಲ್ಲಾ ಮಟ್ಟದ ಸಂಪನ್ಮೂಲ ತಂಡದಿಂದ ನೇರವಾಗಿ ನಡೆಸುವುದು. ದಾಖಲೀಕರಣಕ್ಕೆ ಸಂಬಂಧಿಸಿದಂತೆ ಪ್ರತಿ ಸಿ.ಆರ್.ಪಿಯು ಆಯಾ ಕ್ಲಸ್ಟರ್ ಜವಾಬ್ದರಿ ಹೊರುತ್ತಾರೆ ಹಾಗೂ ಆಯಾ ಕ್ಲಸ್ಟರ್ ನಲ್ಲಿಬರುವ ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ ಸಮಾಲೋಚನಾ ಕಾರ್ಯಾಗಾರದ ಜವಾಬ್ದಾರಿ ಹೊಂದಿರುತ್ತಾರೆ.

ಭರಿಸಬಹುದಾದ ಅಂದಾಜು ವೆಚ್ಚ :

1. 2007-08ನೇ ಸಾಲಿನಲ್ಲಿ ಎಸ್.ಡಿ.ಎಂ.ಸಿ ತರಬೇತಿ ಕಾರ್ಯಕ್ಕೆ ಮಂಜೂರಾತಿರುವ ಅನುದಾನದ ಶೇಕಡ 50ರಷ್ಟುನ್ನು ಈಗಾಗಲೇ ಡಿ.ಎಸ್.ಇ.ಆರ್.ಟಿ ಯಿಂದ ಡಯಟ್ ಗಳಿಗೆ ಬಿಡುಗಡೆ ಮಾಡಲಾಗಿದೆ. ಉಳಿದ ಶೇಕಡ 50ರಷ್ಟು ಅನುದಾನ ಹಾಗೂ ಸಮುದಾಯ ಸಂಘಟನೆಯ ಅಡಿಯಲ್ಲಿ ಪಿ.ಎ.ಬಿ ಅನುಮೋದಿತ ಅನುದಾನ ಎರಡನ್ನು ಕೂಡಿಸಿ ಎಸ್.ಡಿ.ಎಂ.ಸಿ-ಸಿ.ಎ.ಸಿ ಸಮಾಲೋಚನ ಕಾರ್ಯಾಗಾರಗಳನ್ನು ಏರ್ಪಡಿಸಲು ನಿರ್ಧರಿಸಲಾಗಿದೆ. ಕಾರಣ ಹೆಚ್ಚಿನ ಸಂಖ್ಯೆಯಲ್ಲಿ ಸಮುದಾಯದ ಸಭಲತೆಯನ್ನು ಸಾಧಿಸುವುದಾಗಿದೆ.
2. ಎಸ್.ಡಿ.ಎಂ.ಸಿ-ಸಿ.ಎ.ಸಿ ಸಮಾಲೋಚನಾ ಕಾರ್ಯಾಗಾರಗಳನ್ನು ಎಸ್.ಎಸ್.ಎ. ಅನುದಾನದಲ್ಲಿ ಒದಗಿಸಬೇಕು ಹಾಗೂ ಇದಕ್ಕೆ ಸಂಬಂಧಿಸಿದ ಅನುದಾನವನ್ನು ಸ.ಶಿ.ಅ/ಡಿ.ಎಸ್.ಇ.ಆರ್.ಟಿ ಕಚೇರಿಯಿಂದ ಡಯಟ್ ಗೆ ಬಿಡುಗಡೆಮಾಡಲಾಗುವುದು.
3. ಭಾಗವಹಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ಮತ್ತು ಸದಸ್ಯರಿಗೆ ಕೆ.ಸಿ.ಎಸ್.ಆರ್. ನಿಯಮಾನುಸಾರ ಟಿ.ಎ/ಡಿ.ಎ. ನೀಡಲಾಗುವುದು.
4. ಸರ್ಕಾರೇತರ ಸಂಪನ್ಮೂಲ ವ್ಯಕ್ತಿಗಳಿಗೆ ದಿನ ಒಂದಕ್ಕೆ ರೂ. 400/- ಅನ್ನು ರಾಜ್ಯ ಹಾಗೂ ವಿಭಾಗ ಮಟ್ಟದಲ್ಲಿ ನೀಡಲಾಗುವುದು.
5. ವಿಭಾಗ ಮತ್ತು ಜಿಲ್ಲಾ ಹಂತದ ತರಬೇತಿಗಳು 2 ದಿನ ನಡೆಯುವುದು ಹಾಗೂ ಅವಶ್ಯಕತೆಗೆ ಅನುಸಾರವಾಗಿ ತಂಗಲು ವ್ಯವಸ್ಥೆ ಮಾಡಲಾಗುವುದು. ಇದಕ್ಕೆ ನೀಡಬೇಕಾದ ವೆಚ್ಚವನ್ನು ಶಿಭಿರಾರ್ಥಿಗಳು/ಸಂಪನ್ಮೂಲವ್ಯಕ್ತಿಗಳಿಗೆ ವಿತರಿಸುವ ಡಿ.ಎ ನಿಂದ ಕಟಾಯಿಸಲಾಗುವುದು.
6. ವಿಭಾಗ ಮಟ್ಟದಲ್ಲಿ ಪ್ರತಿ ತಂಡಕ್ಕೆ ತಗಲುವ ಅಂದಾಜು ವೆಚ್ಚ
   - ಶಿಬಿರಾರ್ಥಿಗಳ ಟಿ.ಎ (ವಾಸ್ತವ ದರ) :50*200=10,000
   - ಶಿಬಿರಾರ್ಥಿಗಳ ಡಿ.ಎ (ವಾಸ್ತವ ದತ) : 85*50*3= 12,750
   - ಸರ್ಕಾರೇತರ ಸಂಪನ್ಮೂಲ ವ್ಯಕ್ತಿಗಳ ಟಿ.ಎ (ವಾಸ್ತವ ದರ): 6*300=1800
   - ಸಂಪನ್ಮೂಲ ವ್ಯಕ್ತಿಗಳ ಡಿ.ಎ (ವಾಸ್ತವ ದರ) : 85*6*3=1,530
   - ಸರ್ಕಾರೇತರ ಸಂಘ/ಸಂಸ್ಥೆ ವ್ಯಕ್ತಿಗಳ ಸಂಭಾವನೆ 400*3*2=2400
   - ಲಘು ಉಪಹಾರ ಮತ್ತು ಕಾಫಿ : 56*48*2= 5376
   - ಲೇಖನ ಸಾಮಗ್ರಿ: 50*20 = 1000
   - ಜೆರಾಕ್ಸ್ ಇತ್ಯಾದಿ : 240

   ಒಟ್ಟು : 35096/-
7. ಜಿಲ್ಲಾ ಮಟ್ಟದಲ್ಲಿ ವಿಭಾಗ ಮಟ್ಟದಂತೆಯೇ ಅನುದಾನ ಬಳಕೆ ಮಾಡುವುದು ಆದರೆ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ ರೂ. 250/- ರಂತೆ ಭರಿಸುವುದು.
8. ಗ್ರಾಮ ಪಂಚಾಯಿತಿ ಮಟ್ಟದಲ್ಲಿ ರೂ. 30 ರ ಮಿತಿಯಲ್ಲಿ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸಮಾಲೋಚನ ಕಾರ್ಯಾಗಾರಗಳನ್ನು ನಿರ್ವಹಿಸಬೇಕಾಗುತ್ತದೆ. ಡಿ.ಎಸ್.ಇ.ಆರ್.ಟಿ ವತಿಯಿಂದ ಮುದ್ರಿತವಾಗುವ ಕಿರುಹೊತ್ತಿಗೆಯನ್ನು ಸಮಾಲೋಚನ ಕಾರ್ಯಾಗಾರದಲ್ಲಿ ನೀಡಲಾಗುತ್ತದೆ. ಭಾಗವವಹಿಸುವ ಸದಸ್ಯರುಗಳಿಗೆ ಮಾತ್ರ ವಾಸ್ತವ ಪ್ರಯಾಣ ಭತ್ಯೆ, ಲಘು ಉಪಹಾರದ ವ್ಯವಸ್ಥೆ ಮಾಡಬೇಕಾಗುತ್ತದೆ. ಲಘು ಉಪಹಾರಕ್ಕೆ ರೂ. 12/-, ಕಾಫಿ/ಟಿ ಗಾಗಿ ರೂ. 3 ಗರಿಷ್ಟ ಮೊತ್ತವನ್ನು ಇದಕ್ಕಾಗಿ ಬಳಸುವುದು. ಉಳಿದ ಮೊತ್ತದಲ್ಲಿ ಸರ್ಕಾರೇತರ ಸಂಪನ್ಮೂಲ ವ್ಯಕ್ತಿಗಳಿಗೆ ತಲಾ ರೂ. 150/- ಗೌರವಧನ ಹಾಗೂ ವಾಸ್ತವ ಪ್ರಯಾಣ ಭತ್ಯೆ ಒದಗಿಸುವುದು. ಒಂದು ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸಮಾಲೋಚನ ಕಾರ್ಯಾಗಾರಕ್ಕೆ ತಗಲುವ ಅಂದಾಜು ವೆಚ್ಚ ರೂ. 30*50=1500.

   ಉದಾ: 1) ಲಘು ಉಪಹಾರ ಮತ್ತು ಕಾಫಿ (50+3)*15=795

   2) ಸರ್ಕಾರೇತರ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ 150*1=150(ಅವಶ್ಯಕತೆ ಇದ್ದಲ್ಲಿ)

3) ಸಂಪನ್ಮೂಲ ವ್ಯಕ್ತಿಗಳೀಗೆ ಟಿ.ಎ.(ವಾಸ್ತವ ದರ) 25*3=75

4) ಶಿಬಿರಾರ್ಥಿಗಳ ಟಿ.ಎ (ವಾಸ್ತವದರ) 50*4=200

5) ಸಂಪನ್ಮೂಲ ವ್ಯಕ್ತಿಗಳ ಡಿ.ಎ.(ವಾಸ್ತವದರ) 85*3=255

6)ದಾಖಲೀಕರಣ ವೆಚ್ಚ: 25

ಒಟ್ಟು : 1500/-

10.ವಿಭಾಗ ಮತ್ತು ಜಿಲ್ಲಾ ಮಟ್ಟದ ತರಬೇತಿಗಾಗಿ ಎಲ್ಲಾ ಸಂಪನ್ಮೂಲ ವ್ಯಕ್ತಿಗಳಿಗೆ ಸ್ಪಂದನ- ಸಂಪನ್ಮೂಲ ಸಾಹಿತ್ಯ ಹಾಗೂ ಸಂಕಲ್ಪ- ತರಬೇತಿ ವಿನ್ಯಾಸವನ್ನು ಒದಗಿಸಲಾಗುವುದು.

11. ಗ್ರಾಮ ಪಂಚಾಯಿತಿ ಮಟ್ಟದ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸಮಾಲೋಚನ ಕಾರ್ಯಾಗಾರದಲ್ಲಿ ಭಾಗವಹಿಸುವ ಸದಸ್ಯರಿಗೆ ಸಚಿತ್ರ ಕಿರುಹೊತ್ತಿಗೆಯನ್ನು ಒದಗಿಸಲಾಗುವುದು.

12. ಜಿಲ್ಲಾವಾರು ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ. ಸಮಾಲೋಚನಾ ಕಾರ್ಯಾಗಾರಗಳಿಗಾಗಿ ಖರ್ಚ ಮಾಡಬಹುದಾದ ಅನುದಾನ ಈ ಕೆಳಗಿನಂತೆ ಇರುತ್ತದೆ.

ಕ್ರಮ ಸಂಖ್ಯೆ	ಜಿಲ್ಲೆ	ಎಸ್.ಡಿ.ಎಂ.ಸಿ ತರಬೇತಿಯ ಅನುದಾನದ ಶೇಕಡ 50ರಷ್ಟು ಅನುದಾನ	ಸಮುದಾಯ ಸಂಘಟನೆಗಾಗಿ ಜಿಲ್ಲಾ ಆಡಳಿತಾತ್ಮಕ	ಜಿಲ್ಲಾವಾರು ಎಸ್.ಡಿ.ಎಂ.ಸಿ - ಸಿ.ಎ.ಸಿಗಾಗಿ ಖರ್ಚ ಮಾಡಬಹುದಾದ ಅನುದಾನ	ಜಿಲ್ಲಾವಾರು ಎಸ್.ಡಿ.ಎಂ.ಸಿ - ಸಿ.ಎ.ಸಿ ಕಾರ್ಯಾಗಾರಕ್ಕೆ ಒಳಗಾಗುವವರ ಅಂದಾಜು ಸಂಖ್ಯೆ
1	ಬಾಗಲಕೋಟೆ	2.3694	10.000	550260	18342
2	ಬೆಂಗಳೂರು ಗ್ರಾಮಾಂತರ	8.6472	2.000	1120260 (ಬೆಂಗಳೂರು ನಗರ ಜಿಲ್ಲಾ ಸಮುದಾಯ ಸಂಘಟನೆಗಾಗಿ ಜಿಲ್ಲಾ ಆಡಳಿತಾತ್ಮಕ ವೆಚ್ಚದಿಂದ ರೂ. 55560 ವರ್ಗಾಯಿಸಿದೆ)	37342
3	ಬೆಂಗಳೂರು ನಗರ	2.8338	116.478	608400	20280
4	ಬೆಳಗಾವಿ	7.383	14.000	1410960	47032
5	ಬಳ್ಳಾರಿ	1.974	28.536	586200	19540
6	ಜಿಲ್ಲೆ ಬೀದರ	4.0716	15.000	461280	15376
7	ಬಿಜಾಪುರ	2.5137	7.440	750840	25028
8	ಚಾಮರಾಜನಗರ	1.062	2.500	347520	11584
9	ಚಿಕ್ಕಮಗಳೂರು	2.298	12.868	703740	23458
10	ಚಿತ್ರದುರ್ಗ	2.8014	9.757	729360	24312
11	ದಕ್ಷಿಣ ಕನ್ನಡ	3.3555	4.620	424560	14152
12	ದಾವಣಗೆರೆ	3.3354	15.000	618300	20610
13	ಧಾರವಾಡ	2.784	10.981	344700	11490
14	ಗದಗ	1.0332	2.000	274440	9148
15	ಗುಲ್ಬರ್ಗ	4.6914	10.738	1110240	37008
16	ಹಾಸನ	5.4723	9.890	1144260	38142

17	ಹಾವೇರಿ	1.9176	8.017	510840	17028
18	ಕೊಡಗು	0.7788	1.000	185820(ಮೈಸೂರು ಜಿಲ್ಲಾ ಸಮುದಾಯ ಸಂಘಟನೆಗಾಗಿ ಜಿಲ್ಲಾ ಆಡಳಿತಾತ್ಮಕ ವೆಚ್ಚದಿಂದ ರೂ. 7920 ವರ್ಗಾಯಿಸಿದೆ)	6194
19	ಕೊಲಾರ	9.3837	20.000	686580	22886
20	ಕೊಪ್ಪಳ	1.9371	8.000	401340	13378
21	ಮಂಡ್ಯ	4.008	10.450	818280	27276
22	ಮೈಸೂರು	3.7161	10.000	853380	28446
23	ರಾಯಚೂರು	3.3228	8.017	552000	18400
24	ಶಿವಮೊಗ್ಗ	3.8484	13.000	861000	28700
25	ತುಮಕೂರು	6.9747	10.423	1548420	51614
26	ಉಡುಪಿ	2.3142	2.000	285840	9528
27	ಉತ್ತರ ಕನ್ನಡ	7.0476	9.194	937980	31266

(ಡಿ.ಎಸ.ಇ.ಆರ್.ಟಿ ಯಿಂದ ಡಯಟ್ ಗೆ ಬಿಡುಗಡೆ ಮಾಡುವ ಅನುದಾನದಲ್ಲಿ ಒಂದು ಕಿರುಹೊತ್ತಿಗೆಗೆ ತಗಲುವ ವೆಚ್ಚವನ್ನು ಜಿಲ್ಲಾವಾರು ಸಮಾಲೋಚನಾ ಕಾರ್ಯಾಗಾರಕ್ಕೆ ಒಳಗಾಗುವವರ ಸಂಖ್ಯೆಗೆ ಅನುಗುಣವಾಗಿ ಕಟಾಯಿಸಿ ಬಿಡುಗಡೆ ಮಾಡುವುದು)

ದಾಖಲೀಕರಣಕ್ಕೆ ಹಾಗೂ ವರದಿಗಳನ್ನು ತಯಾರಿಸಲು ಅವಶ್ಯವಿರುವ ಡಿಜಿಟಲ್ ಕ್ಯಾಮರಾ, ಎಲ್.ಸಿ.ಡಿ ಇತ್ಯಾದಿಗಳನ್ನು ಸಂಬಂಧಿಸಿದ ಬಿ.ಆರ್.ಸಿ ಕೇಂದ್ರಗಳಿಂದ ಪಡೆದು ಕಡ್ಡಾಯವಾಗಿ ಬಳಸಲು ಸೂಚಿಸಿದೆ. ಪ್ರತಿ ಸಭೆಯ ಕನಿಷ್ಠ ಒಂದು ಫೋಟೋವನ್ನು ವರದಿಯೊಂದಿಗೆ ಸರ್ವ ಶಿಕ್ಷಣ ಅಭಿಯಾನ ಹಾಗೂ ಡಿ.ಎಸ.ಇ.ಆರ್.ಟಿಗೆ ಸಲ್ಲಿಸಲು ಸೂಚಿಸಿದೆ.

ಎಸ್.ಡಿ.ಎಂ.ಸಿ.-ಸಿ.ಎ.ಸಿ ಸಮಾಲೋಚನಾ ಕಾರ್ಯಾಗಾರಗಳನ್ನು ಯಶಸ್ವಿಗೊಳಿಸಲು ಎಲ್ಲರೂ ಒಗ್ಗೂಡಿ ಶ್ರಮಿಸಲು ಕೋರಿದೆ.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಪ್ರತಿಗಳನ್ನು ಕ್ರಮಕ್ಕಾಗಿ :

1. ನಿರ್ದೇಶಕರು, ಡಿ.ಎಸ.ಇ.ಆರ್.ಟಿ.
2. ಎಲ್ಲಾ ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು, ಡಯಟ್.
3. ಎಲ್ಲಾ ಉಪನಿರ್ದೇಶಕರು(ಆಡಳಿತ)
4. ಎಲ್ಲಾ ಕ್ಷೇತ್ರ ಶಿಕ್ಷಣ ಅಧಿಕಾರಿಗಳು
5. ಎಲ್ಲಾ ಕ್ಷೇತ್ರ ಸಂಪನ್ಮೂಲ ಸಮನ್ವಯ ಅಧಿಕಾರಿಗಳು
6. ಎಲ್ಲಾ ಜಿಲ್ಲಾ ಉಪ ಯೋಜನಾ ಸಮನ್ವಯ ಅಧಿಕಾರಿಗಳು
7. ರಾಜ್ಯದ ಕೋರ್ ತಂಡದ ಸದಸ್ಯರು
8. ರಾಜ್ಯ ಸಂಪನ್ಮೂಲ ತಂಡದ ಸದಸ್ಯರು

ಪ್ರತಿಗಳನ್ನು ಮಾಹಿತಿಗಾಗಿ :

1. ಸರ್ಕಾರದ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ.
2. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು
3. ಅಪರ ಆಯುಕ್ತರು, ಬೆಳಗಾವಿ ಮತ್ತು ಗುಲ್ಬರ್ಗಾ ಆಯುಕ್ತಾಲಯಗಳು
4. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ)
5. ನಿರ್ದೇಶಕರು (ಪ್ರೌಢ ಶಿಕ್ಷಣ)
6. ನಿರ್ದೇಶಕರು (ಅಲ್ಪ ಸಂಖ್ಯಾತ)

ಅನುಬಂಧ-1

ಕೋರ್ ಗ್ರೂಪ್

ಕ್ರ.ಸಂ.	ಹೆಸರು, ಪದನಾಮ,ವಿಳಾಸ	ದೂರವಾಣಿ ಸಂಖ್ಯೆ
1	ಶ್ರೀ ನಿರಂಜನಾರಾಧ್ಯ ವಿ.ಪಿ ಹಿರಿಯ ಸಂಶೋಧಕರು, ಮಗು ಮತ್ತು ಕಾನೂನು ಕೇಂದ್ರ, ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರು.	9448986913
2	ಶ್ರೀ ಡಾ.ಹೆಚ್.ಡಿ.ಪ್ರಶಾಂತ್, ಪ್ರವಾಚಕರು, ಹಂಪಿ ಕನ್ನಡ, ವಿ.ವಿ	08394 241334 9449630606
3	ಶ್ರೀ ಗಿರೀಶ್ ಬಿ. ಪ್ರಜಾಯತ್ನ – ಕರ್ನಾಟಕ	9448283808
4	ಶ್ರೀ ನರಸಿಂಹ ರಾಯಚೂರ ಎಸ್‌ವಿವೈಎಂ, ಶಿಕ್ಷಣವಾಹಿನಿ, ವಿಜಾಪುರ	9449596280
5	ಶ್ರೀ ಕೇಶವ ಮಳಗಿ, ಎ.ಪಿ.ಎಫ್.	9448334622
6	ಶ್ರೀ ಪ್ರಶಾಂತಬಾಬು ಟಿ.ಎ. ಬಿ.ಜಿ.ವಿ.ಎಸ್. ಐ.ಜೆ.ಎಸ್.ಸಿ. ಬೆಂಗಳೂರು	9448957666
7	ಶ್ರೀ ಎ.ಜೆ.ಆಂಟೋನಿ, ಡಿವೈಪಿಸಿ, ಎಸ್.ಎಸ್.ಎ, ಬಳ್ಳಾರಿ	9448999387
8	ಶ್ರೀಮತಿ ಮಮತ ಎಂ.ಆರ್. ಎಸ್.ವಿ.ವೈ.ಎಂ.	9449596280
	ಎಸ್.ಎಸ್.ಎ ಅಧಿಕಾರಿಗಳು	
1	ಶ್ರೀ ಎನ್.ಹೆಚ್.ಸತ್ಯಮೂರ್ತಿ, ಸಹನಿರ್ದೇಶಕರು, ಕೆಎಸ್‌ಕ್ಯೂಇ, ಬೆಂಗಳೂರು	9448999423
2	ಶ್ರೀ ಹಿರೇಮಠ್ ಉಪನಿರ್ದೇಶಕರು, ಎಸ್‌ಎಸ್‌ಎ	9448999[illegible]10
3	ಶ್ರೀಮತಿ ಪದ್ಮಶ್ರೀ] ಕಿರಿಯ ಕಾರ್ಯಕ್ರಮ ಅಧಿಕಾರಿ ಎಸ್.ಎಸ್.ಎ ಬೆಂಗಳೂರು	9448999425

ಎಸ್.ಡಿ.ಎಂ.ಸಿ, ಸಿ.ಎ.ಸಿ ರಾಜ್ಯ ಸಂಪನ್ಮೂಲ ತಂಡದವರ ವಿಳಾಸ ಮತ್ತು ದೂರವಾಣಿ ಸಂಖ್ಯೆಗಳು

ಕ್ರ.ಸಂ.	ಹೆಸರು, ಪದನಾಮ,ವಿಳಾಸ	ದೂರವಾಣಿ ಸಂಖ್ಯೆ
1	ಶ್ರೀಮತಿ ರಾಜೇಶ್ವರಿ ಡಯಟ್, ಧಾರವಾಡ	9448996065
2	ಶ್ರೀ ಪಿ.ಕೆ.ಪ್ರಕಾಶ್, ಡಯಟ್, ಬೆಂಗಳೂರು ಗ್ರಾಮಾಂತರ	9448567251
3	ಶ್ರೀಮತಿ ಆದಿಲಕ್ಷ್ಮಮ್ಮ ವಿ. ಹಿರಿಯ ಉಪನ್ಯಾಸಕರು ಡಯಟ್, ಹಾಸನ	9740085900
4	ಶ್ರೀ ಹರೀಶ್ ಆರ್, ವಿಕಾಸ ಆರ್.ಡಿ.ಟಿ. ಬೆಂಗಳೂರು	9945921463
5	ಶ್ರೀ ಎಸ್.ಕೃಷ್ಣಪ್ಪ ಡಯಟ್ ತುಮಕೂರು	9449205046
6	ಶ್ರೀ.ವಿ.ಹೆಚ್.ಬುಡ್ಡರ ,ಡಯಟ್ ವಿಜಾಪುರ	9449416263
7	ಶ್ರೀಮತಿ ಕೆ.ಎಂ.ಸುನೀತ, ಹಿರಿಯ ಉಪನ್ಯಾಸಕರು ಡಯಟ್ ಹಾವೇರಿ	9880135429
8	ಶ್ರೀ ನಾಗೇಂದ್ರ ಸಿನ್ನೂರ್, ಉಪನ್ಯಾಸಕರು, ಡಯಟ್ ಬಿಜಾಪುರ	9980098966

9	ಶ್ರೀ ನಾರಾಯಣ ಗೌಡ ಟಿ. ಹಿರಿಯ ಉಪನ್ಯಾಸಕರು,ಡಯಟ್ ರಾಯಚೂರು	9901100818
10	ಶ್ರೀ ನಾಗರಾಜ ನಾಯಕ, ಹಿರಿಯ ಉಪನ್ಯಾಸಕರು ಡಯಟ್ ಕುಮಟ (ಉತ್ತರ ಕನ್ನಡ)	9448408724
11	ಶ್ರೀ ಟಿ.ಕೆ.ರಾಘವೇಂದ್ರ, ಉಪನ್ಯಾಸಕರು, ಡಯಟ್ ಕೋಲಾರ	
12	ಶ್ರೀ ಎಸ್.ಪಿ. ಚಟಗೇರಿ, ಹಿರಿಯ ಉಪನ್ಯಾಸಕರು, ಡಯಟ್ ಇಳಕಲ್ಲ (ಬಾಗಲಕೋಟೆ)	9980646516
13	ಶ್ರೀ ಎಲ್.ಜಿ. ಫರ್ಶಿ, ಉಪನ್ಯಾಸಕರು, ಡಯಟ್ ಗದಗ	9448866687
14	ಶ್ರೀ ಹೆಚ್.ಈರಣ್ಣ, ಉಪನ್ಯಾಸಕರು, ಡಯಟ್ ಚಿತ್ರದುರ್ಗ	9448323740
15	ಶ್ರೀ ಸಿ.ಎನ್.ಪ್ರದೀಪ್ ಕುಮಾರ್, ಉಪನ್ಯಾಸಕರು, ಡಯಟ್ ಕೋಲಾರ	9845441084
16	ಶ್ರೀಮತಿ ಭಾರತಿ, ಹಿರಿಯ ಉಪನ್ಯಾಸಕರು,ಡಯಟ್ ಮಂಡ್ಯ	221115
17	ಶ್ರೀ ವಿವೇಕಾನಂದ ಎಂ. ಹಿರಿಯ ಉಪನ್ಯಾಸಕರು,ಡಯಟ್ ಬೆಳಗಾವಿ	9449503387
18	ಶ್ರೀ ಎಸ್.ಎಸ್.ಮಠ್, ಉಪನ್ಯಾಸಕರು, ಡಯಟ್ ಬೀದರ್	9845072221
19	ಶ್ರೀ ಎ.ಬ್ರಹ್ಮಾಚಾರಿ, ಹಿರಿಯ ಉಪನ್ಯಾಸಕರು, ಡಯಟ್ ದಾವಣಗೆರೆ	08192231156
20	ಶ್ರೀಮತಿ ವಿ. ಸುಶೀಲ, ಸ್ಪಂದನ, 2432, ಸೆಕ್ಟರ್ ನಂ.12, ಮಹಂತೇಶ್ ನಗರ, ಬೆಳಗಾಂ	
21	ಶ್ರೀಮತಿ ಟಿ.ವಿ. ನಾಗವೇಣಿ, ಉಪನ್ಯಾಸಕರು ರಾಜರಾಜೇಶ್ವರಿ ನಗರ, ಡಯಟ್ ಬೆಂಗಳೂರು ನಗರ	9448002721
22	ಶ್ರೀ ಎಸ್.ಟಿ.ಜವರೇಗೌಡ, ಹಿರಿಯ ಉಪನ್ಯಾಸಕರು,ಡಯಟ್ ಮೈಸೂರು	9448256309
23	ಶ್ರೀ ಡಿ.ಉದಯಕುಮಾರ್, ಬಿಆರ್‌ಸಿ,ನಂಜನಗೂಡು, ಮೈಸೂರು ಜಿಲ್ಲೆ	9845293045
24	ಶ್ರೀ ರಾಜೇಗೌಡ, ಉಪನ್ಯಾಸಕರು,ಡಯಟ್ ಚಿಕ್ಕಮಗಳೂರು	9449651488
25	ಶ್ರೀ ವಿಶ್ವನಾಥ್ ಕೆ.ವಿ., ಉಪನ್ಯಾಸಕರು, ಡಯಟ್ ಕೊಡಗು	9945926359
26	ಶ್ರೀ ನಾರಾಯಣ ಸ್ವಾಮಿ, ಪರಸ್ಪರ ಟ್ರಸ್ಟ್ ,ವೈಪಿಆರ್, ಬೆಂಗಳೂರು	
27	ಶ್ರೀ ನರಸಿಂಹರಾಜು ಪಿ. ಹಿರಿಯ ಉಪನ್ಯಾಸಕರು ಡಯಟ್ ಕಮಲಾಪುರ, ಗುಲ್ಬರ್ಗ ಜಿಲ್ಲೆ	9844596207
28	ಶ್ರೀ ಎಸ್.ಬಿ. ಉದಯ್ ಕುಮಾರ್, ನಿರ್ದೇಶಕರು, ಸಮಾಜ ವಿಕಾಸ ಕೇಂದ್ರ, ನಂ.227, 4ನೇ ಮುಖ್ಯರಸ್ತೆ, ಶ್ರೀನಗರ, ಬೆಂಗಳೂರು	
29	ಶ್ರೀ ಜಾರ್ಜಪ್ಪ ಪಿ ದೊಡ್ಡಮನಿ, ಉಪನ್ಯಾಸಕರು,ಡಯಟ್ ಕೊಪ್ಪಳ	08539/320059
30	ಶ್ರೀ ಎನ್ ಶಿವಪ್ರಕಾಶ್, ಉಪನ್ಯಾಸಕರು,ಡಯಟ್ ಮಂಗಳೂರು	9449902112
31	ಶ್ರೀ ಬಿ.ಆರ್.ಶ್ರೀಕಂಠದತ್ತ, ಉಪನ್ಯಾಸಕರು,ಡಯಟ್ ಉಡುಪಿ	082206522136
32	ಶ್ರೀ ಪ್ರವೀಣ್ ರಾವ್ , ತರಬೇತಿ ಸಂಯೋಜಕರು, ವೆಲೊರೆಡ್/ಪಡಿ–ಮಂಗಳೂರು	9448546322
33	ಶ್ರೀ ಸತ್ಯನಾರಾಯಣ ಹೆಗ್ಡೆ, ಸಂಯೋಜಕರು ಕರುಣಾ ಟ್ರಸ್ಟ್, ಯಳಂದೂರು, ಚಾಮರಾಜನಗರ	9449409022
34	ಶ್ರೀ ವಿ.ಜಿ.ಬಿದರಕುಂಡಿ, ಉಪನ್ಯಾಸಕರು, ಡಯಟ್ ಚಾಮರಾಜನಗರ	223573
35	ಶ್ರೀ ಮಹದೇವ ಕೋಟಿ, ಪ್ರಜಾಯತ್ನ–ಕರ್ನಾಟಕ	9448283808
36	ಶ್ರೀ ರೆನ್ನಿ ಡಿ ಸೋಜ, ಪಡಿ/ವೆಲೊರೆಡ್, ನಿರ್ದೇಶಕರು, ಲೋವರ್ ಬೆಂದೂರು, ಮಂಗಳೂರು	9448139744
37	ಶ್ರೀ ಕುಮಾರ್ ಶೃಂಗೇರಿ,ಎನ್.ಎಲ್.ಎಸ್.ಐ.ಯು–ಸಿ.ಸಿ.ಎಲ್– ಬೆಂಗಳೂರು	9448986913
38	ಶ್ರೀಮತಿ ಮಮತ ಬಿ., ಪರಸ್ಪರ ಸಂಸ್ಥೆ, ಯಶವಂತಪುರ, ಬೆಂಗಳೂರು	9945210502

ರಾಜ್ಯ ಶಿಕ್ಷಣ ಸಂಶೋಧನ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATION RESEARCH AND TRAINING
NO 4, 100 FT RING ROAD, BANASHANKARI 3RD STAGE
BANGALORE 560 085
E-MAIL: [illegible] http://dsert.kar.nic.in
TEL NO [illegible]
FAX NO [illegible]
DSERT

ಎಸ್.ಎಸ್.ಎ./ಎಸ್.ಡಿ.ಎಂ.ಸಿ./ಸಂ.ಮು.ಮತ್ತು ತ.ನಿ/2009-10 ದಿನಾಂಕ: 26.1.2010

ಸುತ್ತೋಲೆ

ವಿಷಯ: 2009-10ನೇ ಸಾಲಿನಲ್ಲಿ ಸಮುದಾಯ ತರಬೇತಿ ನಿರ್ವಹಿಸುವ ಬಗ್ಗೆ.
ಉಲ್ಲೇಖ: ರಾ.ಯೋ.ನಿ. ಎಸ್.ಎಸ್.ಎ. ಇವರ ಪತ್ರ ಸಂ. ಸಾಶಿಅ/ಶಿತ/ ಸ.ತರಬೇತಿ/09-10 ದಿನಾಂಕ: 3.9.2009

ಮೇಲ್ಕಾಣಿಸಿದ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ 2009-10ನೇ ಸಾಲಿನ ಸಮುದಾಯ ತರಬೇತಿಯನ್ನು ನಡೆಸಲು ಈ ಕೆಳಗಿನಂತೆ ಕ್ರಮ ಕೈಗೊಳ್ಳಲು ಸೂಚಿಸಲಾಗುತ್ತದೆ.

1. ರಾಜ್ಯದಲ್ಲಿ 3 ವರ್ಷಗಳನ್ನು ಪೂರೈಸಿರುವ ಎಸ್.ಡಿ.ಎಂ.ಸಿ.ಗಳನ್ನು ಆಗಸ್ಟ್-09 ಮತ್ತು ಸೆಪ್ಟೆಂಬರ್-09 ತಿಂಗಳುಗಳಲ್ಲಿ ಪುನರ್ ರಚನೆ ಮಾಡಲಾಗಿದೆ. ಆದುದರಿಂದ 2009-10ನೇ ಸಾಲಿನಲ್ಲಿ ಇದುವರೆಗೆ ತರಬೇತಿ ಹೊಂದದ ಸದಸ್ಯರಿಗೆ ತರಬೇತಿ ನೀಡುವುದು ಆದ್ಯ ಕರ್ತವ್ಯವಾಗಿರುತ್ತದೆ. ಈ ನಿಟ್ಟಿನಲ್ಲಿ ಕೂಡಲೇ ಅಂತಹಾ ಸದಸ್ಯರ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲು ಬ್ಲಾಕ್ ಸಮನ್ವಯಾಧಿಕಾರಿಗಳಿಗೆ ಸೂಚಿಸುವುದು.
2. ಎಸ್.ಡಿ.ಎಂ.ಸಿ. ತರಬೇತಿಗಾಗಿ ಪ್ರತಿ ಜಿಲ್ಲೆಗೆ ನಿಗಧಿಪಡಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿಯನ್ನು ಈ ಸುತ್ತೋಲೆಯೊಂದಿಗೆ ಒದಗಿಸಲಾಗುವುದು.
3. ತರಬೇತಿಗೆ ಇದುವರೆಗೂ ತರಬೇತಿ ಪಡೆಯದ ಸದಸ್ಯರು, ಹೊಸ ಸದಸ್ಯರುಗಳನ್ನು ಆದ್ಯತೆಯ ಮೇಲೆ ಆಯ್ಕೆ ಮಾಡಬೇಕು. ಇದೇ ರೀತಿ ತರಬೇತಿ ಹೊಂದದ ಗ್ರಾಮ ಪಂಚಾಯಿತಿ ಸಿಎಸಿ ಸದಸ್ಯರಿಗೂ ತರಬೇತಿ ನೀಡಬೇಕಾಗಿದ್ದು ಅನುದಾನದ ಲಭ್ಯತೆಯನ್ನು ಆಧರಿಸಿ ಸಿಎಸಿ ಸದಸ್ಯರ ಸಂಖ್ಯೆಯನ್ನು ನಿಗಧಿಪಡಿಸಿಕೊಳ್ಳಬೇಕು.
4. ಎಸ್.ಡಿ.ಎಂ.ಸಿ. ಮತ್ತು ಸಿಎಸಿ ಸದಸ್ಯರಿಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ದಿನದ ತರಬೇತಿಯನ್ನು ನೀಡುವುದು.
5. ಇದಕ್ಕೆ ಪೂರ್ವಭಾವಿಯಾಗಿ ಸಂಪನ್ಮೂಲ ವ್ಯಕ್ತಿಗಳಿಗೆ ದಿನಾಂಕ 22.2.2010ರಂದು ಉಪಗ್ರಹ ಆಧಾರಿತ ತರಬೇತಿಯನ್ನು ನೀಡಲಾಗುವುದು.
6. ಈ ಉಪಗ್ರಹ ಆಧಾರಿತ ತರಬೇತಿಗೆ ಎಲ್ಲಾ ಸಿ.ಆರ್.ಪಿ.ಗಳು, ಬಿ.ಆರ್.ಪಿ.ಗಳು ಮತ್ತು ಪ್ರತಿ ಸಂಪನ್ಮೂಲ ತಂಡಕ್ಕೆ ಒಬ್ಬರಂತೆ ಸ್ವಯಂ ಸೇವಾ ಸಂಸ್ಥೆಯ ಪ್ರತಿನಿಧಿಗಳನ್ನು ಸಂಬಂಧಿಸಿದ ಬಿ.ಆರ್.ಸಿ. ಕೇಂದ್ರಕ್ಕೆ ನಿಯೋಜನೆ ಮಾಡುವುದು.

ಜೊತೆಗೆ ಉಪನಿರ್ದೇಶಕರು(ಆಡಳಿತ), ಉಪನಿರ್ದೇಶಕರು(ಅಭಿವೃದ್ಧಿ) ಹಾಗೂ ಅವರ ಕಛೇರಿಯ ಎಲ್ಲಾ ಉಸ್ತುವಾರಿದಾರರು ಈ ತರಬೇತಿಗೆ ಹಾಜರಾಗುವುದು.

7. ಉಪಗ್ರಹ ಆಧಾರಿತ ತರಬೇತಿಗೆ ಪೂರ್ವಭಾವಿಯಾಗಿ ಡಯಟ್ ಕೇಂದ್ರದ ಒಬ್ಬ ಸುಗಮಕಾರರಿಗೆ(facilitator) ದಿನಾಂಕ 15.2.2010 ಮತ್ತು 16.2.2010ರಂದು ಡಿ.ಎಸ್.ಇ.ಆರ್.ಟಿ.ಯಲ್ಲಿ ಮುಖಾಮುಖಿ ತರಬೇತಿಯನ್ನು ಆಯೋಜಿಸಿದೆ.
8. ಪ್ರತಿ ಕೇಂದ್ರಕ್ಕೆ ಒಬ್ಬರಂತೆ ಸುಗಮಕಾರರನ್ನು ಆಯ್ಕೆ ಮಾಡಿಕೊಳ್ಳಬೇಕು. ಅವರುಗಳು ಈ ಹಿಂದೆ ಎಸ್.ಡಿ.ಎಂ.ಸಿ.–ಸಿಪಿಸಿ ಸದಸ್ಯರ ತರಬೇತಿಯಲ್ಲಿ ಉತ್ತಮವಾಗಿ ಪಾಲ್ಗೊಂಡಿದ್ದವರಾಗಿರಬೇಕು. ಇವರುಗಳಿಗೆ ಡಯಟ್ ಕೇಂದ್ರದಲ್ಲಿ ದಿನಾಂಕ 19.2.2010ರಂದು ಒಂದು ದಿನದ ತರಬೇತಿಯನ್ನು ಒದಗಿಸಬೇಕು.
9. ಬೆಂಗಳೂರಿನಲ್ಲಿ ಮತ್ತು ಡಯಟ್ ಕೇಂದ್ರದಲ್ಲಿ ಮುಖಾಮುಖಿ ತರಬೇತಿ ಪಡೆಯುವ ಸುಗಮಕಾರರಿಗೆ ನಂತರದ ಒಂದು ದಿನ ಸಿದ್ಧತೆಗಾಗಿ ಅವಕಾಶ ಮಾಡಿಕೊಡಬೇಕು. ಅವರುಗಳಿಗೆ ಉಪಗ್ರಹ ಆಧಾರಿತ ತರಬೇತಿಗೆ ಸಿದ್ಧತೆ ಮಾಡಿಕೊಳ್ಳಲು ಅವರಿಗೆ ಸಮಯದ ಅವಶ್ಯಕತೆಯಿರುತ್ತದೆ.
10. ದಿನಾಂಕ 22.2.2010ರಂದು ನಡೆಯುವ ಉಪಗ್ರಹ ಆಧಾರಿತ ತರಬೇತಿಯ ನಂತರ ದಿನಾಂಕ 25.2.2010ರಿಂದ 15.3.2010ರೊಳಗೆ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಒಂದು ದಿನದ ತರಬೇತಿಯನ್ನು ಎಸ್.ಡಿ.ಎಂ.ಸಿ. ಮತ್ತು ಸಿಪಿಸಿ ಸದಸ್ಯರಿಗೆ ಒದಗಿಸಬೇಕು.
11. ಪ್ರತಿ ಜಿಲ್ಲೆ/ತಾಲ್ಲೂಕಿಗೆ ಸಂಬಂಧಿಸಿದಂತೆ ಇರುವ ಗುರಿಗೆ ಅನುಗುಣವಾಗಿ ತರಬೇತಿ ದಿನಗಳನ್ನು [illegible] ನಿರ್ಧರಿಸಬೇಕು.
12. ಈ ತರಬೇತಿಗೆ ವಿದ್ಯಾರ್ಥಿ ಸದಸ್ಯರನ್ನು ಆಹ್ವಾನಿಸಬಾರದು.
13. ಉರ್ದು ಶಾಲೆಗಳ ಎಸ್.ಡಿ.ಎಂ.ಸಿ. ಸದಸ್ಯರ ತರಬೇತಿಗೆ ಅಗತ್ಯವಿರುವಷ್ಟು ಸಂಪನ್ಮೂಲ ವ್ಯಕ್ತಿಗಳನ್ನು ಡಯಟ್ ಕೇಂದ್ರವಲ್ಲಿನ ಸ್ವೀಕೃತಿ ಕೇಂದ್ರಕ್ಕೆ ಉಪಗ್ರಹ ಆಧಾರಿತ ತರಬೇತಿಗೆ ಆಹ್ವಾನಿಸುವುದು.
14. ಉರ್ದು ಶಾಲೆ ಎಸ್.ಡಿ.ಎಂ.ಸಿ. ಸದಸ್ಯರ ತರಬೇತಿಗೆ ಈಗಾಗಲೇ ಒದಗಿಸಿರುವ ಉರ್ದು ಮಾಧ್ಯಮದ ತರಬೇತಿ ಸಂಚಿಕೆಗಳನ್ನು ಬಳಸಬಹುದು.
15. ರಾಜ್ಯಮಟ್ಟದ ತರಬೇತಿಗೆ ಬರುವ ಡಯಟ್ ಉಪನ್ಯಾಸಕರನ್ನು ಜಿಲ್ಲೆ ಎಸ್.ಡಿ.ಎಂ.ಸಿ.–ಸಿಪಿಸಿ ಸದಸ್ಯರ ತರಬೇತಿಗೆ ನೋಡಲ್ ಅಧಿಕಾರಿಯನ್ನಾಗಿ ನೇಮಕ ಮಾಡುವುದು. ಅವರು ಜಿಲ್ಲೆಯಲ್ಲಿ ತರಬೇತಿಯನ್ನು ಯಶಸ್ವಿಗೊಳಿಸಲು ಅಗತ್ಯ ಉಸ್ತುವಾರಿ ಮಾಡುವುದು ಮತ್ತು 15.3.2010ರ ನಂತರ 20.3.2010ರೊಳಗೆ ಜಿಲ್ಲೆಯ ತರಬೇತಿ ವಿವರವನ್ನು ಕ್ರೋಢೀಕರಿಸಿ ಈ ಕಛೇರಿಗೆ ತಪ್ಪದೆ ಒದಗಿಸುವುದು.
16. ಪ್ರತಿ ಜಿಲ್ಲೆಗೆ ಒಂದರಂತೆ ಒಂದು ಗ್ರಾಮ ಪಂಚಾಯಿತಿಯನ್ನು ಆಯ್ಕೆ ಮಾಡಿ ಆ ವ್ಯಾಪ್ತಿಗೆ ಬರುವ ಎಸ್.ಡಿ.ಎಂ.ಸಿ. ಮತ್ತು ಸಿಪಿಸಿ ಸದಸ್ಯರಿಗೆ ಮಾಡಿ ಆ ಆ ಪ್ರದೇಶದಲ್ಲಿರುವ ಸಕ್ರಿಯವಾಗಿರುವ ಒಂದು ಸ್ವಯಂ ಸೇವಾ ಸಂಸ್ಥೆಯ ಮೂಲಕ

ತರಬೇತಿಯನ್ನು ಆಯೋಜಿಸಬೇಕು. ಈ ತರಬೇತಿಗೆ ಅಗತ್ಯವಿರುವ ಅನುದಾನವನ್ನು (ಒಬ್ಬರಿಗೆ 1 ದಿನಕ್ಕೆ ರೂ. 30/-ರಂತೆ) ಆಯಾ ಗ್ರಾಮ ಪಂಚಾಯಿತಿಗೆ ಬಿಡುಗಡೆ ಮಾಡುವುದು ಹಾಗೂ ತರಬೇತಿಯ ನಂತರ ಖರ್ಚು ವೆಚ್ಚದ ವಿವರ ಹಾಗೂ ಉಳಿಕೆ ಅನುದಾನವನ್ನು ಹಿಂದಕ್ಕೆ ಪಡೆಯುವುದು. ಇದರ ಪ್ರಾಯೋಗಿಕತೆ ಕುರಿತು ಡಯಟ್ [illegible] ಮೌಲ್ಯವನ್ನು (concurrent evaluation) [illegible]

17. ದಿನಾಂಕ 15.2.2010 ಮತ್ತು 16.2.2010ರಂದು ನಡೆಯುವ ಡಯಟ್ ಸುಗಮಕಾರರ ಹೆಸರನ್ನು ಕೂಡಲೇ ಮರುಪತ್ರದಲ್ಲಿ ಈ ಕಛೇರಿಗೆ ಕಳುಹಿಸುವುದು.

ನಿರ್ದೇಶಕರು
ಸಂಶೋಧನೆ ಮತ್ತು ತರಬೇತಿ

ರಾಜ್ಯದ ಎಲ್ಲಾ ಡಯಟ್ ಪ್ರಾಂಶುಪಾಲರುಗಳಿಗೆ ಅಗತ್ಯ ಕ್ರಮಕ್ಕಾಗಿ.
ಪ್ರತಿಗಳು ಮಾಹಿತಿಗಾಗಿ, [illegible]ದನೆಗಳೊಂದಿಗೆ.

1. ಮುಖ್ಯ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಇವರಿಗೆ.
2. ಮುಖ್ಯ ಆಯುಕ್ತರು, [illegible] ಇಲಾಖೆ, ಬೆಂಗಳೂರು ಇವರಿಗೆ.
3. ಹೆಚ್ಚುವರಿ ಆಯುಕ್ತರು, ಸಾ.ಶಿ. ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ ಇವರಿಗೆ.
4. ಮುಖ್ಯ ರಾಜ್ಯ ಯೋಜನಾ ನಿರ್ದೇಶಕರು, ಸ.ಶಿ.ಅ. ಬೆಂಗಳೂರು ಇವರಿಗೆ.
5. ನಿರ್ದೇಶಕರು, [illegible] ಪ್ರಾಥಮಿಕ ಶಿಕ್ಷಣ, ಉರ್ದು ಮತ್ತು ಇತರ ಅಲ್ಪ ಸಂಖ್ಯಾತ ಭಾಷೆಗಳ ನಿರ್ದೇಶನಾಲಯ ಬೆಂಗಳೂರು ಹಾಗೂ ಸಾ.ಶಿ. ಇಲಾಖೆ ಧಾರವಾಡ ಮತ್ತು ಗುಲ್ಬರ್ಗಾ, ಇವರಿಗೆ.
6. ಸಹನಿರ್ದೇಶಕರು(ಗುಣಮಟ್ಟ) ಎಸ್.ಎಸ್.ಎ. ಇವರಿಗೆ.
7. ಕಛೇರಿ ಪ್ರತಿ.

ಎಸ್.ಡಿ.ಎಂ.ಸಿ ತರಬೇತಿ ಕಾರ್ಯಾಗಾರದ ವೇಳಾಪಟ್ಟಿ

ಅವಧಿ	ವಿಷಯ	ಸಂಪನ್ಮೂಲ ವ್ಯಕ್ತಿಗಳು
1	* ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯ ಪಾಲ್ಗೊಳ್ಳುವ ಅಗತ್ಯ * ಯಶೋಗಾಥೆ ಹಂಚಿಕೆ . 40 ನಿಮಿಷ	
2	* ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಗ್ರಾಮ ಪಂಚಾಯತಿಗಳ ಪಾತ್ರ 40 ನಿಮಿಷ	
3	* ಎಸ್.ಡಿ.ಎಂ.ಸಿ ಗಳ ರಚನೆ ಮತ್ತು ಗ್ರಾಮ ಪಂಚಾಯತಿ (ಸಿ.ಪಿ.ಸಿ) ನಡುವಿನ ಸಂಬಂಧ 40 ನಿಮಿಷ	
4	* ಎಸ್.ಡಿ.ಎಂ.ಸಿ ಗಳ ಪ್ರಕಾರ್ಯಗಳು ಪೂರಕವಾಗಿರುವ ಸರ್ಕಾರಿ ಕಾರ್ಯಕ್ರಮಗಳು (ಉದಾ : ಸಾರ್ವತ್ರೀಕರಣ) 40 ನಿಮಿಷ	

Udupi R C

ಸರ್ವ ಶಿಕ್ಷಣ ಅಭಿಯಾನ — ಕರ್ನಾಟಕ
ರಾಜ್ಯ ಯೋಜನಾ ನಿರ್ದೇಶಕರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ,
ಪೂರಕ ಕಟ್ಟಡ ನೃಪತುಂಗ ರಸ್ತೆ, ಬೆಂಗಳೂರು-೫೬೦ ೦೦೧

ಸಂಖ್ಯೆ: ಸಶಿಅ/ಒಒಎಸ್‌ಸಿ/ಮಕ್ಕಳ ಹಕ್ಕು/2009-10 ದಿನಾಂಕ: 23.05.2009

ಸುತ್ತೋಲೆ

ವಿಷಯ: ಶಾಲೆಗಳಲ್ಲಿ ಮಕ್ಕಳ ಹಕ್ಕುಗಳ ಕ್ಲಬ್ ಸ್ಥಾಪಿಸುವ ಕುರಿತು.

******

ಮಕ್ಕಳನ್ನೆಲ್ಲಾ ಶಾಲೆಗೆ ಸೇರಿಸಲೇಬೇಕು, ಎಲ್ಲ ಮಕ್ಕಳೂ ಶಾಲೆಯಲ್ಲಿ ಕಲಿಯಲೇಬೇಕು ಎನ್ನುವ ಮನೋಭಾವ ಈಗ ಎಲ್ಲ ಕಡೆಯೂ ಮೂಡುತ್ತಿದೆ. ಗಂಡಿರಲಿ, ಹೆಣ್ಣಿರಲಿ ಮಕ್ಕಳು ಶಾಲೆಯ ಕಲಿಕೆಯಿಂದ ವಂಚಿತರಾಗಬಾರದು. ಸಂವಿಧಾನದ ವಿಧಿ 21 'ಎ' ರಂತೆ 6 ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳಿಗೆ **ಶಿಕ್ಷಣ ಪಡೆಯುವ ಹಕ್ಕಿದೆ.**

ಮಕ್ಕಳ ಹಕ್ಕುಗಳ ಹಿನ್ನೆಲೆಯಲ್ಲಿ ಇಂದಿನ ದಿನಗಳಲ್ಲಿ ಈ ಘೋಷಣೆ ಬದಲಾಗಿದೆ – 'ಇಂದಿನ ಮಕ್ಕಳನ್ನು ಇಂದಿನ ಪ್ರಜೆಗಳೆಂದೇ ಕಾಣಬೇಕು. ದೇಶದ ಎಲ್ಲ ಪ್ರಜೆಗಳಿದಗಿದ್ದಂತೆ ಅವರಿಗೂ ಸಂವಿಧಾನದಲ್ಲಿ ಹೇಳಿರುವ ಎಲ್ಲ ಹಕ್ಕುಗಳನ್ನು ಮಾನ್ಯ ಮಾಡಬೇಕಾದ ಕರ್ತವ್ಯ ಸರ್ಕಾರ ಮತ್ತು ಸರ್ಕಾರವನ್ನು ಪ್ರತಿನಿಧಿಸುವ ಎಲ್ಲ ಅಧಿಕಾರಿಗಳೂ ಮತ್ತು ಸಾರ್ವಜನಿಕರದ್ದು'. ಈ ಮಕ್ಕಳ ಶೈಕ್ಷಣಿಕ ಹಕ್ಕುಗಳನ್ನು ಜಾರಿಮಾಡುವ ಜೊತೆಜೊತೆಯಲ್ಲಿಯೇ ಮಕ್ಕಳ ಇತರ ಹಕ್ಕುಗಳನ್ನು ಮಾನ್ಯ ಮಾಡುವ, ಆ ಮೂಲಕ ಶಾಲೆಗಳನ್ನು ಮಕ್ಕಳ ಹಕ್ಕುಗಳ ತಾಣವನ್ನಾಗಿಸುವ ದಿಶೆಯಲ್ಲಿ ಮಕ್ಕಳ ಹಕ್ಕುಗಳ ಸಂಘಗಳಿಗೆ, ಶಿಕ್ಷಕ ವೃಂದ ಮತ್ತು ಸಮುದಾಯಕ್ಕೆ ಪ್ರಮುಖವಾದ ಸ್ಥಾನವಿದೆ.

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿಯನ್ನು ಸಾಧಿಸಲು ಹಾಗೂ ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನೆ ಮಾಡಲು ಸರ್ವ ಶಿಕ್ಷಣ ಅಭಿಯಾನ ಹಾಗೂ ಕಾರ್ಮಿ ಇಲಾಖೆಯೊಂದಿಗೆ ಪರಸ್ಪರ ಸಮನ್ವಯತೆಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಜಿಲ್ಲಾ ಹಂತದಲ್ಲಿ ಸಮಿತಿಗಳನ್ನು ರಚಿಸಲು ತಿಳಿಸಿದೆ.

ಉದ್ದೇಶ:

1. ವಿದ್ಯಾರ್ಥಿಗಳಲ್ಲಿ ಮಕ್ಕಳ ಹಕ್ಕು ಕರ್ತವ್ಯಗಳ ಅರಿವು ಮೂಡಿಸುವುದು ಹಾಗೂ ಅವು ದೊರೆಯುವ ವಾತಾವರಣ ನಿರ್ಮಾಣ ಮಾಡುವುದು.
2. ಶಿಕ್ಷಕ ಮತ್ತು ಶಿಕ್ಷಕೇತರ ವರ್ಗದಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಜಾಗೃತಿ ಮತ್ತು ಮಕ್ಕಳ ಹಕ್ಕುಗಳಿಗೆ ಬದ್ಧರಾಗಲು ಕ್ರಮ ಕೈಗೊಳ್ಳುವುದು.
3. ಎಲ್ಲಾ ಮಕ್ಕಳಿಗೂ ಅವರ ಹಕ್ಕುಗಳು ಸಂಪೂರ್ಣ ರೂಪದಲ್ಲಿ ದೊರಕುವಂತಹ ವಾತಾವರಣ ಸೃಷ್ಟಿಸುವುದು.
4. ನಾಯಕತ್ವ ಬೆಳವಣಿಗೆ
5. ಚರ್ಚೆ ನಡೆಸಿ ನಿರ್ಧಾರ ಕೈಗೊಳ್ಳುವ ಸಾಮರ್ಥ್ಯ ವೃದ್ಧಿಸುವುದು.
6. ಶಾಲಾಭಿವೃದ್ಧಿ ಮತ್ತು ಉಸ್ತುವಾರಿ ಸಮಿತಿ ಮತ್ತು ಪಂಚಾಯಿತಿಗೆ ಶಾಲೆ ಹಾಗೂ ವಿದ್ಯಾರ್ಥಿಗಳ ಪರಿಸ್ಥಿತಿ ಬಗ್ಗೆ ಮಾಹಿತಿ ನೀಡುವ ಹಾಗೂ ಸೂಕ್ತ ಕ್ರಮಗಳಿಗೆ ಒತ್ತಾಯಿಸುವ ಕೊಂಡಿಯಾಗುವುದು.

ಮಕ್ಕಳ ಹಕ್ಕುಗಳ ಸಂಘದ ರಚನೆ

ನಾಲ್ಕನೇ ತರಗತಿಯಿಂದ ಪ್ರಾರಂಭಿಸಿ ಪ್ರತಿ ತರಗತಿಯಿಂದ ಇಬ್ಬರು ಪ್ರತಿನಿಧಿಗಳು (ಗಂಡು ಮತ್ತು ಹೆಣ್ಣು ವಿದ್ಯಾರ್ಥಿಗಳಿಬ್ಬರೂ ಇದ್ದಲ್ಲಿ ಒಂದು ಹುಡುಗ ಮತ್ತು ಒಂದು ಹುಡುಗಿ ಆಯ್ಕೆ ಕಡ್ಡಾಯ).

ಪ್ರತಿನಿಧಿಗಳಿಗೆ ಎರಡು ವರ್ಷಗಳ ಕಾಲಾವಧಿಗೆ ಆಯ್ಕೆ ಮಾಡುವುದು. ಇದರ ಸಂಚಾಲಕರಾಗಿ ಕ್ರಿಯಾಶೀಲವಾದ ಅಧ್ಯಾಪಕರೊಬ್ಬರು ನಿರ್ವಹಿಸುತ್ತಾರೆ.

ಸಂಘದ ಚಟುವಟಿಕೆಗಳು

ಆಯಾ ಶಾಲೆಯ ಪರಿಸರ, ಚರಿತ್ರೆ, ಪ್ರಗತಿ ಆಧರಿಸಿ ಸಂಘವು ವಿವಿಧ ಚಟುವಟಿಕೆಗಳನ್ನು ನಿರ್ಧರಿಸಿ ನಡೆಸಬಹುದು. ಕೆಲವು ಸೂಚಿತ ಚಟುವಟಿಕೆಗಳು ಮುಂದಿವೆ:

- ಪ್ರತಿ ವಿದ್ಯಾರ್ಥಿಗೂ ಮಕ್ಕಳ ಹಕ್ಕುಗಳ ತಿಳುವಳಿಕೆ ನೀಡಲು ಕಾರ್ಯಕ್ರಮ ಮಾಡುವುದು.
- ಮಕ್ಕಳಿಗೆ ಶಾಲೆಯಲ್ಲಿ ಮತ್ತು ಹೊರಗೆ ತಮ್ಮ ಮೇಲಾಗುವ ಅನ್ಯಾಯ, ದೌರ್ಜನ್ಯ, ಹಿಂಸೆ, ಶೋಷಣೆ, ಮೋಸ, ಒಟ್ಟಿನಲ್ಲಿ ತಮ್ಮ ಹಕ್ಕುಗಳ ಉಲ್ಲಂಘನೆಯಾದಲ್ಲಿ ಅದನ್ನು ಗುರುತಿಸಲು. ಸೂಕ್ತ ವಿಧಾನದಲ್ಲಿ ಪ್ರತಿಭಟಿಸಲು, ದೂರು ದಾಖಲು ಮಾಡಲು ಅರಿವು ಮೂಡಿಸುವುದು.
- ಮಕ್ಕಳಿಗೆ ತಮ್ಮ ಮೇಲಲ್ಲದೆ ಇತರರ ಮೇಲೆ ಇಂತಹ ಹಕ್ಕುಗಳ ಉಲ್ಲಂಘನೆಯಾದಾಗ ಅದನ್ನು ಗುರುತಿಸಿ ಸೂಕ್ತ ಕ್ರಮಕ್ಕಾಗಿ ಒತ್ತಾಯಿಸಲು ಪೋಷಕವಾಗುವ ಚಟುವಟಿಕೆಗಳು.
- ಶಾಲೆಯಲ್ಲಿ ದೂರು ಪೆಟ್ಟಿಗೆ, ಪ್ರಶ್ನೆ ಪೆಟ್ಟಿಗೆ ಸ್ಥಾಪಿಸಲು ಮತ್ತು ಅಲ್ಲಿ ಬರುವ ಪ್ರಶ್ನೆ, ದೂರುಗಳನ್ನು ಸೂಕ್ತ ವಿಧಾನದಲ್ಲಿ ಮುಖ್ಯೋಪಾಧ್ಯಾಯರು ಪರೀಕ್ಷಿಸಲು ಮತ್ತು ಕ್ರಮ ಕೈಗೊಳ್ಳಲು ಸಂಘವು ಸಹಕರಿಸುವುದು.
- ಮಕ್ಕಳ ಹಕ್ಕುಗಳಿಗೆ ಸಂಬಂಧಿಸಿದ ಭಿತ್ತಿಪತ್ರ, ಗೋಡೆ ಪತ್ರಿಕೆಗಳ ನಿರ್ಮಾಣ ಮತ್ತು ಪ್ರದರ್ಶನ.
- ವಿದ್ಯಾರ್ಥಿಗಳು ಮೆಚ್ಚಿದ ಶಿಕ್ಷಕ / ಶಿಕ್ಷಕಿಯರನ್ನು ಗುರುತಿಸಿ ಗೌರವಿಸುವುದು.
- ಶಾಲೆಗೆ ಬಾರದ / ಸೇರದ / ಹಾಜರಾಗದ ಮಕ್ಕಳನ್ನು ಗುರುತಿಸಿ ಸೂಕ್ತ ಅಂಕಿ ಸಂಖ್ಯೆಯನ್ನು ಇಟ್ಟುಕೊಳ್ಳುವುದು ಮತ್ತು ಆ ಮಕ್ಕಳನ್ನು ಶಿಕ್ಷಣಕ್ಕೆ ಕರೆತರುವ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವುದು.
- ಯಾವುದಾದರೂ ಕುಟುಂಬ ಶಾಲೆಗೆ ಹೋಗುತ್ತಿರುವ ಮಕ್ಕಳನ್ನೂ ಸೇರಿಸಿಕೊಂಡು ಕೆಲಸ ಹುಡುಕಿಕೊಂಡು ವಲಸೆ ಹೋಗುವ ಆ ಮೂಲಕ ಮಕ್ಕಳ ಶಿಕ್ಷಣ ತಪ್ಪಿಸುವ ಸೂಚನೆ ಕಂಡುಬಂದಲ್ಲಿ ಅದನ್ನು ಸಂಬಂಧ ಪಟ್ಟವರ ಗಮನಕ್ಕೆ ತಂದು ಆ ಕುರಿತು ಕ್ರಮ ಕೈಗೊಳ್ಳಲು ಒತ್ತಾಯಿಸುವುದು.
- ಬಾಲ್ಯವಿವಾಹ/ದೇವದಾಸಿ ಆಚರಣೆ ಬಗ್ಗೆ ಮುನ್ನೆಚ್ಚರಿಕೆ ವಹಿಸಿ ಸಂಬಂಧಿಸಿದವರ ಮನ ಒಲಿಕೆ; ಅಗತ್ಯವೆನಿಸಿದಾಗ ಆಡಳಿತ, ಶಿಕ್ಷಣ ಇಲಾಖೆಗೆ, ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ ಹಾಗೂ ಪಂಚಾಯಿತಿಗೆ ದೂರು ನೀಡಲು ಪ್ರೇರಣೆ ನೀಡುವ ವಾತಾವರಣ ನಿರ್ಮಾಣ.
- ಮಕ್ಕಳನ್ನು ಜೀತ/ಕೆಲಸ/ದುಡಿಮೆಗೆ ತಳ್ಳಿದ ಅಥವಾ ತಳ್ಳುವ ಪ್ರಸಂಗಗಳ ಬಗ್ಗೆ ತಕ್ಷಣ ಸಂಬಂಧಿಸಿದವರಿಗೆ ಮಾಹಿತಿ ರವಾನಿಸುವುದು.
- ಮಕ್ಕಳು ಮಾದಕ ವಸ್ತುಗಳ ವ್ಯಸನಿಗಳಾಗಿದ್ದಲ್ಲಿ, ಅಡ್ಡದಾರಿ ಹಿಡಿದಿದ್ದಲ್ಲಿ, ಅಂತಹ ವಿದ್ಯಾರ್ಥಿ/ ವಿದ್ಯಾರ್ಥಿನಿಗಳ ಸಮೂಹದ ಒಳಿತಿಗಾಗಿ ಅವರಿಗೆ ತಿಳಿಹೇಳಲು, ಸಂಬಂಧಿತರಿಗೆ ಮಾಹಿತಿ ರವಾನಿಸುವುದು.
- ಮಕ್ಕಳಿಗಾಗಿ ಶಾಲೆಯಲ್ಲಿರುವ ವ್ಯವಸ್ಥೆಗಳು ಗ್ರಂಥಾಲಯ, ಪ್ರಯೋಗಾಲಯ, ರೇಡಿಯೋ, ಆಟದ ಸಾಮಾಗ್ರಿಗಳು, ಶಾಲಾ ಕೊಠಡಿಗಳು, ಶಾಲಾ ಆವರಣ, ಶೌಚಾಲಯ, ಇತ್ಯಾದಿಗಳ ದುರುಪಯೋಗ ಅಥವಾ ಅಸಮರ್ಪಕ ನಿರ್ವಹಣೆ, ವ್ಯವಸ್ಥೆಯಲ್ಲಿ ಕೊರತೆ ಕಂಡು ಬಂದಲ್ಲಿ ಅದನ್ನು ಸಂಬಂಧಿಸಿದವರ ಗಮನಕ್ಕೆ ತರುವುದು.
- ಪ್ರತಿ ಗ್ರಾಮ ಪಂಚಾಯಿತಿಯಲ್ಲಿ ಪ್ರತಿ ವರ್ಷ ಮಕ್ಕಳ ಹಕ್ಕುಗಳ ಬಗ್ಗೆ ವಿಶ್ಲೇಷಿಸಲೆಂದೇ ನಡೆಯುವ 'ಮಕ್ಕಳ ಗ್ರಾಮ ಸಭೆ' ಯಲ್ಲಿ ಶಾಲಾ ಮಕ್ಕಳೂ ಸಹ ಭಾಗವಹಿಸಿ ತಮ್ಮ ಸಮುದಾಯದಲ್ಲಿ ಮಕ್ಕಳಿಗೆ ತೊಂದರೆ ಆಗಿರುವ ವಿಚಾರ ವ್ಯವಸ್ಥೆಗಳ ಬಗ್ಗೆ ಪಂಚಾಯಿತಿದಾರರ ಗಮನ ಸೆಳೆದು ಸೂಕ್ತ ಕ್ರಮಗಳಿಗಾಗಿ ಆಗ್ರಹಿಸುವುದು.

❖ ಮಕ್ಕಳ ಹಕ್ಕು ಸಂಬಂಧಿತ ಮೇಳ / ಚರ್ಚೆ, ಪ್ರಬಂಧ ರಚನೆ, ಭಿತ್ತಿಪತ್ರ ರಚನೆ ಇತ್ಯಾದಿ ಸ್ಪರ್ಧೆಗಳ ಏರ್ಪಾಡು.

ಕಾರ್ಯಕ್ರಮ ಸಂಘಟನೆ:

❖ ಸಂಚಾಲಕರಾದ ಅಧ್ಯಾಪಕರು ಮಕ್ಕಳ ಆಯ್ಕೆ ಮಾಡಲು ಕ್ರಮ ಮಾಡುವುದು. ತದನಂತರ ಸದಸ್ಯರು ವಾರ್ಷಿಕ ಯೋಜನೆಯನ್ನು ತಯಾರು ಮಾಡಲು ಮಾರ್ಗದರ್ಶನ ನೀಡುವುದು.

❖ ಶಾಲಾ ಅನುದಾನದಲ್ಲಿ ಸ್ವಲ್ಪ ಹಣ ಅಥವಾ ಎನ್.ಪಿ.ಇ.ಜಿ.ಎಲ್ ನಲ್ಲಿ ಈ ಕಾರ್ಯತಂತ್ರ ಅಳವಡಿಸಿದ್ದರೆ, ಸಂಪುಟ ಚಟುವಟಿಕೆಗೆ ಈ ಹಣ ಬಳಸಬಹುದು.

❖ ಮಕ್ಕಳ ಹಕ್ಕುಗಳ ಸಂಘ ವರ್ಷದ ಕೊನೆಗೆ ತಾನು ನಿರ್ವಹಿಸಿದ ಕಾರ್ಯದ ವರದಿಯೊಂದನ್ನು ಸಿದ್ಧಪಡಿಸಿ ಶಾಲಾ ಮ್ಯಾಗಝೀನಿನಲ್ಲಿ ಅಳವಡಿಸಬೇಕು.

❖ ವಿಶೇಷವಾದ ಚಟುವಟಿಕೆಗಳು/ಸಾಧನೆಗಳನ್ನು ತಮ್ಮ ನಿಕಟ ಮೇಲಧಿಕಾರಿಗಳಿಗೆ ವರದಿ ಮಾಡುವುದು.

ರಾಜ್ಯ ಯೋಜನಾ ನಿರ್ದೇಶಕರು
ಸರ್ವ ಶಿಕ್ಷಣ ಅಭಿಯಾನ

ಕ್ರಮಕ್ಕಾಗಿ

1. ರಾಜ್ಯದ ಎಲ್ಲಾ ಡಿಡಿಪಿಐ ಮತ್ತು ಡಿವೈಪಿಸಿ ಯವರಿಗೆ
2. ರಾಜ್ಯದ ಎಲ್ಲಾ ಬಿ.ಇ.ಒ/ಬಿಆರ್.ಸಿ ಯವರಿಗೆ. ಈ ಪತ್ರ ತಲುಪಿದ ಕೂಡಲೇ ಸಿ.ಎ.ಇ.ಒ/ಸಿ.ಆರ್.ಪಿ ಸಭೆ ಕರೆದು ಬ್ಲಾಕ್ ಯೋಜನೆ ಸಿದ್ಧಪಡಿಸಬೇಕು ಹಾಗೂ ಸುತ್ತೋಲೆಯ ಪ್ರತಿಗಳನ್ನು ಒದಗಿಸಬೇಕು.

ಮಾಹಿತಿಗೆ ಮತ್ತು ಕ್ರಮಕ್ಕಾಗಿ

1. ಎಸಿಪಿಐ ಧಾರವಾಡ – ಗುಲ್ಬರ್ಗಾ
2. ನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಗುಲ್ಬರ್ಗಾ ಧಾರವಾಡ. ಪ್ರಾಥಮಿಕ ಶಿಕ್ಷಣ ಬೆಂಗಳೂರು–ಡಿಎಸ್ಇಆರ್‌ಟಿ ಬೆಂಗಳೂರು, ಅಲ್ಪಸಂಖ್ಯಾತ ಭಾಷೆಗಳು. ಸರ್ವ ಶಿಕ್ಷಣ ಅಭಿಯಾನ–ಬೆಂಗಳೂರು.
3. ಸಹನಿರ್ದೇಶಕರು ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಬೆಳಗಾವಿ, ಗುಲ್ಬರ್ಗಾ, ಮೈಸೂರು, ಎಸಿಪಿಐ ಕಛೇರಿ ಧಾರವಾಡ/ಗುಲ್ಬರ್ಗಾ. ಪ್ರಿನ್ಸಿಪಾಲರು ಸಿಟಿಇ – ಮೈಸೂರು, ಮಂಗಳೂರು – ಚಿತ್ರದುರ್ಗ – ಗುಲ್ಬರ್ಗಾ , ಜಮಖಂಡಿ, ಬೆಳಗಾವಿ.
4. ರಾಜ್ಯದ ಎಲ್ಲಾ ಡಿಡಿಪಿಐ ಅಭಿವೃದ್ಧಿ – ಡಯಟ್ ಸಂಸ್ಥೆಗಳಿಗೆ
5. ಈ ಕಛೇರಿಯ ಎಲ್ಲಾ ಅಧಿಕಾರಿಗಳಿಗೆ

ಮಾಹಿತಿಗೆ ಇವರಿಗೆ ಸಲ್ಲಿಸಿದೆ.

1. ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಬಹುಮಹಡಿಗಳ ಕಟ್ಟಡ, ಬೆಂಗಳೂರು
2. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು

D:\2008-09 SUTHOLE\CHILD RIGHTS 24.04.09 doc

ಕರ್ನಾಟಕ ಸರ್ಕಾರ

ಸಾರ್ವಜನಿಕ ಶಿಕ್ಷಣ ಇಲಾಖೆ

ಆಯುಕ್ತರ ಕಛೇರಿ, ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು – 1

ಸಂಖ್ಯೆ:ಅ2(2)ಶಾ.ಮ.ದೈ.ಶಿ.ನಿ–1/2007–08 ದಿನಾಂಕ: 30–08–2007.

ಸು ತ್ತೋ ಲೆ

ವಿಷಯ: ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ದೈಹಿಕ ಶಿಕ್ಷೆ ನಿಷೇಧಿಸುವ ಬಗ್ಗೆ.

ಉಲ್ಲೇಖ: 1) ದೆಹಲಿ ಉಚ್ಛನ್ಯಾಯಾಲಯದ ಆದೇಶ ದಿನಾಂಕ: 01–12–2000.
2) ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 83 ಪಿಜಿಸಿ 2005, ದಿನಾಂಕ: 01–06–2005.
3) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಸಾ.ಸಂ.ಅ.ಶಿ. ಅರಿವು 1/ 2005–06, ದಿನಾಂಕ: 16–01–2006.
4) ಈ ಕಛೇರಿಯ ಸುತ್ತೋಲೆ ಸಂಖ್ಯೆ: ಅ1(4) ಪ್ರಾ.ಶಿ. ಎಸ್.ಡಿ.ಎಂ.ಸಿ.ಮರ 1/ 2006–07, ದಿನಾಂಕ: 13–07–2006.

ಶಿಕ್ಷಣ ಪ್ರತಿ ಮಗುವಿನ ಮೂಲಭೂತ ಹಕ್ಕಾಗಿದೆ. ಕರ್ನಾಟಕದಲ್ಲಿ ಶಾಲಾ ವಯಸ್ಸಿನ ಎಲ್ಲಾ ಮಕ್ಕಳನ್ನು ಶಾಲೆಗಳಿಗೆ ದಾಖಲಿಸಲು ಹಾಗೂ ಶಾಲಾ ಹಂತ ಮುಗಿಯುವವರೆಗೂ ಶಾಲೆಗಳಲ್ಲಿ ಉಳಿಸಿಕೊಂಡು, ಅವರಿಗೆ ಜೀವನಕ್ಕೆ ಉಪಯುಕ್ತವಾದ ಗುಣಾತ್ಮಕ ಶಿಕ್ಷಣ ನೀಡಲು ವಿವಿದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಅನೇಕ ಮಕ್ಕಳು ಶಾಲೆಗಳಿಗೆ ದಾಖಲಾಗಿ ನಂತರ ಶಾಲೆ ಬಿಡುತ್ತಿರುವುದಕ್ಕೆ ಹಲವಾರು ಕಾರಣಗಳಿದ್ದು, ಅವುಗಳ ಪೈಕಿ ಅಹಿತಕರವಾದ ಶಾಲೆಯ ವಾತಾವರಣ, ಕೆಲವು ಶಿಕ್ಷಕರಿಗೆ ಬಾಲ ಮನೋವಿಜ್ಞಾನದ ಮೂಲಜ್ಞಾನ ಇಲ್ಲದಿರುವುದು ಹಾಗೂ ನಕಾರಾತ್ಮಕ ಮನೋಧರ್ಮವೂ ಸಹ ಕಾರಣವಾಗಿರುತ್ತದೆ.

ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿ ಶಿಕ್ಷಕರು ಮಕ್ಕಳಿಗೆ ಕಠಿಣ ಶಿಕ್ಷೆಗಳನ್ನು ನೀಡುತ್ತಿರುವುದು ಇಲಾಖೆಯ ಗಮನಕ್ಕೆ ಬಂದಿದ್ದು ಮಾಧ್ಯಮಗಳಲ್ಲೂ ಸಹ ಪ್ರಕಟಗೊಳ್ಳುತ್ತಿದೆ. ಇದರಿಂದ, ಮಕ್ಕಳ ಭವಿಷ್ಯದ ಮೇಲೆ ಘೋರವಾದ ವ್ಯತಿರಿಕ್ತ ಪರಿಣಾಮ ಬೀರುವುದಲ್ಲದೆ ಶಿಕ್ಷಕರು, ಶಾಲೆ, ಶಾಲಾಡಳಿತ ಮತ್ತು ಶಿಕ್ಷಣ ವ್ಯವಸ್ಥೆಯು ಸಮಾಜದ ಕೆಂಗಣ್ಣಿಗೆ ಗುರಿಯಾಗಿವೆ. ಉದಾಹರಣೆಗೆ:–

- ಮಂಡ್ಯ ಮತ್ತು ಬೆಂಗಳೂರು ನಗರ ಜಿಲ್ಲೆಗಳಲ್ಲಿ ಶಾಲಾ ಮಕ್ಕಳ ಮೇಲೆ ಲೈಂಗಿಕ ಹಲ್ಲೆ
- ಬೆಂಗಳೂರು ನಗರದಲ್ಲಿ ಮಕ್ಕಳಿಗೆ ಶಿಕ್ಷಕರಿಂದ ಕಠಿಣ ದೈಹಿಕ ಶಿಕ್ಷೆ
- ಹಾಸನ ಜಿಲ್ಲೆಯಲ್ಲಿ ಹಸಿದ ಮಗುವು, ಮಧ್ಯಾಹ್ನ ಬಿಸಿಯೂಟದಲ್ಲಿ ಇನ್ನೂ ಸ್ವಲ್ಪ ಅನ್ನ ಬಡಿಸಿರೆಂದು ಕೇಳಿದಾಗ ಶಿಕ್ಷಕರಿಂದ ಹೊಡೆತ
- ಶಾಲಾಡಳಿತದ ನಿರ್ಲಕ್ಷ್ಯದಿಂದ ಶಾಲಾ ಮಗುವಿನ ಮೇಲೆ ಇಟ್ಟಿಗೆ ಬಿದ್ದು ಸಾವು
- ಸುರಕ್ಷಿತವಲ್ಲದ ಶಾಲಾ ಕಟ್ಟಡದಿಂದ ಮಗು ಬಿದ್ದು ಸಾವು ಇತ್ಯಾದಿಗಳು ಅತ್ಯಂತ ಶೋಚನೀಯವಾದಂತಹ ಪ್ರಕರಣಗಳಾಗಿರುತ್ತವೆ.

ಬಹುತೇಕ ಸಂದರ್ಭಗಳಲ್ಲಿ ಮಕ್ಕಳು ತಮ್ಮ ಮೇಲಿನ ದೌರ್ಜನ್ಯ ಮತ್ತು ಶಿಕ್ಷೆಗಳಿಗೆ ಯಾವುದೇ ಪ್ರತಿರೋಧವಿಲ್ಲದೆ ತಮ್ಮನ್ನೇ ಅರ್ಪಿಸಿಕೊಂಡು ಮೂಕರಾಗಿ ಶಿಕ್ಷೆ ಅನುಭವಿಸುತ್ತಾರೆ. ಇನ್ನು ಕೆಲವು ಸಂದರ್ಭಗಳಲ್ಲಿ ತಮ್ಮ ಆಳವಾದ ನೋವನ್ನು ತಮ್ಮ ಭಾವನೆಗಳ ಮೂಲಕ ವ್ಯಕ್ತಪಡಿಸುತ್ತಾರಾದರೂ ಯಾರ ಗಮನಕ್ಕೂ ಬಾರದೆ ಮಾನಸಿಕವಾಗಿ ತೀವ್ರ ಯಾತನೆ ಅನುಭವಿಸುತ್ತಾ ಮೌನದ ಮೊರೆ ಹೋಗುತ್ತಾರೆ. ಇದು ಇವರ ಮೇಲೆ ನಂತರದ ಕ್ರೌರ್ಯಗಳಿಗೂ ಕಾರಣವಾಗುತ್ತದೆ.

ದೈಹಿಕ ಶಿಕ್ಷೆ ಎಂದರೆ:

- ವಿದ್ಯಾರ್ಥಿಗಳನ್ನು ಶಾಲಾ ಆವರಣದಲ್ಲಿ ಓಡಲು ಸೂಚಿಸುವುದು
- ತುಂಬಾ ಸಮಯ ತರಗತಿಯಲ್ಲಿ ನಿಲ್ಲಿಸುವುದು
- ಕುರ್ಚಿ ರೂಪದಲ್ಲಿ ಕೂರಿಸುವುದು
- ಕೀಲುಗಳ ಮೇಲೆ ಹೊಡೆಯುವುದು
- ಚಿವುಟುವುದು
- ಕೋಲು ಅಥವಾ ಸ್ಕೇಲ್‌ನಿಂದ ಹೊಡೆಯುವುದು
- ಕೆನ್ನೆಗೆ ಹೊಡೆಯುವುದು
- ಮಕ್ಕಳ ಎದುರಿನಲ್ಲಿ ನಿಂದಿಸುವುದು
- ಮಾನಸಿಕವಾಗಿ ಹಿಂಸಿಸುವುದು
- ಶಾಲಾ ಕೊಠಡಿಯಲ್ಲಿ ಕೂಡಿ ಹಾಕುವುದು
- ಲೈಂಗಿಕ ಕಿರುಕುಳದ ಎಲ್ಲಾ ಪ್ರಯತ್ನಗಳು, ಇತ್ಯಾದಿಗಳು ಒಳಗೊಂಡಿರುತ್ತವೆ.

ಈ ರೀತಿಯ ಚಟುವಟಿಕೆಗಳು ಮಕ್ಕಳ ಮನಸ್ಸಿನ ಮೇಲೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಉಂಟು ಮಾಡಿ, ಅವಮಾನ ಮತ್ತು ಆಘಾತಕ್ಕೆ ಅವಕಾಶ ಮಾಡಿಕೊಡುವುದರಿಂದ ಮಕ್ಕಳ ಕಲಿಕೆಯ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ.

ಭಯದ ವಾತಾವರಣದಲ್ಲಿ ಮಕ್ಕಳು ಕಲಿಕೆಯ ಕಡೆ ಗಮನ ನೀಡದೆ ದೈಹಿಕ ಮತ್ತು ಮಾನಸಿಕ ಹಿಂಸೆಯನ್ನು ಮೌನವಾಗಿ ಸ್ವೀಕರಿಸಿ ಕಡೆಗೊಮ್ಮೆ ಕ್ರೌರ್ಯದ ಮೊರೆ ಹೋಗುವ ಸಾಧ್ಯತೆ ಇದ್ದು, ಶಾಲೆಗಳಲ್ಲಿ ಮತ್ತು ಸಮಾಜದಲ್ಲಿ ಅಶಿಸ್ತಿಗೆ ಅವಕಾಶವಾಗುತ್ತದೆ.

ಮಕ್ಕಳಿಗೆ ನೀಡುವ ಯಾವುದೇ ರೀತಿಯ ಶಿಕ್ಷೆ ಮಾನವ ಹಕ್ಕುಗಳ ಉಲ್ಲಂಘನೆಯಾಗುತ್ತದೆ. ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಮಕ್ಕಳನ್ನು ಶಿಸ್ತಿಗೆ ಒಳಪಡಿಸುವುದು, ದೈಹಿಕ ಶಿಕ್ಷೆ ನೀಡುವುದು ಒಂದು ಸಾಮಾನ್ಯ ಕ್ರಮ ಎಂದು ಕೆಲವು ಶಿಕ್ಷಕರು ಭಾವಿಸಿರುವುದು ಇಲಾಖೆಯ ಗಮನಕ್ಕೆ ಬಂದಿದೆ. ಮುಗ್ಧ ಮಕ್ಕಳನ್ನು ಶಿಕ್ಷೆಯ ಮೂಲಕ ಶಿಸ್ತಿಗೆ ಒಳಪಡಿಸುವುದಾಗಲಿ, ಭಯದ ವಾತಾವರಣದಲ್ಲಿ ಉತ್ತಮ ಮಟ್ಟದ ಕಲಿಕೆಯನ್ನು ಸಾಧಿಸುವುದಾಗಲಿ ಸಾಧ್ಯವಾಗುವುದಿಲ್ಲ.

ವಿದ್ಯಾರ್ಥಿಗಳ ವರ್ತನೆ ಸುಧಾರಣೆಗೆ, ಶಿಕ್ಷೆಗಿಂತ ಅಕ್ಕರೆಯೇ ಪರಿಣಾಮಕಾರಿಯಾದ ಅಸ್ತ್ರವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಮಕ್ಕಳು ನಿರ್ಭಯವಾದ ವಾತಾವರಣದಲ್ಲಿ ಸ್ವಚ್ಛಂದತೆಯಿಂದ ಉಲ್ಲಾಸದಾಯಕವಾಗಿ ಕಲಿಯಲು ಅವಕಾಶ ಮಾಡಿಕೊಡಲು, ದೈಹಿಕ ಶಿಕ್ಷೆಯನ್ನು ದೆಹಲಿ ಉಚ್ಚ ನ್ಯಾಯಾಲಯ ದಿನಾಂಕ: 01-12-2000 ದ ತೀರ್ಪಿನಲ್ಲಿ ನಿಷೇಧಿಸಿದೆ.

ಮಕ್ಕಳು ವಯಸ್ಕರಂತೆಯೇ ಅತ್ಯಂತ ಮಾನವೀಯ ಮತ್ತು ಸೂಕ್ಷ್ಮ ಗುಣವುಳ್ಳವರಾಗಿರುತ್ತಾರೆ. ಅವರನ್ನು ಸುರಕ್ಷತಾ ವಾತಾವರಣದಲ್ಲಿ ಬೆಳೆಸುವ ಮತ್ತು ನೋಡಿಕೊಳ್ಳುವ ಅವಶ್ಯಕತೆ ಇರುತ್ತದೆ. ಅಹಿಂಸೆಯನ್ನು ಉನ್ನತ ಸಾಂಸ್ಕೃತಿಕ ಮೌಲ್ಯವಾಗಿ ಆಚರಿಸುವುದು, ಮಕ್ಕಳನ್ನು ಮಕ್ಕಳನ್ನಾಗಿಯೇ ನೋಡುವುದರ ಮೂಲಕ ಆರಂಭವಾಗುತ್ತದೆ. ಮಕ್ಕಳೊಂದಿಗೆ ಅಹಿಂಸಾತ್ಮಕವಾಗಿ ನಡೆದುಕೊಳ್ಳುವುದು ವಯಸ್ಕರರ ಕರ್ತವ್ಯವಾಗಿದೆ. ಈ ರೀತಿಯ ಸಂಸ್ಕೃತಿಯನ್ನು ಬೆಳೆಸುವುದರಿಂದ ಮಕ್ಕಳನ್ನು ಜವಾಬ್ದಾರಿಯುತ ನಾಗರೀಕರನ್ನಾಗಿ ಬೆಳಸಲು ಸಾಧ್ಯವಾಗುತ್ತದೆ.

ಶಿಕ್ಷೆಯಿಂದ ಮುಕ್ತವಾದ ವಾತಾವರಣ ಹಾಗೂ ಸುರಕ್ಷತೆಯನ್ನು ಮಕ್ಕಳಿಗೆ ಒದಗಿಸುವುದು, ಶಾಲೆಗಳ, ಶಿಕ್ಷಕರ, ಆಡಳಿತ ಮಂಡಳಿಗಳ, ಶೈಕ್ಷಣಿಕ ಆಡಳಿತಗಾರರ ಜವಾಬ್ದಾರಿಯಾಗಿದೆ.

ಈ ಹಿನ್ನೆಲೆಯಲ್ಲಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುವುದನ್ನು ನಿಲ್ಲಿಸಲು ಉಲ್ಲೇಖದಲ್ಲಿನ ಸರ್ಕಾರದ ಮತ್ತು ಇಲಾಖೆಯ ಸುತ್ತೋಲೆಗಳಲ್ಲಿ ಹಲವಾರು ಸೂಚನೆಗಳನ್ನು ನೀಡಿದ್ದರೂ ಸಹ ಈಗಲೂ ಶಾಲೆಗಳಲ್ಲಿ ಮಕ್ಕಳಿಗೆ ದೈಹಿಕ ಶಿಕ್ಷೆ ನೀಡುತ್ತಿರುವ ಬಗ್ಗೆ ದೂರುಗಳು ಇಲಾಖೆ/ ಸರ್ಕಾರದ ಗಮನಕ್ಕೆ ಬಂದಿವೆ. ಮಾಧ್ಯಮಗಳಲ್ಲೂ ಸಹ ಈ ವಿಷಯಗಳನ್ನು ಗಮನಿಸಲಾಗಿದೆ.

ಈ ಬಗ್ಗೆ ಘನ ನ್ಯಾಯಾಲಯ ಮತ್ತು **ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ** ಇದನ್ನು ತೀವ್ರವಾಗಿ ಪರಿಗಣಿಸಿ ತಮ್ಮ ಗಂಭೀರವಾದ ಕಳವಳವನ್ನು ವ್ಯಕ್ತಪಡಿಸಿ ಮಕ್ಕಳ ಮೇಲಿನ ದೈಹಿಕ ಶಿಕ್ಷೆಗಳನ್ನು ಹತ್ತಿಕ್ಕಲು ನಿರ್ದೇಶಿಸಿವೆ.

ಈ ಗುರುತರ ಜವಾಬ್ದಾರಿ ಸಮರ್ಪಕವಾಗಿ ನಿರ್ವಹಿಸಲು ಎಲ್ಲಾ ಅಧಿಕಾರಿಗಳು, ಆಡಳಿತ ಮಂಡಳಿಗಳು, ಸ್ವಯಂ ಸೇವಾ ಸಂಸ್ಥೆಗಳು, ಶಿಕ್ಷಕರು ಹಾಗೂ ಪೋಷಕರು ಇವರೆಲ್ಲರ ಸಕ್ರಿಯ ಸಹಕಾರ ಅಗತ್ಯ

ಈ ಹಿನ್ನೆಲೆಯಲ್ಲಿ ಈಗಾಗಲೇ ಹೊರಡಿಸಿರುವ ಸರ್ಕಾರದ ಮತ್ತು ಈ ಕಛೇರಿಯ ಸುತ್ತೋಲೆಗಳಲ್ಲಿನ ಎಲ್ಲಾ ಸೂಚನೆಗಳನ್ನು ಪುನರುಚ್ಚರಿಸುತ್ತಾ ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಈ ಕೆಳಕಂಡ ಸೂಚನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ತಿಳಿಸಿದೆ.

1) ಶಾಲೆಗಳಲ್ಲಿ ದೈಹಿಕ ಶಿಕ್ಷೆ ನೀಡುವುದನ್ನು ಪ್ರಶ್ನಿಸುವ ಮತ್ತು ದೂರುಗಳನ್ನು ದಾಖಲಿಸುವ ಮನೋಸ್ಥೈರ್ಯವನ್ನು ಮೂಡಿಸುವುದು. ಶಿಕ್ಷಕರಿಗೆ ಮಾನವೀಯ ಮೌಲ್ಯಗಳನ್ನು ಆಧರಿಸಿದ ಹಾಗೂ ಮಕ್ಕಳ ಮನೋ ವಿಜ್ಞಾನ ಹಿನ್ನೆಲೆಯುಳ್ಳ ತರಬೇತಿಯನ್ನು ನೀಡುವುದು ಹಾಗೂ ಪೋಷಕರಿಗೆ ಈ ಬಗ್ಗೆ ಅರಿವು ಮೂಡಿಸುವುದು.

2) ಪ್ರತಿ ಶಾಲೆಯಲ್ಲಿ ಹಾಗೂ ಮಕ್ಕಳಿಗೆ ಸಂಬಂಧಿಸಿದ ಇತರೆ ಸಂಸ್ಥೆಗಳಾದ ವಿದ್ಯಾರ್ಥಿ ನಿಲಯಗಳು, ಅನಾಥಾಶ್ರಮಗಳು, ರಿಮ್ಯಾಂಡ್ ಹೋಂಗಳು ಮತ್ತು ಮಕ್ಕಳಿಗಾಗಿಯೇ ಇರುವ ಇತರೆ ಸಾರ್ವಜನಿಕ ಸಂಸ್ಥೆಗಳಲ್ಲಿ ಮಕ್ಕಳು ತಮ್ಮ ಮನೋಭಾವನೆಗಳನ್ನು ಮುಕ್ತವಾಗಿ ಹಂಚಿಕೊಳ್ಳಲು ಅನುಕೂಲವಾಗುವ ವಾತಾವರಣ ಸೃಜನೆ ಮತ್ತು ಸಂಘಟನೆಯನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸುವುದು. ಇದಕ್ಕೆ ಮಕ್ಕಳು ಯಾವುದಾದರೂ ಸ್ವಯಂ ಸೇವಾ ಸಂಸ್ಥೆಗಳ/ ವ್ಯಕ್ತಿಗಳ ನೆರವು ಪಡೆದುಕೊಳ್ಳಲು ಅವಕಾಶ ಮಾಡಿಕೊಡುವುದು.

3) ಮಕ್ಕಳು ದೂರು ನೀಡುವುದಕ್ಕಾಗಿಯೇ ಪ್ರತ್ಯೇಕ ದೂರು ಪೆಟ್ಟಿಗೆಯನ್ನು ಪ್ರತಿ ಶಾಲೆಯಲ್ಲೂ ಅಳವಡಿಸುವುದು. ಇದಕ್ಕೆ ಸಂಬಂಧಿಸಿದ ವೆಚ್ಚವನ್ನು ಸರ್ಕಾರಿ ಶಾಲೆಗಳಲ್ಲಿ ಸರ್ವ ಶಿಕ್ಷಣ ಅಭಿಯಾನದಿಂದ ನೀಡುವ ಶಾಲಾ ಅನುದಾನದಲ್ಲಿ, ಖಾಸಗಿ ಸಂಸ್ಥೆಗಳಾದಲ್ಲಿ ಆಡಳಿತ ಮಂಡಳಿಗಳಿಂದ ವೆಚ್ಚ ಭರಿಸತಕ್ಕದ್ದು. ಒಂದು ವೇಳೆ ಅನಾಮಧೇಯ ದೂರುಗಳಿದ್ದರೂ ಸಹ ಕ್ರಮ ತೆಗೆದುಕೊಳ್ಳುವುದು.

4) ಪ್ರತಿ ತಿಂಗಳು ಶಿಕ್ಷಕ–ಪೋಷಕ ಸಂಘ ಅಥವಾ ಎಸ್.ಡಿ.ಎಂ.ಸಿ. ಮತ್ತು ಗ್ರಾಮ ಪಂಚಾಯಿತಿ ವ್ಯಾಪ್ತಿಯ 'ನಾಗರೀಕ ಸೌಲಭ್ಯಗಳ ಸಮಿತಿ' ಗಳ ಸಭೆಯನ್ನು ಕರೆದು ದೂರುಗಳ ಬಗ್ಗೆ ಪರಿಶೀಲನೆ ನಡೆಸುವುದು ಮತ್ತು ಕ್ರಮ ತೆಗೆದುಕೊಳ್ಳುವುದು. ಕ್ಲಸ್ಟರ್, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ಪ್ರತಿ ತಿಂಗಳು ನಡೆಯುವ ಸಭೆಗಳಲ್ಲಿ ಇದನ್ನು ಅಜೆಂಡಾ ಅಂಶವಾಗಿಟ್ಟು ತಮ್ಮ ವ್ಯಾಪ್ತಿಯ ಪ್ರಕರಣಗಳನ್ನು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳುವುದು.

5) ಸರ್ಕಾರದ ಆದೇಶ ಸಂಖ್ಯೆ: ಇಡಿ 122 ಪಿಬಿಎಸ್ 2004, ದಿನಾಂಕ: 14–06–2006 ರಲ್ಲಿ ಕರ್ನಾಟಕ ಗ್ರಾಮ ಪಂಚಾಯಿತಿಗಳ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ) (ಮಾದರಿ) ಉಪ ವಿಧಿಗಳು, 2006 ರಚಿಸಿ ಆದೇಶ ಹೊರಡಿಸಲಾಗಿದೆ. ಇದರ ಅಧ್ಯಾಯ–5 ರ 17ಸಿ (i) ರಿಂದ (iv) ವರೆಗಿನ ಅಂಶಗಳಲ್ಲಿ ಮಕ್ಕಳ ಹಕ್ಕುಗಳ ಬಗ್ಗೆ ಪ್ರಸ್ತಾಪಿಸಿ ಈ ಬಗ್ಗೆ ಏನಾದರೂ ಮಕ್ಕಳಿಗೆ ತೊಂದರೆಯಾದಲ್ಲಿ ನೇರವಾಗಿ ಅಥವಾ ದೂರು ಪೆಟ್ಟಿಗೆ ಮುಖಾಂತರವಾಗಲಿ ನಾಗರೀಕ ಸೌಲಭ್ಯಗಳ ಸಮಿತಿಗೆ ಮೌಖಿಕ ಅಥವಾ ಲಿಖಿತ ದೂರನ್ನು ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ತೊಂದರೆಗೊಳಗಾದ ಮಕ್ಕಳು / ಅವರ ಪೋಷಕರು ಮಕ್ಕಳ ಮೇಲಿನ ದೂರುಗಳನ್ನು ಸ್ವೀಕರಿಸಲು ಪ್ರಥಮ ಪ್ರಾಧಿಕಾರವಾದ ಎಸ್.ಡಿ.ಎಂ.ಸಿ. ಗೆ ಘಟನೆ ನಡೆದ ತಕ್ಷಣ ದೂರು ನೀಡಿ ಸ್ವೀಕೃತಿ ಪಡೆಯುವುದು.

6). ವಿದ್ಯಾರ್ಥಿಗಳ ಮೇಲಾದ ದೌರ್ಜನ್ಯದ ಬಗ್ಗೆ ದೂರುಗಳು ಬಂದ ತಕ್ಷಣ ಎಸ್‌ಡಿಎಂಸಿ ಯು ಸಮಯ ಮುಂದೂಡದೆ, ಕೂಡಲೇ ಕ್ರಮ ಕೈಗೊಳ್ಳುವುದು.

7) ಮಕ್ಕಳು ಹಾಗೂ ಪೋಷಕರು ಮಕ್ಕಳ ಮೇಲಿನ ದೌರ್ಜನ್ಯ/ ದೈಹಿಕ ಶಿಕ್ಷೆಗಳ ವಿರುದ್ಧ ನಿರ್ಭಯವಾಗಿ ಮಾತನಾಡುವ ಸಾಮರ್ಥ್ಯವನ್ನು ಬೆಳೆಸುವುದು.

8) ಪ್ರತಿ ಶಾಲೆಯಲ್ಲಿ ಈಗಾಗಲೇ ರಚಿಸಲಾಗಿರುವ **"ಮಕ್ಕಳ ಹಕ್ಕುಗಳ ಕ್ಲಬ್"** ಗಳನ್ನು ಪುನಶ್ಚೇತನಗೊಳಿಸುವುದು. ಒಂದು ವೇಳೆ ಈವರೆವಿಗೂ **"ಮಕ್ಕಳ ಹಕ್ಕುಗಳ ಕ್ಲಬ್"** ಗಳನ್ನು ರಚಿಸಿರದಿದ್ದರೆ ಎಲ್ಲಾ ಸರ್ಕಾರಿ/ಅನುದಾನಿತ/ಅನುದಾನರಹಿತ ಶಾಲೆಗಳಲ್ಲಿ ಕೂಡಲೇ ರಚಿಸುವುದು.

9) ಮಕ್ಕಳ ಮೇಲಿನ ದೌರ್ಜನ್ಯ/ ದೈಹಿಕ ಶಿಕ್ಷೆಗಳಿಗೆ ಸಂಬಂಧಿಸಿದಂತೆ ಕನಿಷ್ಠ ವಾರಕ್ಕೊಮ್ಮೆ ಶಾಲೆಯ ಮುಖ್ಯಸ್ಥರು ಮಕ್ಕಳೊಂದಿಗೆ ಮುಕ್ತವಾಗಿ ಸಂವಾದ ನಡೆಸುವುದು.

10) ಕ್ಲಸ್ಟರ್, ಬ್ಲಾಕ್, ಜಿಲ್ಲಾ ಮತ್ತು ರಾಜ್ಯ ಹಂತದಲ್ಲಿ ನಡೆಯುವ ಸಭೆಗಳಲ್ಲಿ ಇದನ್ನು ಅಜೆಂಡಾ ಅಂಶವಾಗಿಟ್ಟು ತಮ್ಮ ವ್ಯಾಪ್ತಿಯ ಪ್ರಕರಣಗಳನ್ನು ಚರ್ಚಿಸಿ, ನಿರ್ಣಯಗಳನ್ನು ಕೈಗೊಳ್ಳುವುದು.

11) ಮಕ್ಕಳಿಗೆ ಕೇವಲ ಶಿಕ್ಷಕರಿಂದಾಗುವ ದೌರ್ಜನ್ಯ/ ದೈಹಿಕ ಶಿಕ್ಷೆ ಅಲ್ಲದೆ ಪೋಷಕರು ಹಾಗೂ ಇತರರಿಂದ ಆಗುವ ಇಂತಹ ಪ್ರಕರಣಗಳನ್ನು ಹತ್ತಿಕ್ಕಲು ಶಾಲಾ ಆಡಳಿತ/ ಶೈಕ್ಷಣಿಕ ಆಡಳಿತ ವ್ಯವಸ್ಥೆ ಕ್ರಮ ವಹಿಸತಕ್ಕದ್ದು. ಈ ಸಂಬಂಧ ಪೋಷಕರ ಸಭೆಗಳಲ್ಲಿ ಅರಿವು ಮೂಡಿಸುವುದು.

12) ಮಕ್ಕಳ ಮೇಲಿನ ದೌರ್ಜನ್ಯ/ ದೈಹಿಕ ಶಿಕ್ಷೆ/ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ ದೂರುಗಳಿದ್ದಲ್ಲಿ ಪ್ರತಿ ಹಂತದಲ್ಲೂ ಯಾರಿಗೆ ತಿಳಿಸಬೇಕು ಎಂಬ ವಿವರಗಳನ್ನು (ಸ್ಪಷ್ಟ ವಿಳಾಸ, ದೂರವಾಣಿ ಸಂಖ್ಯೆ) ಶಾಲೆ/ ಕಚೇರಿಗಳ ಮುಂದೆ ಅಧಿಕೃತವಾಗಿ ಪ್ರಕಟಿಸತಕ್ಕದ್ದು.

13) ದೂರುಗಳಿದ್ದಲ್ಲಿ ಈ ಕೆಳಕಾಣಿಸಿದ ವಿಳಾಸಕ್ಕೆ ದೂರು ನೀಡಬಹುದು.

ದೂರಿನ ವ್ಯಾಪ್ತಿ	ದೂರು ಸಲ್ಲಿಸಬೇಕಾದ ವಿಳಾಸ
ಬೆಂಗಳೂರು ಮತ್ತು ಮೈಸೂರು ವಿಭಾಗದ ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ	ನಿರ್ದೇಶಕರು, ಪ್ರಾಥಮಿಕ ಶಿಕ್ಷಣ, ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
ಬೆಂಗಳೂರು ಮತ್ತು ಮೈಸೂರು ವಿಭಾಗದ ಪ್ರೌಢ ಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ	ನಿರ್ದೇಶಕರು, ಪ್ರೌಢ ಶಿಕ್ಷಣ, ಆಯುಕ್ತರ ಕಚೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು.
ಧಾರವಾಡ ಆಯುಕ್ತಾಲಯ, ವ್ಯಾಪ್ತಿಯ ಪ್ರಾಥಮಿಕ/ಪ್ರೌಢ ಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ	ನಿರ್ದೇಶಕರು, ಅಪರ ಆಯುಕ್ತಾಲಯ, ಧಾರವಾಡ.
ಗುಲ್ಬರ್ಗಾ ಆಯುಕ್ತಾಲಯ ವ್ಯಾಪ್ತಿಯ ಪ್ರಾಥಮಿಕ/ಪ್ರೌಢಶಾಲೆಗಳಿಗೆ ಸಂಬಂಧಿಸಿದ ದೂರುಗಳಿಗೆ	ನಿರ್ದೇಶಕರು, ಅಪರ ಆಯುಕ್ತಾಲಯ, ಗುಲ್ಬರ್ಗಾ.

ಮೇಲಿನ ಸೂಚನೆಗಳಲ್ಲಿ ಯಾವುದೇ ಲೋಪವಾದರೂ ಆಯಾ ಶಾಲೆಯ ಮುಖ್ಯಸ್ಥರು, ಶಾಲಾ ಆಡಳಿತ ಮಂಡಳಿ ಹಾಗೂ ಇಲಾಖೆಯ ಕ್ಲಸ್ಟರ್, ಬ್ಲಾಕ್, ಜಿಲ್ಲಾ ಹಂತದ ಅಧಿಕಾರಿಗಳನ್ನು ನೇರ ಹೊಣೆ ಮಾಡಿ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

(ಜಿ. ಕುಮಾರ ನಾಯಕ ಭಾ.ಆ.ಸೇ.)
ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಇವರಿಗೆ:

1) ರಾಜ್ಯದ ಎಲ್ಲಾ ಜಿಲ್ಲಾ ಉಪ ನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ರವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.
2) ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ.
3) ರಾಜ್ಯದ ಎಲ್ಲಾ ಕ್ಲಸ್ಟರ್ ಸಹಾಯಕ ಶಿಕ್ಷಣಾಧಿಕಾರಿಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)
4) ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನ ರಹಿತ ಪ್ರೌಢಶಾಲಾ ಮತ್ತು ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರುಗಳಿಗೆ (ಕ್ಷೇತ್ರ ಶಿಕ್ಷಣಾಧಿಕಾರಿಗಳ ಮುಖಾಂತರ)

<u>ಪ್ರತಿಗಳನ್ನು ಮುಂದಿನ ಕ್ರಮಕ್ಕಾಗಿ:</u>

1) ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ/ ಗುಲ್ಬರ್ಗಾ.
2) ರಾಜ್ಯ ಯೋಜನಾ ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ, ಬೆಂಗಳೂರು.


<u>ಪ್ರತಿಗಳನ್ನು ಗೌರವಪೂರ್ವಕವಾಗಿ ಸಲ್ಲಿಸಿದೆ:</u>

1) ಸರ್ಕಾರದ ಮುಖ್ಯ ಕಾರ್ಯದರ್ಶಿಯವರು, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು, ಇವರಿಗೆ.
2) ಸರ್ಕಾರದ ಕಾರ್ಯದರ್ಶಿಯವರು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು, ಇವರಿಗೆ.
3) ಡಾ. ಶಾಂತಾ ಸಿನ್ಹ, ಅಧ್ಯಕ್ಷರು, ರಾಷ್ಟ್ರೀಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ನಂ. 103,

ಸರ್ವರಿಗೂ ಸುಸ್ವಾಗತ



ಶಿಕ್ಷಣ ಸಚಿವಾಲಯದ ಅಧಿಸೂಚನೆ



ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಲಾದ ಶಿಕ್ಷಣ ಸಚಿವಾಲಯದ ಅಧಿಸೂಚನೆ ಸಂಖ್ಯೆ ಇಡಿ 122 ಪಿಬಿಎಸ್ 2004, ಬೆಂಗಳೂರು, ದಿನಾಂಕ 14 ನೇ ಜೂನ್ 2006.

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ



ಹೇಗೆ ರಚನೆ ಮಾಡಲಾಗುವುದು?

- ಪ್ರತಿ ಶಾಲೆಯ ಮುಖ್ಯಶಿಕ್ಷಕರ ಸಮ್ಮುಖದಲ್ಲಿ ಜುಲೈ ತಿಂಗಳಲ್ಲಿ ಪೋಷಕರ ಸಭೆಗಳು ನಡೆಯುತ್ತವೆ.
- ಇದೇ ಸಭೆಯಲ್ಲಿ ಒಂಬತ್ತು ಪೋಷಕ ಪ್ರತಿನಿಧಿಗಳನ್ನು ಆಯ್ಕೆ ಮಾಡಿಕೊಳ್ಳಲಾಗುತ್ತದೆ.
- ಎಸ್.ಡಿ.ಎಮ್.ಸಿ.ಯ ಪ್ರಥಮ ಸಭೆ ರಚನೆಯಾದ ಏಳು ದಿನಗಳ ಒಳಗೆ ನಡೆಯಬೇಕು.

ಉದ್ದೇಶ

ಸರ್ಕಾರಿ ಶಾಲೆಗಳ ಬಗ್ಗೆ ಸ್ಥಳೀಯರೆ ಶಾಲೆಗಳಲ್ಲಿನ ಕುಂದು ಕೊರತೆಗಳ ಬಗ್ಗೆ ಗಮನ ವಹಿಸಿ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವುದು. ಹಾಗೂ ಶಾಲೆಗಳು ನಮ್ಮವು ಎಂಬ ಮನೋಭಾವದಿಂದ ಮುನ್ನಡೆಸಿಕೊಂಡು ಹೋಗುವುದು.

ಸಭೆ ನಡೆಸಲು ಎಷ್ಟು ಜನರಿರಬೇಕು?



- ಸಭೆ ನಡೆಸಲು ಪೋಷಕ ಪ್ರತಿನಿಧಿಗಳಲ್ಲಿ ಕನಿಷ್ಠ 6 ಜನರು ಕಡ್ಡಾಯವಾಗಿರಬೇಕು.
- 6 ಕ್ಕಿಂತ ಕಡಿಮೆ ಇದ್ದಲ್ಲಿ ಸಭೆಯನ್ನು ಮುಂದೂಡಬೇಕು.
- ಯಾವುದೇ ತೀರ್ಮಾನಗಳು ಬಹುಮತದಿಂದ ಕೂಡಿರಬೇಕು.

ಎಸ್.ಡಿ.ಎಂ.ಸಿ ಯಲ್ಲಿ ಯಾರ್ಯಾರು ಇರುತ್ತಾರೆ?

ಅಧ್ಯಕ್ಷರು	01	ಪೋಷಕ ಸದಸ್ಯರು
ಉಪಾಧ್ಯಕ್ಷರು	01	ಪೋಷಕ ಸದಸ್ಯರು
ಪದನಿಮಿತ್ತ ಸದಸ್ಯರು	01	ಕಾರ್ಯದರ್ಶಿ(ಶಾಲೆಯ ಮುಖ್ಯೋಪಾಧ್ಯಾಯರು)
ಪೋಷಕ ಸದಸ್ಯರು	07	ಮಹಿಳೆ-3. ಪ.ಜಾ/ಪ.ಪಂ-2. ಅಲ್ಪ ಸಂಖ್ಯಾತರು-1. ಇತರೆ-1.
ಪದನಿಮಿತ್ತ ಸದಸ್ಯರು	01	ಆರೋಗ್ಯ ಕಾರ್ಯಕರ್ತರು
ಪದನಿಮಿತ್ತ ಸದಸ್ಯರು	01	ಅಂಗನವಾಡಿ ಶಿಕ್ಷಕಿ
ನಾಮ ನಿರ್ದೇಶಿತ ಸದಸ್ಯರು	01	ಯುವಕ/ಯುವತಿ ಸಂಘದ ಪ್ರತಿನಿಧಿ/ ಮಹಿಳಾ ಸಂಘ
ನಾಮ ನಿರ್ದೇಶಿತ ಸದಸ್ಯರು	01	ಶಾಲೆಯ ಉನ್ನತ ತರಗತಿಯ ವಿದ್ಯಾರ್ಥಿ
ನಾಮ ನಿರ್ದೇಶಿತ ಸದಸ್ಯರು	01	ಶಾಲೆಯ ಉನ್ನತ ತರಗತಿಯ ವಿದ್ಯಾರ್ಥಿನಿ
ನಾಮ ನಿರ್ದೇಶಿತ ಸದಸ್ಯರು	01	ಶಾಲೆಗಾಗಿ ಯಾವುದೇ ರೂಪದಲ್ಲಿ 10000/-ರೂಗಳಿಗಿಂತ ಹೆಚ್ಚಿನ ಮೊತ್ತದ ದೇಣಿಗೆ ನೀಡಿದ ಒಬ್ಬ ಪ್ರತಿನಿಧಿ
ನಾಮ ನಿರ್ದೇಶಿತ ಸದಸ್ಯರು ಒಟ್ಟು ಸದಸ್ಯರ ಸಂಖ್ಯೆ	01 ಒಟ್ಟು 17	ಸ್ಥಳೀಯ ಸ್ವಯಂ ಸೇವಾ ಸಂಸ್ಥೆ / ಶಿಕ್ಷಣ ಆಸಕ್ತರು

ಆಯ್ಕೆಯ ವಿವರ

- ಅಧ್ಯಕ್ಷರನ್ನು ಯಾರು ಆಯ್ಕೆ ಮಾಡುತ್ತಾರೆ?
- ಒಂಬತ್ತು ಜನ ಪೋಷಕ ಪ್ರತಿನಿಧಿಗಳಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ಆಯ್ಕೆ ಮಾಡುವುದು.
- ಅಧ್ಯಕ್ಷರನ್ನು ಆಯ್ಕೆ ಮಾಡುವ ಅಧಿಕಾರ ಕೇವಲ 9 ಜನ ಪೋಷಕ ಪ್ರತಿನಿದಿಗಳಿಗೆ ಮಾತ್ರ ಇರುತ್ತದೆ.



ಎಸ್.ಡಿ.ಎಂ.ಸಿ. ಯ ಪ್ರಮುಖ ಕರ್ತವ್ಯಗಳು

- ಶೈಕ್ಷಣಿಕ ವರ್ಷ ಆರಂಭವಾಗುವ ಒಂದು ತಿಂಗಳ ಮೊದಲೇ ಶಾಲೆಯ ಮುಖ್ಯ ಶಿಕ್ಷಕರನ್ನು ಒಳಗೊಂಡು ಶಾಲಾ ಕ್ರಿಯಾ ಯೋಜನೆಯನ್ನು ರೂಪಿಸಿ ಅನುಮೋದಿಸುವುದು.
- ಈ ವಾರ್ಷಿಕ ಯೋಜನೆಯು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಅವಶ್ಯಕವಾದ ಎಲ್ಲಾ ಚಟುವಟಿಕೆಗಳನ್ನು ಒಳಗೊಂಡಿರಬೇಕು.
- ಶಾಲಾ ವ್ಯಾಪ್ತಿಯಲ್ಲಿ ಬರುವ 3-14 ವಯಸ್ಸಿನ ಎಲ್ಲಾ ಮಕ್ಕಳ ವಿವರ ಮಾಹಿತಿಯನ್ನು ಸಂಗ್ರಹಿಸುವುದು
- 3-6 ವರೆಗಿನ ಮಕ್ಕಳು ಅಂಗನವಾಡಿಗೆ ಮತ್ತು 6-14 ವಯಸ್ಸಿನ ಮಕ್ಕಳು ಶಾಲೆಗಳಿಗೆ ತೆರಳುವಂತೆ ನೋಡಿಕೊಳ್ಳುವುದು.
- ಶಾಲೆಯಿಂದ ಹೊರಗುಳಿದ ಎಲ್ಲಾ ಮಕ್ಕಳನ್ನು ಮುಖ್ಯವಾಹಿನಿಗೆ ತರುವುದು.
- ಸರ್ಕಾರದಿಂದ ಉಚಿತವಾಗಿ ನೀಡುವ ಪಠ್ಯಪುಸ್ತಕ, ಸಮವಸ್ತ್ರ, ಬ್ಯಾಗ್ ನೋಟ್‌ಪುಸ್ತಕ, ಸೈಕಲ್, ವಿದ್ಯಾರ್ಥಿವೇತನ, ಬಿಸಿಯೂಟ ಇತ್ಯಾದಿಗಳು ಶಾಲೆಯ ಎಲ್ಲಾ ಮಕ್ಕಳಿಗೆ ಸಕಾಲಕ್ಕೆ ಸಿಗುವಂತೆ ಮಾಡುವುದು.
- ಶಾಲಾ ಆಸ್ತಿಯನ್ನು ನಿರ್ವಹಿಸುವುದು ಮತ್ತು ಸಂರಕ್ಷಿಸುವುದು.
- ಶಾಲೆಯಲ್ಲಿ ಜಾತಿ ಧರ್ಮ ಲಿಂಗ ತಾರತಮ್ಯ ಬಾರದಂತೆ ನೋಡಿಕೊಳ್ಳುವುದು

ಎಸ್.ಡಿ.ಎಂ.ಸಿ. ಯ ಅಧಿಕಾರಗಳು

- ಶಿಕ್ಷಕರು, ಸಿಬ್ಬಂದಿಗಳ ಹಾಜರಾತಿಯ ಮೇಲೆ ನಿಗಾ ವಹಿಸುವುದು.
- ವರ್ಷದಲ್ಲಿ 4 ಕ್ಕೆ ಮೀರದಂತೆ ಸ್ಥಳೀಯ ರಜೆಗಳನ್ನು ನೀಡುವುದು.
- ನಿರುಪಯುಕ್ತವಾದ ಕಲಿಕಾ ಸಾಧನಗಳು, ಪೀಠೋಪಕರಣಗಳು, ಆಟದ ಸಾಮಗ್ರಿಗಳು, ನಕಾಶೆಗಳು, ಚಾರ್ಟ್‌ಗಳು, ವಾಚನಾಲಯದ ಪುಸ್ತಕಗಳು ಇತ್ಯಾದಿ ಎಲ್ಲಾ ಸಾಮಗ್ರಿಗಳು ಸೇರಿ ಗರಿಷ್ಠ
- ಕಿರಿಯ ಪ್ರಾಥಮಿಕ ಶಾಲೆಗೆ ವಾರ್ಷಿಕ ರೂ. 2000.00
- ಹಿರಿಯ ಪ್ರಾಥಮಿಕ ಶಾಲೆಗೆ ವಾರ್ಷಿಕ ರೂ. 5000.00
- ಪ್ರೌಢ ಶಾಲೆಗೆ ವಾರ್ಷಿಕ ರೂ.10,000.00
- ಇದರ ಮಿತಿಯಲ್ಲಿ ನಿರೂಪಯುಕ್ತ ವಸ್ತುವೆಂದು ಘೋಷಿಸಿ ಹರಾಜು ಮಾಡಿ ಬಂದ ಹಣದಲ್ಲಿ ಹೊಸ ವಸ್ತುಗಳನ್ನು ಖರೀದಿಸುವುದು ಅಥವಾ ಶಾಲಾ ಶಿಕ್ಷಣ ನಿಧಿಗೆ ಜಮಾ ಮಾಡುವುದು.
- ಸಾಂಸ್ಕೃತಿಕ ಚಟುವಟಿಕೆಗಳು, ಆಟೋಟ ಸ್ಪರ್ಧೆಗಳು, ಶೈಕ್ಷಣಿಕ ಪ್ರವಾಸ, ಇತ್ಯಾದಿಗಳನ್ನು ಸಂಘಟಿಸಲು ಅನುಮತಿ ನೀಡುವುದು.
- ಶಾಲೆಯು ದಾನವಾಗಿ ಸ್ವೀಕರಿಸಿದ ಹಾಗೂ ಖರ್ಚು ಮಾಡಿದ ಲೆಕ್ಕ ಪತ್ರಗಳು ಹಾಗೂ ದಾಖಲೆಗಳನ್ನು ಪರೀಕ್ಷಿಸುವುದು.
- ವಾಚನಾಲಯ ನಿಧಿ, ಕ್ರೀಡಾ ನಿಧಿ, ಪ್ರಯೋಗಾಲಯ ನಿಧಿ ಇತ್ಯಾದಿ ಸರ್ಕಾರೇತರ ನಿಧಿಗಳ ಅನುಮೋದನೆಯನ್ನು ನಿಯಮಾನುಸಾರ ನೀಡುವುದು.

ಎಸ್.ಡಿ.ಎಂ.ಸಿ. ಯ ಪ್ರಮುಖ ಕರ್ತವ್ಯಗಳು

- ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲೆಗೆ ಹಾಜರಾಗಲು ಅಗತ್ಯ ಸೌಲಭ್ಯಗಳನ್ನು ಒದಗಿಸುವುದು.
- ಮಕ್ಕಳು ತಮ್ಮ ಸಮಸ್ಯೆಗಳನ್ನು ತಿಳಿಸಲು ಮಕ್ಕಳ ಸಹಾಯವಾಣಿ ಸಂಖ್ಯೆ 1098 ನ್ನು ಪ್ರದರ್ಶಿಸುವುದು ಮತ್ತು ಪ್ರಚಾರ ಮಾಡುವುದು.
- ರಾಜ್ಯ ವಲಯ ಹಾಗೂ ಕೇಂದ್ರ ವಲಯಗಳಿಂದ ಬಿಡುಗಡೆಯಾಗುವ ಹಣದಲ್ಲಿ ಶಾಲೆಗೆ ಬೇಕಾಗುವ ಸಾಧನ ಸಾಮಗ್ರಿಗಳನ್ನು ಕೊಂಡುಕೊಳ್ಳುವ ಅಧಿಕಾರವಿದೆ.
- ಶಾಲಾ ಮಕ್ಕಳಿಗಾಗಿ ಆರೋಗ್ಯ ಶಿಬಿರಗಳನ್ನು ಏರ್ಪಡಿಸುವುದು ಹಾಗೂ ಅವರಿಗೆ ಆರೋಗ್ಯ ಚೀಟಿಯನ್ನು ನೀಡುವುದು.
- ಶಾಲಾ ಸಂಕೀರ್ಣ ಕಾರ್ಯಕ್ರಮಗಳಲ್ಲಿ ಶಿಕ್ಷಕರು ಸಕ್ರೀಯವಾಗಿ ಭಾಗವಹಿಸುವಂತೆ ಪ್ರೇರೇಪಿಸುವುದು.
- ಜುಲೈ, ನವೆಂಬರ್ ಹಾಗೂ ಫೆಬ್ರುವರಿ ತಿಂಗಳಲ್ಲಿ ಪೋಷಕರ ಸಭೆಯನ್ನು ಆಯೋಜಿಸುವುದು.
- ವೇಳಾಪಟ್ಟಿಯಂತೆ ಪ್ರತಿ ವರ್ಷ 220 ಕಲಿಕಾ ದಿನಗಳು ಮತ್ತು ಪ್ರತಿ ದಿನ ಐದುವರೆ ಗಂಟೆಗಳು ಶಾಲೆ ನಡೆಯುವಂತೆ ನೋಡಿಕೊಳುವುದು.

ಸದಸ್ಯ ಕಾರ್ಯದರ್ಶಿಯಗಳ ಕಾರ್ಯಗಳು

- ಪ್ರತಿ ಶೈಕ್ಷಣಿಕ ವರ್ಷದ ಆರಂಭಕ್ಕೆ ಒಂದು ತಿಂಗಳ ಮೊದಲು ವಾರ್ಷಿಕ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ ಎಸ್.ಡಿ.ಎಂ.ಸಿ.ಯ ಅನುಮೋದನೆ ಪಡೆಯುವುದು
- ಪ್ರತಿ ತಿಂಗಳು ಎಸ್.ಡಿ.ಎಂ.ಸಿ. ಸಭೆಗಳನ್ನು ಏರ್ಪಡಿಸುವುದು.
- ಒಂದು ವಾರದ ಮುಂಚಿತವಾಗಿ ಸಭೆಯಲ್ಲಿ ಚರ್ಚಿಸಬೇಕಾದ ವಿಷಯಗಳ ಪಟ್ಟಿಯನ್ನು ಲಗತ್ತಿಸಿ ಸಭಾ ಜ್ಞಾಪನ ಪತ್ರವನ್ನು ಎಸ್.ಡಿ.ಎಂ.ಸಿ. ಸದಸ್ಯರುಗಳಿಗೆ ಕಳಿಸುವುದು.
- ಶಾಲೆಯಲ್ಲಾದ ಖರ್ಚು ವೆಚ್ಚಗಳು ಖಾತೆಯಲ್ಲಿ ಉಳಿದಿರು ಹಣದ ಬಗ್ಗೆ ತಿಳಿಸುವುದು.
- ಶಾಲೆಗೆ ವಿವಿಧ ಯೋಜನೆಗಳಿಂದ ಬಂದ ಹಣದ ವಿವರವನ್ನು ಫಲಕದಲ್ಲಿ ಪ್ರಕಟಿಸುವುದು.
- ಸಭೆಗಳ ವರದಿ ತಯಾರಿಸುವುದು,
- ಹಿಂದಿನ ಸಭೆಯ ನಿರ್ಣಯಗಳ ಅನುಪಾಲನೆ ಬಗ್ಗೆ ಪರಾಮರ್ಶಿಸುವುದು.
- ವಿವರಣೆ: ಎಸ್.ಡಿ.ಎಂ.ಸಿ. ಸಮಿತಿ ಹಾಗೂ ಉಪ ಸಮಿತಿಗಳ ಮಾಸಿಕ ಲೆಕ್ಕ ಪತ್ರಗಳು ಶಾಲಾ ಅಭಿವೃದ್ಧಿ, ಆಡಳಿತ, ಹಾಜರಾತಿ, ದಾಖಲಾತಿ, ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಅವರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿದೆ.

ಅಧ್ಯಕ್ಷರ ಅಧಿಕಾರಗಳು

- ಮುಖ್ಯ ಶಿಕ್ಷಕರಿಗೆ ಸಾಂಧರ್ಭಿಕ ರಜೆ ನೀಡುವುದು.
- ದೂರುಗಳ ಪೆಟ್ಟಿಗೆಯನ್ನು ಕನಿಷ್ಠ ವಾರಕ್ಕೊಮ್ಮೆ ನಿರ್ವಹಿಸುವುದು.
- ಶಾಲೆಗೆ ಸಂಬಂಧಿಸಿದ ಚೆಕ್‌ಗಳಿಗೆ ಸಹಿ ಮಾಡುವುದು

ಉಪಾಧ್ಯಕ್ಷರ ಅಧಿಕಾರಗಳು

ಅಧ್ಯಕ್ಷರ ಗೈರುಹಾಜರಿಯಲ್ಲಿ ಅಧ್ಯಕ್ಷರ ಕಾರ್ಯಗಳನ್ನು ನಿರ್ವಹಿಸುವುದು.

- ಎಸ್.ಡಿ.ಎಂ.ಸಿ. ಉಪ ಸಮಿತಿಯ ಉಪಾಧ್ಯಕ್ಷರಿಗೆ ಮಾರ್ಗದರ್ಶನ ನೀಡುವುದು.

ಶಾಲಾ ಹಣಕಾಸು

- ರಿಜರ್ವ್ ಬ್ಯಾಂಕಿನಿಂದ ಮನ್ನಣೆ ಪಡೆದ ರಾಷ್ಟ್ರೀಕೃತ ಅಥವಾ ಸಹಕಾರಿ ಬ್ಯಾಂಕ್ ಅಥವಾ ಅಂಚೆ ಕಛೇರಿಯಲ್ಲಿ ಶಾಲೆಯ ಹೆಸರಿನಲ್ಲಿ ಖಾತೆ ತೆರೆದು ಎಲ್ಲಾ ನಿಧಿ0ಯನ್ನು ಠೇವಣಿ ಇಡತಕ್ಕದ್ದು.
- ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿ (ಮುಖ್ಯ ಶಿಕ್ಷಕರು) ಗಳ ಜಂಟಿ ಹೆಸರಿನಲ್ಲಿ ಬ್ಯಾಂಕ್ ಖಾತೆ ತೆರೆಯುವುದು.
- ಸಮಿತಿ, ಉಪ ಸಮಿತಿಯ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಪ್ರತಿ ಸಭೆಯಲ್ಲೂ ಚರ್ಚಿಸುವುದು.
- ಒಂದು ಸಾವಿರಕ್ಕಿಂತ ಹೆಚ್ಚಿನ ಹಣ ಹಿಂತೆಗೆಯುವಿಕೆಗೆ ಸಮಿತಿ, ಉಪ ಸಮಿತಿ ಪೂರ್ವಾನುಮತಿ ಪಡೆಯತಕ್ಕದ್ದು.

ಆಕಸ್ಮಿಕ ಖಾಲಿ ಸ್ಥಾನ ತುಂಬುವುದು

ಯಾವುದೆ ಸದಸ್ಯರ ಅಧಿಕಾರಾವದಿ ಮುಕ್ತಾಯಾಗೊಳ್ಳುವ ಮೊದಲೇ ಆ ಸ್ಥಾನ ತೆರವಾದಾಗ ಸಮಿತಿ ಹಾಗೂ ಉಪ ಸಮಿತಿಯ ನಿಯಮಾನುಸಾರ ತುಂಬುವುದು.



ಸದಸ್ಯತ್ವ ಕೊನೆಗೊಳಿಸುವುದು

- ಎಸ್.ಡಿ.ಎಂ.ಸಿ.0ಯ ಸಮಿತಿ–ಉಪಸಮಿತಿಯ ನಿರಂತರ 3 ಸಭೆಗಳಿಗೆ ಗೈರುಹಾಜರಾದಲ್ಲಿ.
- ಸಮಿತಿಯ ವ್ಯಾಪ್ತಿಯಲ್ಲಿ ಬರುವ ಯಾವುದೇ ವ್ಯವಹಾರದ ನಿರ್ವಹಣೆಯಲ್ಲಿ ಭ್ರಷ್ಟಾಚಾರ ಕಂಡುಬಂದ್ದಲ್ಲಿ.
- ಸದಸ್ಯರ ಮಗು ಶಾಲೆಗೆ ಬರುವುದು ನಿಂತು ಹೋದಲ್ಲಿ.
- ಯಾವುದೇ ನ್ಯಾಯಾಲಯದಿಂದ ಆಪಾದಿತನೆಂದು ತೀರ್ಮಾನವಾಗಿದ್ದಲ್ಲಿ.

ನಿಬಂಧನೆಗಳು



- ಪೋಷಕರು ಏಕಕಾಲದಲ್ಲಿ ಒಂದಕ್ಕಿಂತ ಹೆಚ್ಚು ಎಸ್.ಡಿ.ಎಂ.ಸಿ. ಗಳಲ್ಲಿ ಸದಸ್ಯರಾಗಿರಬಾರದು.
- ನಾಮ ನಿರ್ದೇಶನಗೊಂಡ ಸದಸ್ಯರಿಗೆ ಮತದಾನದ ಹಕ್ಕು ಇರುವುದಿಲ್ಲ.


ತರಬೇತಿಯ ನಂತರ ಶಾಲೆಗಳಲ್ಲಾದ ಬದಲಾವಣೆ


- ಮತ ಚಲಾಯಿಸುವ ಮೂಲಕ ಎಸ್.ಡಿ.ಎಂ.ಸಿ ಸದಸ್ಯರ, ಅಧ್ಯಕ್ಷರ ಆಯ್ಕೆ.
- ಎಸ್.ಡಿ.ಎಂ.ಸಿ ರವರೇ ಶಾಲಾ ಕಟ್ಟಡ ನಿರ್ಮಾಣ ಮಾಡುತ್ತಿರುವುದು.
- ನೀರಿನ ಸಮಸ್ಯೆ ಬಗೆಹರಿಸಿರುವುದು.
- ಬಿಸಿಯೂಟದ ಬಗ್ಗೆ ದೂರು.
- ಎಸ್.ಡಿ.ಎಂ.ಸಿ ಗಳ ಪರಸ್ಪರ ಅನುಭವ ಹಂಚಿಕೆ ಸಭೆ.

ತರಬೇತಿಯ ನಂತರ ಶಾಲೆಗಳಲ್ಲಾದ ಬದಲಾವಣೆ

- ಸಭೆಯ ನಂತರ ಅಧ್ಯಕ್ಷರ ಬದಲಾವಣೆ.
- ಸಭೆಗಳು ಪ್ರತಿ ತಿಂಗಳು ನಡೆಯುತ್ತಿವೆ.
- ಅಧ್ಯಕ್ಷರು ಖಾಲಿ ಚೆಕ್‌ಗಳಿಗೆ ಸಹಿ ಹಾಕುತ್ತಿಲ್ಲ.
- ದೂರು ಪೆಟ್ಟಿಗೆ ಇದೆ.
- ಸಮಿತಿಯಲ್ಲಿ ಶಾಲಾ ಮಕ್ಕಳಿದ್ದಾರೆ.
- ಶಾಲೆಯ ಸಮಸ್ಯೆಗಳಿಗೆ ಎಸ್.ಡಿ.ಎಂ.ಸಿ ರವರೆ ಅಧಿಕಾರಿಗಳಿಗೆ ದೂರು ನೀಡುತ್ತಿದ್ದಾರೆ.
- ಪೋಷಕರ ಸಭೆಗಳಲ್ಲಿ ಬಂದ ದೂರುಗಳನ್ನು ಶಿಕ್ಷಣಾಧಿಕಾರಿಗಳಿಗೆ ತಿಳಿಸಲಾಗುತ್ತದೆ.
- ಬ್ಯಾಂಕ್ ಪಾಸ್ ಬುಕ್, ಲೆಕ್ಕಪತ್ರಗಳನ್ನು ಸದಸ್ಯರುಗಳಿಗೆ ತೋರಿಸಲಾಗುತ್ತಿದೆ.


ದೂರು ಪೆಟ್ಟಿಗೆ ನಿರ್ವಹಣೆ





ಎಸ್.ಡಿ.ಎಂ.ಸಿ ವತಿಯಿಂದ ದೂರುಗಳ ನಿರ್ವಹಣೆ


ಅಧಿಕಾರಿಗಳೊಂದಿಗೆ ಶಾಲಾ ಸಮಸ್ಯೆಗಳ ಬಗ್ಗೆ ಚರ್ಚೆ




ಮಾಹಿತಿ ಹಕ್ಕು 2005, 4(1)ಬಿ ಅಡಿಯಲ್ಲಿ ಶಾಲಾ ಮಾಹಿತಿಯಿರುವ ಪುಸ್ತಕ ಬಿಡುಗಡೆ



ಪ್ರತಿ ತರಗತಿಗಳಿಗೆ ತೆರಳಿ ಮಕ್ಕಳ ಮತ್ತು ಕೊಠಡಿಗಳ ಪರಿಶೀಲನೆ



ಶಾಲಾ ಖರ್ಚುವೆಚ್ಚಗಳನ್ನು ಸದಸ್ಯರುಗಳಿಗೆ ತಿಳಿಸುತ್ತಿರುವುದು



ಸುವರ್ಣ ಕರ್ನಾಟಕ - 2006

ಕರ್ನಾಟಕ ಸರ್ಕಾರ

ಇಲಾಖೆ–ಸಾರ್ವಜನಿಕ ಶಿಕ್ಷಣ ಇಲಾಖೆ

ಸಾರ್ವಜನಿಕ ಪ್ರಾಧಿಕಾರ :– ಸರ್ಕಾರಿ/ಅನುದಾನಿತ ಹಿರಿಯ / ಮಾದರಿ
ಪ್ರಾಥಮಿಕ ಶಾಲೆ

---------------ಗ್ರಾಮ

--------------ತಾಲ್ಲೂಕು

--------------ಜಿಲ್ಲೆ

ಪಿನ್ ಕೋಡ್:

ದೂರವಾಣಿ ಸಂಖ್ಯೆ:

ಭಾರತ ಸರ್ಕಾರದ ಮಾಹಿತಿಹಕ್ಕು ಅಧಿನಿಯಮ - 2005

ಅಧ್ಯಾಯ 11 ನಿಯಮ 4(1) ಬಿ

ಕೈಪಿಡಿ

4(1) ಬಿ(1) ಸಂಸ್ಥೆಯ ವಿವರಗಳು, ರಚನಾ ಸೂಚಿ ಕಾರ್ಯಗಳು ಹಾಗೂ ಕರ್ತವ್ಯಗಳು

➢ ಸಂಸ್ಥೆಯ ವಿವರ:-

ಇದು ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ಶೈಕ್ಷಣಿಕ ಸಂಸ್ಥೆಯಾಗಿದೆ.

ಶಾಲೆ ಸ್ಥಾಪನೆಯಾದ ವರ್ಷ-

1 ರಿಂದ 7 ನೇ ತರಗತಿಯವರೆಗೆ ವ್ಯಾಸಂಗ ಅವಕಾಶ

ಕೊಠಡಿಗಳ ಸಂಖ್ಯೆ:

ಮಕ್ಕಳ ಸಂಖ್ಯೆ:(ತರಗತಿವಾರು) ದಾಖಲಾತಿ/ಹಾಜರಾತಿ.

ಶಿಕ್ಷಕರ ಸಂಖ್ಯೆ:

ರಚನಾ ಸೂಚಿ:-

ಮುಖ್ಯ ಶಿಕ್ಷಕರು-1

ಸಹ ಶಿಕ್ಷಕರು- ದೈಹಿಕ ಶಿಕ್ಷಣ ಶಿಕ್ಷಕರು- ವೃತ್ತಿ ಶಿಕ್ಷಣ ಶಿಕ್ಷಕರು-

➢ ಕಾರ್ಯಗಳು ಹಾಗೂ ಕರ್ತವ್ಯಗಳು:-

ಶಾಲಾ ವಲಯದ ಜನವಸತಿ ಪ್ರದೇಶಗಳಲ್ಲಿರುವ ಶಾಲಾ ವ್ಯಾಪ್ತಿಯ ವಯೋಮಿತಿಯ ಎಲ್ಲಾ ಮಕ್ಕಳನ್ನು ಗುರುತಿಸಿ ಗಣತಿ ಮಾಡುವುದು. ದಾಖಲಿಸುವುದು. ಶಾಲೆಯಲ್ಲೇ ಉಳಿಯುವಂತೆ ಮಾಡುವುದು ಹಾಗೂ ಜೀವನಕ್ಕೆ ಉಪಯುಕ್ತವಾದ ಗುಣಾತ್ಮಕ ಶಿಕ್ಷಣವನ್ನು ನೀಡುವುದು. ಅಂದರೆ ಸಾರ್ವತ್ರಿಕ ಅವಕಾಶ, ಸಾರ್ವತ್ರಿಕ ದಾಖಲಾತಿ, ಸಾರ್ವತ್ರಿಕ ಉಳಿಕೆ ಹಾಗೂ ಸಾರ್ವತ್ರಿಕ ಕಲಿಕೆಯನ್ನುಂಟು ಮಾಡುವುದರ ಮೂಲಕ ಪ್ರೌಢಶಿಕ್ಷಣ ಪಡೆಯಲು ಅಗತ್ಯ ಅರ್ಹತೆಯನ್ನು ಗಳಿಸಿಕೊಡುವುದು.

4(1) ಬಿ(ii) ಅಧಿಕಾರಿಗಳು ಹಾಗೂ ಸಿಬ್ಬಂದಿಗಳ ಅಧಿಕಾರ ಹಾಗೂ ಕರ್ತವ್ಯಗಳು

1) ಮುಖ್ಯ ಶಿಕ್ಷಕರು:-

➢ ಅಧಿಕಾರಗಳು:-

1. ಅರ್ಹ ಎಲ್ಲಾ ಮಕ್ಕಳಿಗೂ ಪ್ರವೇಶಾವಕಾಶ ನೀಡುವುದು.
2. ಗುಣಾತ್ಮಕ ಶಿಕ್ಷಣದ ಸಾಧನೆಯನ್ನು ದೃಢೀಕರಿಸುವುದು.
3. ಮಕ್ಕಳಿಗೆ ವ್ಯಾಸಂಗ ಪ್ರಮಾಣ ಪತ್ರ ನೀಡುವುದು.
4. ಮಕ್ಕಳಿಗೆ ವರ್ಗಾವಣಾ ಪತ್ರ ನೀಡುವುದು.
5. ಶಿಕ್ಷಕರಿಗೆ ಕಾಲ ಕಾಲಕ್ಕೆ ನೀಡಬೇಕಾದ ಆರ್ಥಿಕ ಹಾಗೂ ಇತರೆ ಸೌಲಭ್ಯಗಳನ್ನು ಒದಗಿಸಿಕೊಡುವುದು. (ವೇತನ, ವಾರ್ಷಿಕ ಬಡ್ತಿ ರಜೆ, ಇತ್ಯಾದಿ).
6. ಶಿಕ್ಷಕರಿಗೆ ಸೇವಾ ಪ್ರಮಾಣ ಪತ್ರ ವೇತನ ಪ್ರಮಾಣ ಪತ್ರ ನೀಡುವುದು.
7. ಶಾಲೆಯ ಸಮಗ್ರ ಮೌಲ್ಯ ಮಾಪನ ಮಾಡುವುದು.

➢ ಕರ್ತವ್ಯಗಳು:-

1. ಶಾಲಾ ಪ್ರಾರಂಭಕ್ಕೆ ಮೊದಲೇ ಶಾಲೆಗೆ ಬಂದು ಅಂದಿನ ಶಾಲಾ ಕಾರ್ಯಗಳ ಪ್ರಾರಂಭಕ್ಕೆ ಅಗತ್ಯ ಸನ್ನಿವೇಶವನ್ನು ಕಲ್ಪಿಸುವುದು.
2. ನಿಗದಿತ ಶಾಲಾ ಸಮಯಕ್ಕೆ ಪ್ರಾರಂಭಿಕ ಪ್ರಾರ್ಥನೆಯಲ್ಲಿ ಪಾಲ್ಗೊಳ್ಳುವುದು.
3. ಎಲ್ಲಾ ಶಿಕ್ಷಕರ ಅಂದಿನ ಹಾಜರಿಯನ್ನು ದೃಢೀಕರಿಸಿ, ಅಗತ್ಯ ಕ್ರಮ ಕೈಗೊಳ್ಳುವುದು.

4. ಶಿಕ್ಷಕರ ಪಾಠ–ಟಿಪ್ಪಣಿಗಳನ್ನು ಪರಿಶೀಲಿಸಿ ಅಗತ್ಯ ಸಲಹೆ ಸೂಚನೆ ನೀಡುವುದು.

5. ಶಾಲೆಯ ಎಲ್ಲಾ ಮಕ್ಕಳ ಹಾಜರಿಯನ್ನು ದೃಢೀಕರಿಸುವುದು.

6. ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಅವರ ಅಗತ್ಯಕ್ಕೆ ತಕ್ಕಂತೆ ಲಭ್ಯ ಸೌಲಭ್ಯಗಳನ್ನು ಒದಗಿಸುವುದು.

7. ಶಾಲಾ ಪಂಚಾಂಗ, ವಾರ್ಷಿಕ ಸಂಸ್ಥಾ ಯೋಜನೆ, ವೇಳಾಪಟ್ಟಿ, ರಜಾಪಟ್ಟಿಗಳನ್ನು ತಯಾರಿಸುವುದು.

8. ವಾರ್ಷಿಕ ಆಯವ್ಯಯವನ್ನು ತಯಾರಿಸುವುದು, ಅರ್ಹ ಮಕ್ಕಳು ಪಾವತಿಸಿದ ಶಾಲಾ ಶುಲ್ಕವನ್ನು ಆಯಾ ಲೆಕ್ಕ ಶೀರ್ಷಿಕೆಗಳಿಗೆ ಜಮೆ ಮಾಡುವುದು.

9. ಸಕಾಲಕ್ಕೆ ಸರಿಯಾಗಿ ವಿದ್ಯಾರ್ಥಿ ವೇತನ ಪ್ರಸ್ತಾವನೆ ಸಲ್ಲಿಕೆ ಹಾಗೂ ಮಂಜೂರಾದ ವಿದ್ಯಾರ್ಥಿ ವೇತನಗಳ ಬಟವಾಡೆಗಳನ್ನು ಮಾಡಿ ಅಗತ್ಯ ಕ್ರಮ ಕೈಗೊಳ್ಳುವುದು.

10. ಸರ್ವ ಶಿಕ್ಷಣ ಅಭಿಯಾನದಡಿ ಮಂಜೂರಾದ ವಿವಿಧ ಅನುದಾನಗಳನ್ನು ಇಲಾಖಾ ಕಾರ್ಯಸೂಚಿಯನ್ವಯ ಆದ್ಯತೆಗನುಸಾರವಾಗಿ ಬಳಕೆ ಮಾಡಿ ಅಗತ್ಯ ಕ್ರಮ ಕೈಗೊಳ್ಳುವುದು.

11. ಶಾಲಾ ಭೌತಿಕ ಆಸ್ತಿಯು ಹಾಳಾಗದಂತೆ ರಕ್ಷಣಾ ವ್ಯವಸ್ಥೆ ಮಾಡುವುದು.

12. ಶಾಲಾ ಸಿಬ್ಬಂದಿಗೆ ಸಕಾಲಕ್ಕೆ ವೇತನ ಪಾವತಿಯಾಗುವಂತೆ ಕ್ರಮ ಕೈಗೊಳ್ಳುವುದು.

13. ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯನ್ನು ರಚಿಸುವುದು.

14. ಕಾಲ ಕಾಲಕ್ಕೆ ಎಸ್.ಡಿ.ಎಂ.ಸಿ ಹಾಗೂ ಪೋಷಕ ಸಭೆಗಳನ್ನು ಕರೆದು ಶಾಲೆಯ ಹಾಗೂ ಮಕ್ಕಳ ಪ್ರಗತಿಯ ಬಗ್ಗೆ ಸಮಾಲೋಚಿಸಿ ಕ್ರಮ ಕೈಗೊಳ್ಳುವುದು.

15. ಶಾಲಾ ರಾಷ್ಟ್ರೀಯ ಹಬ್ಬಗಳು, ಕ್ರೀಡಾಕೂಟ, ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪರೀಕ್ಷೆಗಳನ್ನು ಆಯಾ ಕಾಲ ಕಾಲಕ್ಕೆ ನಡೆಯುವಂತೆ ಕ್ರಮ ಕೈಗೊಳ್ಳುವುದು.

16. ಶಿಕ್ಷಕರನ್ನು ಅಗತ್ಯವಾದ ತರಬೇತಿ ಕಾರ್ಯಕ್ರಮಗಳಿಗೆ ಬಿಡುಗಡೆ ಮಾಡಿ, ಅವರ ಬೋಧನಾ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಲು ಅವಕಾಶ ನೀಡುವುದು.

17. ಪರೀಕ್ಷಾ ನಿರ್ವಹಣೆ, ಮೌಲ್ಯಮಾಪನ, ಪ್ರಗತಿ ಪತ್ರಗಳ ನಿರ್ವಹಣೆ, ಫಲಿತಾಂಶಗಳ ಘೋಷಣೆಯ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳುವುದು.

18. ಇಲಾಖೆಯ ಎಲ್ಲಾ ಸವಲತ್ತುಗಳನ್ನು ಸಕಾಲದಲ್ಲಿ ಹಾಗೂ ಸಮರ್ಪಕ ರೀತಿಯಲ್ಲಿ ಮಕ್ಕಳಿಗೆ ದೊರೆಯುವಂತೆ ಮಾಡುವುದು.

19. ಸಮುದಾಯದೊಂದಿಗೆ ಆರೋಗ್ಯಕರ ಸಂಪರ್ಕವಿಟ್ಟುಕೊಂಡು ಶಾಲಾ ಪ್ರಗತಿಗೆ ಅಗತ್ಯ ಸೌಲಭ್ಯಗಳನ್ನು ಪಡೆದುಕೊಳ್ಳುವುದು.

20. ಆಗಿಂದಾಗ್ಗೆ ಇಲಾಖೆಯಿಂದ ಜಾರಿಯಾದ ಆದೇಶಗಳನ್ನು ಸೂಕ್ತ ಕಾಲದಲ್ಲಿ ಜಾರಿಯಾಗುವಂತೆ ಕ್ರಮ ಕೈಗೊಳ್ಳುವುದು.

21. ಮೇಲ್ವಿಚಾರಕರು, ಅಧಿಕಾರಿಗಳು ಕೇಳುವ ಎಲ್ಲಾ ಶಾಲಾ ಮಾಹಿತಿಗಳನ್ನು ಸಕಾಲದಲ್ಲಿ ರವಾನಿಸುವುದು.

22. ಶಿಕ್ಷಕರೊಂದಿಗೆ ಸೌಹಾರ್ದಯುತ ಸಂಬಂಧವನ್ನು ಇಟ್ಟುಕೊಂಡು ಆಗಿಂದಾಗ್ಗೆ ಸಭೆ ಕರೆದು ಚರ್ಚೆ ನಡೆಸಿ ಶಾಲಾ ಕಾರ್ಯಕ್ರಮಗಳಲ್ಲಿ ತೊಡಗಿಸುವುದು.

23. ಶಿಕ್ಷಕರ ಪಾಠ–ಬೋಧನೆಯನ್ನು ವೀಕ್ಷಿಸಿ ಅಗತ್ಯ ಸಲಹೆ ಹಾಗೂ ಸೂಚನೆಗಳನ್ನು ನೀಡುವುದು.

24. ಪಾಠ ಬೋಧನೆಗಳ ಅವಧಿಯನ್ನು ತಾನೂ ನಿಗದಿಪಡಿಸಿಕೊಂಡು ಮಕ್ಕಳೊಂದಿಗೆ ಹತ್ತಿರದ ಸಂಬಧ ಇಟ್ಟುಕೊಳ್ಳುವುದು.

25. ಶಾಲಾ ಶಿಸ್ತಿನ ನಿರ್ವಹಣೆಗೆ ಅಗತ್ಯವಾದ ಎಲ್ಲಾ ಕ್ರಮಗಳನ್ನು ಕೈಗೊಳ್ಳುವುದು.

26. ಅಗತ್ಯ ಶಾಲಾ ವಹಿಗಳನ್ನು ಸಮರ್ಪಕ ರೀತಿಯಲ್ಲಿ ನಿರ್ವಹಿಸುವುದು.

➢ ಸಹಶಿಕ್ಷಕರು:–

1) ಶಾಲಾ ಪ್ರಾರಂಭಕ್ಕೆ ಅರ್ಧ ಘಂಟೆ ಮುಂಚೆ ಬಂದು ಶಾಲಾ ಪ್ರಾರಂಭಿಕ ಪ್ರಾರ್ಥನೆಗೆ ಕಡ್ಡಾಯವಾಗಿ ಹಾಜರಾಗುವುದು.

2) ಆಯಾ ತರಗತಿಗಳ ಹಾಜರಾತಿಯನ್ನು ಗುರುತಿಸುವುದು.

3) ಪಾಠ ಯೋಜನೆ, ಪಾಠ ಟಿಪ್ಪಣಿಗಳನ್ನು ಕ್ರಮವಾಗಿ ಬರೆದು ಅದರಂತೆ ಬೋಧನೆ ಮಾಡುವುದು.

4) ಸೃಜನಾತ್ಮಕ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಆಸಕ್ತಿಯನ್ನು ಬೆಳೆಸುವುದು.

5) ನಿಗಧಿತ ಅವಧಿಯಲ್ಲಿ ಪರೀಕ್ಷೆಗಳು, ಮೌಲ್ಯಮಾಪನವನ್ನು ನಡೆಸಿ, ಪ್ರಗತಿ ಪತ್ರಗಳಲ್ಲಿ ಅಂಕಗಳನ್ನು ನಮೂದಿಸಿ, ಅದಕ್ಕೆ ಪೋಷಕರ ಸಹಿ ಪಡೆಯುವುದು.

6) ನಿಗಧಿತ ಅವಧಿಯಲ್ಲಿ ಪರೀಕ್ಷೆಗಳು, ಮೌಲ್ಯಮಾಪನವನ್ನು ನಡೆಸಿ, ಪ್ರಗತಿ ಪತ್ರಗಳಲ್ಲಿ ಅಂಕಗಳನ್ನು ನಮೂದಿಸಿ, ಅದಕ್ಕೆ ಪೋಷಕರ ಸಹಿ ಪಡೆಯುವುದು.

7) ಮಕ್ಕಳ ಪೋಷಕರೊಂದಿಗೆ ಅಗತ್ಯ ಸುಮಧುರ ಸಂಬಂಧ ಇಟ್ಟುಕೊಳ್ಳುವುದು.

8) ಮಕ್ಕಳ ಗೃಹಪಾಠಗಳನ್ನು ತಿದ್ದಿ, ಸೂಕ್ತ ಸಲಹೆ ಸೂಚನೆಗಳನ್ನು ನೀಡುವುದು.

9) ಶಾಲಾ ಚಟುವಟಿಕೆಗೆ ಸಂಬಧಿಸಿದ ಸರ್ಕಾರದ ಎಲ್ಲಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವಲ್ಲಿ ಸಹಕರಿಸುವುದು.

10) ಶಾಲಾ ಮಕ್ಕಳ ಸರ್ವಾಂಗೀಣ ಪ್ರಗತಿಗೆ ಅಗತ್ಯವಾದ ಶಿಸ್ತು, ಸಂಯಮ, ಮಾನವೀಯ ಮೌಲ್ಯಗಳು, ಕ್ರೀಡೆಗಳು, ಇತ್ಯಾದಿಗಳಲ್ಲಿ ತರಬೇತಿ ನೀಡುವುದು.

11) ಶಾಲಾ ದಾಖಲಾತಿ, ಹಾಜರಾತಿ, ಉಳಿಕೆ ಹಾಗೂ ಗುಣಾತ್ಮಕ ಶಿಕ್ಷಣ ನೀಡಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದು.

12) ವಿಶೇಷ ಅಗತ್ಯವುಳ್ಳ ಮಕ್ಕಳನ್ನು ಹಾಗೂ ಇತರ ಸಮಸ್ಯಾತ್ಮಕ ಮಕ್ಕಳನ್ನು ಗುರ್ತಿಸಿ, ಪರಿಹಾರಗಳನ್ನು ಕಂಡುಕೊಳ್ಳುವುದು.

13) ಶೈಕ್ಷಣಿಕ ಕ್ಷೇತ್ರದ ಹೊಸ ಆವಿಷ್ಕಾರಗಳನ್ನು ಗುರುತಿಸಿ ಶಾಲಾ ಚಟುವಟಿಕೆಗಳಲ್ಲಿ ಅಳವಡಿಸಿಕೊಳ್ಳುವುದು.

4(1) ಬಿ(111) ಮೇಲ್ವಿಚಾರಣೆ ಹಾಗೂ ಹೊಣೆಗಾರಿಕೆಯೊಂದಿಗೆ ತೀರ್ಮಾನ ತೆಗೆದುಕೊಳ್ಳುವ ಕಾರ್ಯವಿಧಾನ

ಶಾಲಾ ವ್ಯವಸ್ಥೆ ಹಾಗೂ ನಿರ್ವಹಣೆಗೆ ಸಂಬಂಧಿಸಿದಂತೆ, ಎಲ್ಲಾ ಚಟುವಟಿಕೆಗಳ ಕಾರ್ಯಾನುಷ್ಠಾನದಲ್ಲಿ ಶಾಲಾ ಶಿಕ್ಷಕರು, ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಸದಸ್ಯರ ಹಾಗೂ ಸಮುದಾಯದ ಭಾಗವಹಿಸುವಿಕೆಯ ಮೂಲಕ ಒಬ್ಬ ಜವಾಬ್ದಾರಿ ವ್ಯಕ್ತಿಯಾಗಿ ಪಾತ್ರ ವಹಿಸುವುದು. ಏಕಪಕ್ಷೀಯ ತೀರ್ಮಾನ ಹಾಗೂ ಗೊಂದಲಗಳಿಗೆ ಅವಕಾಶವಿಲ್ಲದಂತೆ ಇಲಾಖಾ ಅಧಿಕಾರಿಗಳ ಸಲಹೆ ಸೂಚನೆಗಳನ್ನು ಪಾಲಿಸುವುದು. ಒಟ್ಟಾರೆ ಶಾಲೆಯಲ್ಲಿ ಆರೋಗ್ಯಕರ ವಾತಾವರಣ ಹಾಗೂ ಸುಸೂತ್ರ ಕಾರ್ಯನಿರ್ವಹಣೆಗಳನ್ನು ಅನುಷ್ಠಾನಗೊಳಿಸುವುದು.

4(1) ಬಿ(IV) ಕಾರ್ಯವನ್ನು ನಿರ್ವಹಿಸಲು ನಿಗಧಿಪಡಿಸಲಾದ ಸೂತ್ರಗಳು

1) ವಾರ್ಷಿಕ ಕಾರ್ಯ ಯೋಜನೆ ಹಾಗೂ ಶಾಲಾ ಪಂಚಾಂಗಗಳ ಅನ್ವಯ ಕಾರ್ಯನಿರ್ವಹಿಸುವುದು.

2) ಸರ್ಕಾರಿ ಆದೇಶಗಳು ಹಾಗೂ ಆಗಿಂದಾಗ್ಗೆ ಇಲಾಖೆಯು ಹೊರಡಿಸುವ ಸುತ್ತೋಲೆಗಳ ಅನ್ವಯ ಕಾರ್ಯನಿರ್ವಹಿಸುವುದು.

3) ಕಾಲ ಕಾಲಕ್ಕೆ ಇಲಾಖೆಗೆ ನೀಡಬೇಕಾದ ಮಾಹಿತಿಗಳನ್ನು ತಡ ಮಾಡದೆ ಸಲ್ಲಿಸುವುದು.

4) ಶಾಲಾ ಅನುದಾನ ನಿರ್ವಹಣೆ, ಪರೀಕ್ಷಾ ಕ್ರಮ, ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಇಲಾಖೆಯ ನಿಯಮಗಳನ್ನು ಅಳವಡಿಸಿಕೊಳ್ಳುವುದು.

5) ಸಾರ್ವತ್ರಿಕ ದಾಖಲೆಗೆ ಸಂಬಂಧಿಸಿದಂತೆ, ಇಲಾಖೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಸಂಬಂಧಿಸಿದ ಸುತ್ತೋಲೆಗಳನ್ನು ಅನುಸರಿಸುವುದು.

4(1) ಬಿ(V) ಕಾರ್ಯನಿರ್ವಹಿಸುವ ಸಂಬಂಧವಾಗಿ ಸಂಸ್ಥೆ ಹೊಂದಿರುವ ಅಥವಾ ಅಧೀನದಲ್ಲಿರುವ ಅಥವಾ ಅದರ ನೌಕರರು ಉಪಯೋಗಿಸುವ ನಿಯಮಗಳು, ನಿಬಂಧನೆಗಳು, ಸೂಚನೆಗಳು, ಕೈಪಿಡಿ ಮತ್ತು ದಾಖಲೆಗಳು.

- ಕರ್ನಾಟಕ ನಾಗರೀಕ ಸೇವಾ ನಿಯಮಗಳು.
- ಕರ್ನಾಟಕ ನೀತಿ ಸಂಹಿತೆಗಳು.
- ಕರ್ನಾಟಕ ಖಜಾನೆ ಸಂಹಿತೆ.
- ಶೈಕ್ಷಣಿಕ ಮೌಲ್ಯಮಾಪನ ಮಾರ್ಗದರ್ಶಿ
- ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಕೈಪಿಡಿ.
- ಪ್ರಾಥಮಿಕ ಶಾಲಾ ಶೈಕ್ಷಣಿಕ ಕೈಪಿಡಿ.

- ಹೊಸ ಪಠ್ಯವಸ್ತುವಿನ ಮುಖ್ಯಾಂಶಗಳು, ಡಿಎಸ್.ಇ.ಆರ್.ಟಿ.
- ಸಂಜೀವಿನಿ – ಮುಖ್ಯ ಶಿಕ್ಷಕರ ಆಡಳಿತಾತ್ಮಕ ತರಬೇತಿ ಸಂಚಿಕೆ.
- ಸ್ಪಂದನ – ಡಿ.ಎಸ್.ಇ.ಆರ್.ಟಿ.
- ತ್ರೈಮಾಸಿಕ ಪದ್ಧತಿ – ಮಾರ್ಗದರ್ಶಿ ಸೂತ್ರಗಳು.

4(1) ಬಿ(VI) ಸಂಸ್ಥೆ ಹೊಂದಿರುವ ಅಥವಾ ಅಧೀನದಲ್ಲಿರುವ ವರ್ಗೀಕೃತ ದಾಖಲೆಗಳ ಪಟ್ಟಿ.

1. ಆಡಳಿತಕ್ಕೆ ಸಂಬಂಧಿಸಿದ ದಾಖಲೆಗಳು:–

- ಗಣತಿ ವಹಿ.
- ದಾಖಲಾತಿ ಅರ್ಜಿಗಳ ಕಡತ, ದಾಖಲಾತಿ ವಹಿ.
- ವರ್ಗಾವಣಾ ಪುಸ್ತಕ, ತಪಾಸಣಾ ವರದಿ ಕಡತ.
- ಸಾಮಾನ್ಯ ಧಾಸ್ತಾನು ವಹಿ, ಕ್ರೀಡೆ, ಪುಸ್ತಕ ಭಂಡಾರ, ವಿಜ್ಞಾನೋಪಕರಣಗಳು, ದೃಕ್‌ಶ್ರವಣ ಉಪಕರಣಗಳ ದಾಸ್ತಾನು ವಹಿಗಳು.
- ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಕೈ ಚೀಲ, ನೋಟ್‌ಪುಸ್ತಕಗಳ ದಾಸ್ತಾನು ಹಾಗೂ ವಿತರಣಾ ವಹಿ.
- ಅಕ್ಷರ ದಾಸೋಹ ದಾಸ್ತಾನು ಹಾಗೂ ವಿತರಣಾ ವಹಿ.
- ಕ್ರೋಢೀಕೃತ ಹಾಗೂ ವೈಯಕ್ತಿಕ ಅಂಕಗಳ ವಹಿ.
- ಸಾರ್ವತ್ರಿಕ ಹಾಗೂ ಶಿಕ್ಷಕರ ಜ್ಞಾಪನ ಪುಸ್ತಗಳು.
- ಇಂದ ಮತ್ತು ಗೆ ವಹಿ
- ಎಸ್.ಡಿ.ಎಂ.ಸಿ ಜ್ಞಾಪನ ಹಾಗೂ ಸಭಾ ನಡಾವಳಿ ಪುಸ್ತಕಗಳು.
- ಸಾಂದರ್ಭಿಕ ರಜೆ ವಹಿ.
- ಇಲಾಖೆ ಹಾಗೂ ಇಲಾಖೇತರ ಅಧಿಕಾರಿಗಳ ಭೇಟಿ ಪುಸ್ತಕ
- ಸಿಬ್ಬಂದಿ ವರ್ಗದ ಹಾಗೂ ವಿದ್ಯಾರ್ಥಿಗಳ ಹಾಜರಿ ಪುಸ್ತಕಗಳು
- ಶಾಲಾ ಇತಿಹಾಸದ ಪುಸ್ತಕ.
- ಮುಖ್ಯೋಪಾಧ್ಯಾಯರ, ಪಾಠ ವೀಕ್ಷಣಾ ಪುಸ್ತಕ
- ಭೂದಾನದ ವಹಿ
- ವೈದ್ಯಕೀಯ ತಪಾಸಣಾ ವಹಿ
- ರಾಷ್ಟ್ರೀಯ ಹಬ್ಬಗಳು ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ವರದಿ ವಹಿ
- ಟಪಾಲು ಪುಸ್ತಕ
- ಸಿಬ್ಬಂದಿಯ ಸೇವಾ ಪುಸ್ತಕಗಳು

II ಹಣಕಾಸು ವಿಭಾಗಕ್ಕೆ ಸಂಬಂಧಿಸಿದ ದಾಖಲೆಗಳು

- ವೇತನ ಬಟವಾಡೆ ವಹಿ
- ಖಜಾನೆ ಇರಸಾಲು ಪುಸ್ತಕ
- ತರಗತಿವಾರು ಶುಲ್ಕ ವಸೂಲಾತಿ ಪುಸ್ತಕಗಳು

- ದಿನವಹಿ ಶುಲ್ಕ ವಸೂಲಾತಿ ಪುಸ್ತಕ
- ಕ್ರೀಡಾ, ವಾಚನಾಲಯ, ವೈದ್ಯಕೀಯ, ವಿದ್ಯಾರ್ಥಿ ಕ್ರೀಡಾ ನಿಧಿ, ಸೇವಾದಳ ಶುಲ್ಕ ವಸೂಲಾತಿ ಪುಸ್ತಕಗಳು
- ಶುಲ್ಕ ವಸೂಲಾತಿ ರಶೀತಿ ಪುಸ್ತಕಗಳು
- ಸರ್ಕಾರಿ/ಸರ್ಕಾರೇತರ ನಗದು ಪುಸ್ತಕಗಳು
- ಅಂಚೆ ಕಛೇರಿ/ಬ್ಯಾಂಕ್ ಪಾಸ್ ಪುಸ್ತಕಗಳು
- ಎಸ್.ಎಸ್.ಎ ಅಡಿಯಲ್ಲಿ ವಿವಿಧ ಅನುದಾನಗಳ ಜಮಾ ಖರ್ಚಿನ ಪುಸ್ತಕ ರಶೀದಿಗಳ ಕಡತ
- ಸಿಬ್ಬಂದಿಯ ವಾರ್ಷಿಕ ಬಡ್ತಿ ಮಂಜೂರಾತಿ ಪುಸ್ತಕ
- ಶಾಲಾ ಶುಲ್ಕ ಆಯವ್ಯಯ ಅಂದಾಜು ಪುಸ್ತಕ
- ಸಿಬ್ಬಂದಿಯ ಮಾಹೆಯಾನ ಕಟಾವಣೆ ಪುಸ್ತಕ
- ಇತರೆ ಅಗತ್ಯ ವಹಿಗಳು

III ಶೈಕ್ಷಣಿಕ ವಿಭಾಗಕ್ಕೆ ಸಂಬಂಧಿಸಿದ ದಾಖಲೆಗಳು

- ವಾರ್ಷಿಕ ಕ್ರಿಯಾ ಯೋಜನೆ, ಸಂಸ್ಥೆಯ ಯೋಜನೆಯ ವಹಿಂಗಳು
- ಉಪಾಧ್ಯಾಯರ ಸಭಾ ನಡವಳಿ ಪುಸ್ತಕ
- ಸಾಮಾನ್ಯ ಹಾಗೂ ತರಗತಿಯ ವೇಳಾಪಟ್ಟಗಳು
- ಶಾಲಾ ಪಂಚಾಂಗ, ತರಗತಿವಾರು ಕ್ರೋಢೀಕೃತ ಹಾಜರಾತಿ ವಹಿ
- ಕ್ರೀಡಾ ಹಾಗೂ ವಾರ್ಷಿಕ ಕಾರ್ಯಯೋಜನೆ
- ಶಾಲಾ ಪ್ರವಾಸದ ವರದಿ ಪುಸ್ತಕ
- ಕೆಲಸದ ಹಂಚಿಕೆ ವಹಿ

4(i) ಬಿ(Vii) ನೀತಿ ನಿಯಮಗಳನ್ನು ರೂಪಿಸಲು ಹಾಗೂ ಅನುಷ್ಠಾನಗೊಳಿಸಲು ಸಾರ್ವಜನಿಕರ ಅಥವಾ ಅವರ ನಿವೇದನೆಗಳ ಕುರಿತಂತೆ ಸಮಾಲೋಚಿಸಲು ಇರುವ ವ್ಯವಸ್ಥೆಗಳು

ಅನ್ವಯಿಸುವುದಿಲ್ಲ.

4(i) ಬಿ(Viii) ಅಂಗ ಸಂಸ್ಥೆಯಾಗಿ ಅಥವಾ ಸಲಹೆಗಾಗಿ ರಚಿಸಿದ ಎರಡು ಅಥವಾ ಹೆಚ್ಚಿನ ಸದಸ್ಯರಿರುವ ಮಂಡಳಿ, ಪರಿಷತ್ ಸಮಿತಿ ಮತ್ತು ಇತರ ಸಂಸ್ಥೆಗಳ ಬಗ್ಗೆ ಇರುವ ವಿವರ ಮತ್ತು ಅವುಗಳು ನಡೆಸುವ ಸಭೆಗೆ ಸಾರ್ವಜನಿಕರ ಮುಕ್ತಾವಕಾಶ ಅಥವಾ ಸಭಾ ನಡವಳಿಗಳ ಲಭ್ಯತೆ ಬಗ್ಗೆ.

ಶಾಲೆಯ ಸರ್ವಾಗೀಣ ಅಭಿವೃದ್ಧಿಗಾಗಿ ಸಮುದಾಯದ ಪರವಾಗಿ ರಚಿಸಿದ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಯ ಸಭೆಗಳನ್ನು ನಿಯತವಾಗಿ ಮಾಹೆಯಾನ ನಡೆಸಲಾಗುವುದು. ಈ ಸಭೆಗಳಲ್ಲಿ ಶಾಲಾಚಟುವಟಿಕೆಗಳಲ್ಲಿ ದಾಖಲಿಸಲಾಗುವುದು, ಪೋಷಕರೇ ಸದಸ್ಯರಾಗಿರುವುದರಿಂದ ಈ ಸಭೆಗಳಿಗೆ ಸಾರ್ವಜನಿಕರಿಗೆ ಮುಕ್ತ ಅವಕಾಶವಿದೆ.

ಎಸ್.ಡಿ.ಎಂ.ಸಿ. ವಿವರ:

ರಚನೆ: ಪೋಷಕ ಸಭೆಯಿಂದ 9ಜನ ಪೋಷಕ ಪ್ರತಿನಿಧಿಗಳಿರುತ್ತಾರೆ ಇವರಲ್ಲಿ ಕನಿಷ್ಠ ಮೂವರು ಮಹಿಳಾ ಪ್ರತಿನಿಧಿಗಳು ಇರಬೇಕು ಕನಿಷ್ಠ ಇಬ್ಬರು ಪರಿಶಿಷ್ಟ ಜಾತಿ/ಪಂಗಡಗಳಿಗೆ ಸೇರಿದವರಿರಬೇಕು ಒಬ್ಬರು ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದವರಾಗಿರಬೇಕು. ಈ ಒಂಭತ್ತು ಮಂದಿಯಲ್ಲಿ ಒಬ್ಬರನ್ನು ಅಧ್ಯಕ್ಷರೆಂದು ಆಯ್ಕೆ ಮಾಡುತ್ತಾರೆ.

ಆ ಕ್ಷೇತ್ರದ ಜನಪ್ರತಿನಿಧಿಗಳು, ಅಂಗನವಾಡಿ ಇದ್ದಲ್ಲಿ ಅದರ ಶಿಕ್ಷಕರು, ಈ ಕ್ಷೇತ್ರದ ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು ಶಾಲಾ ಮುಖ್ಯ ಶಿಕ್ಷಕರ ಸಮಿತಿಯ ಪದನಿಮಿತ್ತ ಸದಸ್ಯರಾಗಿರುತ್ತಾರೆ.

ಶಾಲೆಯನ್ನು ದತ್ತು ತೆಗೆದುಕೊಂಡ ಮಹನೀಯರು, ರೂ 10,000/-ಅಥವಾ ಅದಕ್ಕಿಂತ ಹೆಚ್ಚು ಹಣ ನೀಡಿದ ದಾನಿಗಳು, ಈ ಕ್ಷೇತ್ರದ ಒಬ್ಬ ಶಿಕ್ಷಣ ತಜ್ಞರು ಅಥವಾ ಒಬ್ಬ ನಿವೃತ್ತ ಶಿಕ್ಷಕರು, ಸ್ಥಳೀಯ ಸೇವಾ ಸಂಸ್ಥೆಯ ಇಬ್ಬರು ಸದಸ್ಯರು, ಏಳನೇ ವರ್ಗದ ವಿದ್ಯಾರ್ಥಿ/ನಿಯು ನಾಮ ನಿರ್ದೇಶಿತ ಸದಸ್ಯರಾಗಿರುತ್ತಾರೆ. ಈ ಸಮಿತಿಯ ಕಾಲಾವಧಿ ಮೂರು ವರ್ಷಗಳದ್ದಾಗಿರುತ್ತದೆ.

ಆಯಾ ಶಾಲೆಯ ಮುಖ್ಯ ಶಿಕ್ಷಕರು ಸದಸ್ಯ ಕಾರ್ಯದರ್ಶಿ ಹಾಗೂ ಖಜಾಂಚಿಗಳಾಗಿರುತ್ತಾರೆ.

4(i) ಬಿ(iX) ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರ ವಿವರ ಸೂಚಿಕೆ

ಕ್ರ.	ಶಿಕ್ಷಕರ ಹೆಸರು	ಪದನಾಮ	ದೂರವಾಣಿ ಸಂಖ್ಯೆ
1			
2			
3			
4			
5			
6			
7			
8			
9			
10			
11			
12			
13			

4(i) ಬಿ(X) ನಿಯಮಾವಳಿಯಂತೆ ಪಡೆಯುವ ಪರಿಹಾರ ವ್ಯವಸ್ಥೆಯು ಸೇರಿದಂತೆ ಪ್ರತಿ ಅಧಿಕಾರಿ ಮತ್ತು ಸಿಬ್ಬಂದಿಯವರ ಮಾಸಿಕ ಸಂಭಾವನೆ ವಿವರ:

ಕ್ರ.	ಶಿಕ್ಷಕರ ಹೆಸರು	ಹುದ್ದೆ	ಮಾಸಿಕ ವೇತನ
1			
2			
3			
4			
5			
6			
7			
8			
9			
10			
11			
12			
13			

4(i) ಬ(XiV) ಲಭ್ಯವಿರುವ ಅಥವಾ ಹೊಂದಿರುವ ಮಾಹಿತಿಗಳನ್ನು ವಿದ್ಯುನ್ಮಾನ ಮಾಧ್ಯಮಕ್ಕೆ ಅಳವಡಿಸಿರುವ ವಿವರಗಳು:-

ಶಾಲೆಯ ಸಮಗ್ರ ಮಾಹಿತಿಯನ್ನು ಇಲಾಖೆಯ ಇಎಂಐಎಸ್ ನಮೂನೆಗೆ ನಮೂದಿಸಲಾಗಿದೆ.

4(i) ಬ(XV) ಗ್ರಂಥಾಲಯ ಮತ್ತು ವಾಚನಾಲಯಗಳು ಸಾರ್ವಜನಿಕ ಉಪಯೋಗಕ್ಕೆ ಇದ್ದಲ್ಲಿ ಅವುಗಳ ಕೆಲಸದ ವೇಳೆಗಳನ್ನು ಒಳಗೊಂಡಂತೆ ನಾಗರೀಕರಿಗೆ ನಾಹಿತಿ ಪಡೆಯಲು ಇರುವ ಸವಲತ್ತುಗಳ ವಿವರ:-

ಶಾಲೆಯಲ್ಲಿ ವಾಚನಾಲಯ ಸೌಲಭ್ಯವಿದ್ದು , ಅದು ಶಾಲಾ ಮಕ್ಕಳಿಗೆ ಮಾತ್ರ ಉಪಯೋಗಿಸಲ್ಪಡುತ್ತಿದೆ. ಆಸಕ್ತ ನಾಗರೀಕರು ಶಾಲಾ ವೇಳೆಯಲ್ಲಿ ಶಾಲಾ ವೇಳೆಯಲ್ಲಿ ಶಾಲಾ ಕೆಲಸಕ್ಕೆ ಧಕ್ಕೆಯಾಗದಂತೆ ಶಾಲೆಯಲ್ಲೇ ಇದರ ಉಪಯೋಗ ಮಾಡಿಕೊಳ್ಳಲು ಅವಕಾಶ ನೀಡಲಾಗುವುದು.

ಶಾಲಾ ವೇಳೆ, 10-00 ರಿಂದ 4-30 ಅಗತ್ಯ ಮಾಹಿತಿಯನ್ನು ಪಡೆಯಬಹುದು.

4(i) ಬ(XVi) ಸಾರ್ವಜನಿಕ ಮಾಹಿತಿ ಅಧಿಕಾರಿಗಳ ಹೆಸರುಗಳು, ಪದನಾಮಗಳೂ ಇತರ ವಿವರಗಳು:-

ಶ್ರೀ/ಶ್ರೀಮತಿ

ಮುಖ್ಯ ಶಿಕ್ಷಕರು,
ಸರ್ಕಾರಿ/ಅನುದಾನಿತ/ಮಾದರಿ/ಹಿರಿಯ ಪ್ರಾಥಮಿಕ ಶಾಲೆ,
____________________ ಗ್ರಾಮ
____________________ ತಾಲೂಕು
____________________ ಜಿಲ್ಲೆ
ಪಿನ್ ಕೋಡ್:-
ದೂರವಾಣಿ ಸಂಖ್ಯೆ:-

4(i) ಬ(XVii) ನಿಗಧಿಪಡಿಸಬಹುದಾದ ಇನ್ನಾವುದೇ ಇತರ ಮಾಹಿತಿಗಳು:-

:-ಇರುವುದಿಲ್ಲ:-

* * *

ನಿರ್ದೇಶಕರು, ಮುದ್ರಣ, ಲೇಖನ ಸಾಮಗ್ರಿ ಮತ್ತು ಪ್ರಕಟಣೆಗಳ ಇಲಾಖೆ, ಬೆಂಗಳೂರು.

OKA/BG-GPO/2515/WPP-47/2006-2008

ಸುವರ್ಣ ಕರ್ನಾಟಕ - 2006

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ - IV-A	ಬೆಂಗಳೂರು, ಬುಧವಾರ, ಜೂನ್ ೧೪, ೨೦೦೬ (ಜ್ಯೇಷ್ಠ ೨೪, ಶಕ ವರ್ಷ ೧೯೨೮)	ನಂ. ೭೩೪

ಶಿಕ್ಷಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಇಡಿ 122 ಪಿಬಿಎಸ್ 2004, ಬೆಂಗಳೂರು, ದಿನಾಂಕ 14ನೇ ಜೂನ್, 2006

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978ರ (1990 ರ ಕರ್ನಾಟಕ ಅಧಿನಿಯಮ 14) 3ನೇ ಪ್ರಕರಣದ (2)ನೇ ಉಪ ಪ್ರಕರಣದ (ಎ) ಖಂಡದಿಂದ ಅಗತ್ಯಪಡಿಸಲಾದಂತೆ ಅಧಿಸೂಚನೆ ಸಂಖ್ಯೆ ಇಡಿ 122 ಪಿಬಿಎಸ್ 2004, ದಿನಾಂಕ 17.3.2006 ರಲ್ಲಿ ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು)(ಮಾದರಿ) ಉಪವಿಧಿಗಳು, 2006 ರ ಕರಡನ್ನು, ಕರ್ನಾಟಕ ವಿಶೇಷ ರಾಜ್ಯಪತ್ರದ ಭಾಗ IV-A (ವಿಶೇಷ ಸಂಚಿಕೆ ದಿನಾಂಕ 17.3.2006) ದಲ್ಲಿ ಪ್ರಕಟಿಸಿ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿನಗಳೊಳಗಾಗಿ ಬಾಧಿತರಾಗಬಹುದಾದ ಎಲ್ಲ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಗಳನ್ನು ಅಹ್ವಾನಿಸಿರುವುದರಿಂದ ;

ಮತ್ತು ಸದರಿ ರಾಜ್ಯಪತ್ರವನ್ನು 2006ರ ಮಾರ್ಚ್ 17 ರಂದು ಸಾರ್ವಜನಿಕರಿಗೆ ಲಭ್ಯವಾಗುವಂತೆ ಮಾಡಿರುವುದರಿಂದ :

ಮತ್ತು ಸ್ವೀಕರಿಸಲಾದ ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ :

ಈಗ, ಕರ್ನಾಟಕ ಸರ್ಕಾರವು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ (1993ರ ಕರ್ನಾಟಕ ಅಧಿನಿಯಮ ಸಂಖ್ಯೆ 14) 58(1-A) (v), 58(2), 60 ಮತ್ತು ಪ್ರಕರಣ 61(2)(b) ಪ್ರಕರಣಗಳೊಂದಿಗೆ ಓದಲಾದ ಸದರಿ ಅಧಿನಿಯಮದ 316ನೇ ಪ್ರಕರಣದ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಹಾಗೂ ಈ ವಿಷಯದಲ್ಲಿ ಈ ಮೊದಲಿನ ಸರ್ಕಾರಿ ಆದೇಶಗಳನ್ನು ರದ್ದುಗೊಳಿಸಿ, ಕರ್ನಾಟಕ ಸರ್ಕಾರವು ಈ ಮೂಲಕ ಈ ಕೆಳಗಿನಂತೆ ಉಪ ವಿಧಿಗಳನ್ನು ರಚಿಸಿರುತ್ತದೆ, ಎಂದರೆ:

ಮಾದರಿ ಉಪವಿಧಿಗಳು

ಅಧ್ಯಾಯ - 1

ಪ್ರಾರಂಭಿಕ

1. ಹೆಸರು ಮತ್ತು ಪ್ರಾರಂಭ–

(ಎ) ಈ ಉಪವಿಧಿಗಳನ್ನು ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು)(ಮಾದರಿ) ಉಪವಿಧಿಗಳು, 2006 ಎಂದು ಕರೆಯತಕ್ಕದ್ದು.

734 · F1 · SC · 2000 COPIES

(ಬಿ) ಈ ಉಪವಿಧಿಗಳು ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು-

ಈ ಉಪವಿಧಿಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು, ಈ ಮುಂದಿನ ಪದಗಳು ಮತ್ತು ಪದಾವಳಿಗಳನ್ನು ಈ ಮುಂದಿನ ಅರ್ಥಗಳಲ್ಲಿ ಬಳಸಲಾಗಿದೆ –

ಎ. "ಶೈಕ್ಷಣಿಕ ವರ್ಷ" ಎಂದರೆ ಕರ್ನಾಟಕ ಶಿಕ್ಷಣ ಅಧಿನಿಯಮ, 1983ರ ಪ್ರಕರಣ 2(1)ರಲ್ಲಿ ಪರಿಭಾಷಿಸಿದಂತೆ ಮತ್ತು ಆಗಿಂದಾಗ್ಗೆ ತಿದ್ದುಪಡಿ ಮಾಡಿದಂತೆ "ಶೈಕ್ಷಣಿಕ ವರ್ಷ" ;

ಬಿ. "ನಾಗರಿಕ ಸೌಲಭ್ಯಗಳ ಸಮಿತಿ" ಅಥವಾ ಸಿಎಸಿ ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ 61ನೇ ಪ್ರಕರಣದ ಅನುಸಾರ ರಚಿತವಾದ "ನಾಗರೀಕ ಸೌಲಭ್ಯಗಳ ಸಮಿತಿ " ;

ಸಿ. "ವಾರ್ಷಿಕ ಕ್ರಿಯಾ ಯೋಜನೆ" ಎಂದರೆ ಶಾಲೆಯ ಸಮಗ್ರ ಅಭಿವೃದ್ಧಿಯ ಸಂಬಂಧದಲ್ಲಿ ಮುಖ್ಯ ಶಿಕ್ಷಕರು ವಾರ್ಷಿಕ ಆಧಾರದ ಮೇಲೆ ರೂಪಿಸಿದ ಯೋಜನೆ ;

ಡಿ. "ಮಗು" ಎಂದರೆ viiiನೇ ತರಗತಿವರೆಗೆ ಶಾಲಾ ಶಿಕ್ಷಣವನ್ನು ಪೂರ್ಣಗೊಳಿಸಿಲ್ಲದ, ಐದರಿಂದ ಹದಿನಾಲ್ಕು ವರ್ಷಗಳ ವಯೋಮಿತಿಯ ಮಗು ;

ಇ. "ಗ್ರಾಮ ಪಂಚಾಯತಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ" ಅಥವಾ "ಎಸ್.ಡಿ.ಎಂ.ಸಿ." ಎಂದರೆ ಈ ಉಪವಿಧಿಗಳ ಅನುಸಾರವಾಗಿ ರಚಿಸಲಾದ ಸಿಎಸಿಯ ಸಮಿತಿಯ ಅಡಿಯಲ್ಲಿ ರಚಿಸಲಾದ ಒಂದು ಸಮಿತಿ ;

ಎಫ್."ಸದಸ್ಯ" ಎಂದರೆ ಎಸ್‌ಡಿಎಂಸಿಯ ಸದಸ್ಯ ಮತ್ತು ಇದು, ಈ ಉಪವಿಧಿಗಳ ಅಡಿಯಲ್ಲಿ ನಿಯಮಿಸಲಾದ ಪ್ರಕ್ರಿಯೆಗಳ ಅನುಸಾರವಾಗಿ ಎಸ್‌ಡಿಎಂಸಿಗೆ ಸಹ ಸದಸ್ಯರಾಗಿ ಆಯ್ಕೆ ಮಾಡಲಾದ ಅಥವಾ ನಾಮನಿರ್ದೇಶಿಸಲಾದ ಅಂಥ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ ;

ಜಿ. "ಪಂಚಾಯತಿ ಪ್ರದೇಶ" ಎಂದರೆ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 2(28) ರ ಅಡಿಯಲ್ಲಿ ಪರಿಭಾಷಿಸಿದಂಥ "ಪಂಚಾಯತ್ ಪ್ರದೇಶ";

ಹೆಚ್. "ತಂದೆ/ತಾಯಿ" ಎಂದರೆ ಶಾಲೆಯಲ್ಲಿ ಓದುತ್ತಿರುವ ಮಗುವಿನ ಸಹಜ ತಂದೆ/ತಾಯಿ ;

ಐ. "ತಂದೆ ತಾಯಿಯರ ಪರಿಷತ್ತು" ಎಂದರೆ ನಿರ್ದಿಷ್ಟ ಶಾಲೆಯ ರಿಜಿಸ್ಟರಿನಲ್ಲಿ ದಾಖಲು ಮಾಡಿರುವ ಮತ್ತು ಹಾಜರಾಗುತ್ತಿರುವ ಮಕ್ಕಳ ಎಲ್ಲಾ ತಂದೆ ತಾಯಿಯರ ಪರಿಷತ್ತು;

ವಿವರಣೆ.–

(i) ಸ್ಪಷ್ಟೀಕರಣದ ಸಲುವಾಗಿ, ಮಗುವಿನ ತಂದೆ ತಾಯಿ ಇಬ್ಬರೂ ತಂದೆ ತಾಯಿಯರ ಪರಿಷತ್ತಿನ ಸದಸ್ಯರಾಗಿರತಕ್ಕದ್ದೆಂದು ಈ ಮೂಲಕ ನಿರ್ದಿಷ್ಟಪಡಿಸಲಾಗಿದೆ.

(ii) ಈ ಉಪವಿಧಿಗಳ ಅಡಿಯಲ್ಲಿ ಪರಿಭಾಷಿಸಿದಂತೆ "ತಂದೆ ತಾಯಿಯರ ಪರಿಷತ್"ನ್ನು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಪ್ರಕರಣ 61(2) (ಬಿ) ಅಡಿಯಲ್ಲಿ "ಇತರ ಇಂತಹುದೇ ಮಂಡಲಿಗಳು" ಎಂಬುದಾಗಿ ಭಾವಿಸತಕ್ಕದ್ದು.

ಜೆ. "ಅಧ್ಯಕ್ಷ" ಎಂದರೆ ಈ ಉಪವಿಧಿಗಳ ಅಡಿಯಲ್ಲಿ ನಿಯಮಿಸಲಾದ ಪ್ರಕ್ರಿಯೆಗಳ ಅನುಸಾರವಾಗಿ ಎಸ್‌ಡಿಎಂಸಿ ಸದಸ್ಯರಿಂದ ಅಧ್ಯಕ್ಷರಾಗಿ ಆಯ್ಕೆಯಾದ ಎಸ್‌ಡಿಎಂಸಿಯ ಅಧ್ಯಕ್ಷ ;

ಕೆ. "ಸದಸ್ಯ ಕಾರ್ಯದರ್ಶಿ" ಎಂದರೆ ಎಸ್‌ಡಿಎಂಸಿಯ ಸದಸ್ಯ ಕಾರ್ಯದರ್ಶಿ ;

ಎಲ್."ಶಾಲೆ" ಎಂದರೆ ಯಾವುದೇ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಕಿರಿಯ ಪ್ರಾಥಮಿಕ ಶಾಲೆ, ಹಿರಿಯ ಪ್ರಾಥಮಿಕ ಶಾಲೆ ಅಥವಾ ಮಾಧ್ಯಮಿಕ ಶಾಲೆ, ಶಿಕ್ಷಣ ಖಾತರಿ ಯೋಜನಾ ಕೇಂದ್ರ, ರೆಸಿಡೆನ್ಶಿಯಲ್ ಬ್ರಿಡ್ಜ್– ಕೋರ್ಸ್ ಕೇಂದ್ರ ಅಥವಾ ಪ್ರಾಥಮಿಕ ಶಿಕ್ಷಣವನ್ನು ಒದಗಿಸುವುದಕ್ಕಾಗಿ ಆಗಿಂದಾಗ್ಗೆ ರಾಜ್ಯವು ನಿಯಮಿಸಿದ ಯಾವುದೇ ಇತರೆ ಸಂಸ್ಥೆ / ರಚನೆಯನ್ನು ಒಳಗೊಳ್ಳುತ್ತದೆ.

ವಿವರಣೆ.– "ಶಾಲೆ" ಎಂಬುದರಲ್ಲಿ ಶಾಲೆಗೆ ಸೇರಿದ ಯಾವುದೇ ವಿದ್ಯಾರ್ಥಿ ನಿಲಯ/ನಿವಾಸ ಸೌಲಭ್ಯ ಒಳಗೊಳ್ಳುತ್ತದೆ.

ಎಂ. "ಎಲಿಮೆಂಟರಿ ಶಿಕ್ಷಣ" ಎಂದರೆ ಯಾವುದೇ ಶಾಲೆಯಲ್ಲಿನ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣ;

ಎನ್. "ಶಾಲಾ ನಿಧಿ" ಎಂದರೆ ಪ್ರತಿಯೊಂದು ಶಾಲೆಗಾಗಿ ಇರುವ ಒಂದು ನಿಧಿ ಮತ್ತು ಇದರಲ್ಲಿ ಸರ್ಕಾರವು ಬಿಡುಗಡೆ ಮಾಡುವ ವೇತನ ಅನುದಾನವನ್ನು ಹೊರತುಪಡಿಸಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅಥವಾ ಜಿಲ್ಲಾ ಪಂಚಾಯತಿ, ತಾಲೂಕು ಪಂಚಾಯತಿ ಅಥವಾ ಗ್ರಾಮ ಪಂಚ್ಗಾಯತಿಯಂಥ ಸ್ಥಳೀಯ ಮಂಡಲಿಗಳು ಬಿಡುಗಡೆ ಮಾಡುವ ನಿಧಿಗಳು ಅಥವಾ ಶಾಲೆಯ ಪ್ರಯೋಜನಕ್ಕಾಗಿ ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ನೀಡುವ ಸಾರ್ವಜನಿಕ ವಂತಿಗಳು ಸೇರುತ್ತವೆ ;

ಓ. "ಉಪಾಧ್ಯಕ್ಷ" ಎಂದರೆ ಈ ಉಪವಿಧಿಗಳ ಅಡಿಯಲ್ಲಿ ನಿಯಮಿಸಲಾದ ಪ್ರಕ್ರಿಯೆಗಳ ಅನುಸಾರವಾಗಿ ಎಸ್‌ಡಿಎಂಸಿಯ ಸದಸ್ಯರಿಂದ ಆಯ್ಕೆಯಾದ ಎಸ್‌ಡಿಎಂಸಿಯ ಉಪಾಧ್ಯಕ್ಷ.

ಅಧ್ಯಾಯ – II

ನಾಗರಿಕ ಸೌಲಭ್ಯಗಳ ಸಮಿತಿಯ ಪ್ರಕಾರ್ಯಗಳು ಮತ್ತು ಅಧಿಕಾರಗಳು

3. ಶಾಲಾ ಅಭಿವೃದ್ಧಿಯ ಮತ್ತು ಮೇಲುಸ್ತುವಾರಿ ಸಮಿತಿಯ (ಎಸ್‌ಡಿಎಂಸಿ) ರಚನೆ–

ಎ. ನಾಗರಿಕ ಸೌಲಭ್ಯಗಳ ಸಮಿತಿಯು ಪಂಚಾಯತಿ ಪ್ರದೇಶದ ವ್ಯಾಪ್ತಿಯೊಳಗೆ ಪ್ರತಿಯೊಂದು ಪ್ರಾಥಮಿಕ ಶಾಲೆಗಾಗಿ ಒಂದು ಗ್ರಾಮ ಪಂಚಾಯತ್ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸತಕ್ಕದ್ದು. ಇದು ಸದರಿ ಶಾಲೆಯ ಮುಖ್ಯ ಶಿಕ್ಷಕರಿಗೆ ಅಂಥ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆಯ ಕಾರ್ಯವನ್ನು ಪ್ರತ್ಯಾಯೋಜಿಸತಕ್ಕದ್ದು.

ಬಿ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕೆಳಗೆ ನಿಯಮಿಸಲಾದ ರೀತಿಯಲ್ಲಿ ಮುಂದಿನ ವ್ಯಕ್ತಿಗಳನ್ನು ಒಳಗೊಂಡಿರತಕ್ಕದ್ದು.

(i) ತಂದೆ ತಾಯಿಯರ ಪರಿಷತ್ತು, ತಮ್ಮ ಪೈಕಿ ಒಂಬತ್ತು ಜನ ಪ್ರತಿನಿಧಿಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಆಯ್ಕೆ ಮಾಡತಕ್ಕದ್ದು. ಆ ಒಂಭತ್ತು ಜನ ಪ್ರತಿನಿಧಿಗಳಲ್ಲಿ, ಕನಿಷ್ಠ ಮೂರು ಜನ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಸಮುದಾಯದಿಂದ ತಲಾ ಒಬ್ಬರು, ಮತ್ತು ಅಲ್ಪಸಂಖ್ಯಾತ ಸಮುದಾಯದ ಒಬ್ಬ ಪ್ರತಿನಿಧಿಯನ್ನು ಒಳಗೊಂಡಿರತಕ್ಕದ್ದು.

(ii) ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತ, ಮತ್ತು ಅಂಗನವಾಡಿ ಶಿಕ್ಷಕಿ, ಇವರು ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

(iii) ಸಾಧ್ಯವಿರುವ ಕಡೆಗಳಲ್ಲಿ, ಶಾಲೆಯ ಉನ್ನತ ತರಗತಿಯಿಂದ ಸಂಬಂಧಪಟ್ಟ ತರಗತಿಗಳ ವಿದ್ಯಾರ್ಥಿಗಳೇ ಆಯ್ಕೆ ಮಾಡಿದ ಇಬ್ಬರು ವಿದ್ಯಾರ್ಥಿಗಳು, ಎಂದರೆ, ಒಬ್ಬ ವಿದ್ಯಾರ್ಥಿ ಮತ್ತು ಒಬ್ಬ ವಿದ್ಯಾರ್ಥಿನಿ ಇವರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿ ವಿದ್ಯಾರ್ಥಿಗಳ ಪ್ರತಿನಿಧಿಗಳಾಗಿರತಕ್ಕದ್ದು.

ವಿವರಣೆ.– ಬಾಲಕರ ಶಾಲೆಯಾಗಿದ್ದಲ್ಲಿ, ಇಬ್ಬರು ಬಾಲಕ ಪ್ರತಿನಿಧಿಗಳು ಮತ್ತು ಬಾಲಕಿಯರ ಶಾಲೆಯಾಗಿದ್ದಲ್ಲಿ ಇಬ್ಬರು ಬಾಲಕಿಯರನ್ನು ಉನ್ನತ ತರಗತಿಯಿಂದ ಆಯ್ಕೆ ಮಾಡಿಕೊಳ್ಳತಕ್ಕದ್ದು.

ಸಿ. ಮೇಲ್ಕಂಡ (ಬಿ) ಖಂಡದ ಅಡಿಯಲ್ಲಿ ನೇಮಕ ಮಾಡಲಾದ ವ್ಯಕ್ತಿಗಳು, ಈ ಮುಂದಿನ ವ್ಯಕ್ತಿಗಳು ಲಭ್ಯವಿರುವ ಕಡೆಗಳಲ್ಲಿ ಅಂಥವರನ್ನು ನಾಮನಿರ್ದೇಶನ ಮಾಡತಕ್ಕದ್ದು .–

(i) ಗ್ರಾಮದಲ್ಲಿನ ಯುವಕ–ಯುವತಿ ಮಂಡಳಿಯಿಂದ ಅಥವಾ ಎಸ್.ಹೆಚ್.ಜಿ. (Self Help Group) ಯಿಂದ ಒಬ್ಬ ಪ್ರತಿನಿಧಿ ;

(ii) ಹಳ್ಳಿಯಲ್ಲಿ ವಾಸವಾಗಿರುವ ಒಬ್ಬ ಶಿಕ್ಷಣತಜ್ಞ ಅಥವಾ ಹಳ್ಳಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಎನ್‌ಜಿಓ / ಎನ್‌ಪಿಓಗಳ ಪೈಕಿ ಒಬ್ಬ ಪ್ರತಿನಿಧಿ ;

ವಿವರಣೆ.- ಈ ಉಪಬಂಧದ ಉದ್ದೇಶಕ್ಕಾಗಿ, ಒಬ್ಬ ಶಿಕ್ಷಣತಜ್ಞ ಎಂದರೆ ಪದವಿಯನ್ನು ಪೂರ್ಣಗೊಳಿಸಿರುವ ಯಾವುದೇ ವ್ಯಕ್ತಿ, ಮತ್ತು ಇದು ಹಿಂದಿನ ಅಥವಾ ನಿವೃತ್ತ ಶಿಕ್ಷಕರನ್ನು ಒಳಗೊಳ್ಳುತ್ತದೆ.

(iii) ರೂ. 10,000/– ಗಳಿಗೆ ಸಮನಾದ ಅಥವಾ ಅದಕ್ಕಿಂತ ಅಧಿಕ ಮೌಲ್ಯ ಹೊಂದಿರುವ, ಜಮೀನನ್ನು ಅಥವಾ ನಗದು ಅಥವಾ ವಸ್ತುವನ್ನು ಶಾಲೆಗೆ ನೀಡಿರುವ ಒಬ್ಬ ದಾನಿ ;

4. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಮೇಲ್ವಿಚಾರಣೆ–

ನಾಗರಿಕ ಸೌಲಭ್ಯ ಸಮಿತಿಯು ,–

ಎ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ಅನುಸೂಚಿ I ರ XIIIನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಪ್ರಕಾರ್ಯಗಳ ಮುಂದುವರಿಕೆಯಾಗಿ, ಈ ಸಂಬಂಧದಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕೈಗೊಂಡ ಕ್ರಮಗಳನ್ನು ಪರಿಶೀಲನೆ ಮಾಡತಕ್ಕದ್ದು.

ಬಿ. ಪಂಚಾಯತಿ ಪ್ರದೇಶದ ವ್ಯಾಪ್ತಿಯೊಳಗಿನ ಶಾಲೆಗಳ ವಾರ್ಷಿಕ ಕಾಮಗಾರಿ ಯೋಜನೆಗಳ ಅನುಷ್ಠಾನವನ್ನು ನಿಯತವಾಗಿ ಪರಿಶೀಲನೆ ಮಾಡತಕ್ಕದ್ದು ಮತ್ತು ಸಾಧ್ಯವಿರುವ ಕಡೆಗಳಲ್ಲಿ ಅವುಗಳ ಅನುಷ್ಠಾನಕ್ಕೆ ಅಗತ್ಯ ನೆರವು ನೀಡತಕ್ಕದ್ದು.

ಸಿ. ಮಾಹಿತಿ ವಿನಿಮಯ ಮತ್ತು ಸಮನ್ವಯತೆಯ ಉದ್ದೇಶಕ್ಕಾಗಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲೆಗಳ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪದಾಧಿಕಾರಿಗಳ ಜಂಟಿ ಸಭೆಯನ್ನು ನಡೆಸತಕ್ಕದ್ದು.

5. ನಿಧಿಗಳ ಸಕಾಲಿಕ ಹಂಚಿಕೆ–

ಎ. ಸಿಎಸಿಯು ಶಾಲೆಯ ಶಿಕ್ಷಣಕ್ಕಾಗಿ ಮತ್ತು ಶಾಲೆಯ ಮೂಲಭೂತ ಸೌಕರ್ಯಗಳಿಗಾಗಿ, ತಾನು ಸ್ವೀಕರಿಸಿದ ಎಲ್ಲಾ ನಿಧಿಗಳನ್ನು, ಸ್ವೀಕರಿಸಿದ ಒಂದು ವಾರದೊಳಗೆ ಶಾಲೆಯ ಲೆಕ್ಕಕ್ಕೆ ವರ್ಗಾಯಿಸತಕ್ಕದ್ದು.

ಬಿ. ಸಿಎಸಿಯು ಶಾಲೆಗಳ ಅಗತ್ಯಕ್ಕೆ ತಕ್ಕಂತೆ ಪಂಚಾಯತಿ ಪ್ರದೇಶದ ವ್ಯಾಪ್ತಿಯೊಳಗಿನ, ಶಾಲೆಗಳ ಲೆಕ್ಕಕ್ಕೆ ಹೆಚ್ಚುವರಿ ನಿಧಿಗಳನ್ನು ವರ್ಗಾಯಿಸಬಹುದು.

ಅಧ್ಯಾಯ –III

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪ್ರಕಾರ್ಯಗಳು

6. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪದಾಧಿಕಾರಿಗಳ ಆಯ್ಕೆ–

ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ತಂದೆ ತಾಯಿಯರ ಪರಿಷತ್ತಿನ ಪ್ರತಿನಿಧಿಗಳಾಗಿರುವ ಸದಸ್ಯರ ಪೈಕಿ ಒಬ್ಬ ಅಧ್ಯಕ್ಷ ಮತ್ತು ಒಬ್ಬ ಉಪಾಧ್ಯಕ್ಷರನ್ನು ಆಯ್ಕೆ ಮಾಡತಕ್ಕದ್ದು, ಇದರಲ್ಲಿ ಕನಿಷ್ಠಪಕ್ಷ ಒಬ್ಬರು ಮಹಿಳೆಯಾಗಿರತಕ್ಕದ್ದು.

ಬಿ. ಶಾಲೆಯ ಮುಖ್ಯ ಶಿಕ್ಷಕರು ಅಥವ ಆಕೆಯ/ಅತನ ಗೈರುಹಾಜರಿಯಲ್ಲಿ ಶಾಲೆಯ ಸೇವಾ ಜೇಷ್ಠತಮ ಶಿಕ್ಷಕರನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಯಾಗಿ ನೇಮಿಸತಕ್ಕದ್ದು.

ಸಿ. ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಮೂರು ವರ್ಷಗಳ ಅವಧಿಗೆ ಅಥವಾ ಅವನು/ಅವಳು ಸದಸ್ಯರಾಗಿರುವುದು ರದ್ದಾಗುವವರೆಗೆ, ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಅಧಿಕಾರವನ್ನು ಹೊಂದಿರತಕ್ಕದ್ದು.

7. ಅಧ್ಯಕ್ಷರ ಪ್ರಕಾರ್ಯಗಳು–

ಎ. ಅಧ್ಯಕ್ಷರು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು .

i. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರಾಗಿ ಸಭೆಗಳ ಅಧ್ಯಕ್ಷತೆ ವಹಿಸುವುದು ;

ii. ಮುಖ್ಯ ಶಿಕ್ಷಕರಿಗೆ ಸಾಂಧರ್ಬಿಕ ರಜೆ ನೀಡುವುದು ;

iii. ದೂರುಗಳ ಪೆಟ್ಟಿಗೆಯನ್ನು ಆ ಸಮಯದಲ್ಲಿ ಅಲ್ಲಿ ಲಭ್ಯವಿರುವ ಕನಿಷ್ಠ ಒಬ್ಬ ಶಿಕ್ಷಕ ಮತ್ತು ವಿದ್ಯಾರ್ಥಿಯ ಉಪಸ್ಥಿತಿಯಲ್ಲಿ ಕನಿಷ್ಠ ವಾರಕ್ಕೊಮ್ಮೆ ತೆರೆಯುವುದು.

ಬಿ. ಅಧ್ಯಕ್ಷರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಕಾರ್ಯಗಳನ್ನು ನಿರ್ವಹಿಸತಕ್ಕದ್ದು.

8. ಉಪಾಧ್ಯಕ್ಷರ ಪ್ರಕಾರ್ಯಗಳು–

ಎ. ಅಧ್ಯಕ್ಷರ ಗೈರುಹಾಜರಿಯಲ್ಲಿ, ಉಪಾಧ್ಯಕ್ಷರು ಈ ಉಪವಿಧಿಗಳ 7ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದಂತೆ ಅಧ್ಯಕ್ಷರ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು.

ಬಿ. ಉಪಾಧ್ಯಕ್ಷರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

9. ಸದಸ್ಯ ಕಾರ್ಯದರ್ಶಿಯ ಪ್ರಕಾರ್ಯಗಳು–

ಎ. ಸದಸ್ಯ ಕಾರ್ಯದರ್ಶಿಯು ಈ ಮುಂದಿನ ಪ್ರಕಾರ್ಯಗಳನ್ನು ನಿರ್ವಹಿಸತಕ್ಕದ್ದು:

(i) ಪ್ರತಿ ಶೈಕ್ಷಣಿಕ ವರ್ಷದ ಪ್ರಾರಂಭಕ್ಕೆ ಕನಿಷ್ಠ ಒಂದು ತಿಂಗಳ ಮೊದಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅನುಮೋದನೆ ಪಡೆದು ವಾರ್ಷಿಕ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು; ಮತ್ತು ಅದನ್ನು ಸಿದ್ಧಪಡಿಸಿದ ಒಂದು ವಾರದೊಳಗೆ ಸಿಎಸಿಗೆ ಸಲ್ಲಿಸತಕ್ಕದ್ದು.

(ii) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಗೆ ಕಾರ್ಯಸೂಚಿ ತಯಾರಿಸುವುದು.

ವಿವರಣೆ.– ಸಭೆಗಳ ಕಾರ್ಯಸೂಚಿಯು ಶಾಲೆಯು ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಸಿಕ ಲೆಕ್ಕಪತ್ರಗಳು, ಶಾಲಾ ಅಭಿವೃದ್ಧಿ, ಆಡಳಿತ, ಹಾಜರಾತಿ, ದಾಖಲಾತಿ, ಮಕ್ಕಳನ್ನು ಶಾಲೆಯಲ್ಲಿ ಉಳಿಸಿಕೊಳ್ಳುವುದು ಮತ್ತು ಅವರ ಶೈಕ್ಷಣಿಕ ಸಾಧನೆಗೆ ಸಂಬಂಧಿಸಿದ ಅಂಶಗಳನ್ನು ಒಳಗೊಂಡಿರತಕ್ಕದ್ದು.

(iii) ಕೆಳಗಿನ ಅಧ್ಯಾಯ iv ರ ಅನುಸಾರ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆ ಕರೆಯುವುದು ಮತ್ತು ಅದಕ್ಕೆ ಅನುಕೂಲ ಕಲ್ಪಿಸಿಕೊಡುವುದು ಮತ್ತು ಎಲ್ಲ ಸಭೆಗಳ ನಡವಳಿಗಳನ್ನು ತೆಗೆದುಕೊಳ್ಳುವುದು.

(iv) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮಾಹಿತಿಗಾಗಿ ಆತನ/ಆಕೆಯ ಅಧಿಕಾರದ ಅಡಿಯಲ್ಲಿ ಬರುವ ಎಲ್ಲ ವಿಷಯಗಳ ಮಾಹಿತಿಯನ್ನು ತಯಾರಿಸುವುದು.

(v) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಇಟ್ಟುಕೊಳ್ಳುವುದು.

(vi) ಆತನ/ಆಕೆಯ ಪ್ರಭಾರದಲ್ಲಿರುವ ಶಾಲೆಗೆ ಸೇರಿರುವ ಎಲ್ಲ ದಸ್ತಾವೇಜುಗಳು ಮತ್ತು ಸ್ವತ್ತಿನ ಸುರಕ್ಷಿತ ಸುಪರ್ದಿಗೆ ಜವಾಬ್ದಾರರಾಗಿರುವುದು.

(vii) ಕನಿಷ್ಠಪಕ್ಷ, ಪ್ರತಿ ಮೂರು ತಿಂಗಳುಗಳಿಗೊಮ್ಮೆ ತಂದೆತಾಯಿಯರ ಪರಿಷತ್ತು ಮತ್ತು ನಾಗರಿಕ ಸೌಲಭ್ಯ ಸಮಿತಿಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಚಟುವಟಿಕೆಗಳ ವರದಿ ಮತ್ತು ಲೆಕ್ಕಪತ್ರಗಳ ವಿವರಪಟ್ಟಿಯನ್ನು ತಯಾರಿಸುವುದು ಹಾಗೂ ಹಾಜರುಪಡಿಸುವುದು.

(viii) ಪತ್ರವ್ಯವಹಾರ ನಡೆಸುವುದು ಹಾಗೂ ಎಲ್ಲ ನೋಟೀಸುಗಳನ್ನು ಮತ್ತು ಜಾಹೀರಾತುಗಳನ್ನು ಹೊರಡಿಸುವುದು.

ಬಿ. ಸದಸ್ಯ ಕಾರ್ಯದರ್ಶಿಗಳು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಮಾರ್ಗದರ್ಶನ ನೀಡುವಂಥ ಇತರ ಎಲ್ಲಾ ಕಾರ್ಯಗಳನ್ನು ಸಹ ನಿರ್ವಹಿಸತಕ್ಕದ್ದು.

10. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧಿಕಾರಗಳು ಮತ್ತು ಪ್ರಕಾರ್ಯಗಳು-

ಈ ಕೆಳಕಂಡ ಪ್ರಕಾರ್ಯಗಳನ್ನು ನಿರ್ವಹಿಸುವುದು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕರ್ತವ್ಯವಾಗಿರತಕ್ಕದ್ದು, ಎಂದರೆ –

ಎ. ಶಾಲೆಯ ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಯಲ್ಲಿ ಸದಸ್ಯ-ಕಾರ್ಯದರ್ಶಿಗೆ ಮಾರ್ಗದರ್ಶನ ನೀಡುವುದು ಮತ್ತು ಪ್ರತಿ ಶೈಕ್ಷಣಿಕ ವರ್ಷ ಪ್ರಾರಂಭವಾಗುವುದಕ್ಕೆ ಕನಿಷ್ಠ ಒಂದು ತಿಂಗಳು ಮೊದಲು ಅದನ್ನು ಅನುಮೋದಿಸುವುದು.

ಬಿ. ಶಿಕ್ಷಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಕ್ರಮಬದ್ಧ ಹಾಗೂ ಸಕಾಲಿಕ ಹಾಜರಾತಿಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಶೀಲಿಸುವುದು. ಈ ಉದ್ದೇಶಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು, ಹಾಜರಾತಿ ಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುವಂತೆ ಶಾಲೆಯನ್ನು ಅಗತ್ಯಪಡಿಸಬಹುದು. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಯಾವುದೇ ಸದಸ್ಯನು ಶಾಲೆಯಲ್ಲಿ ನಿರ್ವಹಿಸಿರುವ ಎಲ್ಲ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿರುತ್ತಾನೆ.

ಸಿ. ಧರ್ಮ, ಜನಾಂಗ, ಲಿಂಗ, ಭಾಷೆ, ಹುಟ್ಟಿದ ಸ್ಥಳ – ಇವು ಯಾವುದನ್ನೂ ಪರಿಗಣನೆಗೆ ತೆಗೆದುಕೊಳ್ಳದೆ ಗ್ರಾಮದಲ್ಲಿರುವ ಶಾಲೆಗೆ ಹೋಗದ ಎಲ್ಲ ಮಕ್ಕಳು ಶಾಲೆಗೆ ದಾಖಲಾಗುವುದನ್ನು ಖಚಿತಪಡಿಸುವುದು, ಇದಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಹೆಣ್ಣುಮಕ್ಕಳು, ಅಂಗವಿಕಲ ಮಕ್ಕಳು, ಬಾಲಕಾರ್ಮಿಕರು ಹಾಗೂ ಅವರ ತಂದೆತಾಯಿಯರಿಗಾಗಿ ದಾಖಲಾತಿ ಆಂದೋಲನ, ಸೇತುಬಂಧ ಕಾರ್ಯಕ್ರಮಗಳು ಮತ್ತು ವಿಶೇಷ ಪ್ರಚಾರಾಂದೋಲನವನ್ನು ನಡೆಸಬಹುದು.

ಡಿ. ಗ್ರಾಮದಲ್ಲಿರುವ ದೈಹಿಕ ವಿಕಲತೆಯ ಅಥವಾ ಮಾನಸಿಕವಾಗಿ ಅಸ್ವಸ್ಥಗೊಂಡ ಮಕ್ಕಳ ವಿರುದ್ಧ ತಾರತಮ್ಯ ನಡೆಯದಿರುವುದನ್ನು ಖಚಿತಪಡಿಸುವುದು ಹಾಗೂ ಅವರು ಶಾಲೆಗೆ ಹಾಜರಾಗಲು ಸಮರ್ಥರಾಗುವಂತೆ ಶ್ರವಣ ಸಾಧನಗಳು, ಬ್ರೇಲ್ ಮುಂತಾದ ವಿಶೇಷ ಸೌಲಭ್ಯಗಳನ್ನು ಒದಗಿಸುವುದು.

ಇ. ಶಾಲೆಯಿಂದ ಹೊರಗುಳಿದ ಮಕ್ಕಳ ಪ್ರಮಾಣವನ್ನು ನಿಯತಕಾಲಿಕವಾಗಿ ಮೇಲ್ವಿಚಾರಣೆ ಮಾಡುವುದು ಮತ್ತು ಶಾಲೆಯಲ್ಲಿರುವ ಎಲ್ಲ ಮಕ್ಕಳ ಹಾಜರಾತಿಯ ಬಗ್ಗೆ ಹಾಗೂ ಅವರನ್ನು ಶಾಲೆಯಲ್ಲೇ ಉಳಿಸಿಕೊಳ್ಳುವ ಬಗ್ಗೆ ಖಚಿತಪಡಿಸಿಕೊಳ್ಳುವುದು. ಈ ಉದ್ದೇಶಕ್ಕಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಉಚಿತ ಪಠ್ಯಪುಸ್ತಕಗಳು, ಮಧ್ಯಾಹ್ನ ಬಿಸಿ ಊಟ, ಸಮವಸ್ತ್ರ ಮತ್ತು ವಿದ್ಯಾರ್ಥಿ ವೇತನಗಳು ಮುಂತಾದ ಪ್ರೋತ್ಸಾಹಕಗಳ ವಿತರಣೆಯನ್ನು ಖಚಿತಪಡಿಸಿಕೊಳ್ಳುವುದು ಮತ್ತು ಅವುಗಳ ವಿತರಣೆಯ ಮೇಲ್ವಿಚಾರಣೆ ಮಾಡತಕ್ಕದ್ದು.

ಎಫ್. ಕನಿಷ್ಠಪಕ್ಷ ಮೂರು ತಿಂಗಳುಗಳಿಗೊಮ್ಮೆ ತಂದೆತಾಯಿಯರ ಪರಿಷತ್ತಿನ ಸಭೆಗಳನ್ನು ಕರೆಯುವುದು.

ಜಿ. ಶಾಲೆಗೆ ಮಕ್ಕಳನ್ನು ಕಳಿಸಲು ವಿಫಲರಾಗುವ ತಂದೆತಾಯಿಗಳಿಗಾಗಿ ಸಭೆಗಳನ್ನು ನಿಯತಕಾಲಿಕವಾಗಿ ನಡೆಸುವುದು.

ಹೆಚ್. ಶಾಲೆಯಲ್ಲಿ ಸಂಪೂರ್ಣ ನೈರ್ಮಲ್ಯ, ಸುಸ್ಥಿತಿ ಮತ್ತು ಉತ್ತಮ ನಿರ್ವಹಣೆಯಿರುವಂತೆ ನೋಡಿಕೊಳ್ಳುವುದು.

ಐ. ಆಟದ ಮೈದಾನ, ಆವರಣ ಗೋಡೆಗಳು, ಕೊಠಡಿಗಳು, ಶೌಚಾಲಯ, ಪೀಠೋಪಕರಣ, ಕುಡಿಯುವ ನೀರಿನ ಸೌಲಭ್ಯ ಮುಂತಾದ ಮೂಲಸೌಕರ್ಯಗಳು ಹಾಗೂ ಶಾಲೆಗೆ ಆವಶ್ಯವಿರುವ ಇತರ ಸೌಕರ್ಯಗಳನ್ನು ಹೆಚ್ಚಿಸಲು ನೆರವು ನೀಡುವುದು. ಇದಕ್ಕಾಗಿ, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ

ಸಮಿತಿಯು ಯಾವುದೇ ಕಟ್ಟಡಗಳ ಅಥವಾ ಕಾಮಗಾರಿಗಳ ನಿರ್ಮಾಣ, ನಿರ್ವಹಣೆ, ಮಾರ್ಪಾಡು, ಸುಧಾರಣೆ ಅಥವಾ ಅಭಿವೃದ್ಧಿಯನ್ನು ಕೈಗೊಳ್ಳಬಹುದು.

ಜೆ. ಈ ಉಪ–ವಿಧಿಗಳ 10ನೇ ಖಂಡದ ಅಡಿಯಲ್ಲಿ ಅದರ ಯಾವುದೇ/ಕೆಲವು ಅಥವಾ ಎಲ್ಲ ಪ್ರಕಾರ್ಯಗಳ ಮುಂದುವರಿಕೆಗೆ ಅವಶ್ಯಕವೆನಿಸುವ ಅಥವಾ ಅನುಕೂಲಕರವೆನಿಸುವ ಸ್ಥಿರ ಅಥವಾ ಚರ ಸ್ವತ್ತು ಅಥವಾ ಯಾವುದೇ ಹಕ್ಕುಗಳು ಅಥವಾ ವಿಶೇಷ ಸೌಲಭ್ಯಗಳನ್ನು ಆರ್ಜಿಸುವುದು, ಖರೀದಿಸುವುದು ಅಥವಾ ಅನ್ಯಥಾ ಸ್ವಂತವಾಗಿ ಹೊಂದುವುದು ಅಥವಾ ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಗುತ್ತಿಗೆ ಅಥವಾ ಬಾಡಿಗೆಗೆ ಪಡೆಯುವುದು.

ಕೆ. ಸ್ವಯಿಚ್ಛೆಯ ಮೇರೆಗೆ ಅಥವಾ ಶಾಲಾನಿಧಿಗಳಿಂದ ವೆಚ್ಚವನ್ನು ಭರಿಸಿ, ನಿಗದಿಪಡಿಸಿದ ಸಂಭಾವನೆಯನ್ನು ಸಂದಾಯ ಮಾಡುವ ಮೂಲಕ, ಅವಶ್ಯವಿರುವೆಡೆ, ಸಂದರ್ಭಾನುಸಾರ, ಶಿಕ್ಷಕರಾಗಿ ಅಥವಾ ಬೋಧಕರಾಗಿ ಸ್ಥಳೀಯ ವ್ಯಕ್ತಿಗಳ ಸೇವೆಗಳನ್ನು ಪಡೆಯುವುದು. ಪರಂತು, ನಿಯತ ಹುದ್ದೆಯನ್ನು ಈ ರೀತಿಯಲ್ಲಿ ಖಾಯಂ ಆಗಿ ಭರ್ತಿ ಮಾಡಬಾರದು.

ಎಲ್. ವರ್ಷದಲ್ಲಿ ಕನಿಷ್ಠ ಪಕ್ಷ ಇನ್ನೂರ ಇಪ್ಪತ್ತು ಬೋಧನಾ ದಿನಗಳನ್ನು ಖಚಿತಪಡಿಸುವುದು.

ಎಂ. ಶಿಕ್ಷಕರ ಸಾಧನೆಯನ್ನು ನಿಯತಕಾಲಿಕವಾಗಿ ಅವಲೋಕಿಸುವುದು ಮತ್ತು ಸರ್ವಶಿಕ್ಷಣ ಅಭಿಯಾನ ಅಥವಾ ಕಾಲಕಾಲಕ್ಕೆ ಅನ್ವಯವಾಗುವಂಥ ಕೇಂದ್ರ ಅಥವಾ ರಾಜ್ಯಸರ್ಕಾರದ ಯಾವುದೇ ಇತರ ಕಾರ್ಯಕ್ರಮದ ಅಡಿಯಲ್ಲಿ ಗೊತ್ತುಪಡಿಸಿದ ಕನಿಷ್ಠ ಅರ್ಹತಾ ಮಾನದಂಡಗಳನ್ನು ಪಾಲಿಸುವಂತೆ ಮಾಡುವುದು.

ಎನ್. ಶಿಕ್ಷಕರ ಮತ್ತು ಮುಖ್ಯ ಶಿಕ್ಷಕರ ಬೇಡಿಕೆಯನ್ನು ಆಧರಿಸಿ ಶಿಕ್ಷಕರಿಗೆ ಅವಶ್ಯಕತೆಯಾಧಾರಿತ ತರಬೇತಿಗಳನ್ನು ಒದಗಿಸಲು ಅನುಕೂಲ ಕಲ್ಪಿಸುವುದು.

ಓ. ವಿದ್ಯಾರ್ಥಿಗಳ ಸಾಧನೆಯನ್ನು ನಿಯತಕಾಲಿಕವಾಗಿ ಅವಲೋಕಿಸುವುದು ಮತ್ತು ಎನ್‌ಸಿಇಆರ್‌ಟಿ ಮತ್ತು ರಾಜ್ಯ ಸರ್ಕಾರವು ಗೊತ್ತುಪಡಿಸಿದ ಮಾನದಂಡಗಳನ್ನು ಪಾಲಿಸುವಂತೆ ನೋಡಿಕೊಳ್ಳುವುದು.

ಪಿ. ಶಾಲೆಯಲ್ಲಿ ಆರೋಗ್ಯ ಕಾರ್ಯಕ್ರಮಗಳನ್ನು ನಿಯತವಾಗಿ ಅವಲೋಕಿಸುವುದು ಮತ್ತು ಮೇಲ್ವಿಚಾರಣೆ ನಡೆಸುವುದು ಮತ್ತು ಮಕ್ಕಳಿಗಾಗಿ ಕ್ರಮಬದ್ಧವಾಗಿ ಆರೋಗ್ಯ ಶಿಬಿರಗಳನ್ನು ನಡೆಸಲು ನೆರವು ನೀಡುವುದು.

ಕ್ಯೂ ಶಾಲೆಯ ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲ ಸ್ವತ್ತುಗಳು, ನಿಧಿಗಳು ಮತ್ತು ಹಣಕಾಸಿನ ಮೇಲ್ವಿಚಾರಣೆ ನಡೆಸುವುದು.

ಆರ್. ಈ ಉಪ–ವಿಧಿಗಳ 10ನೇ ಖಂಡದ ಅಡಿಯಲ್ಲಿನ ಅದರ ಪ್ರಕಾರ್ಯಗಳ ಮುಂದುವರಿಕೆಗೆ ಹಣ ಮತ್ತು ನಿಧಿಗಳನ್ನು ಪಡೆಯಲು ಮನವಿಗಳು ಮತ್ತು ಅರ್ಜಿಗಳನ್ನು ನೀಡುವುದು ಹಾಗೂ ನಗದು ರೂಪದಲ್ಲಿ ಯಾವುದೇ ದಾನಗಳು ಅಥವಾ ದೇಣಿಗೆಗಳು, ಧನ್ರತೆಗಳು ಅಥವಾ ಚರ ಅಥವಾ ಸ್ಥಿರ ರೂಪದಲ್ಲಿ ಯಾವುದೇ ಸ್ವತ್ತನ್ನು ಸ್ವೀಕರಿಸುವುದು, ಸಂಗ್ರಹಿಸುವುದು ಮತ್ತು ಅಂಗೀಕರಿಸುವುದು ಮತ್ತು ಅದರ ಸದರಿ ಎಲ್ಲ ಅಥವಾ ಯಾವುದೇ ಪ್ರಕಾರ್ಯಗಳ ಈಡೇರಿಕೆಗಾಗಿ ಅದನ್ನು ಖರ್ಚು ಮಾಡುವುದು. ಈ ಉಪ ಖಂಡದಲ್ಲಿರುವುದು ಯಾವುದನ್ನು ತಂದೆತಾಯಿಗಳಿಂದ ಆಜ್ಞಾರೂಪದ ದೇಣಿಗೆಯನ್ನು ಅಧಿಕೃತವಾಗಿ ಸಂಗ್ರಹಿಸುವುದು ಎಂದು ಅರ್ಥೈಸತಕ್ಕದ್ದಲ್ಲ.

ಎಸ್. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಕಾರ್ಯವನ್ನು ಅವಲೋಕಿಸುವುದು ಮತ್ತು ಈ ಬಗ್ಗೆ ಕನಿಷ್ಠ ಪಕ್ಷ ಮೂರು ತಿಂಗಳುಗಳಿಗೊಮ್ಮೆ ತಂದೆತಾಯಿಯರ ಪರಿಷತ್ತು ಮತ್ತು ಸೌಲಭ್ಯ ಸಮಿತಿಗೆ ವರದಿ ಮಾಡುವುದು.

ಟಿ. ಶಾಲಾ ಕಾರ್ಯಚಟುವಟಿಕೆಗಳಲ್ಲಿ ಎಲ್ಲ ತಂದೆತಾಯಿಯರೂ ಒಳಗೊಳ್ಳುವಂತೆ ಮಾಡಲು (ಶಾಲೆಗೆ ಹೋಗದ ಮಕ್ಕಳ ತಂದೆತಾಯಿಯರೂ ಸೇರಿದಂತೆ) ಮತ್ತು ಅವರು ತಮ್ಮ ಮಕ್ಕಳನ್ನು ನಿಯತವಾಗಿ ಶಾಲೆಗೆ ಕಳುಹಿಸುವಂತೆ ಪ್ರೇರೇಪಿಸಲು ನಿಯತಕಾಲಿಕವಾಗಿ "ತಂದೆತಾಯಿಯರ ದಿನವನ್ನು" ಆಚರಿಸುವುದು.

ಯು. ನಾಗರಿಕ ಸೌಲಭ್ಯ ಸಮಿತಿ (ಸಿಎಸಿ), ಸಮೂಹ ಸಂಪನ್ಮೂಲ ವ್ಯಕ್ತಿ ಮತ್ತು ಶೈಕ್ಷಣಿಕ ಸಮನ್ವಯಕಾರರಿಗೆ ಶಾಲಾ ವ್ಯವಸ್ಥೆಯ ಸುಧಾರಣೆಯ ಬಗ್ಗೆ ರಚನಾತ್ಮಕ ಸಲಹೆಗಳಾವುವಾದರೂ ಇದ್ದರೆ, ಅವುಗಳನ್ನು ಸೂಚಿಸುವುದು.

ವಿ. ವರ್ಷದಲ್ಲಿ ನಾಲ್ಕಕ್ಕಿಂತ ಹೆಚ್ಚಿಲ್ಲದಂತೆ ಸ್ಥಳೀಯ ರಜಾದಿನಗಳನ್ನು ನಿರ್ಣಯಿಸುವುದು.

ಡಬ್ಲ್ಯು. ಮಧ್ಯಾಹ್ನದ ಬಿಸಿಯೂಟ ಮುಂತಾದಂತಹ ಎಲ್ಲ ಸರ್ಕಾರಿ ಯೋಜನೆಗಳು ಶಾಲೆಯಲ್ಲಿ ಅನುಷ್ಠಾನಗೊಳ್ಳುವಂತೆ ನೋಡಿಕೊಳ್ಳುವುದು.

ಎಕ್ಸ್. ಮಕ್ಕಳು, ಮಕ್ಕಳ ಸಹಾಯವಾಣಿಯ ಉಪಯೋಗ ಮತ್ತು ಉದ್ದೇಶವನ್ನು ಅರ್ಥಮಾಡಿಕೊಳ್ಳಬಹುದಾದಂಥ ರೀತಿಯಲ್ಲಿ ಪ್ರತಿಯೊಂದು ಶಾಲೆಯು, ಮಕ್ಕಳ ಸಹಾಯವಾಣಿ ಸಂಖ್ಯೆ "1098" ನ್ನು ಪ್ರದರ್ಶಿಸುವಂತೆ ಮತ್ತು ಪ್ರಚಾರ ಮಾಡುವಂತೆ ನೋಡಿಕೊಳ್ಳುವುದು.

ವೈ. ಒತ್ತುವರಿ ಮತ್ತು ಯಾವುದೇ ಅಡಚಣೆಯಾಗದಂತೆ ಶಾಲಾ ಆವರಣವನ್ನು ರಕ್ಷಿಸುವುದು.

ಜಡ್. ಈ ಉಪವಿಧಿಗಳ Vನೇ ಅಧ್ಯಾಯಕ್ಕನುಸಾರವಾಗಿ, ವಿದ್ಯಾರ್ಥಿಗಳ, ತಂದೆತಾಯಿಯರ, ಶಿಕ್ಷಕರ ಮತ್ತು ಶಾಲೆಯ ಬೋಧಕೇತರ ಸಿಬ್ಬಂದಿ ವರ್ಗದವರ ಕುಂದುಕೊರತೆಗಳನ್ನು ಹಾಗೂ ದೂರುಗಳನ್ನು ಬಗೆಹರಿಸುವುದು.

ಎಎ. ಈ ಉಪವಿಧಿಗಳ 10ನೇ ಖಂಡದ ಅಡಿಯಲ್ಲಿ ಅದರ ಎಲ್ಲ ಅಥವಾ ಯಾವುವೇ ಪ್ರಕಾರ್ಯಗಳನ್ನು ನಿರ್ವಹಿಸಬಹುದಾದಂತಹ ಮತ್ತು / ಅಥವಾ ಪ್ರಾಸಂಗಿಕವಾದಂತಹ ಇತರ ಎಲ್ಲ ಕಾನೂನುಬದ್ಧ ಕಾರ್ಯಗಳು, ಕೃತ್ಯಗಳು ಮತ್ತು ಕೆಲಸಗಳನ್ನು ಮಾಡುವುದು.

ಅಧ್ಯಾಯ–IV

ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯಲ್ಲಿ ಅನುಸರಿಸಬೇಕಾದ ಕಾರ್ಯವಿಧಾನಗಳು

11. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಗಳನ್ನು ಕರೆಯುವುದು–

ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು, ಆಯಾ ಶಾಲೆಯ ಆವರಣದೊಳಗೆ ಅಥವಾ ಅನುಕೂಲಕರವಾಗಬಹುದಾದಂತ ಇತರ ಸ್ಥಳದಲ್ಲಿ, ರಜಾ ದಿನಗಳಲ್ಲಿ ಶಾಲೆಗಳನ್ನು ಮುಚ್ಚಲಾಗುವ ಅವಧಿಯ ತಿಂಗಳೂ ಸೇರಿದಂತೆ, ಕನಿಷ್ಠಪಕ್ಷ ಪ್ರತಿ ಮೂವತ್ತು ದಿನಗಳಿಗೊಮ್ಮೆ ಸಭೆ ಸೇರತಕ್ಕದ್ದು.

ಬಿ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು, ಅದರ ಅಧ್ಯಕ್ಷರೊಂದಿಗೆ ಸಮಾಲೋಚಿಸಿ, ಸದಸ್ಯ ಕಾರ್ಯದರ್ಶಿಯು ನಿಗದಿಪಡಿಸಬಹುದಾದಂಥ ದಿನಗಳಂದು ಮತ್ತು ಸಮಯದಲ್ಲಿ ನಡೆಸತಕ್ಕದ್ದು.

ಸಿ. ಸದಸ್ಯ-ಕಾರ್ಯದರ್ಶಿಯು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪ್ರತಿಯೊಂದು ಸಭೆಯ ಬಗ್ಗೆ ಸದಸ್ಯರಿಗೆ ಕನಿಷ್ಠಪಕ್ಷ 3 ದಿನಗಳ ಮೊದಲು ನೋಟೀಸನ್ನು ನೀಡತಕ್ಕದ್ದು ಮತ್ತು ಉದ್ದೇಶಿತ ಕಾರ್ಯಸೂಚಿಯ ಒಂದು ಪ್ರತಿಯನ್ನು ನೋಟೀಸಿನೊಂದಿಗೆ ರವಾನಿಸತಕ್ಕದ್ದು.

ಆದರೆ, ಸಭಾಧ್ಯಕ್ಷರು ಕಾರ್ಯಸೂಚಿಯಲ್ಲಿ ಸೇರಿಸಿರದ ಯಾವುದೇ ತುರ್ತು ವ್ಯವಹಾರದ ವಿಷಯವನ್ನು ಸಭೆಯ ಮುಂದೆ ಮಂಡಿಸಬಹುದು.

ಅಲ್ಲದೆ, ಸದಸ್ಯ–ಕಾರ್ಯದರ್ಶಿಯು ಕನಿಷ್ಠಪಕ್ಷ ಒಂದು ದಿನ ಮೊದಲು ನೋಟೀಸನ್ನು ನೀಡುವ ಮೂಲಕ ತುರ್ತು ಸಭೆಯನ್ನು ಕರೆಯಬಹುದು.

12. ಕೋರಂ–

ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ನಡೆಸುವುದಕ್ಕೆ ಅಗತ್ಯವಾದ ಕೋರಂ ಈ ಮುಂದಿನಂತಿರತಕ್ಕದ್ದು:

i. ಅಧ್ಯಕ್ಷ ಅಥವಾ ಉಪಾಧ್ಯಕ್ಷರೂ ಸೇರಿದಂತೆ ತಂದೆತಾಯಿಯರ ಪರಿಷತ್ತಿನ ಒಂಭತ್ತು ಮಂದಿ ಚುನಾಯಿತ ಪ್ರತಿನಿಧಿಗಳ ಪೈಕಿ ಕನಿಷ್ಠಪಕ್ಷ ಐದು ಮಂದಿ ಸದಸ್ಯರು

ii. ಪದನಿಮಿತ್ತ, ವಿದ್ಯಾರ್ಥಿ ಮತ್ತು ನಾಮನಿರ್ದೇಶಿತ ಪ್ರವರ್ಗಗಳಿಂದ ಕನಿಷ್ಠಪಕ್ಷ ತಲಾ ಒಬ್ಬ ಸದಸ್ಯ

ಬಿ. ಕೋರಂ ಕೊರತೆಯಿಂದಾಗಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಭೆಯನ್ನು ನಡೆಸಲಾಗದಿದ್ದರೆ, ಆಗ ಸದರಿ ದಿನಾಂಕದಿಂದ ನಾಲ್ಕು ದಿನಗಳಿಗಿಂತ ಹೆಚ್ಚಿಲ್ಲದ, ಸದಸ್ಯ ಕಾರ್ಯದರ್ಶಿಯು ಅಧಿಸೂಚಿಸುವ ಮತ್ತೊಂದು ದಿನಕ್ಕೆ ಸಭೆಯನ್ನು ಮುಂದೂಡಬಹುದು.

ಸಿ. ಮುಂದೂಡಲ್ಪಟ್ಟ ಸಭೆಯೂ ಸಹ ಅಗತ್ಯ ಕೋರಂನ್ನು ಹೊಂದಿರದಿದ್ದಲ್ಲಿ, ಆಗ ವಾಸ್ತವವಾಗಿ ಹಾಜರಿರುವ ಸದಸ್ಯರ ಕೋರಂ ಸಾಕಾಗುತ್ತದೆ.

13. ಅಧ್ಯಕ್ಷರು ಮತ್ತು ಉಪಾಧ್ಯಕ್ಷರ ಗೈರುಹಾಜರಿಯಲ್ಲಿನ ಪ್ರಕ್ರಿಯೆಗಳು–

ಅಧ್ಯಕ್ಷ ಮತ್ತು ಉಪಾಧ್ಯಕ್ಷರು ಗೈರುಹಾಜರಾಗಿದ್ದಲ್ಲಿ, ಸಭೆಯಲ್ಲಿ ಹಾಜರಿರುವ ಸದಸ್ಯರು ತಂದೆತಾಯಿಯರ ಪರಿಷತ್ತಿನ ಪ್ರತಿನಿಧಿಯಾಗಿರುವ ಒಬ್ಬ ಸದಸ್ಯನನ್ನು, ಚುನಾಯಿಸತಕ್ಕದ್ದು ಮತ್ತು ಅವನು ಸಭಾಧ್ಯಕ್ಷನಾಗಿ ಆ ಸಭೆಯ ಅಧ್ಯಕ್ಷತೆಯನ್ನು ವಹಿಸತಕ್ಕದ್ದು.

ವಿವರಣೆ:–ಈ ಉಪಬಂಧದ ಉದ್ದೇಶಕ್ಕಾಗಿ "ಗೈರು ಹಾಜರಿ" ಎಂಬುದು ಕೇವಲ ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆಯೇ ಹೊರತು ಆಕಸ್ಮಿಕ ಖಾಲಿ ಹುದ್ದೆಗೆ ಉಲ್ಲೇಖಿತವಾಗುವುದಿಲ್ಲ.

14. ಪ್ರಶ್ನೆಗಳನ್ನು ನಿರ್ಣಯಿಸುವ ವಿಧಾನ–

ಎ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಂದೆ ಇರುವ ಎಲ್ಲ ವಿಷಯಗಳನ್ನು ಸಾಮಾನ್ಯವಾಗಿ ಹಾಜರಿರುವ ಸದಸ್ಯರೆಲ್ಲರು ಒಮ್ಮತಾಭಿಪ್ರಾಯದಿಂದ ನಿರ್ಧರಿಸತಕ್ಕದ್ದು.

ಬಿ. ಒಮ್ಮತಾಭಿಪ್ರಾಯ ಮೂಡದಿದ್ದಲ್ಲಿ, ಈ ಉಪವಿಧಿಗಳ 15ನೇ ಖಂಡದ ಅಡಿಯಲ್ಲಿ ಗೊತ್ತುಪಡಿಸಲಾದ ರೀತಿಯಲ್ಲಿ ಮತ ಹಾಕುವ ಮೂಲಕ ನಿರ್ಧರಿಸತಕ್ಕದ್ದು.

15. ಮತ ಹಾಕುವ ವಿಧಾನ–

ಎ. ಎಲ್ಲ ಸದಸ್ಯರು ಮತ ಹಾಕುವುದಕ್ಕೆ ಸಮಾನ ಹಕ್ಕನ್ನು ಹೊಂದಿರತಕ್ಕದ್ದು.

ಬಿ. ಕೈಗಳನ್ನು ಎತ್ತುವ ಮೂಲಕ ಮತ ಹಾಕಬಹುದು, ಆದರೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು, ಯಾವುದೇ ವಿಷಯ ಅಥವಾ ವಿಷಯಗಳನ್ನು ಮತಪತ್ರದ ಮೂಲಕ ನಿರ್ಧರಿಸತಕ್ಕದ್ದೆಂದು ನಿರ್ಣಯಿಸಬಹುದು.

ಸಿ. ವಿಷಯವನ್ನು ಮತಕ್ಕೆ ಹಾಕಿದಲ್ಲಿ, ತಂದೆತಾಯಿಯರ ಪರಿಷತ್ತಿನ ಪ್ರತಿನಿಧಿಗಳಾಗಿರುವ ಬಹುಸಂಖ್ಯಾತ ಸದಸ್ಯರು ಅದನ್ನು ಬೆಂಬಲಿಸದ ಹೊರತು, ಅದನ್ನು ಅಂಗೀಕರಿಸತಕ್ಕದ್ದಲ್ಲ.

ಡಿ. ಸಮಾನ ಸಂಖ್ಯೆಯ ಮತಗಳು ಬಿದ್ದ ಸಂದರ್ಭದಲ್ಲಿ, ಸಭಾಧ್ಯಕ್ಷರು ಎರಡನೇ ಅಥವಾ ನಿರ್ಣಾಯಕ ಮತವನ್ನು ಹೊಂದಿರತಕ್ಕದ್ದು ಮತ್ತು ಅದನ್ನು ಚಲಾಯಿಸತಕ್ಕದ್ದು.

16. ನಿರ್ಣಯಗಳನ್ನು ದಾಖಲಿಸುವುದು–

ಎ. ಸದಸ್ಯ ಕಾರ್ಯದರ್ಶಿಯು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ನಿರ್ಣಯಗಳ ದಾಖಲೆಯನ್ನು ನಿರ್ವಹಿಸತಕ್ಕದ್ದು ಮತ್ತು ನಿರ್ಣಯಗಳ ಪ್ರತಿಗಳನ್ನು ಸದಸ್ಯರಿಗೆ ಪರಿಚಲನೆ ಮಾಡತಕ್ಕದ್ದು.

ಬಿ. ಮೇಲೆ ನಮೂದಿಸಿದ ದಾಖಲೆಯನ್ನು, ತಂದೆತಾಯಿಯರ ಪರಿಷತ್ತಿನ ಅವಗಾಹನೆಗಾಗಿ ಶಾಲೆಯಲ್ಲಿ ಇಡತಕ್ಕದ್ದು.

734 · F2 · SC · 2000
COPIES

ಅಧ್ಯಾಯ –V

ಶಿಸ್ತು ಕ್ರಮ

17. ದೂರುಗಳ ಪರಿಹಾರ ಕಾರ್ಯತಂತ್ರ–

ಎ. 17ನೇ ಖಂಡದ ಉದ್ದೇಶಗಳಿಗಾಗಿ, ಶಿಕ್ಷಕರು ಅಥವಾ ಬೋಧಕ ಸಿಬ್ಬಂದಿಯು ಮುಖ್ಯ ಶಿಕ್ಷಕರನ್ನು ಒಳಗೊಳ್ಳುತ್ತದೆ.

ಬಿ. ಎಲ್ಲಾ ವಿದ್ಯಾರ್ಥಿಗಳು, ಬೋಧಕೇತರ ಸಿಬ್ಬಂದಿ, ಶಿಕ್ಷಕರು ಮತ್ತು ತಂದೆ ತಾಯಿಗಳಿಗೆ ಮುಕ್ತವಾಗಿರುವಂತೆ ಶಾಲೆಯಲ್ಲಿ ಒಂದು ದೂರುಗಳ ಪೆಟ್ಟಿಗೆಯನ್ನು ಇಡತಕ್ಕದ್ದು.

ಸಿ. ಆ ಶಾಲೆಯಲ್ಲಿ ಓದುತ್ತಿರುವ ಮಗು ಅಥವಾ ಅಂಥ ಮಗುವಿನ ತಂದೆತಾಯಿಗಳು, ಶಾಲೆಯನ್ನು ಬಿಟ್ಟಿರುವ ಮಗು ಅಥವಾ ಅಂಥ ಮಗುವಿನ ತಂದೆ ತಾಯಿಗಳು, ಗ್ರಾಮದಲ್ಲಿ ವಾಸವಾಗಿದ್ದು ಆದರೆ ಶಾಲೆಗೆ ಹೋಗದಿರುವ ಮಗು ಅಥವಾ ಅಂಥ ಮಗುವಿನ ತಂದೆತಾಯಿಗಳು, ಶಾಲೆಯ ಸಿಬ್ಬಂದಿ ಸದಸ್ಯರು [ಬೋಧಕ ಮತ್ತು ಬೋಧಕೇತರ] ಈ ಮುಂದಿನವುಗಳ ಸಂಬಂಧವಾಗಿ [ನೇರವಾಗಿ ಆಗಲಿ ಅಥವಾ ದೂರು ಪೆಟ್ಟಿಗೆಯ ಮುಖಾಂತರವಾಗಲಿ] ನಾಗರಿಕ ಸೌಲಭ್ಯಗಳ ಸಮಿತಿಗೆ ಮೌಖಿಕ ಅಥವಾ ಲಿಖಿತ ದೂರನ್ನು ಸಲ್ಲಿಸಬಹುದು.

(i) ಮಕ್ಕಳನ್ನು ಬಾಲ ಕಾರ್ಮಿಕರನ್ನಾಗಿ ನೇಮಿಸಿಕೊಳ್ಳುವುದು;

(ii) ಶಾಲೆಯಲ್ಲಿ ಮಕ್ಕಳಿಗೆ ದೈಹಿಕ ಅಥವಾ ಲೈಂಗಿಕ ಕಿರುಕುಳ ನೀಡಿರುವುದು;

(iii) ಶಾಲೆಯಲ್ಲಿ ಶಾಲಾ ಸಿಬ್ಬಂದಿ (ಬೋಧಕ ಅಥವಾ ಬೋಧಕೇತರ), ಮಕ್ಕಳನ್ನು ಲೈಂಗಿಕ ಕಿರುಕುಳ ಅಥವಾ ನಿಂದನೆಗೆ ಒಳಪಡಿಸಿರುವುದು;

(iv) ಮಕ್ಕಳು ಅಥವಾ ಯಾರೇ ಸಿಬ್ಬಂದಿ ಸದಸ್ಯರಿಗೆ ಯಾವುದೇ ವಿಧವಾದ ಅಗೌರವ ಅಥವಾ ತಾರತಮ್ಯ ಎಸಗಿರುವುದು ;

(v) ಶಿಕ್ಷಕರು, ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ಉದಾಸೀನತೆ (ನಿರ್ಲಕ್ಷ್ಯ);

(vi) ಶಿಕ್ಷಕರು, ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರುಗಳ ಕರ್ತವ್ಯ ಲೋಪ ;

(vii) ಯಾರೇ ಶಿಕ್ಷಕ, ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ದುರ್ವರ್ತನೆ, ದುರ್ನಡತೆ ಅಥವಾ ಅಸಭ್ಯ ವರ್ತನೆ;

(viii) ಯಾರೇ ಶಿಕ್ಷಕ, ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಂದ ತಪ್ಪು ನಿರ್ವಹಣೆ;

(ix) ಯಾರೇ ಶಿಕ್ಷಕ, ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರಿಂದ ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗ;

(x) ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಮಗ್ರ ಕಾರ್ಯನಿರ್ವಹಣೆ;

ಡಿ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅಧ್ಯಕ್ಷರು ಸ್ವೀಕರಿಸಿದ ದೂರುಗಳನ್ನು ಕಡೇಪಕ್ಷ ವಾರದ ಆಧಾರದ ಮೇಲೆ ಅವಶ್ಯಕವಾಗಿ ಪರಿಶೀಲಿಸಿ ಅದನ್ನು ನಾಗರಿಕ ಸೌಲಭ್ಯಗಳ ಸಮಿತಿಗೆ ಕಳುಹಿಸುವುದು.

ಇ. ಬಂದಿರುವ ದೂರು, ಯಾರೇ ಬೋಧಕ/ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿಯ ಸದಸ್ಯನಿಂದ ಶಾಲೆ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರೂ.1000-00ಗಳನ್ನು

ಮೀರಿದ ನಿಧಿಗಳು, ಆಸ್ತಿ, ಚರಾಸ್ತಿ ಅಥವಾ ಚಿರಾಸ್ತಿ ಅಥವಾ ಸೌಲಭ್ಯಗಳ ದುರುಪಯೋಗ ಅಥವಾ ಅವ್ಯವಸ್ಥೆಗೆ ಸಂಬಂಧಿಸಿದ್ದಾಗಿರುವಲ್ಲಿ, ನಾಗರಿಕ ಸೌಲಭ್ಯಗಳ ಸಮಿತಿಯು ಈ ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(i) ನಾಗರಿಕ ಸೌಲಭ್ಯಗಳ ಸಮಿತಿಯ ದ್ವಿಸದಸ್ಯ ವಿಚಾರಣಾ ತಂಡವನ್ನು ರಚಿಸತಕ್ಕದ್ದು;

(ii) ದೂರನ್ನು ಸ್ವೀಕರಿಸಿದ 7 ದಿನಗಳೊಳಗೆ ಒಂದು ವಿಚಾರಣಾ ತಂಡವನ್ನು ರಚಿಸಬೇಕು. ಯಾವುದೇ ವಿಚಾರಣಾ ತಂಡವನ್ನು ರಚಿಸದಿರುವ ಸಂದರ್ಭದಲ್ಲಿ ಫಿರ್ಯಾದುದಾರನು ನೇರವಾಗಿ ಗ್ರಾಮ ಪಂಚಾಯತಿಯನ್ನು ಅಥವಾ ಕ್ಷೇತ್ರ ಶಿಕ್ಷಣಾಧಿಕಾರಿಯವರನ್ನು ಸಂಪರ್ಕಿಸಬಹುದು.

(iii) ವಿಚಾರಣಾ ತಂಡವು ನಾಗರಿಕ ಸೌಲಭ್ಯ ಸಮಿತಿಯಿಂದ ಒಬ್ಬ ಸದಸ್ಯನನ್ನು ಹಾಗೂ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಿಂದ ಒಬ್ಬ ಸದಸ್ಯನನ್ನು ಒಳಗೊಂಡಿರತಕ್ಕದ್ದು. ವಿಚಾರಣಾ ತಂಡದ ಉಭಯ ಸದಸ್ಯರನ್ನು ದೂರಿನಲ್ಲಿ ಯಾವುದೇ ರೀತಿಯಲ್ಲಿ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ತೊಡಗಿಸಿರಬಾರದು/ಹೆಸರಿಸಬಾರದು.

(iv) ವಿಚಾರಣಾ ತಂಡವು, ಇದರ ರಚನೆಯ 15 ದಿನಗಳೊಳಗೆ ವಿಚಾರಣೆಯನ್ನು ಪೂರ್ಣಗೊಳಿಸಬೇಕು ಮತ್ತು ತನ್ನ ತೀರ್ಮಾನಗಳನ್ನು ಶಿಫಾರಸುಗಳೊಂದಿಗೆ ನಾಗರಿಕ ಸೌಲಭ್ಯ ಸಮಿತಿಗೆ ಕಳುಹಿಸಬೇಕು.

(v) ನಾಗರಿಕ ಸೌಲಭ್ಯ ಸಮಿತಿಯು ವಿಚಾರಣಾ ತಂಡದ ವರದಿ ಮತ್ತು ಶಿಫಾರಸುಗಳ ಆಧಾರದ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

ಎಫ್. ದೂರು, ಯಾರೇ ಶಿಕ್ಷಕ/ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯನಿಂದ ಶಾಲೆ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರೂ.1000/–ಗಳಿಗಿಂತ ಕಡಿಮೆ ಇರುವ ನಿಧಿಗಳು, ಆಸ್ತಿ, ಚರ ಅಥವಾ ಸ್ಥಿರಾಸ್ತಿ ಅಥವಾ ಸೌಲಭ್ಯಗಳ ದುರುಪಯೋಗ ಅಥವಾ ಅವ್ಯವಸ್ಥೆಗೆ ಸಂಬಂಧಿಸಿದ್ದಾಗಿರುವಲ್ಲಿ, ಅಥವಾ ದೂರು ಯಾವುದೇ ಬೋಧಕ ಅಥವಾ ಬೋಧಕೇತರ ಸಿಬ್ಬಂದಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ಉದಾಸೀನತೆ, ಕರ್ತವ್ಯ ಲೋಪ, ದುರ್ವರ್ತನೆ, ದುರ್ನಡತೆ ಅಥವಾ ಅಸಭ್ಯ ವರ್ತನೆಗೆ ಸಂಬಂಧಿಸಿದ್ದಾಗಿರುವಲ್ಲಿ, ನಾಗರಿಕ ಸೌಲಭ್ಯಗಳ ಸಮಿತಿಯು ಪರಿಶೀಲನಾ ಸಭೆಯಲ್ಲಿ ಇದನ್ನು ಚರ್ಚಿಸತಕ್ಕದ್ದು ಮತ್ತು ಅಂಥ ವ್ಯಕ್ತಿ ವಿರುದ್ಧ, ಸೂಕ್ತ ಕ್ರಮವನ್ನು ಕೈಗೊಳ್ಳತಕ್ಕದ್ದು.

ಜಿ. ದೂರು, ಮಕ್ಕಳನ್ನು ಯಾವುದೇ ರೂಪದಲ್ಲಿ ದೈಹಿಕವಾಗಿ ಅಥವಾ ಲೈಂಗಿಕವಾಗಿ ದುರುಪಯೋಗಪಡಿಸಿಕೊಂಡಿರುವುದಕ್ಕೆ ಸಂಬಂಧಪಟ್ಟಿರುವಲ್ಲಿ, ನಾಗರಿಕ ಸೌಲಭ್ಯ ಸಮಿತಿಯು ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು:

i. ನಾಗರಿಕ ಸೌಲಭ್ಯ ಸಮಿತಿಯು ಕೂಡಲೇ ಸಂಬಂಧಪಟ್ಟ ಶಾಲೆಯ ಮುಖ್ಯ ಶಿಕ್ಷಕರಿಗೆ ಮಗುವನ್ನು ಬಾಲಕ ನ್ಯಾಯ (ಪಾಲನೆ ಮತ್ತು ರಕ್ಷಣೆ) ಅಧಿನಿಯಮ, 2000 ಅಡಿಯಲ್ಲಿ ರಚಿಸಿದ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸುವಂತೆ ನಿರ್ದೇಶಿಸತಕ್ಕದು ಮತ್ತು ಮುಂದಿನ ಕ್ರಮಕ್ಕಾಗಿ ವಿಷಯವನ್ನು ಪೋಲೀಸರಿಗೆ ಕಳುಹಿಸತಕ್ಕುದು;

ii. ನಾಗರಿಕ ಸೌಲಭ್ಯ ಸಮಿತಿಯು ಕೂಡಲೇ ಇಬ್ಬರು ಮಹಿಳೆಯರನ್ನು ಒಳಗೊಂಡ ಮೂವರು ಸದಸ್ಯರ ಒಂದು ವಿಚಾರಣಾ ತಂಡವನ್ನು ರಚಿಸತಕ್ಕುದು. ವಿಚಾರಣಾ ತಂಡದ ಸದಸ್ಯರಲ್ಲಿ ಒಬ್ಬರು ಶಾಲೆಯೊಂದಿಗೆ ಕಾರ್ಯನಿರತವಾಗಿಲ್ಲದಿರುವ ಒಂದು ಸರ್ಕಾರೇತರ ಸಂಸ್ಥೆಯಿಂದ ಬಂದಿರುವವರು ಆಗಿರಬೇಕು.

iii. ಸದರಿ ವಿಚಾರಣಾ ತಂಡವು ಅದರ ರಚನೆಯ 15 ದಿನಗಳೊಳಗಾಗಿದೂರನ್ನು ಪರಿಶೀಲಿಸಿ ನಾಗರಿಕ ಸೌಲಭ್ಯ ಸಮಿತಿಗೆ ವರದಿಯನ್ನು ಸಲ್ಲಿಸಬೇಕು.

iv. ನಾಗರಿಕ ಸೌಲಭ್ಯ ಸಮಿತಿಯು ವಿಚಾರಣಾ ತಂಡದ ವರದಿ ಮತ್ತು ಶಿಫಾರಸುಗಳ ಆಧಾರದ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕುದು.

ಹೆಚ್. ದೂರು ಯಾವುದೇ ರೂಪದ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದ್ದಾಗಿರುವಲ್ಲಿ, ನಾಗರಿಕ ಸೌಲಭ್ಯ ಸಮಿತಿಯ ಕೆಳಕಂಡ ಕಾರ್ಯವಿಧಾನವನ್ನು ಅನುಸರಿಸತಕ್ಕದು:

i. ನಾಗರಿಕ ಸೌಲಭ್ಯ ಸಮಿತಿಯು ಕೂಡಲೇ ಇಬ್ಬರು ಮಹಿಳೆಯರನ್ನು ಒಳಗೊಂಡಿರುವ ಮೂವರು ಸದಸ್ಯರ ವಿಚಾರಣಾ ತಂಡವನ್ನು ರಚಿಸತಕ್ಕದು. ವಿಚಾರಣಾ ತಂಡದ ಒಬ್ಬ ಸದಸ್ಯರು ಶಾಲೆಯೊಂದಿಗೆ ಕಾರ್ಯನಿರತವಾಗಿಲ್ಲದಿರುವ ಸರ್ಕಾರೇತರ ಸಂಸ್ಥೆಯಿಂದ ಬಂದಿರುವವರು ಆಗಿರಬೇಕು.

ii. ಸದರಿ ವಿಚಾರಣಾ ತಂಡವು ಇದರ ರಚನೆಯ 15 ದಿನಗಳೊಳಗೆ ದೂರನ್ನು ಪರಿಶೀಲಿಸಿ ವರದಿಯನ್ನು ಸಲ್ಲಿಸತಕ್ಕದು.

iii. ನಾಗರಿಕ ಸೌಲಭ್ಯಗಳ ಸಮಿತಿಯು ವಿಚಾರಣಾ ತಂಡದ ವರದಿ ಹಾಗೂ ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮ ಕೈಗೊಳ್ಳಬೇಕು.

ಐ. ದೂರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸಮಗ್ರ ಕಾರ್ಯ ನಿರ್ವಹಣೆಗೆ ಸಂಬಂಧಪಟ್ಟದ್ದು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಯಾವೊಬ್ಬ ಸದಸ್ಯನ ವಿರುದ್ಧವಾಗಿರದ ಸಂದರ್ಭದಲ್ಲಿ ನಾಗರಿಕ ಸೌಲಭ್ಯಗಳ ಸಮಿತಿಯು ಈ ಮುಂದಿನ ಕಾರ್ಯವಿಧಾನವನ್ನು ಅನುಸರಿಸಬೇಕು.

i. ದೂರು ಸ್ವೀಕರಿಸಿದ 10 ದಿನಗಳೊಳಗಾಗಿ ಇಬ್ಬರು ಸದಸ್ಯರಿರುವ ಒಂದು ನಾಗರಿಕ ಸೌಲಭ್ಯ ಸಮಿತಿ ತಂಡವನ್ನು ರಚಿಸಬೇಕು.

ii. ಸದರಿ ತಂಡವು ದೂರನ್ನು ಪರಿಶೀಲಿಸಿ ಅವ್ಯವಹಾರಗಳನ್ನು ಸರಿಪಡಿಸುವ ವಿಧಾನಗಳನ್ನು ಸೂಚಿಸಿ, ತಂಡ ರಚನೆಯಾದ ಹತ್ತು ದಿನಗಳೊಳಗಾಗಿ ನಾಗರಿಕ ಸೌಲಭ್ಯ ಸಮಿತಿಗೆ ವರದಿ ನೀಡಬೇಕು.

iii. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ದೂರು ಪ್ರತಿಗಳ (ಫಿರ್ಯಾದುದಾರನ ಹೆಸರು ತಿಳಿಸಿರದಿದ್ದಲ್ಲಿ) ಮತ್ತು ಸದರಿ ನಾಗರಿಕ ಸೌಲಭ್ಯ ಸಮಿತಿ ತಂಡದ ವರದಿಯೊಂದಿಗೆ ಕಾರಣ ಕೇಳುವ ನೋಟೀಸನ್ನು ಕಳಿಸಿ ಅವ್ಯವಹಾರಗಳನ್ನು ಸರಿಪಡಿಸಲು 10 ದಿನಗಳ ಕಾಲಾವಕಾಶ (ನೋಟೀಸು ಕಳುಹಿಸಿದ ದಿನಾಂಕದಿಂದ) ನೀಡಬೇಕು.

iv. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು 15 ದಿನದೊಳಗಾಗಿ (ಕಾರಣ ಕೇಳುವ ನೋಟೀಸು ಕಳುಹಿಸಿದ ದಿನಾಂಕದಿಂದ) ನಾಗರಿಕ ಸೌಲಭ್ಯಗಳ ಸಮಿತಿಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು.

v. ಅನುಪಾಲನಾ ವರದಿಯನ್ನು ಸ್ವೀಕರಿಸಿದ ತರುವಾಯ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಅವ್ಯವಹಾರಗಳನ್ನು ನಿಜವಾಗಿಯೂ ಸರಿಪಡಿಸಿದ ಬಗ್ಗೆ ನಾಗರಿಕ ಸೌಲಭ್ಯಗಳ ಸಮಿತಿಯು ಖುದ್ದಾಗಿ ಪರಿಶೀಲಿಸಬೇಕು.

vi. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಅನುಪಾಲನಾ ವರದಿಯನ್ನು ಸಲ್ಲಿಸಿದ್ದರೂ ಅವ್ಯವಹಾರಗಳನ್ನು ಸರಿಪಡಿಸಿ ಅಥವಾ ಕಾರಣ ಕೇಳುವ ನೋಟೀಸಿಗೆ ಅನುಗುಣವಾಗಿ ಕ್ರಮ ಕೈಗೊಳ್ಳಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ನಿರಾಕರಿಸಿದೆ ಎಂದು ನಾಗರಿಕ ಸೌಲಭ್ಯಗಳ ಸಮಿತಿಯು ನಂಬಿದರೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು 10 ದಿನಗಳ ಅವಧಿಯೊಳಗಾಗಿ ರದ್ದು ಮಾಡಬಾರದೇಕೆ ಎಂಬ ಬಗ್ಗೆ ಕಾರಣ ಕೇಳುವ ಎರಡನೇ ನೋಟೀಸನ್ನು ನಾಗರಿಕ ಸೌಲಭ್ಯಗಳ ಸಮಿತಿಯು ಜಾರಿ ಮಾಡಬೇಕು.

vii. ಅವ್ಯವಹಾರಗಳನ್ನು ಸರಿಪಡಿಸಲು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಎರಡನೇ 10 ದಿನಗಳ ಅವಧಿಯಲ್ಲಿ ತೆಗೆದುಕೊಂಡ ಕ್ರಮಗಳು ತೃಪ್ತಿಕರವಾಗಿಲ್ಲದಿದ್ದಲ್ಲಿ ನಾಗರಿಕ ಸೌಲಭ್ಯಗಳ ಸಮಿತಿಯು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರದ್ದುಪಡಿಸತಕ್ಕದ್ದು.

viii. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರದ್ದುಪಡಿಸಿದ ಸಂದರ್ಭದಲ್ಲಿ ಅದು ಹಾಗೆ ರದ್ದುಗೊಂಡ 1 ತಿಂಗಳೊಳಗಾಗಿ ಶಾಲಾ ಪ್ರಾಧಿಕಾರಗಳು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮರು ರಚನೆ ಮಾಡಿದ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ix. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆಯಾಗುವವರೆಗೆ ಅದರ ಪ್ರಕಾರ್ಯಗಳನ್ನು ನಾಗರಿಕ ಸೌಲಭ್ಯಗಳ ಸಮಿತಿಯು ನಿರ್ವಹಿಸಬೇಕು.

18. ಖಾತೆಯ ನಿರ್ವಹಣೆಯು ನಿಂತುಹೋಗುವುದು–

ಮೇಲಿನ 17ನೇ ಖಂಡದಡಿ ಸ್ವೀಕರಿಸಿದ ದೂರು, ಈ ಉಪವಿಧಿಗಳ 21 ನೇ ಖಂಡದ ಮೇರೆಗೆ ರಚಿಸಲಾದ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಖಾತೆಯ ವ್ಯವಹಾರಗಳನ್ನು ಮೋಸದಿಂದ ನಿರ್ವಹಿಸಿದುದಕ್ಕೆ ಸಂಬಂಧಪಟ್ಟಿದ್ದರೆ, ಅಧ್ಯಕ್ಷ ಹಾಗೂ ಸದಸ್ಯ ಕಾರ್ಯದರ್ಶಿ ಆ ಖಾತೆಯನ್ನು ನಿರ್ವಹಿಸುವುದನ್ನು ನಿಲ್ಲಿಸುವಂತೆ ನಾಗರಿಕ ಸೌಲಭ್ಯಗಳ ಸಮಿತಿಯು ನಿರ್ದೇಶನ ನೀಡಬೇಕು. ಶಾಲೆಯ ಮುಖ್ಯ ಶಿಕ್ಷಕರು ಮತ್ತು ಶಾಲೆಯಲ್ಲಿ ಸೇವಾ ಹಿರಿತನವುಳ್ಳ ಶಿಕ್ಷಕ ನಾಗರಿಕ ಸೌಲಭ್ಯಗಳ ಸಮಿತಿಯ ಅನುಮೋದನೆ ಪಡೆದು ಸದರಿ ದೂರು ಸ್ವೀಕರಿಸಿದ 7 ದಿನಗಳ ಒಳಗಾಗಿ ಸದರಿ ಖಾತೆಯನ್ನು ನಿರ್ವಹಿಸಬೇಕು.

ಅಧ್ಯಾಯ–VI

ಸಂಕೀರ್ಣ

19. ಸದಸ್ಯತ್ವವನ್ನು ಕೊನೆಗೊಳಿಸುವುದು–

ಎ. ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ಸದಸ್ಯರ ಗರಿಷ್ಠ ಪದಾವಧಿಯು ಮೂರು ವರ್ಷಗಳು ಅಥವಾ ಸಂಬಂಧಿಸಿದ ಗ್ರಾಮಪಂಚಾಯಿತಿಯ ಅವಧಿಯು ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅದು ಆಗಿರುತ್ತದೆ.

ಬಿ. ಮೇಲಿನ (ಎ) ಖಂಡದಲ್ಲಿ ನಮೂದಿಸಲಾದವರನ್ನು ಹೊರತುಪಡಿಸಿ ಇತರ ಸದಸ್ಯರ ಸದಸ್ಯತ್ವವು ಸಂಬಂಧಿಸಿದ ಗ್ರಾಮಪಂಚಾಯಿತಿಯ ಅವಧಿಯು ಮುಕ್ತಾಯವಾಗುವವರೆಗೆ ಮಾತ್ರ ಇರುವುದು.

ಪರಂತು, ಈ ಕೆಳಕಂಡ ಯಾವುದೇ ಘಟನೆಗಳು ಸಂಭವಿಸಿದಲ್ಲಿ ಸದಸ್ಯತ್ವವು ರದ್ದಾಗತಕ್ಕದ್ದು.

i. ಆತ / ಆಕೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ನಿರಂತರ ಮೂರು ಸಭೆಗಳಿಗೆ ಗೈರು ಹಾಜರಾದಲ್ಲಿ ;

ii. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ವ್ಯಾಪ್ತಿಯಲ್ಲಿ ಬರುವ ಯಾವುದೇ ವ್ಯವಹಾರದ ನಿರ್ವಹಣೆಯಲ್ಲಿ ಆತ / ಆಕೆಯು ಭ್ರಷ್ಟಚಾರದಲ್ಲಿ ತೊಡಗಿದ್ದಲ್ಲಿ ;

iii. ಯಾವುದೇ ಕಾರಣದ ನಿಮಿತ್ತ ಸದಸ್ಯ ತಂದೆತಾಯಿಯ ಮಗುವು ಶಾಲೆಯ ವಿದ್ಯಾರ್ಥಿಯಾಗಿರುವುದು ನಿಂತುಹೋದಲ್ಲಿ ;

iv. ಯಾವುದೇ ನ್ಯಾಯಾಲಯದಿಂದ ಆತ/ಆಕೆಯು ಅಪಾದಿತನೆಂದು ತೀರ್ಮಾನವಾಗಿದ್ದಲ್ಲಿ ;

v. ಆತ/ಆಕೆ ಶಾಲೆಯಲ್ಲಿ ಓದುತ್ತಿರುವ ಯಾವುದೇ ಮಗುವಿನ ತಂದೆ–ತಾಯಿಯು ಆಗಿರದಿದ್ದಲ್ಲಿ ;

vi. ಉಪವಿಧಿಗಳ ಖಂಡ 17ರ ಮೇರೆಗೆ ಮುಕ್ತಾಯಗೊಳಿಸಿದಲ್ಲಿ.

20. ಆಕಸ್ಮಿಕ ಖಾಲಿಸ್ಥಾನಗಳನ್ನು ತುಂಬುವುದು–

i. ಯಾವುದೇ ಸದಸ್ಯರ ಸ್ಥಾನವು ಆಕೆಯ/ ಆತನ ಪದಾವಧಿಯು ಸಾಮಾನ್ಯ ಕ್ರಮದಲ್ಲಿ ಮುಕ್ತಾಯಗೊಳ್ಳುವ ಮೊದಲೇ ಖಾಲಿಯಾದಲ್ಲಿ, ತತ್ಪರಿಣಾಮವಾಗಿ ಉಂಟಾಗುವ ಆ ಆಕಸ್ಮಿಕ ಖಾಲಿಸ್ಥಾನವನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಉಪವಿಧಿಗಳ ಅನುಸಾರ ತುಂಬಬಹುದು:

ಪರಂತು, ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಈ ಉಪವಿಧಿಗಳ ಖಂಡ 17ರ ಮೇರೆಗೆ ಸಂಪೂರ್ಣವಾಗಿ ವಿಸರ್ಜನೆಯಾಗಿದ್ದಲ್ಲಿ ಖಂಡ 17ರ ಮೇರೆಗೆ ಗೊತ್ತುಪಡಿಸಿದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

ii. ಮೇಲಿನ (i) ಖಂಡದ ಮೇರೆಗೆ ನೇಮಕಗೊಂಡ ಸದಸ್ಯನ ಪದಾವಧಿಯು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಉಳಿದ ಅವಧಿಗೆ ಅಥವಾ 19 (ಬಿ) ಖಂಡದ ಪ್ರಕಾರ ಆತ/ಆಕೆ ಸದಸ್ಯನಾಗಿರುವುದು ಮುಕ್ತಾಯವಾಗುವವರೆಗೆ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಇರುವುದು.

21. ಹಣಕಾಸು-

ಎ. ರಿಸರ್ವ್ ಬ್ಯಾಂಕ್‌ನಿಂದ ಮನ್ನಣೆ ಪಡೆದ ರಾಷ್ಟ್ರೀಕೃತ ಬ್ಯಾಂಕ್ ಅಥವಾ ಅನುಸೂಚಿತ ಬ್ಯಾಂಕ್ ಅಥವಾ ಸಹಕಾರಿ ಬ್ಯಾಂಕ್‌ನ ಖಾತೆಯಲ್ಲಿ ಅಥವಾ ಅಂಚೆ ಕಚೇರಿಯಲ್ಲಿ ಶಾಲೆಯ ಎಲ್ಲಾ ನಿಧಿಗಳನ್ನು ಠೇವಣಿ ಇಡತಕ್ಕದ್ದು. ಅಂಥ ಖಾತೆಯನ್ನು ಶಾಲೆಯ ಹೆಸರಿನಲ್ಲಿ ತೆರೆಯತಕ್ಕದ್ದು.

ಬಿ. ಮೇಲೆ ತಿಳಿಸಿರುವ ಖಾತೆಗಳನ್ನು ಅಧ್ಯಕ್ಷರು ಹಾಗೂ ಸದಸ್ಯ ಕಾರ್ಯದರ್ಶಿಯವರು ಜಂಟಿಯಾಗಿ ನಿರ್ವಹಿಸತಕ್ಕದ್ದು.

ಸಿ. ಶಾಲೆ ಮತ್ತು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪ್ರತಿ ಸಭೆಯಲ್ಲೂ ಚರ್ಚಿಸತಕ್ಕದ್ದು.

ಡಿ. ಒಂದು ಸಾವಿರ ರೂ.ಗಳನ್ನು ಮೀರಿದ ಯಾವುದೇ ಹಣ ಹಿಂತೆಗೆಯುವಿಕೆಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪೂರ್ವಾನುಮತಿ ಪಡೆಯತಕ್ಕದ್ದು.

ಪರಂತು, ತುರ್ತು ವೆಚ್ಚಗಳನ್ನು ಭರಿಸಲು ಯಾವುದೇ ಹಣವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಅದನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚಿಸತಕ್ಕದ್ದು.

22. ಲಾಭದ ಮೇಲೆ ನಿಷೇಧ-

ಶಾಲೆಯ ಲಾಭ ಮತ್ತು ಆಸ್ತಿಯ ಯಾವುದೇ ಭಾಗವನ್ನು ವೃತ್ತಿವೇತನದ ರೂಪದಲ್ಲಾಗಲೀ ಅಥವಾ ಅನ್ಯಥಾ ಲಾಭದ ರೂಪದಲ್ಲಾಗಲೀ ಯಾವುದೇ ಸದಸ್ಯನಿಗೆ ಅಥವಾ ಯಾವುದೇ ಸದಸ್ಯರ ಮೂಲಕ ಪಡೆಯ ಬಯಸುವ ಯಾವುದೇ ವ್ಯಕ್ತಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ವಿನಿಯೋಗಿಸತಕ್ಕದ್ದಲ್ಲ ಅಥವಾ ವರ್ಗಾಯಿಸತಕ್ಕದ್ದಲ್ಲ.

ಪರಂತು, ಈ ಖಂಡದಲ್ಲಿರುವ ಯಾವುದೂ, ಶಾಲೆಯ ಪರವಾಗಿ ಸದ್ಭಾವನೆಯಿಂದ ಖರ್ಚು ಮಾಡಿದ ಯಾವುದೇ ಸದಸ್ಯನಿಗೆ ಮರುಪಾವತಿಯ ಸಂದಾಯ ಮಾಡುವುದಕ್ಕೆ ಅಡ್ಡಿಪಡಿಸತಕ್ಕದ್ದಲ್ಲ.

ಮತ್ತು ಪರಂತು, ಸದಸ್ಯರಿಗೆ ತರಬೇತಿಗಾಗಿ ಹಂಚಿಕೆಯಾದ ಯಾವುದೇ ಮೊತ್ತವನ್ನು ಸದ್ಭಾವನೆಯಿಂದ ಅಂತಹ ಸದಸ್ಯರಿಗೆ ಸಂದಾಯ ಮಾಡುವುದಕ್ಕೆ ಈ ಖಂಡದಲ್ಲಿರುವ ಯಾವುದೂ ಅಡ್ಡಿಪಡಿಸತಕ್ಕದ್ದಲ್ಲ.

23. ಅಧಿಕೃತ ಸಂವಹನ ಮತ್ತು ಒಪ್ಪಂದಗಳು :

ಎ. ಸದಸ್ಯ ಕಾರ್ಯದರ್ಶಿಯು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪೂರ್ವಾನುಮೋದನೆಯನ್ನು ಪಡೆದು ಉಪವಿಧಿಯ 10ನೇ ಖಂಡದಲ್ಲಿ ನಿರ್ದಿಷ್ಟಪಡಿಸಲಾದ ಯಾವುದೇ ಪ್ರಕಾರ್ಯಗಳನ್ನು ನಿರ್ವಹಿಸಲು ಶಾಲೆ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪರವಾಗಿ ಲಿಖಿತ ಒಪ್ಪಂದಗಳನ್ನು ಮಾಡಿಕೊಳ್ಳತಕ್ಕದ್ದು.

ಬಿ. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲಾ ಅಧಿಕೃತ ಪತ್ರಗಳನ್ನು ಸದಸ್ಯ ಕಾರ್ಯದರ್ಶಿಯು ಸಹಿ ಮಾಡತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಬಿ. ಹೆಚ್. ಪಡಸಲಗಿ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ

KA / BG - GPO/ 2515 /WPP-47/ 2009 - 2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಶನಿವಾರ, ಏಪ್ರಿಲ್ ೨೮, ೨೦೧೨ (ವೈಶಾಖ ೮, ಶಕ ವರ್ಷ ೧೯೩೪)	ನಂ. ೩೧೧

EDUCATION SECRETARIAT

NOTIFICATION

No. ED 77 YOYOKA 2010, BANGALORE, Dated : 28th April 2012

In exercise of the powers conferred by sub-section (1) of section 38 of the Right of Children to Free and Compulsory Education Act, 2009 (Central Act 35 of 2009), the Government of Karnataka hereby makes the following rules, namely:-

RULES

PART - I

PRELIMINARY

1. Title, extent, commencement and application. (1) These rules may be called the Karnataka Right of Children to Free and Compulsory Education Rules, 2012.

(2) They shall extend to the whole of the State of Karnataka.

(3) They shall come into force from the date of their publication in the Official Gazette.

(4) The provisions of these rules shall apply to all schools and shall have overriding effect over the provisions of rules made under the Karnataka Education Act, 1983 (Karnataka Act 1 of 1995) to the extent of their repugnancy. Where no provisions are made in these rules, the provisions of other rules made under any other law shall continue to apply.

2. Definitions.- (1) In these rules, unless the context otherwise requires,-

(a) "Act" means the Right of Children to Free and Compulsory Education Act, 2009 (Central Act 35 of 2009);

(b) "Academic Authority" means the Department of State Educational Research and Training (DSERT) for schools affiliated to the State Board;

(c) "BEO" means the Block Education Officer of the education block;

(d) "CEO" means the Chief Executive Officer of the Zilla Panchayat of the district, appointed under the Karnataka Panchayat Raj Act, 1993;

(e) "Child belonging to disadvantaged group" means a child belonging to the Scheduled Caste, the Scheduled Tribe, the Backward Class as specified by the Government of Karnataka., by notification under clause(d) of Section 2 of the Act; It also includes orphan, migrant and street child, child with special needs and HIV affected/infected child;

(f) "Child belonging to weaker section" means a child belonging to such parent or guardian whose annual income is lower than the minimum limit as notified by the State under clause(e) of Section 2 of the Act.

(g) "Commissioner" means the Commissioner for Public Instruction, which includes Additional Commissioners for Public Instruction, Dharwad and Gulbarga ;

(h) DDPI means the Deputy Director of Public Instruction (Administration) of the educational district;

(i) DIET means the District Institute of Education and Training, which is set up in the district as an institution for providing academic support for education and training of teachers;

(j) "Government" means the State Government;

(k) "Governing Council" means any person or body of persons permitted or deemed to be permitted under this Act to establish or maintain a private educational institution, and includes the governing body, by whatever name called, to which the management of affairs of the said educational institution are entrusted;

(l) "NCTE" means the National Council for Teacher Education;

(m) "School Development and Monitoring Committee" (SDMC) means School Management Committee (SMC) constituted under section 21 of the Act;

(n) "School mapping" means planning school location to overcome social barriers and geographical distance.

(2) All other words and expressions used herein and not defined shall have the same meaning assigned to them in the Act.

PART - II

RIGHT OF CHILDREN TO FREE AND COMPULSORY EDUCATION

Special Training for the purpose of first provision to Section 4

3. Right of children to free and compulsory education.-(1) The School Development and Monitoring Committee under local authority shall identify children requiring special training and organise such training in the following manner, namely:-

(a) The special training shall be based on specially designed, age appropriate learning material, approved by DSERT, the academic authority;

(b) It shall be provided in classes held on the premises of the school, or through classes organised in safe residential facilities;

(c) It shall be provided by teachers working in the school, or by teachers specially appointed for the purpose;

(d) The duration shall be for a minimum period of three months which may be extended, based on periodical assessment of learning progress, for a maximum period not exceeding two years.

(2) The child shall, upon induction into the age appropriate class, after special training, continue to receive special attention by the teacher to enable him to successfully integrate with the rest of the class, academically and emotionally.

PART - III

DUTIES OF STATE GOVERNMENT, LOCAL AUTHORITY

4. Areas or limits for the purposes of section 6.- (1) The areas or limits of neighbourhood throughout the state except the city corporations within which a school has to be established by the State Government and the local Authority shall be as under, namely:-

(a) In respect of children in classes I - V, a school shall be established normally within a walking distance of one km of the neighbourhood;

(b) In respect of children in classes VI - VII, a school shall be established normally within a walking distance of 3 km of the neighbourhood; and

(c) In respect of children in class VIII, a school shall be established within a distance of 5 km of the neighbourhood.

Provided that, in case of urban areas where local authorities are City Corporations, the area of neighbourhood shall be the area of ward notified for the purpose of governance of local authority.

(2) The State Government shall endeavour within the limits of its economic capacity and development to add VIII to schools with classes up to VII in a phased manner.

(3) Wherever required, the State Government shall upgrade existing schools with classes I - V to include classes VI – VIII. In respect of schools which start from class VI onwards, the State Government shall endeavour to add classes I – V, wherever required.

(4) In areas with difficult terrain, risk of landslides, floods, lack of roads and in general, danger for young children in the approach from their homes to the school, B.E.O or Local Authority shall locate the school in such a manner as to avoid such dangers, by reducing the limits specified under sub-rule (1).

(5) For children from small hamlets, as identified by the DDPI or Local Authority, where no school exists within the area or limits of neighbourhood specified under sub-rule (1) above, suitable arrangements such as free transportation, residential facilities and/or other facilities shall be arranged. The cost for these alternative arrangements shall be fixed by C.P.I or the Local Authority as per local conditions. Expenditures on alternative arrangements shall be met by State Government /Local Authority.

(6) In areas with high population density, the C.P.I or local authority may consider establishment of more than one neighbourhood school, having regard to the number of children in the age group of 6-14 years in such areas.

(7) The Local Authority shall identify the neighbourhood school where children can be admitted and make such information public for each habitation within its jurisdiction.

(8) In respect of children with disability which prevent them from accessing the school, the C.P.I or Local Authority shall endeavour to make appropriate and safe transportation arrangements for them to attend school and complete elementary education.

(9) The C.P.I or Local Authority shall ensure that access of children to the school is not hindered on account of social and cultural factors.

5. Duties of Government and Local Authority towards disadvantaged group of children for the purpose of Sec. 8 and 9.- (1) A child attending a school of the State Government or local authority referred to in sub-clause (i) of clause (n) of section 2, a child attending a school referred to in sub-clause (ii) of clause (n) of section 2 in pursuance to clause (b) of sub section (1) of section 12, and a child attending a school referred to in sub-clause (iii) and (iv) of clause (n) of section 2 in pursuance to clause (c) of sub section (1) of section 12 shall be entitled only to free text books, writing materials and uniforms.

Provided that a child with Disability shall also be provided free special learning and support material.

Explanation: In respect of the child admitted in pursuance of clause (b) of sub-section (1) of section 12 and a child admitted in pursuance clause (c) of sub-section (1) of section 12, the responsibility of providing the free entitlement shall be of the school referred to in sub- clause (ii) of clause (n) of section 2 and of sub-clauses (iii) and (iv) of clause (n) of section 2, respectively.

(2) For the purpose of determining and for establishing neighbourhood schools, the C.P.I or the local authority shall undertake school mapping, and identify all children, including children in remote areas, children with Disabilities children belonging to disadvantaged groups, children belonging to weaker sections and children referred to in section 4, within a period of one year from the appointed date, and every year thereafter.

(3) The D.D.P.I or local authority shall ensure within their jurisdiction that no child is subjected to caste, class, religious or gender discrimination in the school.

(4) For the purposes of clause (c) of section 8 and clause (c) of section 9, the C.P.I and the local authority shall ensure that a child belonging to a weaker section and a child belonging to disadvantaged group is not segregated or discriminated against in the classroom, during mid day meals, in the play grounds, in the use of common drinking water and toilet facilities, and in the cleaning of toilets or classrooms.

6. Maintenance of records of children by local authority for the purposes of clause (d) of section 9:-(1) The Local Authority shall maintain a record of all children, in its jurisdiction, through a household survey, from their birth till they attain 14 years.

(2) The record, referred to in sub-rule (1), shall be updated each year.

(3) The record, referred to in sub-rule (1), shall be maintained transparently, in the public domain, and used for the purposes of clause (e) of section 9

(4) The record, referred to in sub-rule (1) shall, in respect of every child, include,-

(a) name, sex, date of birth, (Birth Certificate Number), place of birth;

(b) parents or guardians' names, address, occupation;

(c) pre-primary school or Anganwadi centre that the child attends (up to age 6);

(d) elementary school where the child is admitted;

(e) present address of the child;

(f) class in which the child is studying (for children between age 6-14), and if education is discontinued in the territorial jurisdiction of the Local Authority, the cause of such discontinuance;

(g) Whether the child belongs to a disadvantaged group within the meaning of clause (d) of section 2 of the Act;

(h) whether the child belongs to the weaker section within the meaning of clause (e) of section 2 of the Act;

(i) details of children requiring special facilities or residential facilities on account of migration and sparse population; age appropriate admission; disability.

(5) The Local authority shall ensure that the names of all children enrolled in the schools and out of school children under its jurisdiction are publicly displayed in each school.

PART- IV

RESPONSIBILITIES OF SCHOOLS AND TEACHERS

Admission of children belonging to weaker section and disadvantaged group for the purposes of clause (c) of section 12 (1).-(1) The school referred to in clauses (iii) and (iv) of clause (n) of section 2 shall ensure that children admitted in pursuance of clause (c) of section 12 (1) shall not be segregated from the other children in the classrooms nor shall their classes be held at places and timings different from the classes held for the other children.

(2) The school referred to in clauses (iii) and (iv) of clause (n) of section 2 shall ensure that children admitted in pursuance of clause (c) of section 12 (1) shall not be discriminated from the rest of the children in any manner in respect of entitlements and facilities such as text books, uniforms, library and ICT facilities, co-curricular programme and sports.

(3) The areas or limits of neighborhood specified in rule 4 (1) shall apply to admissions made in pursuance of clause (c) of section 12 (1), provided that the school may, for the purposes of filling up the requisite percentage of seats for children referred to in clause (c) of section 12 (1), extend these limits with the prior approval of the State Government.

(4) The percentage of allocation across various categories shall be notified by the Government.

8. Reimbursement of per child expenditure by the Government for the purpose of Section 12(2).-(1) The total annual recurring expenditure incurred by the State on elementary education in respect of all schools established or owned by it or by the local authority, divided by the total number of children enrolled in all such schools, shall be the per-child expenditure incurred by the Government. For this purpose the expenditure on grant-in-aid schools and students enrolled in such schools shall not be included. The Government shall notify per-child expenditure every year before commencement of academic year, which shall be reimbursed in respect of admission of eligible children to private unaided schools. The children admitted under the quota of disadvantaged group and weaker section shall not be levied any other fee, charges or expenses by such school.

(2) Every school which receives reimbursement per child expenditure shall maintain a separate bank account and is subject to audit by the government. In respect of a child admitted to a private unaided school over and above the quota for the disadvantaged group and weaker section, there shall not be any claim on reimbursement of such expenditure incurred on child's education in any such school. In respect of the child admitted in pursuance of clause (b) of sub-section (1) of section 12 and a child admitted in pursuance clause (c) of sub-section (1) of section 12, the responsibility of providing

